
ದಕ್ಷಿಣದ ಸಾರಸ್ವತರು

ನಾಗೇಶ ದತ್ತಾತ್ರೇಯ ಸೋಂದೆ



ಅನುವಾದಕರು



ಪ್ರೊ. ಪಿ. ಎಂ. ಹೆಗಡೆ

15 ಜುಲೈ 1938ರಲ್ಲಿ ಸಿದ್ದಾಪುರ ತಾಲೂಕಿನ ಕಬ್ನಳ್ಳಿಯಲ್ಲಿ ಜನನ.

ಪೂರ್ತಿ ಇಂಗ್ಲೀಷ್ ವಿಷಯದಲ್ಲಿ ಎಂ. ಎ. ಕರ್ನಾಟಕ ವಿಶ್ವವಿದ್ಯಾಲಯದಿಂದ.

ಇಂಗ್ಲೀಷ್ ವಿಷಯದಲ್ಲಿ ಡಿಪ್ಲೋಮಾ – ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಇಂಗ್ಲೀಷ್ ಹೈದರಾಬಾದ್. ಹಲವಾರು ನಾಟಕಗಳನ್ನು ರಚಿಸಿದ್ದಾರೆ.

"ಆಲ್ಮನೆಯಿಂದ ಆ್ಯನ್ ಆರ್ಬರ್‌ವರೆಗೆ" ಪ್ರವಾಸ ಕಥನ ಪ್ರಕಟವಾಗಿದೆ.

ಶಿರಸಿಯ 'ಲೋಕಧ್ವನಿ' ದೈನಿಕದಲ್ಲಿ 'ಚಿಂತನ' ಕಾಲಂ ಪ್ರಕಟವಾಗುತ್ತಿದೆ.



ಪ್ರೊ. ಕೆ. ಎ. ಭಟ್ಟ

ಪ್ರೊ. ಕೃಷ್ಣದಾಸ ಭಟ್ಟ ಸಿದ್ದಾಪುರ ಇವರು ಸರಳ ಸಜ್ಜನರು.

ಕನ್ನಡ ಹಿಂದಿ ಮತ್ತು ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವೀಧರರು.

1969ರಲ್ಲಿ ಸಿದ್ದಾಪುರದ ಮಹಾತ್ಮಾಗಾಂಧಿ ಶತಾಬ್ಧಿ ಮಹಾವಿದ್ಯಾಲಯದಲ್ಲಿ ಉಪನ್ಯಾಸಕರಾಗಿ ನೇಮಕಾತಿಗೊಂಡು ತಮ್ಮ ಸೇವೆ ಪ್ರಾರಂಭಿಸಿದರು.

ಪುಟ್ಟಪರ್ತಿಯ ಸತ್ಯಸಾಯಿಬಾಬಾ ಅವರ ಪ್ರಭಾವಕ್ಕೊಳಗಾಗಿ ಅಸಂಖ್ಯಾತ ಸಾಯಿ ಭಕ್ತರ ಪ್ರೀತಿ ಆದರಗಳಿಗೆ ಒಳಗಾಗಿದ್ದಾರೆ.

ಸಾಯೀ ಸಾಹಿತ್ಯವನ್ನು ಅನುವಾದಿಸಿದ್ದಾರೆ. ಬಹುಮುಖ ಪ್ರತಿಭಾವಂತರು.

ದಕ್ಷಿಣದ
ಸಾರಸ್ವತರು

ಇಂಗ್ಲಿಷ್ ಮೂಲ

ಲೇಖಕರು

ಶ್ರೀ ನಾಗೇಶ ದತ್ತಾತ್ರೇಯ ಸೋಂದೆ

: ಅನುವಾದಕರು :

ಪ್ರೊ. ಕೆ. ಎ. ಭಟ್ಟ, ಸಿದ್ದಾಪುರ, ಪ್ರೊ. ಪಿ. ಎಂ. ಹೆಗಡೆ, ಶಿರಸಿ

ಜಿ.ಎಸ್.ಬಿ. ಹಿತಚಿಂತಕ ಸಂಘ (ರಿ.) ಶಿರಸಿ

ರಾಯರ ಪೇಟೆ

ಶಿರಸಿ (ಉತ್ತರ ಕನ್ನಡ) 581 401

DAKSHINATYA SARASWATS

Originally Written in English by **Mr. Nagesh Dattatreya Sonde,**
318, Raheja Crest, 3 Linking Road, Andheri west, **Mumbai - 400053**.
Tel: 0091 - 22- 26352743/44
Translated in to Kannada by
Prof. K.A.Bhat & Prof. P.M.Hegde

First Edition	:	2019
Copies	:	1000
Pages	:	150 + 18 = 168
Price	:	Rs 150/-
Cover Design	:	Monappa, Putturu
Used paper	:	80 Gsm. Maplitho
DTP.	:	Mr. Satish Bhandari, Haratekoppa
Publisher	:	Dr. V. S. Sonde GSB Welfare Association, Sirsi Rayarapet- Sirsi (N. Kanara) - 581401 Mobile : 9663725575
Printed At	:	Sriranga Printers Pvt. Ltd. BSK 2nd Stage, Bengaluru - 560070 Phone : 080 - 26715813

ಹಕ್ಕುಗಳು	:	ಶ್ರೀ ನಾಗೇಶ ಡಿ. ಸೋಂದೆ.
ಪ್ರಥಮ ಮುದ್ರಣ	:	೨೦೧೯.
ಪ್ರತಿಗಳು	:	೧೦೦೦
ಪುಟಗಳು	:	೧೫೦ + ೧೮ = ೧೬೮
ಬೆಲೆ	:	ನೂರಾ ಐವತ್ತು ರೂಪಾಯಿಗಳು
ಮುಖಪುಟ ವಿನ್ಯಾಸ	:	ಮೋನಪ್ಪ, ಪುತ್ತೂರು
ಉಪಯೋಗಿಸಿದ ಕಾಗದ	:	೮೦ ಜಿ.ಎಸ್.ಎಂ. ಮ್ಯಾಪ್ಲಿಥೋ
ಅಕ್ಷರ ಸಂಯೋಜನೆ	:	ಸತೀಶ ಭಂಡಾರಿ, ಹರಟೇಕೊಪ್ಪ
ಪ್ರಕಾಶಕರು	:	ಜಿ. ಎಸ್. ಬಿ. ಹಿತಚಿಂತಕ ಸಂಘ (ರಿ.)ಶಿರಸಿ ರಾಯರ ಪೇಟೆ ಶಿರಸಿ (ಉತ್ತರ ಕನ್ನಡ)
ಮುದ್ರಣ	:	ಶ್ರೀರಂಗ ಪ್ರಿಂಟರ್ಸ್ (ಪ್ರೈ. ಲಿ.) ಬನಶಂಕರಿ ೨ನೆಯ ಹಂತ ಬೆಂಗಳೂರು - ೫೬೦೦೭೦ ದೂರವಾಣಿ : ೦೮೦ - ೨೬೭೧೫೮೧೩



ಪ್ರಕಾಶಕರ ಪರವಾಗಿ

ಕೊಂಕಣಿ ಮತ್ತು ಇಂಗ್ಲಿಷ್ ಭಾಷೆಯ ಪ್ರಸಿದ್ಧ ಲೇಖಕರಾದ ನಾಗೇಶ ದತ್ತಾತ್ರೇಯ ಸೋಂದೆಯವರು ಹದಿನೈದು ವರ್ಷಗಳ ಹಿಂದೆ ಬರೆದು ಪ್ರಕಟಿಸಿದ ಇಂಗ್ಲಿಷ್ ಭಾಷೆಯ **'DAKSHINATYA SARASWATS'** ಎಂಬ ಗ್ರಂಥದ ಕನ್ನಡಾನುವಾದವನ್ನು ಪ್ರಕಟಿಸಲು ನಮಗೆ ಹೆಮ್ಮೆಯೆನಿಸುತ್ತದೆ.

ಇದು ಸಾರಸ್ವತರ ಇತಿಹಾಸವಲ್ಲ. ಸಾರಸ್ವತರ ಉಗಮ ಎಲ್ಲಿಂದಾಯಿತು ಎಂಬುದರಿಂದ ಇಂದಿನವರೆಗೆ ನಡೆದು ಬಂದ ದಾರಿಯನ್ನು ಸ್ಥೂಲವಾಗಿ ವಿವರಿಸುವ ಗ್ರಂಥ. ಮೂಲತಃ ಶಿರಸಿ ನಗರದವರೇ ಆದ ಲೇಖಕರು ಬಹುಕಾಲ ಮುಂಬಯಿಯಲ್ಲಿದ್ದು ಮಾಡಿದ ಅಧ್ಯಯನದ ಫಲಿತ ಈ ಗ್ರಂಥದಲ್ಲಿದೆ.

ಈ ಗ್ರಂಥ ಕನ್ನಡದಲ್ಲಿ ಅನುವಾದಿಸಿ ಪ್ರಕಟಿಸಬೇಕೆಂಬ ಆಲೋಚನೆಯಲ್ಲಿದ್ದಾಗ ಶಿರಸಿ ಮಹಾವಿದ್ಯಾಲಯದ ಇಂಗ್ಲಿಷ್ ಪ್ರಾಧ್ಯಾಪಕರಾದ ಪ್ರೊ. ಪಿ. ಎಂ. ಹೆಗಡೆ ಅವರನ್ನು ಕೇಳಿಕೊಂಡೆವು. ಅವರು ತುಂಬ ಖುಷಿಯಿಂದ ಅತ್ಯಲ್ಪಕಾಲದಲ್ಲಿ ಒಂದು ಹಂತದ ಅನುವಾದ ಕಾರ್ಯ ಮುಗಿಸಿಕೊಟ್ಟರು. ಇದನ್ನು ಪರಿಶೀಲಿಸಿ ಪರಿಷ್ಕರಿಸಲು ಸಿದ್ದಾಪುರ (ಉ.ಕ.) ಮಹಾವಿದ್ಯಾಲಯದ ಪ್ರೊ. ಕೃಷ್ಣದಾಸ ಅನಂತ ಭಟ್ಟ ಅವರು ನಮ್ಮ ನೆರವಿಗೆ ಬಂದರು. ಅವರು ಮೂಲಕೃತಿಯನ್ನು ಕೂಲಂಕಷವಾಗಿ ಅನುವಾದದೊಂದಿಗೆ ಪರಿಶೀಲಿಸಿ ಇದಕ್ಕೆ ಕನ್ನಡ ಭಾಷೆಯ ಸೊಗಸನ್ನು, ಸೊಗಡನ್ನು ನೀಡಿ ಕೃತಿಯ ಮೌಲ್ಯವನ್ನು ಹೆಚ್ಚಿಸಿದ್ದಾರೆ. ಇವರಿಬ್ಬರೂ ಹಿರಿಯರು ವಿದ್ವಾಂಸರೆಂದು ಖ್ಯಾತರಾಗಿದ್ದಾರೆ. ಇಬ್ಬರೂ ತಮ್ಮ ಕಾರ್ಯಬಾಹುಳ್ಯದಲ್ಲಿಯೂ ನಮ್ಮ ವಿನಂತಿಯನ್ನು ಮನ್ನಿಸಿ ಕನ್ನಡ ಭಾಷೆಗೊಂದು ಒಳ್ಳೆಯ ಕೃತಿ ಕೊಡುವಂತೆ ಮಾಡಿದ್ದಾರೆ. ಇವರಿಬ್ಬರಿಗೂ ನಮ್ಮ ಸಂಸ್ಥೆ ಋಣಿಯಾಗಿದೆ.


ಅನುವಾದ ಕಾರ್ಯ ಕೈಗೆತ್ತಿಕೊಳ್ಳುವ ಮುನ್ನ, ಮೂಲ ಲೇಖಕರನ್ನು ಅನುಮತಿಗಾಗಿ ಸಂಪರ್ಕಿಸಿದಾಗ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೇ ಯಾವ ಶರತ್ತುಗಳನ್ನೂ ವಿಧಿಸದೇ ತಕ್ಷಣ ಅನುಮತಿಯನ್ನು ರವಾನಿಸಿ ನಾಗೇಶ ಸೋಂದೆಯವರು ನಮ್ಮನ್ನು ಉಪಕೃತರನ್ನಾಗಿ ಮಾಡಿದ್ದಾರೆ. ಅವರಿಗೆ ನಾವು

ಅನಂತಾನಂತ ಕೃತಜ್ಞತೆಗಳನ್ನು ಅರ್ಪಿಸುತ್ತೇವೆ. ಮುನ್ನುಡಿ ಬರೆದ ಶ್ರೀ ಶಾ. ಮಂ. ಕೃಷ್ಣರಾಯರು ನಮ್ಮ ಕೃತಜ್ಞತೆಗೆ ಪಾತ್ರರು.

ನಮ್ಮ ಸಂಸ್ಥೆ ಪ್ರತಿವರ್ಷವೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅವರ ಮುಂದಿನ ಶಿಕ್ಷಣಕ್ಕಾಗಿ ಸಹಾಯಧನ ನೀಡುವ ಉಪಕ್ರಮ ನಡೆಸಿಕೊಂಡು ಬಂದಿದೆ. ಈ ಪುಸ್ತಕದ ಮಾರಾಟದಿಂದ ಬರುವ ಪೂರ್ತಿ ಹಣ ನಾವು ವಿದ್ಯಾರ್ಥಿ ಸ್ಕಾಲರ್‌ಶಿಪ್ ನಿಧಿಗೆ ಅರ್ಪಿಸಬೇಕೆಂದು ಮಾಡಿದ್ದೇವೆ. ಆದ್ದರಿಂದ ಸಹೃದಯ ಓದುಗರು ಪುಸ್ತಕಗಳನ್ನು ಖರೀದಿಸಿ, ಓದಿ ಈ ಪುಣ್ಯಕಾರ್ಯಕ್ಕೆ ಕೈಜೋಡಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಶಿರಸಿ
ವಿಜಯಾದಶಮಿ

– ಡಾ. ವಿ. ಎಸ್. ಸೋಂದೆ,
ಶಿರಸಿ



ಮುನ್ನುಡಿ

ಸಾರಸ್ವತ ಬ್ರಾಹ್ಮಣರದೊಂದು ಸಣ್ಣ ಸಮುದಾಯ. ಆದರೆ ಇದರಲ್ಲಿ ವಿದ್ವಾಂಸರಿದ್ದಾರೆ, ವ್ಯಾಪಾರಿಗಳಿದ್ದಾರೆ, ಉದ್ಯಮಿಗಳಿದ್ದಾರೆ, ಕಲಾವಿದರಿದ್ದಾರೆ, ಸ್ವಾತಂತ್ರ್ಯಪ್ರೇಮಿಗಳಿದ್ದಾರೆ, ದೇಶಭಕ್ತರಿದ್ದಾರೆ, ಸಂಶೋಧಕರಿದ್ದಾರೆ, ವಿಜ್ಞಾನಿಗಳಿದ್ದಾರೆ. ಇತರ ಎಲ್ಲ ಕ್ಷೇತ್ರಗಳಲ್ಲೂ ಇವರು ಪಸರಿಸಿದ್ದಾರೆ. ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ, ವಿದೇಶಗಳಲ್ಲೂ ಇವರು ತಮ್ಮ ನೆಲೆಗಳನ್ನು ಕಂಡು ಕೊಂಡಿದ್ದಾರೆ.

ಮೂಲತಃ ಸರಸ್ವತೀ ನದಿ ತೀರದಲ್ಲಿ ವಾಸಿಸುತ್ತಿದ್ದ ಇವರು ನದಿ ಬತ್ತಿಹೋದ ಬಳಿಕ ದಕ್ಷಿಣಕ್ಕೆ ವಲಸೆ ಬಂದರು ಎಂಬುದು ಜನಜನಿತ ಆಖ್ಯಾಯಿಕೆ. ಸಾರಸ್ವತಮುನಿ ವಂಶಜರಾದುದರಿಂದ, ಸರಸ್ವತೀ ನದಿಯ ಮೂಲದಿಂದ ಬಂದವರಾದುದರಿಂದ ಇವರಿಗೆ ಸಾರಸ್ವತರೆನ್ನುತ್ತಾರೆ. ಇವರು ದೈವಭಕ್ತರು. ಇವರಿಗೆ ನಾಲ್ಕು ಮಠಗಳಿವೆ. ಇವರಲ್ಲಿ ಹತ್ತು ಗೋತ್ರದವರಿದ್ದಾರೆ.

ಈ ಸಂಶೋಧನಾತ್ಮಕ ಗ್ರಂಥ ಬರೆದ ಶ್ರೀಯುತ ನಾಗೇಶ ಸೋಂದೆಯವರು "ಇದು ಸಾರಸ್ವತ ಸಮಾಜದ ಚರಿತ್ರೆಯಲ್ಲ, ಇದನ್ನು ಅಂಥ ಉದ್ದೇಶಕ್ಕಾಗಿ ಬರೆದಿಲ್ಲ. ಸಮಾಜವು ಈತನಕ ಎದುರಿಸಿರುವ ಅಸ್ಫುಟ, ಅಸ್ಪಷ್ಟ ಹಾಗೂ ಗೊಂದಲ ಎಬ್ಬಿಸುವಂತೆ ತೋರುವ ಸಮಸ್ಯೆಗಳನ್ನು ಪ್ರಾಜ್ಞರ ಪರಿಶೀಲನೆಗಾಗಿ ಪ್ರಸ್ತುತ ಪಡಿಸುವ ಪ್ರಯತ್ನ ಮಾತ್ರ ಇಲ್ಲಿದೆ. ಸಮಾಜವು ಸಾವಿನ ಕಂದರದಲ್ಲಿ ಜಾರುತ್ತಿರುವ ಸತ್ಯಾಂಶವನ್ನು ಚೆನ್ನಾಗಿ ಅರಿತ ಜ್ಞಾನಿಗಳು ಅಂಚಿನಲ್ಲಿ ನಿಂತು ನೋಡುವ ಬದಲು ಸ್ಪಷ್ಟವಾಗಿ ಮಾರ್ಗದರ್ಶನ ನೀಡಿ ಸಮಸ್ಯೆಗಳಿಗೆ ಪರಿಹಾರ ನೀಡಬಹುದೆಂದು ಇಲ್ಲಿ ಆಶಿಸಲಾಗಿದೆ" ಎನ್ನುತ್ತಾರೆ. ಅವರ ಆಶಯ ಸಮಯೋಚಿತವಾಗಿದೆ. ಇದು ಸಾರಸ್ವತರ ಚರಿತ್ರೆಯಲ್ಲವೆಂದಿದ್ದರೂ ಮಾನವ ಕುಲದ ವಲಸೆಯ ಚರಿತ್ರೆ. ಸಾರಸ್ವತರ ಹೋರಾಟದ ಚರಿತ್ರೆ ಇಲ್ಲಿ ಅಡಕವಾಗಿದೆ.

ಮಾನವಶಾಸ್ತ್ರಜ್ಞರ ಪ್ರಕಾರ ಆಫ್ರಿಕಾದಿಂದ ಮಾನವ ಜೀವನದ ವಿಕಾಸ ಪ್ರಾರಂಭವಾಯಿತು. ಸುರಕ್ಷಿತವಾಗಿ ಬದುಕುವುದಕ್ಕೋಸ್ಕರ ಜನಾಂಗಗಳು ಸಂಪದ್ಭರಿತ ನದೀತೀರಗಳನ್ನು ಹುಡುಕಿಕೊಂಡು ಹೊರಟವು. ತುಂಬಿ ಹರಿಯುವ ನದಿಗಳ ದಂಡೆಯಲ್ಲಿದ್ದ ಫಲವತ್ತಾದ ಭೂಮಿಯಲ್ಲಿ ನೆಲೆಸಲು ಮೆಸೊಪೊಟೇಮಿಯನ್, ಈಜಿಪ್ಶಿಯನ್, ಹಿಬ್ರೂ, ಇರಾನಿಯನ್, ಭಾರತೀಯ ಮತ್ತು ಚೈನೀಸ್

ನಾಗರಿಕತೆಗಳು ಅಸ್ತಿತ್ವಕ್ಕೆ ಬಂದವು.

ಪಂಚನದಿಗಳ ಪ್ರದೇಶದಲ್ಲಿ ಆರ್ಯರು ಬಂದಿಳಿದಾಗ ಅದಕ್ಕೂ ಮೊದಲೇ ಬಂದು ನೆಲೆಸಿದವರೊಂದಿಗೆ ಸಂಘರ್ಷವುಂಟಾಯಿತು. ಈ ವಿಷಯ ಋಗ್ವೇದದಲ್ಲಿ ಉಲ್ಲೇಖಗೊಂಡಿದೆ.

ಆರ್ಯರು ಪ್ರಕೃತಿಯೊಡನೆ ಸಾಮರಸ್ಯ ಸಾಧಿಸಿದ್ದರು. ಸುಸಂಸ್ಕೃತರೂ, ಸುಧಾರಿಸಿದವರೂ ಆಗಿದ್ದರು. ಮೊದಮೊದಲು ಆದಿವಾಸಿಗಳೊಡನೆ ಸಂಘರ್ಷಕ್ಕಿಳಿದರು. ಕ್ರಮೇಣ ಹೊಂದಾಣಿಕೆ ಮಾಡಿಕೊಂಡರು. ಕಾಲಕಳೆದಂತೆ ಬೇರೆಬೇರೆ ಜನಾಂಗೀಯ ಪ್ರಭಾವಗಳು ಒಂದರಲ್ಲೊಂದು ಸೇರಿ ವರ್ಣಸಂಕರಗೊಂಡು ಮೊದಲಿನ ಆರ್ಯರ ಮೌಲ್ಯಗಳು ಕಡೆಗಣಿಸಲ್ಪಟ್ಟವು.

ಕ್ರಿ. ಪೂ. ಸುಮಾರು ಆರನೆಯ ಶತಮಾನದಲ್ಲಾದ ದಾಳಿ, ಆನಂತರ ಬಂದ ಶಕರು, ಕುಶಾನರು, ಸಿರಿಯನ್‌ರು ಹೋಗುವಾಗ ತಮ್ಮ ಹೆಜ್ಜೆಯ ಗುರುತುಗಳನ್ನು ಬಿಟ್ಟು ಹೋದರು. ಶತಮಾನದ ಪೂರ್ವದಲ್ಲಿ ಬಂದ ಯಹೂದಿಯನ್ನರು, ಕ್ರಿಶ್ಚಿಯನ್ನರು ಹಾಗೂ ಗಝುನೀ ಕಾಲದಲ್ಲಿ ಆದ ಪರಿಣಾಮವನ್ನು ಇಲ್ಲಿ ಲೇಖಕರು ಉಲ್ಲೇಖಿಸಿದ್ದಾರೆ.

ಮೊದಲು ಗುಣ ಕರ್ಮಗಳನ್ನಾಧರಿಸಿ ಸಮಾಜ ವರ್ಗೀಕರಣವಾಗುತ್ತಿತ್ತು. ಆನಂತರ ಜಾತ್ಯಾಧಾರಿತ ವರ್ಗೀಕರಣವೆಂದು ಸೋಂದೆಯವರು ಗುರುತಿಸುತ್ತಾರೆ.

ಭಾರತದಲ್ಲಿ ಅನೇಕ ಜನಾಂಗಗಳು ಪ್ರವೇಶಿಸಿದವು. ಅವುಗಳಲ್ಲಿ ನೆಗ್ರಿಟೊ, ಪ್ರೊಟೋಅಸ್ಟ್ರೋಲಾಯ್ಡ್, ದ್ರಾವಿಡ, ಮಂಗೋಲಿಯನ್ ಅಥವಾ ಆರ್ಯ ಜನಾಂಗಗಳೂ ಇವೆ. ಈ ಜನಾಂಗದ ಮೂಲರೂಪ ಸ್ಥಿರವಾಗಿ ಉಳಿಯಲಿಲ್ಲ. ಆದರೆ ಅವು ಯಾವವೂ ಭಾರತೀಯತೆಯ ಗುಣಲಕ್ಷಣವಾದ ವಿವಿಧತೆಯಲ್ಲಿ ಏಕತೆಯನ್ನು ವ್ಯಕ್ತಪಡಿಸುವ ವರ್ಣರಂಜಿತ ಚಿತ್ರವನ್ನು ಬದಲಿಸಲಿಲ್ಲ. ಪ್ರೊಟೊಅಸ್ಟ್ರೋಲಾಯ್ಡ್, ದ್ರಾವಿಡ ಜನಾಂಗಗಳಲ್ಲಿ ಪ್ರಗತಿಶೀಲ ಮನೋಭಾವವಿತ್ತು. ಆರ್ಯರು ಆರ್ಯೇತರರಿಂದ ತಮಗೆ ಬೇಕಾದುದನ್ನು ಪಡೆದುಕೊಂಡರು.

ವ್ಯಾಸ ಮಹರ್ಷಿಗಳು ಸಂಪಾದಿಸಿದ ಸಾಹಿತ್ಯದಲ್ಲಿ ಆರ್ಯ ಮತ್ತು ಆರ್ಯೇತರ ಜನಾಂಗಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ದರ್ಶನ ಒಳಗೊಂಡ ಸಂಯುಕ್ತ ಚಿತ್ರಣವಿದೆ.

ಭಾರತಕ್ಕೆ ಯಾವ ಯಾವ ಜನಾಂಗಗಳು ಬಂದವು? ಅವರು ಮಾಡಿದ ಕೆಲಸಗಳೇನು? ಅವರ ಮೂಲ ಯಾವುದು? ಅವರು ಭಾರತದ ಮೇಲೆ ಬೀರಿದ ಪ್ರಭಾವವೇನು? ಎಂಬುದನ್ನು ವಿವರಿಸುತ್ತಾ, ಆರ್ಯರು ಪ್ರಗತಿಶೀಲರೆಂದು ಗುರುತಿಸುತ್ತಾ, ಡಾ. ಎಸ್. ರಾಧಾಕೃಷ್ಣನ್‌ರು "ವೈದಿಕ ಧರ್ಮವು ಇತರ ಪಂಥಗಳ ಆಚಾರ, ಸಂಪ್ರದಾಯಗಳ ಸಾರವನ್ನು ಹೀರಿ ಮೈಗೂಡಿಸಿಕೊಂಡು

ಕಾಪಾಡಿಕೊಂಡು ಬಂದಿವೆ. ಅವುಗಳನ್ನು ನಿರ್ನಾಮ ಮಾಡುವ ಬದಲು ತನ್ನ ಆವಶ್ಯಕತೆಗಳಿಗೆ ಹೊಂದಿಸಿಕೊಂಡಿದೆ. ದ್ರಾವಿಡರ ಹಾಗೂ ಭಾರತದ ಇತರ ಸ್ಥಳೀಯ ನಿವಾಸಿಗಳ ಸಾಮಾಜಿಕ ಜೀವನದಿಂದ ಇದು ಎಷ್ಟೆಲ್ಲ ಸ್ವೀಕರಿಸಿದೆ ಎಂದರೆ ಆರ್ಯರ ಸಂಪ್ರದಾಯ ಯಾವುದು? ಅನಾರ್ಯರದು ಯಾವುದು? ಎಂದು ವಿಂಗಡನೆ ಮಾಡುವುದೇ ದುಸ್ತರವಾಗಿದೆ" ಎಂಬ ಹೇಳಿಕೆಯನ್ನು ಉದ್ಧರಿಸುತ್ತಾರೆ ಲೇಖಕರು.

ಆರ್ಯರು ಭಾರತಕ್ಕೆ ಬಂದು ಅನಾರ್ಯರನ್ನು ಸೋಲಿಸಿ ಅಲ್ಲಿ ಉನ್ನತ, ಸುಸಂಸ್ಕೃತ ಸಮಾಜ ಕಟ್ಟಿ ಸುಸಂಸ್ಕೃತರೂ, ನಾಗರಿಕ ಪ್ರಜ್ಞೆಯುಳ್ಳವರೂ ಆಗಿದ್ದರೆಂಬ ಗ್ರಹಿಕೆ ಬ್ರಿಟಿಷರ ಕಾಲದಲ್ಲಿತ್ತು.

ಅನಂತರ ಸಿಂಧೂಕಣಿವೆ, ಸರಸ್ವತೀ ನಾಗರಿಕತೆಗಳನ್ನು ಕಂಡು ಹಿಡಿಯಲು ನಡೆಸಲಾದ ಉತ್ಖನನದಲ್ಲಿ ದೊರೆತ ಆಧಾರಗಳಿಂದ ಮಾನವ ಶಾಸ್ತ್ರಜ್ಞರು, ಪ್ರಾಕ್ತನ ಶಾಸ್ತ್ರಜ್ಞರು, ಭಾಷಾ ಶಾಸ್ತ್ರಜ್ಞರು, ಸಂಶೋಧಕರು "ಆದಿವಾಸಿಗಳು ಅಸಂಸ್ಕೃತರಾಗಿರದೇ ಅಗಾಧ ಪ್ರಗತಿ ಹೊಂದಿದ ನಗರವಾಸಿಗಳಾಗಿದ್ದರು" ಎಂಬುದನ್ನು ಕಂಡು ಹಿಡಿದರು.

ಆರ್ಯರು ಎಲ್ಲಿಂದ ಬಂದರು? ಎಷ್ಟು ಗುಂಪುಗಳಾಗಿ ಬಂದರು? ಎಲ್ಲೆಲ್ಲಿ ನೆಲೆಸಿದರು? ಯಾವ ಭಾಷೆ ಮಾತನಾಡುತ್ತಿದ್ದರು? ಅವರ ಪೂರ್ವಜರು ಯಾರು? ಅವರಲ್ಲಿ ಋಷಿತುಲ್ಯ ವ್ಯಕ್ತಿಗಳು ಯಾರು? ಇತ್ಯಾದಿ ವಿವರಗಳೂ ಇಲ್ಲಿವೆ.

ಸರಸ್ವತಿ ನದಿ ಎಲ್ಲಿತ್ತು? ಸರಸ್ವತಿ ನದಿಗೆ ಸಾರಸ್ವತ ಋಷಿ ಪುತ್ರನಾದುದು ಹೇಗೆ? ಸಾರಸ್ವತ ಮುನಿಯ ಸಾಧನೆಗಳು ಏನು? ಸಾರಸ್ವತ ಜನಾಂಗಕ್ಕೆ ಈ ಹೆಸರು ಬರಲು ಕಾರಣವೇನು? ಇತ್ಯಾದಿ ವಿವರಗಳನ್ನು ವೇದ, ಉಪನಿಷತ್ತು, ಪುರಾಣ, ಮಹಾಕಾವ್ಯಗಳ ಆಧಾರದಲ್ಲಿ ವಿಶ್ಲೇಷಿಸುತ್ತಾರೆ.

ಜಮದಗ್ನಿ ಯಾರು? ಅವನ ಮಗ ಪರಶುರಾಮನ ಶಪಥದ ಕಾರಣವೇನು? ಪರಶುರಾಮನು ದಕ್ಷಿಣಕ್ಕೆ ಏಕೆ ಬಂದ? ಅವನೊಂದಿಗೆ ಯಾರು ಬಂದರು? ಎಲ್ಲಿ ನೆಲೆಸಿದರು? ಇತ್ಯಾದಿ ವಿವರಗಳು ನಿಮಗೆ ಇಲ್ಲಿ ಸಿಗುತ್ತದೆ.

ಗೌಡ ದೇಶದಿಂದ ಬಂದವರು ಗೌಡಸಾರಸ್ವತರಾದರು ಎಂಬ ಅನೇಕ ಉಲ್ಲೇಖಗಳಿವೆ. ಅವರಾಡುವ ಕೊಂಕಣಿ ಭಾಷೆಯಲ್ಲಿ ಬಂಗಾಲಿ ಭಾಷೆಯ ಛಾಯೆ ಇರುವುದರಿಂದ ಸಾರಸ್ವತರು ಬಂಗಾಲದ ಗೌಡ ಪ್ರದೇಶದಿಂದ ಬಂದವರು ಎಂಬ ಹೇಳಿಕೆಯನ್ನು ಅಲ್ಲಗಳೆದು ಅವರು ಪರಶುರಾಮನ ಆದೇಶದ ಮೇರೆಗೆ ಸರಸ್ವತೀ ನದೀ ತೀರದ ಬ್ರಹ್ಮಾವರ್ತ ಅಥವಾ ತ್ರಿಹೋತ್ರದಿಂದ ಬಂದವರು ಗೌಡ ಸಾರಸ್ವತರು ಎಂಬುದನ್ನು ಸಾಧಾರವಾಗಿ ವಿವರಿಸುತ್ತಾರೆ.

ಸೋಂದೆಯವರು ಸಾರಸ್ವತರ ಸ್ಥಳಾಂತರದ ಕಾರಣಗಳನ್ನು ಹುಡುಕುವಾಗ ಆ ಕಾಲದ ರಾಜಕೀಯ, ಸಾಮಾಜಿಕ ಸ್ಥಿತ್ಯಂತರಗಳ ಮೇಲೂ ಬೆಳಕು ಚೆಲ್ಲುತ್ತಾರೆ.

ದಕ್ಷಿಣಕ್ಕೆ ಬಂದ ಸಾರಸ್ವತರು ಮೊದಲು ಕೃಷಿಯನ್ನು ಅವಲಂಬಿಸಿದ್ದರೂ ತಮ್ಮ ವ್ಯವಹಾರಜ್ಞಾನ, ಬುದ್ಧಿವಂತಿಕೆಯಿಂದ ಅನೇಕ ರಾಜದರ್ಬಾರಗಳಲ್ಲಿ ಉನ್ನತ ಹುದ್ದೆಯನ್ನಲಂಕರಿಸಿದುದನ್ನು ಅವರ ಸಾಧನೆಯ ಅವಲೋಕನವನ್ನು ಮಾಡುತ್ತಾರೆ.

ಗೋವೆಗೆ ಬಂದ ಸಾರಸ್ವತರು ಕೃಷಿ, ವ್ಯಾಪಾರ ಮತ್ತು ಬುದ್ಧಿಮತ್ತೆಯಿಂದ ಸಮಾಜದಲ್ಲಿ ಗೌರವ, ಸ್ಥಾನಮಾನ ಪಡೆದುದನ್ನು ಉಲ್ಲೇಖಿಸುವಾಗ ಗೋವೆಯನ್ನಾಳಿದ ಅರಸೊತ್ತಿಗೆಗಳಲ್ಲಿ ಸಾರಸ್ವತರ ಸ್ಥಿತಿ ಹೇಗಿತ್ತು, ಪೋರ್ಚುಗೀಸರು ಗೋವೆಯನ್ನು ಆಕ್ರಮಿಸಿದ ಬಳಿಕ ಸ್ಥಿತಿ ಏನಾಯಿತು ಎಂಬುದನ್ನು ವಿವರಿಸುತ್ತಾ ಸಾರಸ್ವತರ ಧಾರ್ಮಿಕ ಶ್ರದ್ಧೆ, ದೈವಭಕ್ತಿ, ರಾಜನಿಷ್ಠೆಯನ್ನು ಸ್ಮರಿಸುತ್ತಾರೆ.

ಪೋರ್ಚುಗೀಸರ ಧರ್ಮಾಂತರ ಯಜ್ಞದಲ್ಲಿ ಹಿಂದುಗಳು ಹೇಗೆ ವಿಲವಿಲ ಒದ್ದಾಡಿದರು, ಪೋರ್ಚುಗೀಸರು ಹಿಂದೂ ಧರ್ಮ ನಷ್ಟಗೊಳಿಸಿ ತಮ್ಮ ಧರ್ಮ ಸ್ಥಾಪಿಸಲು ಏನೇನು ಆದೇಶಗಳನ್ನು ಹೊರಡಿಸಿದರು. ಹೇಗೆ ಜನರನ್ನು ಪೀಡಿಸಿದರು, ಕಾಡಿಸಿದರು, ಸ್ವಧರ್ಮ ರಕ್ಷಣೆಗಾಗಿ ಗೋವೆಯಿಂದ ಓಡಿಹೋದ ಸಾರಸ್ವತರು ಪಟ್ಟ ಕಷ್ಟಗಳನ್ನು ದಾಖಲಿಸುತ್ತಾರೆ.

ಅದೆಲ್ಲವೂ ಇತಿಹಾಸವಾದರೆ ವರ್ತಮಾನದಲ್ಲಿ ಸಾರಸ್ವತರು ಹೇಗೆ ಜೀವಿಸುತ್ತಿದ್ದಾರೆ ಎಂಬುದನ್ನು ನಿರ್ದಾಕ್ಷಿಣ್ಯವಾಗಿ ಹೇಳುತ್ತಾರೆ ಲೇಖಕರು.

"ಅವರು (ಸಾರಸ್ವತರು) ಒಂದಾನೊಂದು ಕಾಲದಲ್ಲಿ ಸರಸ್ವತೀ ಪುತ್ರರು ಸಾರಸ್ವತ ಮುನಿಯ ವಾರಸುದಾರರು ಎಂದು ಬೀಗಿ ಮೆರೆದರು. ಒಂದು ಕೈಯಲ್ಲಿ ಮಂತ್ರಪಠಣ ಮಾಡಲು ವೇದಶಾಸ್ತ್ರದ ಅಧ್ಯಾಯವನ್ನೂ, ಇನ್ನೊಂದು ಕೈಯಲ್ಲಿ ಯಜ್ಞಕುಂಡದಲ್ಲಿ ಆಹುತಿ ನೀಡುವ ತುಪ್ಪದ ಸೌಟನ್ನೂ ಹಿಡಿದವರು. ಅವರೀಗ ವ್ಯಾಪಾರಿಗಳಾಗಿ, ತಮ್ಮ ಒಂದು ಕೈಯಲ್ಲಿರುವ ತಕ್ಕಡಿಯ ಪರಡಿಯಲ್ಲಿ ಸ್ವಧರ್ಮವು ಯಾವ ಕಡೆ ತೂಗುತ್ತಿದೆ ಎಂಬುದನ್ನು ಪರೀಕ್ಷಿಸಿ ನೋಡಲೇಬೇಕು. ಇಲ್ಲದೇ ಹೋದರೆ ಭೋಜನಗೃಹದ ಯಜಮಾನನಾಗಿ ಒಂದು ಕೈಯಲ್ಲಿ ಪಾಕಶಾಸ್ತ್ರದ ಪುಸ್ತಕವನ್ನು ಹಿಡಿದು ಇನ್ನೊಂದು ಕೈಯಲ್ಲಿ ಕರಿಯುವ ಬಾಣಲೆಯಲ್ಲಿ ಎಣ್ಣೆಯನ್ನು ಸುರಿಯುವ ಚಮಚವನ್ನು ಹಿಡಿದು ಸ್ವಧರ್ಮವನ್ನು ಸರಿಯಾಗಿ ಪರೀಕ್ಷಿಸಿಕೊಳ್ಳಲೇಬೇಕು. ಇದು ನಿಜಕ್ಕೂ ಐತಿಹಾಸಿಕ ವಿಕಾಸದ ವಿಡಂಬನೆಯೇ ಆಗಿರಬೇಕು" ಎಂದು ಸಾರಸ್ವತರ ನೈತಿಕ ಪತನದ ಬಗ್ಗೆ ವಿಷಾದ ವ್ಯಕ್ತಪಡಿಸುತ್ತಾರೆ. ಮುಂದುವರಿದು ಅವರನ್ನು ತಮ್ಮ ಆತ್ಮಾವಲೋಕನ ಮಾಡಿಕೊಳ್ಳಲು ಪ್ರಶ್ನಿಸುತ್ತಾರೆ.

1) ನಾವು ನಿಜವಾಗಿಯೂ ಬ್ರಾಹ್ಮಣ ಗುಣಗಳನ್ನು ಹೊಂದಿದ್ದೇವೆಯೇ?

2) ಸಾರಸ್ವತ ಬ್ರಾಹ್ಮಣರ ಗುಣಗಳು ನಮ್ಮಲ್ಲಿವೆಯೇ?

3) ನಾವೀಗ ಬ್ರಾಹ್ಮಣ ವೇಷದಲ್ಲಿರುವ ವೈಶ್ಯರಾಗಿದ್ದೇವೆ ಎಂದು ನಿರ್ದಿಷ್ಟವಾಗಿ ಹೇಳುವ ಹಂತ ತಲುಪಿದ್ದೇವೆಯೇ?

ಧರ್ಮ ಷಟ್ಕರ್ಮಗಳ ಬಗ್ಗೆ ವಿವರಣೆ ಕೊಡುತ್ತ ಸಾರಸ್ವತರು ಬ್ರಾಹ್ಮಣ್ಯದಿಂದ ಎಷ್ಟು ದೂರ ಸರಿಯುತ್ತಿದ್ದಾರೆ ಎಂಬುದನ್ನು ಸೂಚಿಸಿ ಮೌಲ್ಯಗಳ ಪುನರ್ವ್ಯಾಖ್ಯಾನ ಮಾಡುತ್ತಾರೆ.

ಸಿಂಧು-ಸರಸ್ವತೀ ನದಿಗಳ ನಾಗರಿಕತೆಯಲ್ಲಿ ಮೂಲ ದ್ರಾವಿಡ ಭಾಷೆಯಲ್ಲಿ ಮಾತನಾಡುತ್ತಿದ್ದರು. ಆರ್ಯರು ಮಾಗಧಿ, ಪ್ರಾಕೃತ, ಶೌರಸೇನಿ, ಪಾಕೃತ ಮಾತನಾಡುತ್ತಿದ್ದರು. ಶೌರಸೇನಿ ಉತ್ಕರ್ಷಸ್ಥಿತಿ ತಲಪುವ ಮುನ್ನ ಉತ್ತರ ಭಾರತದಲ್ಲಿ ಮಾಗಧಿ ಪ್ರಚಲಿತವಾಗಿತ್ತು. ಪೂರ್ವಕ್ಕೆ ಸರಿದಂತೆ ಶೌರಸೇನಿಯ ಪ್ರಭಾವ ಕ್ಷೀಣಿಸುತ್ತ ಹೋಯಿತು. ಆರ್ಯರು ಶೌರಸೇನಿ ಮಾತನಾಡುತ್ತಿದ್ದರು.

ಶೌರಸೇನಿ ಭಾಷೆ ಮಾತನಾಡುವ ಆರ್ಯರನ್ನು ಪರಶುರಾಮನು ಬ್ರಹ್ಮಾವರ್ತದಿಂದ ಗೋಮಂತಕಕ್ಕೆ ಕರೆತಂದನು.

ಸಾರಸ್ವತರು ಈಗ ಮಾತನಾಡುವ ಕೊಂಕಣಿಭಾಷೆಯ ಮೂಲ ಶೌರಸೇನಿ. ಅದು ಮಾಗಧಿ. ಪ್ರಾಕೃತಗಳಿಗೆ ಋಣಿಯಾಗಿರುವ ಮರಾಠಿಯಂತಿಲ್ಲ.

ಡಾ. ಗ್ರಿಯರ್ಸನ್‌ನು ಮಾಡಿದ ಭಾಷೆಯ ಅಧ್ಯಯನವನ್ನು ಉಲ್ಲೇಖಿಸುತ್ತ ಸೋಂದೆಯವರು “ಕೊಂಕಣಿ ಮತ್ತು ಮರಾಠಿಯಲ್ಲಿ ಅನೇಕ ಸಾಮಾನ್ಯ ಶಬ್ದಗಳಿವೆ. ಅದೇ ರೀತಿ ಸ್ವಲ್ಪಮಟ್ಟಿಗೆ ಬಂಗಾಲಿಯಲ್ಲಿಯೂ ಇವೆ ಎಂದ ಮಾತ್ರಕ್ಕೆ ಮರಾಠಿಯ ಉಪಭಾಷೆ ಕೊಂಕಣಿ ಎಂದು, ಕೊಂಕಣಿ ಭಾಷೆಯ ಸಾರಸ್ವತರು ಬಂಗಾಲದಿಂದ ಗೋಮಂತಕದ ಕಡೆ ವಲಸೆ ಬಂದರೆಂದು ಪ್ರತಿಪಾದಿಸುವುದು ವಿವೇಚನಾರಹಿತ ಅಸಂಬದ್ಧ ಪ್ರಲಾಪವಾದೀತು” ಎಂದು ಕೊಂಕಣಿ ಸ್ವತಂತ್ರ ಭಾಷೆಯೆಂದು ಸಾಕ್ಷ್ಯಾಧಾರಗಳಿಂದ ಸಿದ್ಧಪಡಿಸುತ್ತಾರೆ. ಇದು ಹಿಂದಿನ ಗ್ರಹಿಕೆಗಳಿಗೆ ಸವಾಲೊಡ್ಡುವ ವಿಶ್ಲೇಷಣೆ.

ಗೋಮಂತಕದಿಂದ ಮಹಾರಾಷ್ಟ್ರಕ್ಕೆ ವಲಸೆ ಹೋದ ಸಾರಸ್ವತರು ತಮ್ಮ ಮೂಲಭಾಷೆಗೆ ಎಳ್ಳುನೀರು ಬಿಟ್ಟು ಮರಾಠಿಯನ್ನು ಆತ್ಮಸಾತ್ ಮಾಡಿಕೊಂಡು ಮರಾಠಿಗರಾಗಿ ಬೀಗಿದರು. ಕ್ರೈಸ್ತಮತಕ್ಕೆ ಮತಾಂತರಗೊಂಡ ಸಾರಸ್ವತರು ಪೋರ್ಚುಗೀಸ ಭಾಷೆ ಮತ್ತು ಸಂಸ್ಕೃತಿಯನ್ನು ಅಪ್ಪಿಕೊಂಡರು. ಕರ್ನಾಟಕ, ಗೋವೆಯಲ್ಲಿದ್ದ ಕ್ರಿಶ್ಚಿಯನ್ನರು ಕೊಂಕಣಿಯನ್ನು ಕಾಪಾಡಿದರು. ಸಾರಸ್ವತರು ಕೊಂಕಣಿಯನ್ನು ಮನೆಯಲ್ಲಿ ಉಳಿಸಿಕೊಂಡರೂ ಸಾಹಿತ್ಯ ವಲಯದಲ್ಲಿ ಹಿಂದೆ ಬಿದ್ದರು.

ನಾಗೇಶ ಸೋಂದೆಯವರು ಘನವಿದ್ವಾಂಸರು. ಕೊಂಕಣಿ ಅವರ ಮನೆ ಮಾತಾದರೂ ಇಂಗ್ಲೀಷ್ ಭಾಷೆಯ ಮೇಲೆ ಪ್ರಭುತ್ವ ಸ್ಥಾಪಿಸಿದ್ದಾರೆ. ಇಂಗ್ಲೀಷಿನಲ್ಲಿ ಇಪ್ಪತ್ತೆಂಟು, ಕೊಂಕಣಿಯಲ್ಲಿ ಹದಿನಾರು ಗ್ರಂಥಗಳನ್ನು ಬರೆದಿದ್ದಾರೆ. ಸಂಸ್ಕೃತ ಭಾಷೆಯನ್ನು ಕರಗತ ಮಾಡಿಕೊಂಡ ಶ್ರೀಯುತರು ವೇದ, ವೇದಾಂಗಗಳ ಅಧ್ಯಯನ ಮಾಡಿದ್ದಾರೆ. ಮಾಧ್ವ ತತ್ತ್ವಜ್ಞಾನದ ಬಗ್ಗೆ ಅಧಿಕಾರವಾಣಿಯಿಂದ ಮಾತನಾಡುವ ಸಾಮರ್ಥ್ಯ ಹೊಂದಿರುವ ಸೋಂದೆಯವರು ಸಾಹಿತ್ಯಕ್ಕಿಂತ ಭಾರತೀಯ ತತ್ತ್ವಜ್ಞಾನದಲ್ಲಿ ಒಲವು ಬೆಳೆಸಿಕೊಂಡರು.

ಮುಂಬಯಿಯಂತಹ ಮಹಾನಗರದಲ್ಲಿ ಆಯುಷ್ಯದ ಬಹುಭಾಗ ಕಳೆದಿದ್ದರೂ, ಇಂಗ್ಲಿಷಿನಲ್ಲಿ ಪ್ರಕಾಂಡ ಪಾಂಡಿತ್ಯವಿದ್ದರೂ ತಾಯಿಭಾಷೆ ಕೊಂಕಣಿಯನ್ನು ಮರೆಯದ ಮಹಾಪುರುಷ ನಾಗೇಶ ಸೋಂದೆ. ಅವರು ಉತ್ತರಕನ್ನಡ ಜಿಲ್ಲೆಯ ಶಿರಸಿ ನಗರದಲ್ಲಿ ಹುಟ್ಟಿ, ಅಲ್ಲಿಯ ಮಾರಿಕಾಂಬಾ ಹೈಸ್ಕೂಲಿನಲ್ಲಿ ಓದುತ್ತಿದ್ದಾಗಲೇ ಕೊಂಕಣಿ ಕುಲಪುರುಷ ಮಾಧವ ಮಂಜುನಾಥ ಶಾನಭಾಗರ ಸಂಪರ್ಕದಲ್ಲಿ ಬಂದರು. ಮಾಧವ ಶಾನಭಾಗರು ಪುಣೆಯ ಪ್ರಸಿದ್ಧ ಫರ್ಗ್ಯುಸನ್ ಕಾಲೇಜಿನಲ್ಲಿ ಓದಿ ಕಾರವಾರದಲ್ಲಿ ವಕೀಲಿ ವೃತ್ತಿ ಮಾಡುತ್ತಿದ್ದಾಗಲೇ, ಮುಂಬಯಿಯಿಂದ ಕನ್ಯಾಕುಮಾರಿಯವರೆಗೆ ಸಂಚರಿಸಿ ಕೊಂಕಣಿ ಸಮ್ಮೇಳನ ಸಂಘಟಿಸಿ ಕೊಂಕಣಿ ಪ್ರಚಾರ ಮಾಡುತ್ತಿದ್ದರು.

ಶಾಲಾ ದಿನಗಳಲ್ಲಿಯೇ ಮಾಧವ ಮಂಜುನಾಥ ಶಾನಭಾಗರ ಸಂಪರ್ಕಕ್ಕೆ ಬಂದ ಡಾ. ವೈಕುಂಠರಾವ್ ಸೋಂದೆ ಮತ್ತು ನಾಗೇಶ ಸೋಂದೆ ಸಹೋದರರು ಕೊಂಕಣಿ ಭಾಷೆ – ಸಂಸ್ಕೃತಿಯ ಅಭಿವೃದ್ಧಿಯ ಪಣತೊಟ್ಟರು. ಕೃಷಿ ವಿಜ್ಞಾನ ಪದವೀಧರರಾದ ವೈಕುಂಠರಾವ್ ಸೋಂದೆಯವರು ಬ್ಯಾಂಕ್– ಶಿಕ್ಷಣ ಮತ್ತು ಕೊಂಕಣಿ ಭಾಷೆಯ ಚಟುವಟಿಕೆಗಳ ಕೇಂದ್ರವಾಗಿ ಶಿರಸಿಯಲ್ಲಿ ಬೆಳೆದರೆ, ನಾಗೇಶ ಸೋಂದೆಯವರು ಕಳೆದ ಅರ್ಧಶತಮಾನಕ್ಕೂ ಹೆಚ್ಚುಕಾಲ ಮುಂಬಯಿ ಮಹಾನಗರದಲ್ಲಿ ನೆಲೆಸಿ, ಒಂದು ಕಂಪನಿಯ ಅತ್ಯುನ್ನತ ಹುದ್ದೆಯಲ್ಲಿದ್ದು ತಮ್ಮ ಕಾರ್ಯಬಾಹುಳ್ಯದಲ್ಲಿಯೂ ಸಾಹಿತ್ಯ ಸೃಷ್ಟಿಯ ರಚನಾತ್ಮಕ ಕಾರ್ಯದಲ್ಲಿ ತೊಡಗಿಸಿಕೊಂಡಿರುವುದು ಹೆಮ್ಮೆಯ ವಿಷಯವಾಗಿದೆ.

ಕೊಂಕಣಿ ಭಾಷೆಯಲ್ಲಿ ಅವರು ಬರೆದುದು ಕಡಿಮೆಯಿರಬಹುದು. ಆದರೆ ಮೌಲಿಕವಾದುದನ್ನೇ ಬರೆದು ಕೊಂಕಣಿ ಸಾಹಿತ್ಯ ದಿಗಂತದಲ್ಲಿ ಶಾಶ್ವತ ಸ್ಥಾನ ಪಡೆದಿದ್ದಾರೆ. ಕೊಂಕಣಿಯಲ್ಲಿ ಅವರು ಬರೆದ 'ಕೊಂಕಣಿ ಭಾಷೆಚೋ ಇತಿಹಾಸ', ಉಪನಿಷಿದಾಂಚೆ ಅಂತರಂಗ, ಸಾರಸ್ವತಾಲೆ ಭವಿತವ್ಯ, ವಿಷ್ಣು ಸಹಸ್ರನಾಮ – ಭಾಷಾಂತರ – ವಿವೇಚನ ಎಂಬ ಗ್ರಂಥಗಳು ಜನಮನ್ನಣೆಗೆ ಪಾತ್ರವಾಗಿವೆ. ಅವರು ಬರೆದ ಪುರಂದರದಾಸರ ಕೃತಿ ಡಾ. ಟಿ. ಎಂ. ಪೈ

ಪ್ರತಿಷ್ಠಾನದ ಪ್ರಶಸ್ತಿಗೆ ಪಾತ್ರವಾಗಿದೆ. ಅವರು "ಕೌಂಡಿಣ್ಯ" ಎಂಬ ಕೊಂಕಣಿ ತ್ರೈಮಾಸಿಕವನ್ನು ನಾಲ್ಕು ವರ್ಷ ಸಂಪಾದಿಸಿ ಪ್ರಕಟಿಸಿದರು. ಅದೊಂದು ಮೌಲಿಕ ಲೇಖನಗಳ ಸಂಗ್ರಹವಾಗಿತ್ತು.

ಅವರು ಮುಂಬಯಿಯಲ್ಲಿ ನಡೆದ ಅಖಿಲಭಾರತ ಕೊಂಕಣಿ ಸಾಹಿತ್ಯ ಪರಿಷತ್ತಿನ ನಾಲ್ಕನೆಯ ಅಧಿವೇಶನದ ಸಹಕಾರ್ಯದರ್ಶಿಯಾಗಿದ್ದರು. ಮುಂಬಯಿಯ ಕೊಂಕಣಿ ಭಾಷಾಮಂಡಲ, ಕೊಂಕಣಿಭಾಷಾ ಸಮಿತಿಯ ಅಧ್ಯಕ್ಷರಾಗಿದ್ದರು. ಬೆಂಗಳೂರಿನಲ್ಲಿ 1984ರಲ್ಲಿ ನಡೆದ ಕೊಂಕಣಿ ಭಾಷೆಯ ಹದಿನೈದನೆಯ ಅಖಿಲಭಾರತ ಸಮ್ಮೇಳನದ ಸರ್ವಾಧ್ಯಕ್ಷರಾಗಿದ್ದರು. ಅವರು ಮುಂಬಯಿಯಲ್ಲಿ ಕೊಂಕಣಿ ಭಾಷೆಯ ಅಭಿವೃದ್ಧಿಗಾಗಿ ನಾಟಕ ಪ್ರದರ್ಶನ, ಸಂಗೀತ ಕಾರ್ಯಕ್ರಮಗಳನ್ನು ಏರ್ಪಡಿಸುತ್ತಿದ್ದರು.

ಮುಂಬಯಿ ಮಹಾನಗರದಲ್ಲಿ ಏಕಾಂಗಿಯಾಗಿ ನಿಂತು ಅವರು ಮಾಡಿದ ಕೊಂಕಣಿ ಭಾಷೆಯ ಸೇವೆಗೆ ಪ್ರಶಸ್ತಿ ಪುರಸ್ಕಾರಗಳು ಅವರನ್ನು ಹುಡುಕಿಕೊಂಡು ಬರಬೇಕಿತ್ತು. ಮಹಾರಾಷ್ಟ್ರಿಗರೂ ಇವರು ಕೊಂಕಣಿ ಭಾಷಿಕರೆಂದು ಹತ್ತಿರ ಸೇರಿಸಲಿಲ್ಲ. ಕರ್ನಾಟಕದವರೂ ಇವರನ್ನು ಗೊತ್ತಿದ್ದೂ ದೂರವಿಟ್ಟರು ಎನಿಸುತ್ತದೆ. ಯಾವ ಪ್ರಶಸ್ತಿ ಪುರಸ್ಕಾರಗಳು ಬರದಿದ್ದರೂ ಅವರು ಧೀಮಂತರೇ, ಅವರ ಸಾಹಿತ್ಯಕ್ಕೆ ಸಾರ್ವಕಾಲಿಕ ಮಹತ್ವವಿದೆ.

ಅವರು ಬರೆದ 'ದಕ್ಷಿಣದ ಸಾರಸ್ವತರು' ಕನ್ನಡಕ್ಕಿಳಿಸಿದ ಈ ವಿದ್ವಾಂಸರಿಬ್ಬರೂ ಪ್ರಶಂಸೆಗೆ ಪಾತ್ರರು. ಉಚ್ಚಶ್ರೇಣಿಯ ಇಂಗ್ಲಿಷ್ ಭಾಷೆಯ ಈ ಕೃತಿಯನ್ನು ಕನ್ನಡದ ಜಾಯಮಾನಕ್ಕೆ ಒಗ್ಗಿಸುವುದು ಸುಲಭವಲ್ಲ. ಇಬ್ಬರೂ ಭಾಷಾ ವಿಜ್ಞಾನದಲ್ಲಿ ನುರಿತವರು. ತಮ್ಮ ಅನುವಾದಗಳಿಂದ ಈಗಾಗಲೇ ಹೆಸರು ಮಾಡಿದವರು. ಇವರು ಮೂಲಕೃತಿಗೆ ನ್ಯಾಯ ಒದಗಿಸಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳು.

ಇಂಥ ಮಹತ್ವದ ಕೃತಿಗೆ ಮುನ್ನುಡಿ ಬರೆಯುವ ಸೌಭಾಗ್ಯವನ್ನು ನನಗೆ ಒದಗಿಸಿದ ಡಾ. ವಿ. ಎಸ್. ಸೋಂದೆ ಮತ್ತು 'ಜಿ. ಎಸ್. ಬಿ. ಹಿತಚಿಂತಕ ಸಂಘ(ರಿ.)'ಕ್ಕೆ ನಾನು ಋಣಿಯಾಗಿದ್ದೇನೆ.

ವಿಜಯಾದಶಮಿ
ಬೆಂಗಳೂರು


– ಶಾ. ಮಂ. ಕೃಷ್ಣರಾಯ
ಮೊ: 9481788832

ಅರ್ಪಣೆ.

"ನಾನು ನನ್ನ ಬಾಳನ್ನು ನಾನೇ ರೂಪಿಸಿಕೊಂಡಂತೆ
ನೀನು ನಿನ್ನ ಬಾಳನ್ನು ನೀನೇ ರೂಪಿಸಿಕೋ"
ಎಂದು ಬೋಧಿಸಿ ದಾರಿ ತೋರಿಸಿದ
ನನ್ನ ಬಂಧು,

ವಾಸುದೇವ ದತ್ತಾತ್ರೇಯ ಸೋಂದೆ

ಅವರ ಸ್ಮರಣಾರ್ಥ
ಸಮರ್ಪಣೆ.



ಪ್ರಸ್ತಾವನೆ

ಈ ಗ್ರಂಥವು ಭಾರತದ ಪಶ್ಚಿಮತೀರದಲ್ಲಿ ನೆಲೆಸಿರುವ ಸಾರಸ್ವತ ಸಮಾಜದ ಇತಿಹಾಸ ಅಲ್ಲ. ಈ ವಿಷಯದ ಮೇಲೆ ಅನೇಕ ಗ್ರಂಥಗಳಿವೆ. ಪ್ರಸ್ತುತ ಲೇಖಕನಿಗಿಂತ ಹೆಚ್ಚು ಪಾಂಡಿತ್ಯವುಳ್ಳವರೂ ಅನೇಕರಿದ್ದಾರೆ. ಇದು ವಿಶೇಷವಾಗಿ, ಸಾರಸ್ವತ ಸಮಾಜದ ಬೇರೊಂದು ಮುಖವನ್ನು ಪ್ರಸ್ತುತಪಡಿಸುವ ಪ್ರಯತ್ನ ಮಾಡುತ್ತದೆ. ಲೇಖಕನ ವೃದ್ಧತ್ವ ಹಾಗೂ ಅತಿ ಸಮೀಪಸ್ಥ ಭಾಷಾಬಾಂಧವರ ಸಹಕಾರದ ಅಭಾವದ ನಿಮಿತ್ತವಾಗಿ, ಇದು ಹಸ್ತಪ್ರತಿಯಲ್ಲಿರುವ ವ್ಯಾಕರಣದೋಷ ಹಾಗೂ ಅಕ್ಷರಸ್ಖಾಲಿತ್ಯವನ್ನು ನೋಡಿಸಿ ಸರಿಪಡಿಸಿಕೊಳ್ಳಲು ನನ್ನಿಂದ ಸಾಧ್ಯವಾಗಲಿಲ್ಲ. ಸಮಾಜದಲ್ಲಿರುವ ಪ್ರಾಜ್ಞವರ್ಗದ ಮಾರ್ಗದರ್ಶನ ಪಡೆದರೆ ಒಳ್ಳೆಯದೆಂದು ಭಾವಿಸಿ, ಈ ಲೇಖಕನು ಮೊದಲನೆಯ ಹಸ್ತಪ್ರತಿಯನ್ನು ಅನೇಕ ಪಂಡಿತರ ಬಳಿ, ಅವರ ವಿಮರ್ಶೆ ಹಾಗೂ ಸಲಹೆ–ಸೂಚನೆಗಳಿಗಾಗಿ ಕಳಿಸಿದ್ದೂ ಆಯಿತು. ಆದರೆ ಸಲಹೆ ಕಳಿಸುವುದಿರಲಿ, ಅನೇಕರು ಹಸ್ತಪ್ರತಿ ಕೈ ಸೇರಿತೆಂಬ ಸೂಚನೆಯನ್ನೂ ನೀಡಲಿಲ್ಲ. ಕೆಲವರಷ್ಟೇ ಸಲಹೆಯನ್ನು ನೀಡಿದ್ದರು. ಅದನ್ನು ನನ್ನ ಶಕ್ತ್ಯನುಸಾರ ಸೇರಿಸಿಕೊಂಡಿದ್ದೇನೆ. ಆದ ಕಾರಣ, ಇಲ್ಲಿ ತಪ್ಪು–ತಡೆಗಳೇನಾದರೂ ಉಳಿದುಹೋದರೆ, ಅದರ ಸಂಪೂರ್ಣ ಹೊಣೆ ನನ್ನದೇ.

ಇಲ್ಲಿ ಸಾರಸ್ವತ ಸಮಾಜದ ಬಾಹ್ಯ ರೂಪರೇಷೆಯ ಚಿತ್ರಣವನ್ನು ನೀಡುವ ಪ್ರಯತ್ನ ಮಾಡಲಾಗಿದೆ. ಭಾರತದ ಪಶ್ಚಿಮ ತೀರದಲ್ಲಾದ ಅತ್ಯಂತ ಪ್ರಾಚೀನ ವಸಾಹತುಗಳಿಂದ ಮೊದಲ್ಗೊಂಡು, ಅಲ್ಲಿ ಸುದೀರ್ಘ ಸಾಗಾಟವಾದ ಕಾಲಾವಧಿಯಲ್ಲಿ, ಪುರಾಣೋಕ್ತ ಭಾರ್ಗವ ಪರಶುರಾಮನಿಂದ ಪ್ರಪ್ರಥಮ ವಲಸೆಯು ಸ್ಥಾಪಿಸಲ್ಪಟ್ಟಿತು. ಪುರಾತತ್ತ್ವದ, ಜನಾಂಗೀಯ, ಸಾಹಿತ್ಯಿಕ ಹಾಗೂ ಐತಿಹಾಸಿಕ ಗ್ರಂಥಗಳ ಅಭಾವ ಇರುವುದರಿಂದ ಇದಕ್ಕೆ ಪ್ರಮುಖ ಆಧಾರವು ಧಾರ್ಮಿಕಶಾಸ್ತ್ರ ಹಾಗೂ ಪುರಾಣಗಳು. ಆದರೆ, ಇಪ್ಪತ್ತನೆಯ ಶತಮಾನದ ಆರಂಭದಿಂದ ಪುರಾತತ್ತ್ವದ, ಜನಾಂಗೀಯ, ಭಾಷಿಕ ಮತ್ತು ಐತಿಹಾಸಿಕ ಪರಂಪರೆಗಳಲ್ಲಿ ಸಾಕಷ್ಟು ಅಭಿವೃದ್ಧಿಯಾಗುತ್ತ ಬಂದಿದೆ. ಇದು ಕೊಂಕಣ ಹಾಗೂ ಇತರ ಭಾಗದ ಸಾರಸ್ವತ ವಸಾಹತುಗಳ ಇತಿಹಾಸದ ಮೇಲೆ ಒಂದು

ಹೊಸ ದೃಷ್ಟಿಕೋನವನ್ನು ಹೊಂದಲು ನಮ್ಮನ್ನು ಅಣಿಗೊಳಿಸುತ್ತದೆ.

ಆರಂಭದ ಹಂತದಲ್ಲಿ, ಮಹಾಭಾರತ, ಭಾಗವತ ಪುರಾಣ ಹಾಗೂ ಸ್ಕಂದ ಪುರಾಣಗಳು ಪ್ರಮುಖ ಆಕರಗ್ರಂಥಗಳಾಗಿದ್ದವು. ಈಗ ನಮಗೆ ಮಾರ್ಶಲ್ ಹಾಗೂ ಇತರರ ಸಿಂಧ ಕಣಿವೆ ಹಾಗೂ ಸರಸ್ವತೀ ನಾಗರಿಕತೆಗಳ ಪುರಾತತ್ತ್ವ ಸಂಶೋಧನೆ, ರೈಸ್, ಗುಹ ಹಾಗೂ ಇತರರ ಜನಾಂಗೀಯ ಅಧ್ಯಯನ, ಹೋರ್ನಲ್, ಮಾರ್ಶಲ್, ಕತ್ರೇ, ಚಟರ್ಜಿಯವರ ಭಾಷಾಶಾಸ್ತ್ರದ ಅಧ್ಯಯನ, ಕನ್ನಿಂಗ್‌ಹ್ಯಾಮ್, ಪುಸಾಲಕರ, ಸುಕ್ತಂಕರ, ಪ್ರಿಯೋಳಕರ, ಶಣ್ಯೈ ಗೋಂಯ್‌ಬಾಬ ಹಾಗೂ ಇತರರ ಐತಿಹಾಸಿಕ ಅಧ್ಯಯನಗಳು ಲಭ್ಯವಾಗಿವೆ. ವೇದ, ಬ್ರಾಹ್ಮಣ ಮತ್ತು ಪುರಾಣಗಳಲ್ಲಿ ಸಾಂಕೇತಿಕವಾಗಿ ಉಲ್ಲೇಖಿಸಿರುವ ಸಾರಸ್ವತ ಸಂದರ್ಭಗಳ ಐತಿಹಾಸಿಕತೆಯ ಸಮಸ್ಯೆಗಳಿಗೆ ಇವು ಒಂದು ನೂತನ ದೃಷ್ಟಿಕೋನವನ್ನು ನೀಡಿವೆ.

ರಶಿಯಾದ ಶ್ರೇಷ್ಠ ಸಾಹಿತಿ ಮ್ಯಾಕ್ಸಿಂಗಾರ್ಕೀ ಹೀಗೆ ಹೇಳುತ್ತಾರೆ. "ವಿಜ್ಞಾನ ಮತ್ತು ಸಾಹಿತ್ಯಗಳಲ್ಲಿ ಬಹಳಷ್ಟು ಸಾಮ್ಯವಿದೆ. ಎರಡರಲ್ಲೂ ನಿರೀಕ್ಷಣೆ, ತುಲನೆ ಮತ್ತು ಅಧ್ಯಯನಗಳಿಗೆ ಮೌಲಿಕ ಮಹತ್ವವಿದೆ. ವಿಜ್ಞಾನಿಯಂತೆ ಕಲಾವಿದನಿಗೂ ಕಲ್ಪನೆ ಮತ್ತು ಅಂತರ್ದೃಷ್ಟಿಯ ಅಗತ್ಯವಿದೆ. ಕಲ್ಪನೆ ಮತ್ತು ಅಂತರ್ದೃಷ್ಟಿಗಳು ಘಟನಾವಲಿಯಲ್ಲಿರುವ ಅಂತರವನ್ನು ಇನ್ನೂ ಸಂಶೋಧನೆ ಯಾಗದ ಕೊಂಡಿಗಳಿಂದ ಬೆಸೆಯುವ ಕಾರ್ಯವನ್ನು ಮಾಡುತ್ತವೆ. ಮತ್ತು ವಿಜ್ಞಾನಿಗೆ ಕಾರ್ಯಾಧಾರ ಕಲ್ಪನೆ ಮತ್ತು ಸಿದ್ಧಾಂತಗಳನ್ನು (hypothesis and theories) ಹುಟ್ಟುಹಾಕಲು ಪ್ರೇರಿಸಿ ಪ್ರಕೃತಿರಹಸ್ಯ ಹಾಗೂ ಸ್ವರೂಪಗಳ ಅಧ್ಯಯನ ಮಾಡುವಂತೆ ಹೆಚ್ಚು ಕಡಿಮೆ ಕರಾರುವಾಕ್ಕಾಗಿ ಅನ್ವೇಷಕ ಬುದ್ಧಿಗೆ ನಿರ್ದೇಶನ ಮಾಡುತ್ತವೆ. ಇವೆಲ್ಲವೂ ಸಾಹಿತ್ಯಸೃಷ್ಟಿಯ ಕೆಲಸದಂತಿವೆ. ಮನಸ್ಸಿನಲ್ಲಿರುವ ವಿಷಯವನ್ನು ಮೂಡಿಸಲು ಪಾತ್ರಗಳ ಹಾಗೂ ಅವುಗಳ ವಿಧಾನದ ಸೃಷ್ಟಿ ಮಾಡುವ ಕಲೆಗೆ ಕಲ್ಪನೆ, ಅಂತರ್ದೃಷ್ಟಿ ಹಾಗೂ ಸಾಮರ್ಥ್ಯದ ಅಗತ್ಯವಿರುತ್ತದೆ."

ಅದೇ ವಿಧವಾಗಿ, ಜರ್ಮನಿಯ ಶ್ರೇಷ್ಠ ತತ್ತ್ವಜ್ಞಾನಿ ಗಯಟೆ 'Maxims and Reflections' (ಸಾರ್ವಕಾಲಿಕ ತತ್ತ್ವಗಳು ಹಾಗೂ ಪರ್ಯಾಲೋಚನೆ) ಎಂಬ ಗ್ರಂಥದಲ್ಲಿ ಹೀಗೆ ಬರೆಯುತ್ತಾನೆ.

"ಇತಿಹಾಸಕಾರನ ಕರ್ತವ್ಯ ಯಾವುದೆಂದರೆ, ಎಲ್ಲಕ್ಕಿಂತ ಮೊದಲು ತಾನು ನ್ಯಾಯದರ್ಶಿಯಾಗಿ ಸೇವೆ ಸಲ್ಲಿಸಲು ಆದೇಶಿಸಲ್ಪಟ್ಟವನು ಎಂದು ಭಾವಿಸಿಕೊಳ್ಳಬೇಕು. ತದನಂತರ ಅವನು ವ್ಯಾಜ್ಯದ ನಿರೂಪಣೆ ಪೂರ್ಣ ವಾಗಿದೆಯೇ, ಸಾಕ್ಷ್ಯಾಧಾರಗಳನ್ನು ಸ್ಪಷ್ಟವಾಗಿ ಸಾದರ ಪಡಿಸಲಾಗಿದೆಯೇ

ಎಂಬುದನ್ನು ಮಾತ್ರ ಪರಿಶೀಲಿಸಬೇಕು. ಕೊನೆಯಲ್ಲಿ ಅವನು ತನ್ನ ಅಭಿಪ್ರಾಯವು ನ್ಯಾಯಮಂಡಳಿಯ ಅಧ್ಯಕ್ಷನ ಅಭಿಪ್ರಾಯದೊಂದಿಗೆ ತಾಳೆ ಆಗುವುದೋ ಇಲ್ಲವೋ ಎಂಬುದನ್ನೂ ಪರಿಗಣಿಸದೆ ಅಂತಿಮ ನಿರ್ಧಾರವನ್ನು ಮಂಡಿಸುತ್ತಾನೆ."

ಇನ್ನೋರ್ವ ಪಾಶ್ಚಿಮಾತ್ಯ ತತ್ತ್ವಜ್ಞಾನಿ ಸಾಂತಾಯನರ ಅಭಿಪ್ರಾಯಕ್ಕೂ ನಾನು ಉಪಕೃತನಾಗಿದ್ದೇನೆ. 'The sense of Beauty' ಎಂಬ ಗ್ರಂಥದಲ್ಲಿ ಅವರು ಹೀಗೆ ಹೇಳುತ್ತಾರೆ.

"ಕಲ್ಪಿತ ಕಥೆಗಳ ವಿಮರ್ಶೆಯಲ್ಲಿ ಎರಡು ಸ್ತರಗಳಿವೆ. ಮೊದಲನೆಯದು 'ಇದು ಮೂಢನಂಬಿಕೆಯಿಂದ ತುಂಬಿದೆ', ಎಂದು ಕೋಪದಿಂದ ತಿರಸ್ಕರಿಸುತ್ತದೆ. ಎರಡನೆಯದು 'ಇದು ಕಾವ್ಯಭಾಗ' ಎಂದು ನಗು-ನಗುತ್ತ ಪುರಸ್ಕರಿಸುತ್ತದೆ. .... ಧರ್ಮವು ಕಲ್ಪನೆಯ ಆಧಾರದಲ್ಲಿ ವ್ಯಾಖ್ಯಾನಿಸಲ್ಪಟ್ಟ ಮಾನವಾನುಭವ. ನೈಜ ಅರ್ಥದಲ್ಲಿ ಸತ್ಯ ಮತ್ತು ಜೀವನದ ಪ್ರತಿನಿಧಿ. ಅದು ಸಾಂಕೇತಿಕವಲ್ಲ. ಅಕ್ಷರಶಃ ನೈಜಸ್ಥಿತಿ ಎಂಬ ಕಲ್ಪನೆಯು ಸರ್ವಥಾ ಅಸಂಭನೀಯವಾದ ವಿಚಾರವಾಗಿದೆ. ಇದನ್ನು ಪುರಸ್ಕರಿಸುವವರು ಆ ವಿಷಯವನ್ನು ಪ್ರಯೋಜನಕಾರೀ ತತ್ತ್ವವನ್ನಾಗಿಸುವ ಮಟ್ಟಕ್ಕೆ ತಂದು ಮುಟ್ಟಿಸಿಲ್ಲ. ಧಾರ್ಮಿಕ ವಿಷಯವು ಚರ್ಚಾಸ್ಪದ ವಿಷಯವಾಗಿರಕೂಡದು. ನಾವು ಈ ಕಲ್ಪಿತ ಕಥೆಗಳಲ್ಲಿ ಧರ್ಮನಿಷ್ಠೆಯನ್ನು ಗೌರವಿಸಲು ಪ್ರಯತ್ನಪಡುತ್ತೇವೆ. ಅದಕ್ಕಿಂತ ಹೆಚ್ಚಾಗಿ ನಾವು ಅಲ್ಲಿ ಅಂತರ್ಗತವಾದ ಕಾವ್ಯಭಾಗವನ್ನು ಅರ್ಥಮಾಡಿಕೊಳ್ಳಬೇಕು."

ಲೇಖಕನು ಯುಕ್ತಾಯುಕ್ತ ವಿವೇಚನೆಯುಳ್ಳ ಈ ವಿವೇಕವಾಣಿಯ ಮಾರ್ಗದರ್ಶನ ಪಡೆಯಲು ಯಥಾಶಕ್ತಿ ಪ್ರಯತ್ನಪಟ್ಟಿದ್ದಾನೆ. ಆದರೆ, ಮಾನವನು ಸ್ವಲ್ಪ ಮಟ್ಟಿಗೆ ಪವಿತ್ರವೆಂದು ಗೌರವಿಸಲ್ಪಟ್ಟ ನಂಬಿಕೆಗಳಿಂದ ಸಂಪೂರ್ಣವಾಗಿ ಮುಕ್ತನಾಗಲಾರ. ಏಕೆಂದರೆ, ಅವನು ಒಂದು ನಂಬಿಕೆಯನ್ನು ತಿರಸ್ಕರಿಸಿದರೆ, ಪಕ್ಕದಲ್ಲಿ ಇನ್ನೊಂದು ಆ ಸ್ಥಳವನ್ನು ಅತಿಕ್ರಮಿಸಲು ಕಾಯುತ್ತಿರುತ್ತದೆ. ಆದ್ದರಿಂದ, ನಮ್ಮ ವಾಣಿಜ್ಯ ಕೌಶಲ್ಯಕ್ಕೆ ಜಗತ್ತೇ ಬೆಲೆಕೊಟ್ಟು ಪ್ರಶಸ್ತಿ ನೀಡುತ್ತಿದೆ. ಆದರೆ ನಮ್ಮ ವಿದ್ವತ್ತು ಮತ್ತು ವಿವೇಚನಾಶಕ್ತಿಗೇನೂ ಬೆಲೆಗೊಡುತ್ತಿಲ್ಲ ಎಂದು ಸಮಾಜವು ತಮ್ಮ ತಲೆಯ ಮೇಲೆ ಹೊರಿಸಿದ ನಂಬಿಕೆ, ಪದ್ಧತಿ ಹಾಗೂ ಸಂಪ್ರದಾಯಗಳನ್ನು ನಿರ್ಭೀತಿಯಿಂದ ಪ್ರಶ್ನಿಸಬಲ್ಲ ಧೀರರಿಗಾಗಿ ಈ ಗ್ರಂಥವನ್ನು ಬರೆಯಲಾಗಿದೆ. ಅವರ ಪ್ರತಿಭೆಯು ಚಿಂತನಶೀಲ ಮನಸ್ಸನ್ನು ಉದ್ದೀಪನಗೊಳಿಸಿ, ಪುರುಷೋತ್ತಮನ ಮನಸ್ಸು ಮತ್ತು ವಾಣಿಯ ದೂತನಂತೆ ವರ್ತಿಸಬೇಕಿತ್ತು. ಅಂಥ ಪ್ರತಿಭಾವಂತ ಸಮಾಜವು ತಮ್ಮ ಪ್ರತಿಭೆ ಮತ್ತು ಪಾಂಡಿತ್ಯದ ವಾಣಿಜ್ಯೀಕರಣ ಆಗಬೇಕು ಎಂಬುದರ ಕಡೆಗೆ ಅಧಿಕ ಸಂಖ್ಯೆಯಲ್ಲಿ ಒಲವು ತೋರಿಸಲು ಯಾವ

ಕಾರಣ ಇರಬಹುದು ಎಂಬುದರ ತನಿಖೆ ಆಗಬೇಕಿದೆ.

ಜ್ಞಾನವು ವ್ಯಾಪಾರೀ ಸರಕಾದಾಗ ಅದು ಉತ್ಪಾದಿಸಬಹುದಾದ ಸಂಪತ್ತಿನ ಸಾಮಗ್ರಿಗಳಲ್ಲಿ ಕಡೆಗಣಿಸಲ್ಪಡುತ್ತದೆ. ಸಂಪತ್ತು ಮತ್ತು ಸಮೃದ್ಧಿಗಳ ಮೆರವಣಿಗೆ ಆಗುವಾಗ ಪ್ರಾಜ್ಞವರ್ಗವು ವಿಷಾದ ಅಥವಾ ಭೀತಿಯಿಂದ ಪಕ್ಕದಲ್ಲಿ ನಿಂತು ನೋಡುತ್ತಿದೆ.

ಇಂಥ ಸಂದಿಗ್ಧ ಪರಿಸ್ಥಿತಿಯಲ್ಲಿ ಸರಸ್ವತೀ ಪುತ್ರರೂ, ಸಾರಸ್ವತ ಮುನಿಯ ಉತ್ತರಾಧಿಕಾರಿಗಳೂ ಆಗಿರುವ ಸಾರಸ್ವತರ ಸತ್ವವೇ ಅಪಾಯಕ್ಕೆ ಸಿಲುಕಿದೆ. ಅವರೀಗ ಮೌನ ವಹಿಸಿಕೊಂಡಿರುವುದು ಮಹಾಪರಾಧವಾಗುವುದು. ಪ್ರಜ್ಞಾವಂತ ರಿಗೆ ಇಲ್ಲಿ ಒಂದು ಕರ್ತವ್ಯದ ಕರೆಯಿದೆ. ಅವರು ಗಾಢನಿದ್ರೆಯಲ್ಲಿರುವ ತಮ್ಮ ಸಮಾಜದ ಸದಸ್ಯರನ್ನು ಜೋರಾಗಿ ಅಲುಗಾಡಿಸಿ ಎಬ್ಬಿಸಬೇಕು. ಅವರಲ್ಲಿ ಅಂತಃಸ್ಥವಾಗಿರುವ ನಿತ್ಯ ಸತ್ಯ ನಿರ್ಮಲ ಆತ್ಮಜ್ಯೋತಿಯನ್ನು ಮತ್ತೆ ಬೆಳಗಿಸಿ, ಅಸ್ಪಷ್ಟತೆಯ ಶೂನ್ಯವನ್ನು ತುಂಬಿ, ಆತ್ಮಜಾಗೃತಿ ಮೂಡಿಸಬೇಕು. ಅವರು ಎಲ್ಲೋ ದೂರದಲ್ಲಿ ನಿಂತು ದಿವ್ಯಾತ್ಮನಿಂದ ಮುಕ್ತಿಗಾಗಿ ಕಾಯುತ್ತ ಕುಳಿತುಕೊಳ್ಳದೆ ಕಾರ್ಯಪ್ರವೃತ್ತರಾಗಬೇಕು.

ಈ ಗ್ರಂಥವು ಸಮಾಜದ ಸಂಚಿತ ಪ್ರಜ್ಞೆಯಲ್ಲಿ ಅತ್ಯಂತ ಚಿಕ್ಕ ಅಲೆಯನ್ನು ಎಬ್ಬಿಸಿದರೂ ಸಾಕು. ಪ್ರಯತ್ನ ಸಾರ್ಥಕ ಆಯಿತೆಂದು ಭಾವಿಸಬಹುದು. ತತ್‌ಕ್ಷಣ ಅಥವಾ ನಾಟಕೀಯವಾಗಿ ಪರಿವರ್ತನೆ ಆಗುವುದೆಂದು ಯೋಚಿಸಬೇಕಿಲ್ಲ. ಪರಿವರ್ತನೆಗಳೆಂದೂ ನಾಟಕೀಯವಾಗಿರುವುದಿಲ್ಲ. ಅವು ಸದ್ದಿಲ್ಲದೆ, ಸಾವಕಾಶ ವಾಗಿ ಜಿನುಗುತ್ತ ಪ್ರಜ್ಞೆಯಲ್ಲಿ ಖಚಿತವಾಗಿ ಮೂಡಿಬರುತ್ತವೆ.

ಒಂದು ವ್ಯವಹಾರವು ತಾನು ಬಯಸಿದ ಉದ್ದೇಶವನ್ನು ಪೂರೈಸಿ ದಾಗಲೇ ಪರಿಪೂರ್ಣತೆಯನ್ನು ಪಡೆಯುವುದು. ಜನರು ಪುಸ್ತಕವನ್ನು ಓದಿದಾಗಲೇ ಅದರ ಬರವಣಿಗೆಯ ಉದ್ದೇಶ ಈಡೇರುವುದು. ಇಲ್ಲಿ ವ್ಯಕ್ತಪಡಿಸಿರುವ ವಿಚಾರಗಳನ್ನು ಸ್ವೀಕರಿಸಲೇಬೇಕೆಂಬ ಒತ್ತಾಯವಿಲ್ಲ. ಇವು ಜನರಲ್ಲಿ ಚಿಂತನ ಹಾಗೂ ಅನುಸಂಧಾನವನ್ನು ಮಾಡಿಸಿ, ಅವರನ್ನು ಒಂದು ನಿರ್ದಿಷ್ಟ ನಿರ್ಧಾರಕ್ಕೆ ಬರುವಂತೆ ಅಣಿಗೊಳಿಸುವ ಒತ್ತಾಯವಿದೆ. ಸಾಮಾನ್ಯವಾಗಿ, ಮಾನವನು ಅಂತರಂಗದಿಂದ ಸ್ಪಂದಿಸುತ್ತಾನೆ. ಆದರೆ, ಚಿಂತನ-ಮಂಥನ ಮಾಡಿ ತನ್ನ ಪ್ರತಿಕ್ರಿಯೆಯನ್ನು ವ್ಯಕ್ತಪಡಿಸುವುದಿಲ್ಲ.

ಈ ಕೃತಿಯನ್ನು ಒಂದು ಐತಿಹಾಸಿಕ ಕಥನ ಎಂದು ಓದಬೇಕೆಂದಿಲ್ಲ. ಇದನ್ನು ಸಾಮಾಜಿಕ ಜೀವನದ ಸ್ಥಾನ-ಮಾನಕ್ಕೆ ಒಡ್ಡಿದ ಒಂದು ಸವಾಲು ಎಂದು ಓದಬೇಕು. ಹಿಂದೆ ಇದೇ ರೀತಿ, ವರ್ತಿಸಿದ ಸಾರಸ್ವತ ಸಮಾಜವು

ಪ್ರಪಂಚದಲ್ಲಿ ತನ್ನ ವ್ಯಾವಹಾರಿಕ ಯಶಸ್ಸಿಗಾಗಿ ಗುರುತಿಸಲ್ಪಟ್ಟು ಆಧ್ಯಾತ್ಮಿಕ ಸೌಭಾಗ್ಯವನ್ನು ಹೊಂದಿರುವ ಸಮಾಜ ಎಂದು ಪ್ರಖ್ಯಾತವಾಗಿತ್ತು.

ಈ ಮೊದಲು ಈ ಕೃತಿಯ ಅನುವಾದವು ಕೊಂಕಣೀ ಭಾಷೆಯಲ್ಲಿ 'ಪಂಚಕದಾಯೀ' ಎಂಬ ಮಾಸಿಕ ಪತ್ರಿಕೆಯಲ್ಲಿ ಧಾರಾವಾಹಿಯಾಗಿ ಪ್ರಕಟವಾಗಿತ್ತು. ಆದರೆ ಅದು ಪುಸ್ತಕ ರೂಪದಲ್ಲಿ ಪ್ರಕಟವಾಗಲಿಲ್ಲ. ಇದೀಗ ಪ್ರೊ. ಕೃಷ್ಣದಾಸ ಭಟ್ಟರು ಮತ್ತು ಪ್ರೊ. ಪಿ. ಎಂ. ಹೆಗಡೆ ಅವರು ಕನ್ನಡದಲ್ಲಿ ಅನುವಾದಿಸಿರುವ ಈ ಕೃತಿಯನ್ನು ಶಿರಸಿಯ ಗೌಡ ಸಾರಸ್ವತ ಹಿತಚಿಂತಕ ಸಂಘದವರು ಪ್ರಕಟಿಸಿರುವರು. ಈ ಕೃತಿಯು ವಿಶಾಲವಾದ ವಾಚಕವೃಂದವನ್ನು ತಲಪಲಿ. ವಾಚಕರು ಚಿಂತನ ಹಾಗೂ ಆತ್ಮಾವಲೋಕನವನ್ನೂ ಮಾಡಿ, ಸಮಾಜವನ್ನು ತನ್ನ ಗತವೈಭವದತ್ತ ಮರಳಿ ಒಯ್ಯುವ ಭಗೀರಥ ಪ್ರಯತ್ನವನ್ನು ಮಾಡಲಿ ಎಂದು ಆಶಿಸುತ್ತೇನೆ.

ಹಿಂದೊಮ್ಮೆ ಗೋಮಂತಕವು ಪುನರಾವರ್ತಿತ ಆರ್ಯಾವರ್ತ ಕ್ಷೇತ್ರವೆಂದು ಪ್ರಸಿದ್ಧಿಯನ್ನು ಪಡೆದಿತ್ತು. ಅಂಥ ಪವಿತ್ರ ಗೋಮಂತಕ ಕ್ಷೇತ್ರ ಎಂಬ ತನ್ನ ಆಧ್ಯಾತ್ಮಿಕ ತಳಹದಿಯನ್ನೇ ಸಾರಸ್ವತ ಸಮಾಜವು ಕಳೆದುಕೊಂಡಿರುವಂತೆ ತೋರುತ್ತಿದೆ. ಸ್ಕಂದ ಪುರಾಣದ ಪ್ರಕಾರ, ಅದು "ಉತ್ತಮಂ ವ್ಯವಸ್ಥಿತಂ ಕ್ಷೇತ್ರಂ ಜವಾಧಿಕಂ ಸರ್ವತೀರ್ಥಾಧಿಕಂ ವಿಮಲಂ ನಿರ್ಮಲಂ ತೀರ್ಥಮುತ್ತಮಂ" ಹೀಗೆ, ಉತ್ತಮ, ವ್ಯವಸ್ಥಿತ, ಧಾನ್ಯಸಮೃದ್ಧ, ಪವಿತ್ರ ನದಿಗಳಿರುವ, ಮಂಗಲಕರ, ಪರಿಶುಭ್ರ ಹಾಗೂ ಉತ್ತಮ ತೀರ್ಥಕ್ಷೇತ್ರಗಳಿರುವ ಪ್ರದೇಶವಾಗಿತ್ತು. ಸಮಾಜದ ಭಾಷೆಯಾಗಿರುವ ಕೊಂಕಣೀ ಭಾಷೆಯೂ ಕೇವಲ ಧಾರ್ಮಿಕ ಸಂಸ್ಥೆಗಳ ವಶವರ್ತಿಯಾಗಿರುವುದರಿಂದ, ಅದು ಕೂಡ ಪ್ರಗತಿಪಥದತ್ತ ದಾಪುಗಾಲಿನಿಂದ ಹೆಜ್ಜೆ ಇಡುವ ಸಾಮರ್ಥ್ಯವನ್ನು ಕಳೆದುಕೊಂಡಿದೆ.

ಸಮಾಜವು ಈಗ ಯಾವುದೇ ಸ್ಥಿತಿಯಲ್ಲಿ, ಎಲ್ಲೇ ಇದ್ದರೂ ಸರಿ, ಅದು ತನ್ನ ಪ್ರಾರಂಭದ ದಿನಗಳಲ್ಲಿದ್ದ ಉಚ್ಛ್ರಾಯ ಸ್ಥಿತಿಯನ್ನು ಪುನಃಪ್ರಾಪ್ತಿ ಮಾಡಿಕೊಂಡು ಮತ್ತೆ ರಾರಾಜಿಸಲಿ ಎಂದು ಸಮಸ್ತ ದೇವ-ದೇವತೆಗಳಲ್ಲಿ ಪ್ರಾರ್ಥಿಸುತ್ತೇನೆ.

॥ ಓಂ ಹರಿಃ ಓಂ ತತ್‌ಸತ್.॥

– ನಾಗೇಶ ದತ್ತಾತ್ರೇಯ ಸೋಂದೆ
ಮುಂಬಯಿ

ವಿಷಯ ಸೂಚಿ.

1. ಮೂಲ ಆಕರಗಳು

ಭಾರತದ ಪಶ್ಚಿಮ ಕರಾವಳಿಯಲ್ಲಿ ಒಂದು ಭೂಪ್ರದೇಶವಿದೆ. ಅದು ನೂರು ಯೋಜನ ಉದ್ದ, ಮೂರು ಯೋಜನ ಅಗಲ ಹರಹಿಕೊಂಡಿರುವ ಪಟ್ಟಿ. ಪಶ್ಚಿಮಸಮುದ್ರ ಮತ್ತು ಪೂರ್ವದ ಸಹ್ಯ ಪರ್ವತಶ್ರೇಣಿಯಿಂದ ಆವೃತವಾಗಿದೆ. ಕಶ್ಯಪ ಮುನಿಗಳು ಭಾರ್ಗವ ಪರಶುರಾಮನಿಗೆ ಗಡೀಪಾರು ಮಾಡಿಸಿ ಆರ್ಯಾವರ್ತದ ಅಂತಿಮ ಗಡಿಯಾಚೆ ನೆಲೆಸಬೇಕೆಂದು ಆದೇಶ ನೀಡಿದ್ದರು. ಆಗ ಪರಶುರಾಮನನ್ನು ಉತ್ತಮ ಸ್ಥಿತಿಗೆ ತಂದು ಉದ್ಧರಿಸಿದ ಭೂಭಾಗವೇ ಇದು.

ಧರ್ಮದ ಬಾಹ್ಯಸ್ವರೂಪವು ದೇಶ, ಕಾಲ, ವ್ಯಕ್ತಿಗಳಿಗೆ ಅನುಸರಿಸಿ ಬದಲಾಗುತ್ತಿದ್ದರೂ ಅದರ ಅಂತಃಸತ್ವವು ಅಲಂಘ್ಯವಾಗಿರುತ್ತದೆ ಎಂಬ ದೃಢನಿರ್ಧಾರದಿಂದ ಇತಿಹಾಸಕಾರನು ಪ್ರಾಚೀನ ಪೌರಾಣಿಕ ಆಖ್ಯಾನಗಳಿಂದ ಭಯಭೀತನಾಗಬಾರದು. ಗುಣಕರ್ಮಗಳನ್ನು ಆಧರಿಸಿ ವರ್ಗೀಕೃತವಾದ ಸಮಾಜದಲ್ಲಿ ರೂಪಿತವಾದ ಆದರ್ಶಗಳು ಹ್ರಾಸಗೊಳ್ಳುತ್ತಿರುವುದನ್ನು ಕಂಡು ದಿಗ್ಭ್ರಾಂತನಾಗಬಾರದು. ಧರ್ಮದ ಹೆಸರಿನಲ್ಲಿ ವಿಕೃತಗೊಂಡ ಸಾಂಪ್ರದಾಯಿಕ ಮೌಲ್ಯಗಳು ಯುಗಧರ್ಮವಾಗಿ ಪ್ರದರ್ಶನಗೊಳ್ಳುತ್ತಿರುವುದನ್ನು ನೋಡಿ ಆಘಾತಕ್ಕೊಳಗಾಗಲೂಬಾರದು.

ಅನೇಕರಂತೆ ಸಾರಸ್ವತರು ತಾವು ಬ್ರಾಹ್ಮಣರು ಎಂದು ಪ್ರತಿಪಾದನೆ ಮಾಡುತ್ತಾರೆ. ಬ್ರಾಹ್ಮಣರಿಗೆ ಗೊತ್ತುಪಡಿಸಿದ ಕರ್ಮಗಳು ಯಾವವೆಂದರೆ ದೇವಪೂಜೆ, ಗುರುಗಳ ಹಾಗೂ ಜ್ಞಾನಿಗಳ ಉಪಾಸನೆ, ಶುಚಿತ್ವ, ಪ್ರಾಮಾಣಿಕತೆ, ಸಂಯಮ, ತಪೋನಿಷ್ಠೆ, ಸ್ವಾಧ್ಯಾಯ, ಮನೋವಾಕ್ಕಾಯ ಶುದ್ಧಿ, ಫಲಾಪೇಕ್ಷೆ ಮಾಡದ ನಿಷ್ಕಾಮ ಕರ್ಮ. ಕಲಿಯುಗದಲ್ಲಿ ಇಂಥ ಕರ್ಮಗಳನ್ನು ಸಮಗ್ರವಾಗಿ ಈಡೇರಿಸುವ ಬ್ರಾಹ್ಮಣರನ್ನು ನಿರೀಕ್ಷಿಸುವುದು ನಿಜಕ್ಕೂ ಆಘಾತಕರ ಸಂಗತಿ. ಆದರೆ ಅವರಿಗೆ ತಮ್ಮ ಗುಣಲಕ್ಷಣಗಳು ಸ್ವಧರ್ಮಕ್ಕೆ ತಕ್ಕಂತೆ ಇವೆಯೇ ಎಂದು ಆತ್ಮಾವಲೋಕನ ಮಾಡಿಕೊಳ್ಳಲು ಅಡೆತಡೆ ನೀಡಬಾರದು. ಕಾಲವು ಗತಿಸುತ್ತ ಹೋದಂತೆ, ಅವರಲ್ಲಿ ಕೆಲವರು ಆತ್ಮಾವಲೋಕನ ಮಾಡಿಕೊಳ್ಳಬಹುದು. ಅಂಥವರು ಧರ್ಮಶಾಸ್ತ್ರಗಳ ಪ್ರಕಾರ ಆಪದ್ಧರ್ಮದ ತತ್ತ್ವವನ್ನು ಪ್ರತಿಪಾದಿಸಿ ಆಪತ್ಕಾಲದಲ್ಲಿ ತಾತ್ಕಾಲಿಕವಾಗಿಯಾದರೂ ರಾಜೀ ಮಾಡಿಕೊಳ್ಳಬಹುದು. ಆದರೆ,

ಬ್ರಾಹ್ಮಣ್ಯವನ್ನೇ ಪೂರ್ತಿಯಾಗಿ ಅಲಕ್ಷಿಸಿ, ಅನಾದರಭಾವದಿಂದ ಅವಹೇಳನೆ ಮಾಡುವ ಮನೋಧರ್ಮವು ನ್ಯಾಯಸಮ್ಮತವಲ್ಲ. ತಾವು ಬ್ರಾಹ್ಮಣರು ಎಂದು ಸಮರ್ಥಿಸಿಕೊಳ್ಳುತ್ತಿರುವ ಸಾರಸ್ವತರಿಗಂತೂ ಇದು ಅಕ್ಷಮ್ಯ ಅಪರಾಧ.

ತಮ್ಮ ಜ್ಞಾನಕ್ಕಿಂತ ವಾಣಿಜ್ಯೋದ್ಯಮದ ಸಾಹಸಕಾರ್ಯಕ್ಕೆ ಹೆಚ್ಚು ಮಾನ್ಯತೆ ದೊರಕಿರುವುದರಿಂದ ದೇಶ-ವಿದೇಶಗಳಲ್ಲಿ ವಿಖ್ಯಾತರಾದರೂ ತಮ್ಮ ಮೇಲೆ ಹೊರಿಸಿರುವ ಬ್ರಾಹ್ಮಣತ್ವವನ್ನೇ ಪ್ರಶ್ನಿಸಿ ಚಿಂತನ ಮಂಥನ ಮಾಡುವ ಧೀರರಿಗಾಗಿ ಈ ಗ್ರಂಥವನ್ನು ಬರೆಯಲಾಗಿದೆ. ಜ್ಞಾನದ ಮೌಲ್ಯ ಕಡಿಮೆಯಾಗಿ ಸಂಪತ್ತೇ ಮಾನದಂಡವಾದ ಸಂದರ್ಭದಲ್ಲಿ ಬ್ರಾಹ್ಮಣನು ಜಾಗೃತನಾಗಬೇಕು. ಆಗ ಅವರೊಡನಿದ್ದ ಪ್ರಜ್ಞಾವಂತರು 'ನಾವಂತೂ ನೋಡಿಲ್ಲ, ನಮಗೇಕೆ ಉಸಾಬರಿ' ಎಂದು ಮೌನ ಪ್ರೇಕ್ಷಕರಂತೆ ತೆಪ್ಪಗೆ ಕುಳಿತುಕೊಳ್ಳಲಾರರು. ಮನಸ್ಸಿನ ವರ್ತನೆಯಂತೆ ಜೀವನದ ನಿರ್ಮಾಣ. ಆದಕಾರಣ, ಪರಿಶುದ್ಧ ಹಾಗೂ ಉದಾತ್ತ ಪರಂಪರೆಗೆ ನ್ಯಾಯವನ್ನು ಒದಗಿಸುವುದಕ್ಕೋಸ್ಕರ ಸಾರಸ್ವತರ ಬ್ರಾಹ್ಮಣತ್ವಕ್ಕೆ ಮೂಲರೂಪ ನೀಡಬೇಕೆಂಬ ಉದ್ದೇಶವಿದ್ದರೆ, ತಮ್ಮ ತಾಂತ್ರಿಕ ಸಾಧನೆ ಮತ್ತು ಭೌತಿಕ ಯಶಸ್ಸಿನಿಂದ ನಿರ್ಲಕ್ಷಿಸದೆ, ಜಾಗೃತ ಬುದ್ಧಿಯಿಂದ ಆತ್ಮಾವಲೋಕನದೊಂದಿಗೆ ಚಿಂತನ-ಮಂಥನ ಮಾಡಲೇಬೇಕು.

ಈ ಪುಸ್ತಕವು ಸಾರಸ್ವತ ಸಮಾಜದ ಚರಿತ್ರೆಯಲ್ಲ. ಇದನ್ನು ಅಂಥ ಉದ್ದೇಶಕ್ಕಾಗಿ ಬರೆದಿಲ್ಲ. ಸಮಾಜವು ಈ ತನಕ ಎದುರಿಸಿರುವ ಅಸ್ಫುಟ, ಅಸ್ಪಷ್ಟ ಹಾಗೂ ಗೊಂದಲ ಎಬ್ಬಿಸುವಂತೆ ತೋರುವ ಸಮಸ್ಯೆಗಳನ್ನು ಪ್ರಾಜ್ಞರ ಪರಿಶೀಲನೆಗಾಗಿ ಪ್ರಸ್ತುತಪಡಿಸುವ ಪ್ರಯತ್ನ ಮಾತ್ರ ಇಲ್ಲಿದೆ. ಸಮಾಜವು ಸಾವಿನ ಕಂದರದಲ್ಲಿ ಜಾರುತ್ತಿರುವ ಸತ್ಯಾಂಶವನ್ನು ಚೆನ್ನಾಗಿ ಅರಿತ ಜ್ಞಾನಿಗಳು ಅಂಚಿನಲ್ಲಿ ನಿಂತು ನೋಡುವ ಬದಲು, ಸ್ಪಷ್ಟವಾದ ಮಾರ್ಗದರ್ಶನ ನೀಡಿ ಸಮಸ್ಯೆಗಳಿಗೆ ಪರಿಹಾರ ನೀಡಬಹುದೆಂದು ಇಲ್ಲಿ ಆಶಿಸಲಾಗಿದೆ. ಜ್ಞಾನಿಗಳಿಂದ ಹಿತವಚನವನ್ನು ಪಡೆದ ದೀಕ್ಷಾಬದ್ಧ ತರುಣರು ತಮ್ಮ ಕಂಗಳಲ್ಲಿ ದೂರದೃಷ್ಟಿ ಹಾಗೂ ತೋಳಿನಲ್ಲಿ ಸಾಹಸವನ್ನು ಹೊಂದಿ ಎದ್ದೇಳಬಹುದು. ಹಳೆಯದೆಲ್ಲವೂ ಹೊನ್ನು, ಹೊಸತೆಲ್ಲವೂ ಹಾಳು ಇರಲೇಬೇಕೆಂದಿಲ್ಲ ಎಂಬ ವಿಚಾರವನ್ನು ಮನ್ನಿಸಿ, ಭೂತಕಾಲದ ನಸು ಬೆಳಕಿನಲ್ಲಿ ವರ್ತಮಾನ ಪರಿಸ್ಥಿತಿಯನ್ನು ಅರ್ಥಮಾಡಿಕೊಂಡು ಭವಿಷ್ಯತ್ತನ್ನು ಉಜ್ವಲವನ್ನಾಗಿ ಮಾಡಿಕೊಳ್ಳುವಂತೆ ಪ್ರಯತ್ನಿಸಬೇಕು. ಧರ್ಮ ಎಂದರೆ ಶಾಸ್ತ್ರಾಧಿಕಾರಗಳ ಕುರುಡು ಸ್ವೀಕಾರ ಅಲ್ಲ. ಧಾರ್ಮಿಕ ಸಂಸ್ಥೆಗಳು, ಆಚಾರ-ವಿಚಾರಗಳು ಮತ್ತು ಸಂಪ್ರದಾಯಗಳ ಸಾಕ್ಷ್ಯಾಧಾರಗಳ ವಿರುದ್ಧ ಹೂಡುವ ಪ್ರತಿಭಟನೆ ಅಲ್ಲ. ಏಕೆಂದರೆ, ಜ್ಞಾನಕ್ಕೆ ಪುನರ್ದೃಢೀಕರಣದ ಅಗತ್ಯವಿದೆ. ನಮ್ಮ

ವಿಶ್ವಾಸ, ಶ್ರದ್ಧೆ ಹಾಗೂ ಕಲ್ಪನೆಗಳ ವಿಚಾರಣೆ ಆಗುತ್ತಿರಬೇಕು. ಆಗ ಮಾತ್ರ ನಾವು ಅಜ್ಞಾತದ ದ್ವಾರಗಳನ್ನು ತೆರೆಯಬಹುದು. ಮಾತನಾಡಬೇಕಾದ ಸಂದರ್ಭದಲ್ಲಿ ಮೌನವಾಗಿದ್ದರೆ ನಾವು ಅಸಫಲರಾಗುತ್ತೇವೆ.

ಮಾನವನು ನಂಬಿಕೆಗಳಿಂದ ಮುಕ್ತನಾಗಲಾರ. ಒಂದನ್ನು ತಿರಸ್ಕರಿಸಿದರೆ, ಅಲ್ಲಿ ಇನ್ನೊಂದು ಆಕ್ರಮಿಸಿಕೊಳ್ಳುತ್ತದೆ. ಫಲಪ್ರದವಾದ ಪರಿಹಾರವು ಅನಿಶ್ಚಿತ ಎಂದು ತೋರಿಬಂದರೂ ಪುನಃ ಪುನಃ ಅವಲೋಕನ ಮಾಡುತ್ತಿರುವುದರಿಂದ ಸ್ಪಷ್ಟತೆಯನ್ನು ಸಾಧಿಸಬಹುದು. ಸಂಗ್ರಹಿಸಿದ ಮಾಹಿತಿಯನ್ನು ನಿಜವಾದ ಜ್ಞಾನ ಎಂದು ಭಾವಿಸುವುದೇ ತಪ್ಪು. ವಿವೇಕವೊಂದೇ ಮಾಹಿತಿಯನ್ನು ಜ್ಞಾನವನ್ನಾಗಿ, ಪ್ರಶ್ನಕರ್ತನನ್ನು ಚಿಂತಕನನ್ನಾಗಿ ಹಾಗೂ ಪೃಚ್ಛಕನಾದ ದಾರ್ಶನಿಕನನ್ನು ಇತಿಹಾಸದ ಪುನರುಜ್ಜೀವನ ಮಾಡುವ ಭವಿಷ್ಯದ ಯೋಜಕನನ್ನಾಗಿಯೂ ಪರಿವರ್ತಿಸುತ್ತದೆ.

ಇತಿಹಾಸಕಾರನು ಅನೇಕ ಮೂಲಗಳಿಂದ ಪಡೆದ ಮಾಹಿತಿಯ ಸಂಗ್ರಹಕಾರನಷ್ಟೇ ಆಗಿರದೆ ಅವುಗಳ ವ್ಯಾಖ್ಯಾನಕಾರನೂ ಆಗಿರಬೇಕು. ಧರ್ಮ ಗ್ರಂಥಗಳು, ಪೌರಾಣಿಕ ಆಖ್ಯಾನಗಳು, ಪ್ರವಾಸಕಥನಗಳು, ಪುರಾತತ್ತ್ವ, ಭಾಷಾಶಾಸ್ತ್ರ, ತತ್ತ್ವಶಾಸ್ತ್ರಗಳನ್ನು ಅವಲಂಬಿಸಿದರೆ ಅವನು ಅವೆಲ್ಲವೂ ಸಂಪೂರ್ಣ ಹಾಗೂ ನಿರ್ಣೀತ ಸಾಕ್ಷ್ಯಾಧಾರಗಳೆಂದು ಮನ್ನಿಸುತ್ತಾನೆಂದು ಭಾವಿಸಬಾರದು. ನಂತರ ಎಂದೋ ವಾಸ್ತುಶಾಸ್ತ್ರಗಳಲ್ಲಿ ವ್ಯಕ್ತವಾದ ದೃಢೀಕೃತ ಉಲ್ಲೇಖವನ್ನು ನಾವು ಆಗಾಗ್ಗೆ ಪ್ರಾಚೀನ ಧರ್ಮಗ್ರಂಥಗಳಲ್ಲಿ ಕಾಣುತ್ತೇವೆ. ಧರ್ಮಗ್ರಂಥಗಳು ಪ್ರಮುಖವಾಗಿ ಸಾಂಕೇತಿಕ ಹಾಗೂ ನಿಗೂಢ ಸೂಚನೆಗಳನ್ನು ಆಧರಿಸಿರು ವುದರಿಂದ ನಾವು ಅಲ್ಲಿರುವ ಕಲ್ಪಿತ ಕಥೆಗಳಿಂದ ವಾಸ್ತವಿಕ ಸಂಗತಿಗಳನ್ನೂ, ಪೌರಾಣಿಕ ಆಖ್ಯಾನಗಳಿಂದ ಇತಿಹಾಸವನ್ನೂ ಜರಡಿಯಾಡಿಸಿ ಸತ್ಯಶೋಧನೆ ಮಾಡಬೇಕು. ತಾನು ಸುಖವಾಗಿರದಿದ್ದರೂ ಸರಿ, ಇತರರೆಲ್ಲರೂ ಆಯಾ ಸಂದರ್ಭಗಳಲ್ಲಿ ಸುಕ್ಷೇಮವಾಗಿರಬೇಕು. ನಮ್ಮಲ್ಲಿ ಎಷ್ಟೇ ವಿರೋಧ-ವೈಷಮ್ಯಗಳಿದ್ದರೂ 'ವಸುಧೈವ ಕುಟುಂಬಕಮ್' ಎಂಬ ವೇದೋಕ್ತಿಯನ್ನು ಸಮರ್ಥಿಸಲು ಪರಸ್ಪರರ ಸಂಪ್ರದಾಯ, ರೀತಿ-ರಿವಾಜು, ವಿಶ್ವಾಸ ಹಾಗೂ ಧಾರ್ಮಿಕ ಆಚಾರ-ವಿಚಾರಗಳ ವಿಷಯದಲ್ಲಿ ಅನುಕಂಪವಿರಬೇಕು.

ವೈದಿಕ ಗ್ರಂಥಗಳು ಹಾಗೂ ಬ್ರಾಹ್ಮಣ ಗ್ರಂಥಗಳಲ್ಲಿ ಐತಿಹಾಸಿಕ ಘಟನೆಗಳ ಅಪರಿಮಿತ ಆಕರಗಳಿವೆ. ಡಾ. ಡಿ. ಡಿ. ಕೋಸಂಬಿಯಂಥ ಕೆಲವು ಮಾರ್ಕ್ಸವಾದೀ ಇತಿಹಾಸಕಾರರು ಮಾತ್ರ ಹೀಗೆ ಹೇಳುತ್ತಾರೆ.

"ವೈದಿಕ ಗ್ರಂಥಗಳಲ್ಲಿ ಯಜ್ಞ, ರಕ್ತ , ಆಹುತಿ ನೀಡುವಂಥ ರಾಕ್ಷಸೀ ಕೃತ್ಯಗಳು ಅಗಾಧ ಪ್ರಮಾಣದಲ್ಲಿ ಕಂಡುಬರುತ್ತವೆ. ಇಂಥ ಧಾರ್ಮಿಕ ವಿಧಿಗಳ ಹಿಂಸಾಕಾಂಡಗಳ ಮೂಲಕ ಸಮಾಜವು ಜೀವನೋಪಾಯದ ಸಕಲ ಸಾಮಗ್ರಿಗಳನ್ನೂ ಬಳಸಿ ತೀರಿಸಿಬಿಡುವ ಸಿದ್ಧತೆಯಲ್ಲಿದೆಯೆಂದು ತೋರುತ್ತಿದೆ." ಇನ್ನೂ ಮುಂದುವರಿದು ಸ್ವಸಮರ್ಥನೆಗಾಗಿ ಅಧಿಕಾರವಾಣಿಯಿಂದ ಹೀಗೆ ವರ್ಣಿಸುತ್ತಾರೆ.

"ವಿವಿಧ ಬ್ರಾಹ್ಮಣ ಗ್ರಂಥಗಳಿಗೆ ಅನುಬಂಧದ ರೂಪವಾಗಿ ಉಪನಿಷತ್ತುಗಳನ್ನು ಸೇರಿಸಿದಾಗ ಅಲ್ಲಿ ಯಾವುದೇ ಬದಲಾವಣೆ ಆದ ಬಗ್ಗೆ ನೇರ ಸ್ವೀಕೃತಿ ಕಂಡುಬರುವುದಿಲ್ಲ. . . . ಸಾಮಾನ್ಯವಾಗಿ ಕಲ್ಪಿತ ವ್ಯಾಖ್ಯೆಯಿಂದ ಕೂಡಿದ ನಿಗೂಢ ತತ್ತ್ವಜ್ಞಾನದ ಸಲುವಾಗಿ ಈಗ ಯಜ್ಞದ ಪ್ರಧಾನ ಪ್ರಸ್ತಾಪವಾಯಿತೇ ಹೊರತು ಅದು ಮೂಲ ರಕ್ತ ಮತ್ತು ಕರುಳಿನ ಬಲಿಯ ಅವಾಂತರ ಆಗಿರಲಿಲ್ಲ. ಬೌದ್ಧ ಧರ್ಮದ ಅಥವಾ ಯಾವುದೋ ಒಂದು ಬ್ರಾಹ್ಮಣ ವಿರೋಧೀ ಧಾರ್ಮಿಕ ಪಂಥದ ಉಲ್ಲೇಖವೂ ಅಲ್ಲಿರಲಿಲ್ಲ. ಪುರಾತನ ಉಪನಿಷತ್ತುಗಳೆಲ್ಲವೂ ಬೌದ್ಧಧರ್ಮ ಬರುವ ಮೊದಲೇ ಬಂದಿದ್ದವೆಂದು ಅನೇಕ ವಿದ್ವಾಂಸರ ಅಭಿಪ್ರಾಯವಾಗಿದೆ."

(ಇಲ್ಲಿ 'ಅನೇಕ ವಿದ್ವಾಂಸರ' ಎಂಬ ಶಬ್ದವು ಕಾರ್ಲ್‌ಮಾರ್ಕ್ಸ್‌ನಿಗಿಂತ ಮುಂಚೆಯೇ ಇದ್ದ ಮಾರ್ಕ್ಸ್‌ವಾದಿಗಳ ಕುರಿತು ಬಳಸಿರಬೇಕು.) ಅವರು ಇನ್ನೂ ಮುಂದುವರಿದು ಹೇಳುತ್ತಾರೆ. "ಕೃಷ್ಣನು ಮಹಾಭಾರತದಲ್ಲಿ ತಡವಾಗಿ ಪ್ರವೇಶಿಸಿದನು". ಅವರಿಗಾದ ಸಂತಾಪವನ್ನೂ ಹೀಗೆ ಹೇಳುತ್ತಾರೆ. "ಬೌದ್ಧ ಧರ್ಮದಿಂದ ಅನೇಕ ಸಿದ್ಧಾಂತಗಳನ್ನು ಯಾರೋ ರಹಸ್ಯವಾಗಿ ಕೃಷ್ಣನ ಹೆಸರಿನಲ್ಲಿ ಅನಧಿಕೃತವಾಗಿ ಸೇರಿಸಿದ್ದಾರೆ". ಪ್ರಾರಂಭದಲ್ಲಿ ಬುದ್ಧನ ಪ್ರವಚನಗಳಲ್ಲಿರುವ ಸರಳ ಸುಸ್ಪಷ್ಟ ವಾದಸರಣಿ ಹಾಗೂ ಪ್ರಶಾಂತ ಸುಲಭಗ್ರಾಹ್ಯ ನಿರೂಪಣೆಯನ್ನು ಕೃಷ್ಣನಲ್ಲಿ ನಿರೀಕ್ಷಿಸುವುದು ಡಾ. ಕೋಸಂಬಿಯವರಿಗೆ ಅಸಾಧ್ಯವೆಂದು ಅನಿಸಿರಬಹುದು. ವಿಶೇಷವಾಗಿ, ಮಾರ್ಕ್ಸವಾದೀ ಪಂಡಿತನ ಅಭಿಪ್ರಾಯದಲ್ಲಿ "ಕೃಷ್ಣನು ಬಹುಮುಖೀ ದೇವನಾದರೂ ಅಸಂಗತ ವ್ಯಕ್ತಿತ್ವ ಉಳ್ಳವನು. ಸಕಲ ಪುರುಷರಿಗೆ ಸರ್ವಸ್ವನು, ಅನೇಕ ಸ್ತ್ರೀಯರಿಗೆ ಎಲ್ಲವೂ ಆಗಿರುವನು. ....ಅಸಂಖ್ಯ ದೇವಿಯರಿಗೆ ಗಂಡನು, ಸ್ವಚ್ಛಂದ ವಿಷಯಲಂಪಟ ಸ್ತ್ರೀಲೋಲನು. ತನ್ನ ಸೋದರಮಾವ ಕಂಸನನ್ನೇ ಕೊಂದ ಪರಪೀಡಕನು. ಕ್ರೂರನು. ಬೇರೊಬ್ಬರ ಯಜ್ಞಕಾಲದಲ್ಲಿ ಶಿಶುಪಾಲನಂಥ ಗೌರವಾನ್ವಿತ ಅತಿಥಿಯ ಶಿರಚ್ಛೇದನ ಮಾಡಿದವನು. ಹೀಗೆ ಶಿಷ್ಟಾಚಾರ, ನ್ಯಾಯೋಚಿತ ಕಾರ್ಯ ಹಾಗೂ

ವೀರಯೋಧನ ಲಕ್ಷಣಗಳಿಗೆ ವಿರುದ್ಧವಾಗಿ ವರ್ತಿಸಿದರೂ ಮಹಾಯುದ್ಧದ ಸಂದಿಗ್ಧ ಸಂದರ್ಭದಲ್ಲಿ ಅವನು ನೀಡಿದ ಉಪದೇಶವು ಸಕಲ ನೀತಿಗಳಿಗೆ ಆದಿಮೂಲ! ಕೃಷ್ಣನ ಸಮಗ್ರ ಸಾಹಸಕಥೆಯಂತೂ ನಿಜವಾದ ಆಸ್ತಿಕ ಭಕ್ತನು ಪೂರ್ತಿಯಾಗಿ ಅರಿತುಕೊಳ್ಳಲಾಗದಷ್ಟು ಭವ್ಯವಾದ ಉದಾಹರಣೆ! ಗೀತೆಯಂತೂ ಆಭಾಸಕರ ಸಿದ್ಧಾಂತಗಳಿಗೆ ಅವಕಾಶವಾದಿಯಾದ ಒಂದು ಸುಸಜ್ಜಿತ ವ್ಯವಸ್ಥೆ!" ಬುದ್ಧಿಜೀವಿ ಮಾರ್ಕ್ಸ್‌ವಾದಿಯ ಮಾನಸಿಕ ದಾರಿದ್ರ್ಯವು ಇಲ್ಲಿಗೇ ನಿಲ್ಲಲಿಲ್ಲ. 'ಶಿವನ ಮಗನೋ, ಶಿವನ ಹೆಂಡತಿಯ ಮಗನೋ' ಎಂದು ಆನೆತಲೆಯ ಗಣೇಶನಾದ ಗಣಪತಿಯ ಕುರಿತು ಆಭಾಸಕರ ಟೀಕೆ ಮಾಡುತ್ತ ಅದು ಕೊನೆಗೊಳ್ಳುತ್ತದೆ. ಇಂಥ ಬೌದ್ಧಿಕ ಹಿನ್ನೆಲೆಯಿರುವವರು ಲೆನಿನ್ ಮತ್ತು ಸ್ಟಾಲಿನ್‌ರಂಥ ಮಹಾನ್ (?) ನಾಯಕರನ್ನೇ ದೇವರುಗಳು ಎಂದು ಸ್ವೀಕರಿಸಿದರೆ ಅದು ಆಶ್ಚರ್ಯಕರ ಸಂಗತಿ ಆಗಲಾರದು.

'ತಿಳಿದುಕೊಳ್ಳಬೇಕಾದದ್ದು ಎಲ್ಲವೂ ಮಹಾಭಾರತದಲ್ಲಿದೆ. ಅದರೊಳಗೆ ಇಲ್ಲದ್ದನ್ನು ತಿಳಿಯಬೇಕಿಲ್ಲ.' ಎಂಬ ಜನಜನಿತ ಹೇಳಿಕೆಯಿದೆ. ಮಹಾಭಾರತವನ್ನು ವ್ಯಾಸಪ್ರಣೀತ ಎನ್ನುವರು. ಆದರೂ ಅದು ಒಂದು ಸೀಮಿತ ಕಾಲದಲ್ಲಿ ಒಬ್ಬನಿಂದಲೇ ರಚಿತವಾಗಿಲ್ಲ. ಮೊದಲಿಗೆ 'ಜಯ' ಎಂಬ ಕಾವ್ಯದ ರಚನೆ ಯಾಯಿತು. ಎರಡು ಆರ್ಯಬಣಗಳು ಅನಾರ್ಯ ಬಣಗಳ ಬೆಂಬಲದೊಂದಿಗೆ ನಡೆಸಿದ ಒಳಜಗಳವೇ ಒಂದು ಯುದ್ಧವಾಗಿ ದಾಖಲೆಯಾಯಿತು. ತರುವಾಯ, ಇನ್ನೂ ಹೆಚ್ಚಿನ ಕಥಾಸಾಮಗ್ರಿಯೊಂದಿಗೆ ಅದು 'ಭಾರತ' ಎಂಬ ಹೆಸರಿನಿಂದ ವಿಸ್ತಾರಗೊಂಡಿತು. ಕೊನೆಯಲ್ಲಿ ಭಾರ್ಗವರು ತಮ್ಮದೇ ಆದ ಆಖ್ಯಾನಗಳನ್ನೂ, ಧಾರ್ಮಿಕ ವಿಚಾರಗಳನ್ನೂ ಅದರಲ್ಲಿ ಸೇರಿಸಿದಾಗ ಅದು 'ಮಹಾಭಾರತ' ಆಯಿತು. ಇಂಥ ಸಂಕಲನಗಳ ಕುರಿತು ಉಲ್ಲೇಖಿಸುತ್ತ ಡಾ. ಸುಕ್ತಂಕರ ಅವರು ತಮ್ಮ 'Bhrigus and Bhargavas, A text of historical study' ಗ್ರಂಥದಲ್ಲಿ ಹೀಗೆ ಹೇಳುತ್ತಾರೆ.

"ಲೌಕಿಕ ಉಪದೇಶ ಮತ್ತು ಮನೋರಂಜಕ ಆತ್ಮಶಿಕ್ಷಣದ ವಾಹಕವನ್ನಾಗಿ ಅಭಿವೃದ್ಧಿ ಪಡಿಸುವ ಸಲುವಾಗಿ ಒಂದು ಸಂದಿಗ್ಧ ಐತಿಹಾಸಿಕ ಕಾಲಘಟ್ಟದಲ್ಲಿ ಭೃಗು ಮಹರ್ಷಿಗಳು ಈ ಮಹಾಕಾವ್ಯವನ್ನು ಬಳಸಿಕೊಂಡರು. (ಭೃಗು ಮಹರ್ಷಿಗಳು ನಿಸ್ಸಂಶಯವಾಗಿ ಧರ್ಮ ಮತ್ತು ನೀತಿಸಾರದ ವಿಶೇಷಜ್ಞರಾಗಿದ್ದರೂ ಅವರು ಬಹುಶಃ ವಿಷ್ಣುತತ್ತ್ವದ ಕುರಿತು ಹೆಚ್ಚಿನ ಒಲವುಳ್ಳವರಾಗಿದ್ದರು.)

ರಾಮಾಯಣ ಎಂಬ ಇನ್ನೊಂದು ಪವಿತ್ರ ಧರ್ಮಗ್ರಂಥದ ಕುರಿತು

ಶ್ರೀ ಅರವಿಂದರು ಹೀಗೆ ಹೇಳುತ್ತಾರೆ. "ವ್ಯಾಸ ಪರಿಸರವನ್ನೇ ಹೋಲುವ ರಾಜಕೀಯ ಮತ್ತು ಸಾಮಾಜಿಕ ವಾತಾವರಣದಲ್ಲಿ ವಾಲ್ಮೀಕಿಯು ರಾಮಾಯಣ ವನ್ನು ರಚಿಸಿದನು. ಕಲ್ಪನೆ, ಸಂವೇದನೆ ಹಾಗೂ ಉತ್ಸಾಹದಿಂದ ಕೂಡಿರುವ ವಾಲ್ಮೀಕಿಯ ಶುದ್ಧ, ಸೂಕ್ಷ್ಮ ಹಾಗೂ ನೈತಿಕ ಮನಃಸ್ಥಿತಿಯು ದಾರ್ಶನಿಕ ಆದರ್ಶ ಮತ್ತು ದಿವ್ಯರಶ್ಮಿಗಳಿಂದ ಪ್ರದೀಪ್ತವಾಯಿತು. ಕ್ರೌಂಚವಧ ಪ್ರಸಂಗದಲ್ಲಿ ಕಂಡುಬಂದ ಶೈಥಿಲ್ಯ ಹಾಗೂ ಹಿಂಸೆಯು ಅವನಿಗೆ ಆಘಾತಕಾರಿಯೂ, ಜುಗುಪ್ಸೆ ಹುಟ್ಟಿಸುವಂಥದೂ ಆಯಿತು. ಆದ್ದರಿಂದ ದೂರಸ್ಥ ಆದರ್ಶವನ್ನು ನಿರೂಪಿಸುವುದು ಕಷ್ಟಸಾಧ್ಯ ಅನಿಸಿದರೂ ಒಂದು ಮಹಾನ್ ನಾಗರಿಕತೆಗೆ ಅಗತ್ಯವಿರುವ ಸಾಕಷ್ಟು ಸಾಮಗ್ರಿಗಳು ಸಮೀಪದಲ್ಲೇ ಇರುವುದರಿಂದ ಇಲ್ಲಿ ಅವನು ರಾಷ್ಟ್ರೀಯ ಮಹತ್ವದ ಹಾಗೂ ಗುಣಪರಿಪೂರ್ಣವಾದ ಒಂದು ಪ್ರಾಚೀನ ಯುಗದ ಆಶ್ರಯವನ್ನು ಪಡೆಯಬೇಕಾಯಿತು."

ದಿವ್ಯತ್ವವನ್ನು ಮಾನವ ಪ್ರಜ್ಞೆಯ ಭಾವನೆಯ ಮಟ್ಟಕ್ಕೆ ಅವತರಿಸುವಂತೆ ಮಾಡುವಲ್ಲಿ ಹಾಗೂ ಅಲ್ಪಶಿಕ್ಷಿತರಿಗೆ ದುರೂಹ್ಯವಾಗಿರುವ ಅಮೂರ್ತ ತತ್ತ್ವಗಳನ್ನು ಸುಲಭಗ್ರಾಹ್ಯವಾಗುವ ಹಾಗೆ ಮಾಡುವಲ್ಲಿ ಪುರಾಣಗಳ ಪಾತ್ರ ಅತ್ಯಂತ ಮಹತ್ವಪೂರ್ಣವಾಗಿದೆ. ಇದರ ಜತೆಗೆ, ನಾನು ಪ್ರಮುಖವಾಗಿ ಸ್ಕಂದಪುರಾಣವನ್ನು ಅವಲಂಬಿಸಿದ್ದೇನೆ. ಈ ಪುರಾಣವು ಕಾಲಕಾಲಕ್ಕೆ ಆದ ಪ್ರಕ್ಷೇಪಣೆಗಳಿಂದ ತುಂಬಿದ ಸಮ್ಮಿಶ್ರ ದಾಖಲೆಯಲ್ಲ ಎಂಬ ಪ್ರಜ್ಞೆಯೂ ನನಗಿದೆ.

ರೈಸ್, ಗುಹರಂಥ ಮಾನವಶಾಸ್ತ್ರಜ್ಞರ, ಕನ್ನಿಂಗಹ್ಯಾಮ್, ಭಂಡಾರಕರ ರಂಥ ಭಾರತಶಾಸ್ತ್ರಜ್ಞರ, ಹೋರ್ನಲ್, ಮಾರ್ಶಲ್, ಬೀಮ್ಸ್, ಚಟರ್ಜೀ, ಕತ್ರೇಯಂಥ ಭಾಷಾಶಾಸ್ತ್ರಜ್ಞರ, ಮಾರ್ಶಲ್‌ರಂಥ ವಾಸ್ತುಶಾಸ್ತ್ರಜ್ಞರ ಹಾಗೂ ಇನ್ನಿತರರ ಜ್ಞಾನವು ಉದ್ದೇಶರಹಿತ ಪೂರ್ವಗ್ರಹ ನುಗ್ಗುವಲ್ಲಿಯೂ ನನಗೆ ನಿಷ್ಪಕ್ಷಪಾತವಾಗಿರಲು ನೆರವು ನೀಡಿದೆ. ಇಲ್ಲಿ ನಾನು ಆಧಾರಗ್ರಂಥಗಳ ವಿಸ್ತೃತ ಅವತರಣಿಕೆಗಳನ್ನು ನೀಡುವ ವ್ಯಾಮೋಹಕ್ಕೂ ಒಳಗಾಗಿಲ್ಲ. ಅನೇಕ ಲೇಖಕರು ಮಂಡಿಸಿದ ಅಂತಿಮ ನಿರ್ಧಾರವನ್ನು ಒಪ್ಪಲು ಸಾಧ್ಯವಾಗದೆ ಹೋದರೂ, ಅವರ ವಿಚಾರಗಳನ್ನು ಉಲ್ಲೇಖಿಸಲಾಗಿದೆ.

ಆದಕಾರಣ, ಮೇಲ್ಕಾಣಿಸಿದ ಹಿತವಚನದ ದಾರಿದೀಪದಲ್ಲಿ ಸಾಗುವಾಗ ನಾನಿಲ್ಲಿ ಕಾವ್ಯಪ್ರತಿಮೆ ಅಥವಾ ಧಾರ್ಮಿಕ ಭಾವತೀವ್ರತೆಯ ಪ್ರಭಾವದ ಚಾಪಲ್ಯವನ್ನು ತಡೆಹಿಡಿದಿದ್ದೇನೆ. ಮಾನವಜೀವಿಯು ನಂಬಿಕೆಗಳಿಂದ ಸಂಪೂರ್ಣ ಮುಕ್ತನಾಗಲಾರ. ಅವನು ಒಂದನ್ನು ತಿರಸ್ಕರಿಸಿದರೆ, ಇನ್ನೊಂದು ಪಕ್ಕದಲ್ಲಿ ಬಂದು ಸೇರಲು ಕಾಯುತ್ತಿರುತ್ತದೆ, ಎಂಬ ವಿಚಾರ ಚೆನ್ನಾಗಿ ಮನವರಿಕೆಯಾಗಿದೆ.

2

ಒಂದು ಜನಾಂಗದ ಇತಿಹಾಸ ಬರೆಯುವಾಗ ಕಾಡುವ ಸಮಸ್ಯೆಗಳು

ಮಾನವಶಾಸ್ತ್ರಜ್ಞರ ಪ್ರಕಾರ, ಆಫ್ರಿಕಾದಿಂದ ಮಾನವ ಜೀವನದ ವಿಕಾಸವು ಪ್ರಾರಂಭವಾಯಿತು. ಅಲ್ಲಿಂದ ಪ್ರಮುಖವಾಗಿ, ನದೀತೀರಗಳ ಮೇಲೆ ಜನಾಂಗಗಳ ಸ್ಥಾಪನೆಗೋಸ್ಕರ ಸ್ಥಳಾಂತರ ಆಗುತ್ತ ಹೋಯಿತು. ಶತಮಾನಗಳು ಸಂದಂತೆ, ಪ್ರಕೃತಿ ಮತ್ತು ಪರಿಸರಗಳು ಜೈವಿಕ ಆಯ್ಕೆಯ ಮೂಲಕ ಜನಾಂಗೀಯ ಗುಂಪುಗಳನ್ನು ಬೆಸೆಯುವಂತೆ ಮಾಡಿದವು. ಪ್ರತಿಯೊಂದು ಗುಂಪು ತಮ್ಮ ಭೂಮಿಯ ಸ್ವಾಮ್ಯ, ಜನಾಂಗೀಯ ಗುರುತು, ಪರಂಪರೆ ಮತ್ತು ನಾಗರಿಕತೆಗಳ ಕುರಿತು ಅಭಿಮಾನ ತಳೆಯಿತು. ಪರಸ್ಪರ ಪ್ರಭಾವವು ಜೈವಿಕ ಅವಶ್ಯಕತೆಯಾಯಿತು. ಸಾಂಸ್ಕೃತಿಕ, ಬೌದ್ಧಿಕ, ತಾತ್ವಿಕ ಮತ್ತು ನೈತಿಕ ಸಮನ್ವಯವು ಫಲಿತ ಸತ್ಯವಾಯಿತು. ನದಿಗಳಿಂದ ಸಂಪದ್ಭರಿತವಾದ ಭೂಮಿಯಲ್ಲಿ ಮೆಸೊಪೊಟೇಮಿಯನ್, ಈಜಿಪ್ಶಿಯನ್, ಹೀಬ್ರೂ, ಇರಾನಿಯನ್, ಭಾರತೀಯ ಮತ್ತು ಚೈನೀಸ್ ನಾಗರಿಕತೆಗಳು ಅಸ್ತಿತ್ವಕ್ಕೆ ಬಂದವು.

ಏಕೀಕರಣ ಹಾಗೂ ಭಾವೈಕ್ಯದಿಂದ ಬಾಳುವ ಸಲುವಾಗಿ ಪ್ರಾಚೀನ ನಾಗರಿಕತೆಗಳು ನವೀನ ನಾಗರಿಕತೆಗಳಾಗಿ ರೂಪಾಂತರಗೊಳ್ಳುವ ಪ್ರಕ್ರಿಯೆಯಲ್ಲಿ ಕಾಲವು ಒಂದು ಮಹತ್ವಪೂರ್ಣ ಘಟಕವಾಗಿದೆ. ಅಸ್ತಿತ್ವವು ಚಿರಂತನ. ಪರಿವರ್ತನೆ ನಿರಂತರ. 'ಎಲ್ಲ ನಾಗರಿಕತೆಗಳನ್ನು ರೂಪಿಸುವ ಓರ್ವ ಜನನಿ' ಇಲ್ಲದಿದ್ದರೂ ಆಧ್ಯಾತ್ಮಿಕ, ತಾತ್ತ್ವಿಕ, ನೈತಿಕ ಮತ್ತು ಸಾಂಸ್ಕೃತಿಕ ಆದರ್ಶಗಳ ತುಡಿತದ ವಿಷಯದಲ್ಲಿ ಪ್ರತಿಯೊಂದು ನಾಗರಿಕತೆಯೂ ತನ್ನ ಭವ್ಯತೆಯನ್ನು ಪುಷ್ಟೀಕರಿಸುತ್ತ ಬಂದಿದೆ. ಯಾವುದೇ ದೇಶ-ಕಾಲಕ್ಕೆ ಸೇರಿರಲಿ, ಮಾನವ ಸ್ವಭಾವವು ಮೂಲತಃ ಒಂದೇ ತೆರನಾಗಿದೆ. ಮಾನವ ಮನೋಧರ್ಮವನ್ನೇ ಬೇರ್ಪಡಿಸಿ, ಒಡಕು ಹುಟ್ಟಿಸುವ ವೈಯಕ್ತಿಕ ಪ್ರತಿಷ್ಠೆ ಮತ್ತು ಪ್ರಾಂತೀಯ ಮನೋಭಾವದಿಂದ ಒಂದು ಸಮಾಜವು ಇತರ ಸಮಾಜಗಳಿಗಿಂತ ತಾನೇ ಶ್ರೇಷ್ಠ ಎಂದು ಪ್ರತಿಪಾದಿಸುತ್ತದೆ.

'ನಾವು ಈಜಿಪ್ಟ್ ಸಂಜಾತರು. ನಮ್ಮದು ಒಂದು ಸಮರ್ಥ ಜನಾಂಗ. ಇತರ ಜನಾಂಗಗಳು ಅಂಥ ಅರ್ಹತೆ ಇಲ್ಲದವರು' ಎಂದು ಪುರಾತನ ಈಜಿಪ್ಶಿಯನ್ನರು ಭಾವಿಸಿದ್ದರು. ಅವರು ಇತರರ ಉತ್ತಮ ಅಂಶಗಳನ್ನು

ಜೀರ್ಣಿಸಿಕೊಳ್ಳಲು ತಮ್ಮಿಂದ ಸಾಧ್ಯವಾಗಲಿಲ್ಲ ಎಂದು ಹೇಳಿಕೊಳ್ಳುತ್ತಿರಲಿಲ್ಲ. ಹೊರಗಿನಿಂದ ಬಂದು ಸೇರಿದ ವಿಶ್ವಾಸಘಾತಕ ಆಗಂತುಕರ ಪ್ರಭಾವದಿಂದ ತಮ್ಮ ನಾಗರಿಕತೆಯ ಅವನತಿಯಾಯಿತು. ಎಲ್ಲೆಡೆಯಲ್ಲಿ ವಿದೇಶೀಯರೇ ವ್ಯಾಪಿಸಿದ್ದಾರೆ. ಅವರೇ ಒಂದು ಜನಾಂಗವಾಗಿದ್ದಾರೆ ಎಂದು ಆರೋಪಿಸುತ್ತಿದ್ದರು. ('Before Philosophy' - ಎಡ್ಮನ್ನರ ಕೃತಿಯಲ್ಲಿದ್ದ ಉದ್ಧೃತ ಭಾಗ)

"ಇತರ ಜನಾಂಗಗಳೊಡನೆ ಹೊಂದಿಕೊಂಡು ಹೋಗುವ ಗುಣ ಜ್ಯೂ ಜನಾಂಗದ ಹೀಬ್ರೂ ವಿಚಾರಧಾರೆಯಲ್ಲಿ ಇಲ್ಲ. ಇದಕ್ಕೆ ವ್ಯತಿರಿಕ್ತವಾಗಿ, ಇಸ್ರೇಲ್ ದೇಶದ ಪಕ್ಕದ ಪ್ರಾಂತಗಳಲ್ಲಿ ಇರುವವರ ಜ್ಞಾನದ ವಿರುದ್ಧವಾಗಿ ಅವರಲ್ಲಿ ವಿಲಕ್ಷಣ ಹಟಮಾರಿತನ ಹಾಗೂ ದುರಹಂಕಾರದ ವರ್ತನೆ ಇದೆ."

(H. and H. A. Frankfurt - 'Before Philosophy')

"ಇಸ್ರೇಲವೇ ಒಂದು ಜಗತ್ತು. ಇಲ್ಲಿರುವ ಏಳು ಗೋತ್ರಗಳವರೇ ಆಯ್ಕೆಗೊಂಡವರು. ದೇವರೇ ನೀನು ಈ ಜಗತ್ತನ್ನು ನಮಗಾಗಿಯೇ ನಿರ್ಮಿಸಿರುವೆ. ಇತರ ಪ್ರಾಂತಗಳವರು ಲೆಕ್ಕಕ್ಕಿಲ್ಲದವರು. ಅವರು ಎಂಜಲಿನಂತೆ" (ಲೆವಿಟಿಕಸ್ – 20) ಈ ನಂಬಿಕೆ ಅವರಲ್ಲಿ ದೃಢವಾಗಿ ಬೇರೂರಿತ್ತು.

ಇದೇ ವಿಚಾರಸರಣಿ ಕ್ರಿಶ್ಚಿಯನ್ ಪ್ರಜ್ಞೆಯಲ್ಲಿ ಬಂತು. 'ಯೇಸು, ದೇವರ ಏಕಮಾತ್ರ ಪುತ್ರನು. ಅವನಿಂದಲೇ ಮೋಕ್ಷಪ್ರಾಪ್ತಿ' ಎಂದು ಸಾರಿದರು.

ಮುಸ್ಲಿಮರಿಗೆ ಮೊಹಮ್ಮದನೇ ಈ ಪರಂಪರೆಯಲ್ಲಿ ಉಚ್ಛ್ರಾಯ ಸ್ಥಿತಿಯನ್ನು ಹೊಂದಿದವನು. 'ಪ್ರವಾದಿಗಳಲ್ಲಿ ನಾನೇ ಕೊನೆಯವನು. ದೇವರೇ ತನಗೆ ನಿಜವಾದ ಧರ್ಮವನ್ನು ಪ್ರಕಟಪಡಿಸಿದನು' ಎಂದು ಪ್ರತಿಪಾದಿಸಿದನು.

ಎ. ಎಲ್. ಬಾಷಮ್‌ರ ಅಭಿಪ್ರಾಯದಂತೆ ಅರೆ-ಅಲೆಮಾರಿ ತಂಡದವರು ಯುರೋಪಿನ ಆಗ್ನೇಯ ಭಾಗ ಹಾಗೂ ಸೈಬೀರಿಯಾದ ಹುಲ್ಲುಗಾವಲು ಇರುವ ವಿಶಾಲವಾದ ಪ್ರದೇಶದಿಂದ ಇಳಿದು ಬಂದು ಪೂರ್ವ, ಪಶ್ಚಿಮ, ದಕ್ಷಿಣ ಭಾಗದ ಕಡೆಗೆ ವ್ಯಾಪಿಸಿಕೊಂಡು ಗ್ರೀಕ್, ಲ್ಯಾಟಿನ್, ಕೆಲ್ಟ್ಸ್, ಟ್ಯೂಟನ್ಸ್ ಇವರ ಪೂರ್ವಜರಾದರು. ಅನಟೋಲಿಯಾದ ಆದಿವಾಸಿಗಳೊಡನೆ ಬೆರೆತು ಅವರು ಮೆಸೊಪೊಟೇಮಿಯಾದ ಹಿಟ್ಟೀಸ್ ಆದರು. ಬಳಿಕ ದಕ್ಷಿಣದ ಕಡೆಗೆ ಚಲಿಸಿ ಕಸ್ಸಾಯಿಟ್ಸ್ ಮತ್ತು ಮಿಟ್ಟಾನೀಸ್ ಆದರು. ಅವಳೀ ನದಿಗಳ ಭೂ ಪ್ರದೇಶವಾದ ಅಸ್ಸೀರಿಯಾ ಮತ್ತು ಸುಮೇರದ ಸ್ಥಳೀಯ ಜನಾಂಗದವರೊಡನೆ ಬೆರೆತರು. ಕೆಲವರು ಇಂದ್ರ, ಉರುವಣ (ವರುಣ), ಮಿತಿರ (ಮಿತ್ರ) ಮತ್ತು

ನಾಸತ್ಯ (ಅಶ್ವಿನೀಕುಮಾರರು) ಹೆಸರಿನ ದೇವತೆಗಳ ಆರಾಧಕರಾದರು. ಇರಾನ್ ದೇಶದ ಸಮತಲ ಪ್ರದೇಶಕ್ಕೆ ದೇಶಾಂತರ ಹೋದವರು ಅವೆಸ್ತನ್ಸ್ ಆದರು. ಮತ್ತು ಅವರು ಭಾರತದ ಪಂಚನದಿಗಳ ಪ್ರದೇಶದಲ್ಲಿ ನೆಲೆಸಿ ಆರ್ಯರೆಂದು ಪರಿಗಣಿಸಲ್ಪಟ್ಟರು.

ಈಜಿಪ್ಶಿಯನ್ನರು ಪಿರಮಿಡ್ಡುಗಳನ್ನು ನಿರ್ಮಿಸುತ್ತಿರುವಾಗ, ಮೆಸೋಪೊಟೇಮಿಯನ್ನರು ನಗರ ನಿರ್ಮಾಣ ಮತ್ತು ಕೃಷಿ ವ್ಯವಸಾಯಗಳಲ್ಲಿ ವ್ಯಸ್ತರಾಗಿರುವಾಗ, ಸುಮೇರಿಯನ್ನರು ಹಮ್ಮುರಾಬಿಯ ಕಾನೂನು ಪಾಲನೆಯಲ್ಲಿ ಮಗ್ನರಾಗಿರುವಾಗ, ಬಾಬಿಲೋನಿಯನ್ ಅಸ್ಸೀರಿಯನ್ ಮತ್ತು ಕ್ಯಾಲ್ಡಿಯನ್ನರು ಮಾಟ-ಮೋಡಿ, ತಂತ್ರವಿದ್ಯೆಗಳಲ್ಲೇ ಮುಳುಗಿರುವಾಗ, ಸಿಂಧೂ ಮತ್ತು ಸರಸ್ವತೀ ನದಿಗಳ ತಟವರ್ತೀ ಪ್ರದೇಶದಲ್ಲಿ ಒಂದು ಸುಸ್ಪಷ್ಟ ಉನ್ನತ ನಗರೀಕೃತ ನಾಗರಿಕತೆಯು ಉಚ್ಛ್ರಾಯ ಸ್ಥಿತಿಗೆ ಬಂದು ತಲಪಿತ್ತು. ಈ ಸಿಂಧೂ ಕಣಿವೆಯ ಜನರು ಭೌತಿಕವಾಗಿ ಅಭಿವೃದ್ಧಿಯನ್ನು ಸಾಧಿಸಿದ್ದರೂ ಅವರು ಪರಿಸರ ವಿಜ್ಞಾನ ಮತ್ತು ಮಾನವ-ಪ್ರಕೃತಿಯ ನಡುವಣ ಪ್ರಾಕೃತಿಕ ಸಮತೋಲನದ ಕುರಿತು ಅಲಕ್ಷ್ಯ ಮಾಡಿದ್ದರಿಂದ ಅವರು ಪ್ರಕೃತಿ ವಿಷಯಕ ಜ್ಞಾನದಲ್ಲಿ ಹಿಂದೆ ಬಿದ್ದರು. ಅಣೆಕಟ್ಟು, ಕಟ್ಟಡ, ಕಣಜ ಮತ್ತು ಕೋಟೆಗಳಿಂದ ಸುಭದ್ರನಗರ ರಚನೆಯಾಗಲು ಅವಶ್ಯವಿರುವ ಇಟ್ಟಿಗೆಗಳಿಗಾಗಿ ಸಸ್ಯಸಮೃದ್ಧ ಅರಣ್ಯದ ನಾಶವಾಯಿತು. ತತ್ಪರಿಣಾಮ ವಾಗಿ ಅವರ ನಗರೀಕೃತ ನಾಗರಿಕತೆಯ ನಾಶವೂ ಆಯಿತು.

ಭಾರತದ ಪಂಚ ನದಿಗಳ ಪ್ರದೇಶದಲ್ಲಿ ನೆಲೆಸಲು ಆರ್ಯರು ಬಂದು ಇಳಿದಾಗ, ಅಲ್ಲಿ ಈ ಮೊದಲೇ ಬಂದು ನೆಲೆಸಿರುವವರೊಡನೆ ಅವರಿಗೆ ತಮ್ಮ ವಸಾಹತು ಸ್ಥಾಪನೆ, ಜೀವನ ನಿರ್ವಹಣೆ ಹಾಗೂ ಸಂಸ್ಕೃತಿಯ ರಕ್ಷಣೆಗೋಸುಗ ಹೋರಾಟ ಮಾಡುವ ಪ್ರಸಂಗವೂ ಒದಗಿ ಬಂತು. ಅಸಂಸ್ಕೃತ, ನಿಕೃಷ್ಟ, ನಾಸ್ತಿಕ, ಅಸಹ್ಯ, ಕಪ್ಪುಚರ್ಮದ ಬುಡಕಟ್ಟಿನ, ಅಸ್ಪಷ್ಟ ಭಾಷೆಯನ್ನಾಡುವ, ಲಿಂಗ-ಯೋನಿಗಳ ಆರಾಧನೆ ಮಾಡುವ, ನಾಗರಿಕ ಸಂಸ್ಕಾರವಿಲ್ಲದ, ಒರಟು ವರ್ತನೆಯ ದೈವೀ ನಿಯಮದಲ್ಲಿ ಹಸ್ತಕ್ಷೇಪ ಮಾಡುವ ದಾಸರು, ದಸ್ಯುಗಳಲ್ಲಿ ಕಣ್ಣಿಗೆ ರಾಚುವಷ್ಟು ಭೌತಿಕ ಪ್ರಗತಿಯಾಗಿದ್ದರೂ ಅವರೊಡನೆ ಆರ್ಯರು ಅನೇಕ ಸಂಘರ್ಷಗಳನ್ನು ಮಾಡಿರುವ ವರ್ಣನೆ ಋಗ್ವೇದ ಸಾಹಿತ್ಯದಲ್ಲಿದೆ.

ಮೊದಲೇ ಈ ಪ್ರದೇಶದಲ್ಲಿ ಬಂದು ನೆಲೆಸಿದ್ದ ಜನಾಂಗದವರಿಗಿಂತ ತಾವು ಹೆಚ್ಚು ಘನತೆಯುಳ್ಳ ಸುಸಂಸ್ಕೃತರಾದುದರಿಂದ ಪ್ರತ್ಯೇಕವಾಗಿ ಇರಬೇಕೆಂದು ಅಭಿಪ್ರಾಯವಿದ್ದ ಪಂಗಡದವರೊಡನೆ ನಾವು ಹೆಚ್ಚು ಆಸಕ್ತರಾಗಿದ್ದೇವೆ. ಇರಾನ್

ಪ್ರವೇಶಿಸುವುದಕ್ಕಿಂತ ಮೊದಲೇ ಆರ್ಯರ ಜೀವನಕ್ಕೆ ಸಂಬಂಧಿಸಿದ ಅನೇಕ ಪ್ರಾಸಂಗಿಕ ವಿಷಯಗಳು ಋಗ್ವೇದ ಸಾಹಿತ್ಯದಲ್ಲಿ ಕಂಡುಬರುತ್ತವೆ. ಅವರು ಪ್ರಕೃತಿಯೊಡನೆ ಸಾಮರಸ್ಯ ಸಾಧಿಸಿದ್ದರೆಂದು ಅವುಗಳಿಂದ ತಿಳಿದುಬರುತ್ತದೆ. ಅವರು ತಮ್ಮ ದಿವ್ಯದರ್ಶನದಲ್ಲಿ 'ಕಂಡ' ಹಾಗೂ 'ಕೇಳಿದ' ವಿಷಯವನ್ನು ಬಲುಬೇಗನೆ ಗ್ರಹಿಸುವಂತೆ ಮಾಡಲು ಪ್ರಕೃತಿ-ಪರಿಸರದ ನೀರವ ಮೌನ ಮತ್ತು ಸಂವೇದನಶೀಲ ದೃಷ್ಟಿಗಳು ನೆರವಾದವು. ಅವರು ಶ್ರವಣ, ಮನನ, ನಿದಿಧ್ಯಾಸನದಲ್ಲಿ ನಿರತರಾದ 'ದ್ರಷ್ಟಾರ' ಆದರು. ಅಂಥವರು ಮಾತನಾಡಿದರೆ, ಅವರ ಮಾತು ವಿಶ್ವಚೈತನ್ಯದ ಸಂಕಲ್ಪದ ಮಾಧ್ಯಮವಾಗುತ್ತದೆ. ಅದು ಜೀವಾತ್ಮನ ಮನೋವಾಕ್ಕಾಯಗಳಲ್ಲಿ ಏಕತ್ವವನ್ನು ಸಾಧಿಸುವಂತೆ ಮಾಡಿ ಮಾನವ ಜ್ಞಾನವನ್ನು ದಿವ್ಯಜ್ಞಾನದತ್ತ ಏರುವಂತೆ ಮಾಡುತ್ತದೆ. ಭಾರತದಲ್ಲಿ ಆರಂಭ ಕಾಲದಿಂದಲೂ ಬಹುಶಃ ಮನಸ್ಸು ಮತ್ತು ಆತ್ಮದ ಮೇಲೆ ಪಾಶ್ಚಾತ್ಯ ಭೌತಿಕ ಪ್ರಭಾವದ ಆಕ್ರಮಣ ಆಗುವ ತನಕ ಅಚೇತನ ಅಥವಾ ಸಚೇತನ ಮಾನವನ ಉತ್ಕ್ರಾಂತಿಯು ಕೇವಲ ಭೌತಿಕ ಸಂಗತಿಯಂತೆ ಪರಿಗಣಿಸಲ್ಪಡಲಿಲ್ಲ. ಪ್ರತಿಯೊಂದು ಸಂಗತಿ, ವಸ್ತು, ವಿಚಾರ, ಮಾತು ಅಥವಾ ಕೃತಿಯನ್ನು ಇಲ್ಲಿ ಆಧ್ಯಾತ್ಮಿಕ ಮಿತಿಯಲ್ಲೇ ಚಿಂತನ ಮಾಡುವಂತೆ ಸಕಲ ಪ್ರಯತ್ನವನ್ನೂ ಮಾಡಲಾಗಿದೆ.

ಭಾರತದ ಇತಿಹಾಸವು ಕೇವಲ ಲೌಕಿಕ ಘಟನೆಗಳ ಸಂಕಲನವಲ್ಲ. ಅಲ್ಲಿ ಅವುಗಳನ್ನು ಆಧ್ಯಾತ್ಮಿಕ ಅಭಿವ್ಯಕ್ತಿಯ ಸಂದರ್ಭವಾಗಿ ಗ್ರಹಿಸಲಾಗಿದೆ. ಅಸ್ಪಷ್ಟ ಸ್ಮರಣೆಯಿಂದ ಸಂಗ್ರಹಿಸಿರುವ ಪುರಾಣಕಥೆ ಹಾಗೂ ಸಾಂಪ್ರದಾಯಿಕ ಕಥೆಗಳನ್ನು ಸಂಕೇತಗಳನ್ನಾಗಿ ಅಥವಾ ಲೌಕಿಕ ಘಟನೆಗಳ ಹಿಂದಿರುವ ಆಧ್ಯಾತ್ಮಿಕ ಸತ್ಯದ ನಿರೂಪಣೆಗಾಗಿ ನಿದರ್ಶನಗಳನ್ನಾಗಿಯೂ ಬಳಸಲಾಗಿದೆ. ಪಾಶ್ಚಾತ್ಯರ ಇತಿಹಾಸದ ಪರಿಕಲ್ಪನೆಯು ಭೌತಿಕ, ಲೌಕಿಕ, ಘಟನೆಗಳ ಹಾಗೂ ಮನಃಶಾಸ್ತ್ರೀಯ ಚಿಂತನೆಗಳ ಅಗಾಧ ಸಾಕ್ಷ್ಯಾಧಾರಗಳ ಸಂಕಲನ. ಆದರೆ ಹಿಂದೂಗಳು ಮಾತ್ರ ಪಾಶ್ಚಾತ್ಯರು ಬಳಸಿದ ಇತಿಹಾಸ ಪ್ರಜ್ಞೆಯನ್ನು ಪ್ರದರ್ಶಿಸಲಿಲ್ಲ. ಋಗ್ವೇದ, ಉಪನಿಷತ್ತು, ಬ್ರಾಹ್ಮಣಗಳು, ಮಹಾಭಾರತ, ರಾಮಾಯಣ ಮತ್ತು ಅಸಂಖ್ಯ ಪುರಾಣಗಳಲ್ಲಿ ಕಂಡುಬರುವ ಸಾಂಪ್ರದಾಯಿಕ ಕಥೆ ಹಾಗೂ ಪುರಾಣ ಕಥೆಗಳ ಚಕ್ರವ್ಯೂಹದ ಕೋಟೆಯನ್ನು ಭೇದಿಸಿ ಶೋಧ ಕಾರ್ಯ ಮಾಡಿ ಇತಿಹಾಸವನ್ನು ಬರೆಯಲು ಪಾಶ್ಚಾತ್ಯ ಭಾರತಶಾಸ್ತ್ರಜ್ಞರಿಗೇ ಬಿಟ್ಟುಕೊಟ್ಟರು. ಅವುಗಳಲ್ಲಿರುವ ಘಟನೆಗಳನ್ನು ಆಧ್ಯಾತ್ಮಿಕ ತತ್ತ್ವನಿರೂಪಣೆಗೆ ಹಾಗೂ ಐತಿಹಾಸಿಕ ಮಾದರಿಗೆ ಉದಾಹರಣೆಗಳನ್ನಾಗಿಯೂ ರೂಪಿಸಬಹುದಿತ್ತು. ಆದರೆ ಅವರು ಅವುಗಳಲ್ಲಿ ಯಾವುದನ್ನೂ ಇತಿಹಾಸದ ದಾಖಲೆಗಳನ್ನಾಗಿ ಸ್ವೀಕರಿಸಲಿಲ್ಲ.

ಭಾರತೀಯರು ಇತಿಹಾಸವನ್ನು ಲೌಕಿಕ ವಿಕಾಸಕ್ಕಿಂತ ಮಾನವನ ಆಧ್ಯಾತ್ಮಿಕ ವಿಕಾಸದ ನಿರ್ದೇಶಕವನ್ನಾಗಿ ಸ್ವೀಕರಿಸಿದ್ದಾರೆ. ಅವರು ಕಾಲದ ಗಣನೆಯನ್ನು ಕ್ಷಣ, ನಿಮಿಷ, ಗಂಟೆ, ತಿಂಗಳು ಮತ್ತು ವರ್ಷಗಳಲ್ಲಿ ಮಾಡುವ ಬದಲು ಯುಗಗಳ ಮಾನದಲ್ಲಿ ಅಳೆದರು. ಯುಗವು ಮಾನವಕುಲದ ಭವಿಷ್ಯವನ್ನು ರೂಪಿಸುತ್ತ ಜನಾಂಗೀಯ ಗುಣದ ಬದಲಾವಣೆಯನ್ನು ನಿರ್ಧರಿಸುತ್ತದೆ. ಆದ್ದರಿಂದ ಒಂದು ಯುಗದಿಂದ ಇನ್ನೊಂದು ಯುಗಕ್ಕೆ ಹೋಗುವುದು ಕಾಲದ ಕ್ಷಣಗಣನೆಯನ್ನು ಸೂಚಿಸುವುದಿಲ್ಲ. ಅದು ಮಹತ್ವಪೂರ್ಣ ಘಟನಾವಳಿಗಳ ಪರಾಕಾಷ್ಠೆಗೆ ತಲಪಿದೆ ಎಂಬುದರ ದ್ಯೋತಕವಾಗಿದೆ. ಅಥರ್ವವೇದವು ಕಾಲವನ್ನು ಕುದುರೆಗೆ ಹೋಲಿಸಿ ಅದು ಏಳು ಕಡಿವಾಣಗಳಿಂದ ನಿಯಂತ್ರಿಸಲ್ಪಡಬೇಕಾದ ಚಲಿಸುವ ಕುದುರೆ (ಪಂಚೇಂದ್ರಿಯ, ಮನಸ್ಸು ಮತ್ತು ಬುದ್ಧಿ) ಎಂದು ಹೇಳುತ್ತದೆ. ಕವಿಯೊಬ್ಬನೇ ಈ ಕಾಲನ ಕುದುರೆಯ ಸವಾರಿ ಮಾಡಬಲ್ಲ.

"ಕಾಲೋ ಅಶ್ವೋ ವಹತಿ ಸಪ್ತರಶ್ಮಿಃ....... ತಾಂ ಆರೋಹತಿ ಕವಯೋ ವಿಪಶ್ಚಿತಃ" ಕಾಲವು ನಿಶ್ಚಲವಾಗಿ ನಿಲ್ಲುವುದಿಲ್ಲ. ಸೃಷ್ಟಿ ಮತ್ತು ಲಯವು ಕಾಲದ ಕಾರ್ಯವಾಗಿದೆ ಎಂಬುದನ್ನು ಮಹಾಭಾರತವು ತಿಳಿಸುತ್ತದೆ.

"ಕಾಲಃ ಪಚತಿ ಭೂತಾನಿ ಕಾಲಃ ಸಂಹರತೇ ಪ್ರಜಾಃ।
ಕಾಲಃ ಸುಪ್ತೇಷು ಜಾಗ್ರತಿ ಕಾಲೋ ಹಿ ದುರತಿಕ್ರಮಃ॥"

ಕಾಲವು ಸಕಲ ಜೀವಕೋಟಿಯನ್ನು ಕಬಳಿಸುತ್ತದೆ. ಸೃಷ್ಟಿಗೆ ಅಂತ್ಯವನ್ನು ನೀಡುತ್ತದೆ. ನಿದ್ದೆಯಲ್ಲಿದ್ದವರನ್ನು ಎಬ್ಬಿಸುತ್ತದೆ. ಆದ್ದರಿಂದ ಕಾಲವನ್ನು ಮೀರುವುದು ಅಸಾಧ್ಯ.

ನಾಲ್ಕು ಯುಗಗಳು ಗತಿಸಿಹೋದ ವರ್ಷಗಳ ಸಂಖ್ಯೆಯನ್ನು ಸೂಚಿಸದೆ ಅವು ಘಟಿಸಿದ ಮಹತ್ವಪೂರ್ಣ ಘಟನೆಗಳ ಪರಾಕಾಷ್ಠೆಯನ್ನು ತಿಳಿಸುತ್ತವೆ. ಮೊದಲ ಕಾಲಘಟ್ಟವಾದ ಕೃತಯುಗದಲ್ಲಿ ಮಾನವನ ಅಂತಃಕರಣವು ನಿರ್ಮಲ ಹಾಗೂ ನಿಷ್ಕಳಂಕವಾಗಿತ್ತು. ಆದರೆ ಮಾನವನ ಆತ್ಮಪ್ರಜ್ಞೆಯನ್ನು ಸಂಕೇತಿಸುವ ಸರಸ್ವತೀ ನದಿಯು ಭೌತಿಕ ಅಗತ್ಯ ಹಾಗೂ ಲೌಕಿಕ ಸೌಲಭ್ಯಗಳಲ್ಲೇ ಆಸಕ್ತರಾದ ಆರ್ಯರಿಂದ ಅಂತರ್ಧಾನವಾಯಿತು. ಇದರ ಪರಿಣಾಮವಾಗಿ, ವೈದಿಕ ಉತ್ಸಾಹದ ಅವಸಾನವೂ ಆಯಿತು. ಆಗ ಅವರು ಪೂರ್ವ ದಿಕ್ಕಿನತ್ತ ವಲಸೆ ಹೂಡಲು ಉಪಕ್ರಮಿಸಿದರು. ತದನಂತರ, ಪರಶುರಾಮನಿಂದ ದರ್ಪೋದ್ಧತ ಕ್ಷತ್ರಿಯರ ಸಂಹಾರವಾಯಿತು. ಭಾರ್ಗವರ ಸಹವರ್ತಿಯಾದ ಇಕ್ಷ್ವಾಕು ಕುಲದ ದೊರೆ ಸಗರನ ಕೊನೆಯೂ ಆಯಿತು. ಇದರೊಂದಿಗೆ ಕೃತಯುಗದ

ಸಮಾಪ್ತಿಯಾಗುತ್ತಲೇ ತ್ರೇತಾಯುಗವು ಕಾಲಿರಿಸಿತು. ದಾಶರಥೀ ರಾಮನ ಕೃಪಾಶ್ರಯದಲ್ಲಿದ್ದ ಅಯೋಧ್ಯೆಯ ಇಕ್ಷ್ವಾಕು ಕುಲದ ಖ್ಯಾತಿಯು ಈ ಯುಗದ ಉಚ್ಛ್ರಾಯ ಸ್ಥಿತಿಯಾಗಿತ್ತು. ರಾಮನು ತನ್ನ ಅವತಾರ ಕಾರ್ಯವನ್ನು ಪೂರೈಸಿ ತೆರಳಿದ ದಿನವೇ ಈ ಯುಗದ ಸಮಾಪ್ತಿಯಾಯಿತು. ದ್ವಾಪರಯುಗದ ಪ್ರವೇಶವಾದ ಸಂದರ್ಭದಲ್ಲಿ ಆರ್ಯರು ಇಡೀ ಉತ್ತರ ಭಾರತವನ್ನೇ ಆವರಿಸಿ ಅನೇಕ ಅನಾರ್ಯ ಜನಾಂಗಗಳೊಡನೆ ಸಮಾನವಾಗಿ ಜೀವನ ನಿರ್ವಹಣೆಯನ್ನೂ ಮಾಡುತ್ತಿದ್ದರು. ಆಗಲೇ, ದೊಡ್ಡ ಪ್ರಮಾಣದ ವರ್ಣಸಂಕರವಾಗಿತ್ತು. ಇದರಿಂದ ದಕ್ಷಿಣ ಭಾರತದ ಜನಾಂಗಗಳನ್ನು ಸೇರಿಸಿ ರಣರಂಗದ ವಿಸ್ತರಣೆ ಮಾಡಿಕೊಳ್ಳಲು ನೆರವಾಯಿತು. ಒಂದು ಕಾಲದ ಶ್ರೇಷ್ಠ ಪೌರವಕುಲದ ಕುಡಿಗಳೆಂದು ಮೆರೆದ ಕೌರವ – ಪಾಂಡವರ ನಡುವೆ ಜರುಗಿದ ಅಂತಃಕಲಹವೇ ಆ ಯುಗದ ಉಚ್ಛ್ರಾಯ ಸ್ಥಿತಿಯಾಗಿದೆ. ಆ ಕಲಹದಲ್ಲಿ ಕೃಷ್ಣನೂ ಒಂದು ಮಹತ್ತರವಾದ ಪಾತ್ರವನ್ನು ನಿರ್ವಹಿಸಿದ್ದ. ದ್ವಾರಕೆಯಲ್ಲಿ ಯಾದವ ಕುಲದ ಅಂತ್ಯವಾಗುತ್ತಲೇ ದ್ವಾಪರ ಯುಗದ ಸಮಾಪ್ತಿಯಾಯಿತು. ಕೃಷ್ಣನು ತನ್ನ ಅವತಾರಕಾರ್ಯವನ್ನು ಕೊನೆಗೊಳಿಸಿದನು. ಅಂದು ಈ ಕಲಿಯುಗದ ಪ್ರಾರಂಭವಾಯಿತು. ಈಗಲೂ ಚಾಲನೆಯಲ್ಲಿದೆ.

ಪ್ರಾಚೀನ ಕಾಲದಲ್ಲಿ ವಿಭಿನ್ನ ಜನಾಂಗಗಳಲ್ಲಿ ಪರಸ್ಪರ ತಿಳಿವಳಿಕೆ ಚೆನ್ನಾಗಿ ಇದ್ದುದರಿಂದ ಲೌಕಿಕ ಮತ್ತು ಆಧ್ಯಾತ್ಮಿಕ ಜೀವನದ ನಡುವೆ ಒಂದು ಸಮತೋಲನ ಇರುತ್ತಿತ್ತು.

“ಅನೇಕ ಭಾಷೆಗಳನ್ನಾಡುವ, ಸ್ಥಳೀಯ ಅನೇಕ ಸಾಂಪ್ರದಾಯಿಕ ವಿಧಿಗಳನ್ನು ಪಾಲಿಸುತ್ತ ಬಂದಿರುವ ಜನಾಂಗಗಳನ್ನು ಎತ್ತಿ ಸಲಹುತ್ತಿರುವ ಭೂಮಾತೆಯೇ, ನೀನು ಎಂದೂ ವಿಫಲವಾಗದ ಕಾಮಧೇನುವಿನಂತೆ ಸಂಪತ್ತಿನ ಸಹಸ್ರಧಾರೆಯನ್ನು ಹರಿಸಿ ಕರುಣಿಸು. ನನ್ನನ್ನು ಸಮೃದ್ಧನನ್ನಾಗಿ ಮಾಡು.”

ಮಾನವ ಕುಲವು ಒಂದು ದೊಡ್ಡ ಕುಟುಂಬ – “ವಸುದೈವ ಕುಟುಂಬಕಮ್” ಉದಾತ್ತ ಚಿಂತನೆಗಳು ನಮ್ಮ ಕಡೆ ಎಲ್ಲೆಡೆಯಿಂದಲೂ ಬರಲಿ ‘ಆ ನೋ ಭದ್ರಾಃ ಕ್ರತವೋ ಯಂತು ವಿಶ್ವತಃ’.

ಕಾಲ ಗತಿಸುತ್ತ ಹೋದಂತೆ ಸಮಾಜದಲ್ಲಿ ವಿವಿಧ ಜನಾಂಗೀಯ ಪ್ರಭಾವಗಳು ಒಂದರಲ್ಲೊಂದು ಸೇರಿ ವರ್ಣಸಂಕರವಾಗಿ ಮೊದಲಿನ ಆರ್ಯ ಮೌಲ್ಯಗಳು ನಿರ್ಲಕ್ಷಿಸಲ್ಪಟ್ಟವು. ಮತ್ತು ನೈತಿಕ ಶಕ್ತಿಯು ಭೌತಿಕ ದೃಷ್ಟಿಕೋನಕ್ಕೆ

ದಾರಿ ಮಾಡಿಕೊಟ್ಟಿತು. ವೈಶ್ಯರು ಮತ್ತು ಶೂದ್ರರು ಲೌಕಿಕ ಉನ್ನತಿಯ ಉದಯದೊಂದಿಗೆ ಮೇಲುಗೈ ಸಾಧಿಸಿದ್ದರಿಂದ ಕಲಿಯುಗದಲ್ಲಿ ಸಮಾಜದ ನೇತೃತ್ವವು ವ್ಯಾಪಾರೀ ಮಾರ್ಗದತ್ತ ಹೊರಳಿತು. ಪ್ರಾಚೀನ ಕಾಲದಲ್ಲಿ ಐಹಿಕ ಜೀವನವು ಪಾರಮಾರ್ಥಿಕ ಜೀವನದಿಂದ ಬೇರ್ಪಟ್ಟಿರಲಿಲ್ಲ. ಹಾಗಿದ್ದರೂ ಅವರು ರಣರಂಗದಲ್ಲಿ ಯಶಸ್ಸನ್ನೂ ಜೀವನದಲ್ಲಿ ಸಮೃದ್ಧಿ, ಸಂತೃಪ್ತಿಯನ್ನೂ ಸಾಧಿಸುವ ಸಲುವಾಗಿ ಪ್ರಾಕೃತಿಕ ಶಕ್ತಿಗಳ ಅಧಿದೇವತೆಗಳನ್ನು ಪ್ರಾರ್ಥಿಸುತ್ತಿದ್ದರು. ನಂತರದ ದಿನಗಳಲ್ಲಿ ಪುರಾಣಗಳು ಜಗತ್ತನ್ನು ಸಪ್ತದ್ವೀಪಗಳು ಅಂದರೆ ಏಳು ಖಂಡಗಳನ್ನಾಗಿ ವಿಂಗಡಿಸಿ ಹೇಳಿದ್ದರೂ, ಅವರು ಅಲ್ಲಿ ವಾಸಿಸುವ ಜನಾಂಗಗಳ ಕುರಿತು ಯಾವ ವಿವರವನ್ನೂ ನೀಡಿರಲಿಲ್ಲ. ಅವರ ಸಂಪೂರ್ಣ ಲಕ್ಷ್ಯವು ಭಾರತವರ್ಷದ ಮೇಲೆಯೇ ಕೇಂದ್ರೀಕೃತವಾಗಿತ್ತು.

ಪ್ರತೀಚ್ಯಾಮ್ ಚ ನದೀನಾಥಃ ಸಿಂಧುಃ ಶಾಖಾಗಣೈಃ ಸಹ ।
ವಹತಿ ಪ್ರೋಚ್ಚಲದ್ವೀಚಿರಾರ್ದ್ರಯನ್ ಸತತಂ ಸ್ಥಲೀಮ್ ॥
ಉತ್ತರಾಂ ಶೋಭಯನ್ನಾಶಾಂ ನಗರಾಜೋ ಹಿಮಾಲಯಃ ।
ದೈವೀಂ ಭೂತಿಂ ಸಮಾಲಂಬ್ಯ ಸ್ಥಿತೋ ಗೌರೀಗುರುರ್ಗಿರಿಃ ॥
ದಕ್ಷಿಣಾಂ ದಿಶಾಲಂಬ್ಯ ವೀಚಿಸ್ತಾಡಯನ್ ತಟಂ।
ರಾಜತೇ ಲವಣಾಂಭೋಧಿರ್ದುರ್ಧರ್ಷೋ ಲೋಕದುಸ್ತರಃ॥
ಸೋಽಯಂ ವಿಸ್ತೀರ್ಣ ಭೂಭಾಗೋ ನಾನಾರತ್ನ ವಿಶೋಭಿತಃ ।
ನಾನಾ ವೃಕ್ಷಲತಾಪೂರ್ಣೋ ನಾನಾಗಿರಿನದೀಯುತಃ॥
ನಾನಾ ಪಶುಗಣೈರ್ಜುಷ್ಟೋ ನಾನಾಪಕ್ಷಿ ನಿಷೇವಿತಃ।
ಆರ್ಯಾಣಾಂ ಪುಣ್ಯಭೂಮಿಃ ಸಾ ಭಾರತಂ ವರ್ಷಮುಚ್ಯತೇ॥

ಪಶ್ಚಿಮ ದಿಕ್ಕಿನಲ್ಲಿ ನದಿಗಳಲ್ಲಿ ಶ್ರೇಷ್ಠ ನದಿಯಾದ ಸಿಂಧೂನದಿ ಅನೇಕ ಶಾಖೆಗಳಲ್ಲಿ ಹರಿಯುವಾಗ ತನ್ನ ಹೆದ್ದೆರೆಗಳಿಂದ ಭೂಭಾಗವನ್ನು ನಿರಂತರ ಸಮೃದ್ಧಗೊಳಿಸುತ್ತದೆ. ಉತ್ತರ ದಿಕ್ಕಿನಲ್ಲಿ ದೇದೀಪ್ಯಮಾನವಾದ ಪರ್ವತಶ್ರೇಷ್ಠ ಹಿಮಾಲಯದ ಧವಲ ಗಿರಿಶೃಂಗಗಳು ಹರಡಿಕೊಂಡಿವೆ. ದಕ್ಷಿಣ ದಿಕ್ಕಿನಲ್ಲಿ ವಿಶಾಲವಾದ ಲವಣ ಸಮುದ್ರವಿದೆ. ಆ ಅಲಂಘ್ಯ ಭವ್ಯ ಭೂಭಾಗವು ನಾನಾ ರತ್ನಗಳಿಂದ ಶೋಭಿಸುತ್ತಿದೆ. ನಾನಾ ವಿಧದ ತರುಲತೆಗಳು, ಔಷಧೀ ಸಸ್ಯಗಳು, ಗಿರಿಕಂದರಗಳು, ನದಿಗಳು ಹಾಗೂ ಪ್ರಾಣಿಗಳಿಂದಲೂ ಸುಸಂಪನ್ನವಾಗಿದೆ. ಇದು ಸಾಧು ಸಜ್ಜನರ ಪುಣ್ಯಭೂಮಿ ಭಾರತವರ್ಷ.

ಕಲಿಯುಗದಲ್ಲಿ ಸಂಕುಚಿತ ದೃಷ್ಟಿಯು ಇನ್ನೂ ವಿಪರೀತಕ್ಕೆ ಹೋಯಿತು. ವಿಭಿನ್ನ ಜನಾಂಗಗಳ ಒಡನಾಟದಿಂದ ಜನಸಾಮಾನ್ಯರಲ್ಲಿ ನೂತನ ವಿಚಾರಗಳು, ಆಖ್ಯಾನಗಳು ಹಾಗೂ ಕಲ್ಪಿತ ಕಥೆಗಳ ಉದ್ಭವವಾದರೂ ಹಿಂದುಗಳು ಹೆಚ್ಚುಹೆಚ್ಚಾಗಿ ಸಂಪ್ರದಾಯನಿಷ್ಠರೂ, ಅಂತರ್ಮುಖಿಗಳೂ ಆಗತೊಡಗಿದರು. ಕ್ರಿಸ್ತಶಕ ಪೂರ್ವದ ಸುಮಾರು ಆರನೆಯ ಶತಮಾನದಲ್ಲಿ ಗ್ರೀಸಿನ ಅಯೋನಿಯಾ (ಯವನ) ದೇಶದಿಂದ ಅಲೆಕ್ಸಾಂಡರನು ಭಾರತಕ್ಕೆ ಬಂದನು. ಅವನು ಭಾರತದ ಕಲೆ, ಸಂಸ್ಕೃತಿ, ಯುದ್ಧಕೌಶಲ್ಯ ಮುಂತಾದವುಗಳ ಮೇಲೆ ಯವನ ಪ್ರಭಾವವನ್ನು ಬೀರಿದನು. ಸ್ವದೇಶಕ್ಕೆ ಮರಳಿ ಹೋಗುವಾಗ ಅವನು ಹಿಂದುಗಳು ಆಧ್ಯಾತ್ಮಿಕ ಚಿಂತನೆಗೆ ನೀಡಿರುವ ಪ್ರಭಾವವನ್ನು ತನ್ನೊಡನೆ ಒಯ್ದನು. ನಮಗೆ ಅರಿವಿರುವಂತೆ ನಮ್ಮ ಇತಿಹಾಸವೂ ವಿಕಸನಗೊಂಡಿತು. ಅನಂತರ ಬಂದ ಶಕರು, ಕುಶಾನರು, ಸಿರಿಯನ್ನರೂ ಭಾರತೀಯ ಸಮಾಜದ ಮೇಲೆ ತಮ್ಮ ಗುರುತನ್ನು ಬಿಟ್ಟು ಹೋದರು. ಈ ಅನೇಕ ಜನಾಂಗಗಳು ಹಿಂದೂ ಧರ್ಮದ ದೃಷ್ಟಿಕೋನವನ್ನು ಅರಗಿಸಿಕೊಂಡರೂ ಓರ್ವ ಭಾರತೀಯನು ವಿದೇಶಗಳಿಗೆ ಪ್ರವಾಸ ಮಾಡಿದ್ದು ಆ ದೇಶದ ಸಂಪ್ರದಾಯ ಸಂಸ್ಕೃತಿಗಳ ಕುರಿತು ತನ್ನ ಅಭಿಪ್ರಾಯವನ್ನು ತಂದಿದ್ದು ತೀರ ವಿರಳ ಎನ್ನಬಹುದು.

ಶತಮಾನಗಳ ಪೂರ್ವದಲ್ಲಿ ಭಾರತವನ್ನು ಪ್ರವೇಶಿಸಿದ ಯಹೂದಿಗಳು ಮತ್ತು ಕ್ರಿಶ್ಚಿಯನ್ನರು ತಮ್ಮ ಮತದ ನಂಬಿಕೆಯನ್ನು ತಮ್ಮ ವಲಯಗಳಲ್ಲೇ ಅನುಸರಿಸುತ್ತ ತಾವು ಪ್ರತ್ಯೇಕವಾಗಿದ್ದರು. ಇಸ್ಲಾಂ ಮತದ ಪ್ರಾರಂಭಿಕ ವರ್ಷಗಳಲ್ಲೂ ಅರಬ ವ್ಯಾಪಾರಿಗಳಿಗೆ ಪುರಾಣ ಕಲ್ಪಿತ ಹಿಂದ್ ದೇಶವು ಆಸಕ್ತಿಯ ಮೂಲವಾಗಿದ್ದಾಗ ಮೇಧಾವೀ ಮುಸ್ಲಿಮನಾದ ಅಲ್‌ಬುರಾನಿಯು ಮಹಮ್ಮದ್ ಗಜನೀಯಂಥ (ಹನ್ನೊಂದನೆಯ ಶತಮಾನ) ಮುಸ್ಲಿಂ ಸಾಹಸೋದ್ಯಮಿಗಳ ಜೊತೆಗೂಡಿ ಭಾರತಕ್ಕೆ ಬಂದನು. ಮಹಮ್ಮದ್ ಗಝುನಿಯು ಭಾರತದ ಮಂದಿರಗಳಲ್ಲಿ ಹಾಗೂ ರಾಜ-ಮಹಾರಾಜರ ಬಳಿ ಇರುವ ಅದ್ಭುತ ಸಂಪತ್ತನ್ನು ಕೊಳ್ಳೆ ಹೊಡೆಯಲು ಬಂದವನು. ಅಲ್‌ಬುರಾನಿಯು ವೇದೋಪನಿಷತ್ತುಗಳು, ಶಾಸ್ತ್ರಗಳು ಹಾಗೂ ಭಾರತದ ಆಚಾರ ಸಂಪ್ರದಾಯಗಳ ಅಧ್ಯಯನದ ವಿರೋಧಿ ಆಗಿರದಿದ್ದರೂ ವಿಷಾದಪೂರ್ವಕ ಹೀಗೆ ಬರೆದಿದ್ದಾನೆ.

"ತಮ್ಮ ದೇಶದಂಥ ಅನ್ಯ ದೇಶವಿಲ್ಲ. ತಮ್ಮ ಜನಾಂಗದಂಥ ಅನ್ಯ ಜನಾಂಗವಿಲ್ಲ. ತಮ್ಮ ರಾಜರಂಥ ಅನ್ಯ ರಾಜರಿಲ್ಲ. ತಮ್ಮ ಧರ್ಮದಂಥ ಅನ್ಯ ಧರ್ಮವಿಲ್ಲ. ತಮ್ಮ ಶಾಸ್ತ್ರದಂಥ ಅನ್ಯ ಶಾಸ್ತ್ರವಿಲ್ಲ ಎಂದು ಹಿಂದುಗಳು ನಂಬಿದ್ದಾರೆ.

ಅವರು ಜಂಬ ಕೊಚ್ಚಿಕೊಳ್ಳುವವರು, ಅವಿವೇಕಿಗಳು, ದುರಭಿಮಾನಿಗಳು, ಜಡಚೇತನರು. ..... ಅವರು ಪರ್ಯಟನ ಮಾಡಿ ಇತರ ಜನಾಂಗಗಳೊಡನೆ ಸಮರಸವಾಗಿದ್ದರೆ ತಮ್ಮ ಮನೋಭಾವವನ್ನು ಬೇಗನೆ ಬದಲಿಸಿಕೊಳ್ಳಬಹುದು. ಏಕೆಂದರೆ ಅವರ ಪೂರ್ವಜರು ಸದ್ಯದ ಪೀಳಿಗೆಯವರಿದ್ದಷ್ಟು ಸಂಕುಚಿತ ಮನಸ್ಸಿನವರಾಗಿರಲಿಲ್ಲ."

ಹಿಂದುಗಳ ತರ್ಕಬುದ್ಧಿಯು ಅಹಂಭಾವದಿಂದ ಕಳೆಗೆಟ್ಟಿತು. ಅವರ ವಿಚಾರಗಳೂ ಹರಳುಗಟ್ಟಿದವು. ಆಧ್ಯಾತ್ಮಿಕತೆಯು ಸ್ಪಂದನಹೀನವಾಗಿ ಮತಪಂಥಗಳ ನಂಬಿಕೆ ಹಾಗೂ ಆಚಾರ-ವಿಚಾರಗಳಿಗೆ ದಾರಿಮಾಡಿಕೊಟ್ಟಿತು. ಹಿಂದೆ ಗುಣಕರ್ಮಗಳನ್ನು ಆಧರಿಸಿ ಸಮಾಜದ ವರ್ಗೀಕರಣ ಆಗುತ್ತಿತ್ತು. ಆದರೆ ಕಾಲಕ್ರಮೇಣ ಜಾತ್ಯಾಧಾರಿತ ವರ್ಗೀಕರಣದ ಬದಲೀ ವ್ಯವಸ್ಥೆ ಬಂತು. ಈ ದೇಶದ ಅಥವಾ ವಿದೇಶದ ವಿವಿಧ ವಿಚಾರಗಳು ಮೆಲ್ಲನೆ ಸುಳಿದು ಬೀಸಿದಾಗ, ಅವುಗಳನ್ನು ಅರಗಿಸಿ ಮೈಗೂಡಿಸಿಕೊಂಡರೂ ವಿವಿಧ ತಾತ್ತ್ವಿಕ ಚಿಂತನೆಗಳು, ಸಿದ್ಧಾಂತಗಳು, ಇಸ್ಲಾಮಿನ ಆವೇಶಪೂರ್ಣ ಮತಪ್ರಚಾರವು ಭಾರತೀಯ ಮನೋಧರ್ಮವನ್ನೇ ಬದಲಿಸಿತು. ಮಾನವನು ಆಮೂಲಾಗ್ರವಾಗಿ ಹೆಚ್ಚು-ಹೆಚ್ಚು ಆತ್ಮಾವಲೋಕನ ಮಾಡಿಕೊಳ್ಳುವಂತೆ ಅಣಿಗೊಳಿಸಿತು. ವಿದೇಶೀ ವಿಚಾರಧಾರೆಯನ್ನು ಸ್ವೀಕರಿಸುವುದಿರಲಿ, ಅದನ್ನು ಗಮನಿಸುವ ಗೋಜಿಗೂ ಹೋಗಲಿಲ್ಲ.

ಅನ್ವೇಷಕ ಬುದ್ಧಿಯ ಸಹಾನುಭೂತಿ ಹಾಗೂ ಘಟನೆಗಳನ್ನರಿಯುವ ನಿಷ್ಪಕ್ಷಪಾತ ಅಪೇಕ್ಷೆಯೊಡನೆ ಕಾರ್ಯರೂಪಕ್ಕೆ ತರಬಲ್ಲ ಹಾಗೂ ನ್ಯಾಯ ಸಮ್ಮತವಾದ ಒಂದು ಚಾರಿತ್ರಿಕ ತಥ್ಯವನ್ನು ಸಿದ್ಧಪಡಿಸುವಾಗ ನಾವು ಮಹಾಭಾರತ, ರಾಮಾಯಣ ಅಥವಾ ಪುರಾಣಗಳ ಲೇಖಕರಿಗೆ ಸಿಕ್ಕ ಕಾವ್ಯರಚನಾ ಸ್ವಾತಂತ್ರ್ಯವನ್ನು ನಿರ್ಲಕ್ಷಿಸಬಾರದು. ಸಾಕ್ಷ್ಯಾಧಾರ ಸಿಗದಿದ್ದಲ್ಲಿ ಘಟನೆಯೇ ಸಂಭವಿಸಲಿಲ್ಲ ಎಂದು ಹೇಳುವಂತಿಲ್ಲ. ಭಾರತೀಯರಿಗೆ ಸಾಕ್ಷ್ಯಾಧಾರದ ಕೊರತೆಯು ಸಮಸ್ಯೆಗಳನ್ನು ಸೃಷ್ಟಿಸಲಿಲ್ಲ. ಒಂದು ವೇಳೆ ಸಂಕೇತಗಳು, ದಂತಕಥೆ ಹಾಗೂ ಪುರಾಣ ಕಥೆಗಳನ್ನು ಕಲ್ಪಿತ ಕಥೆಗಳೆಂದು ಪುರಸ್ಕರಿಸದೆ ತಿರಸ್ಕರಿಸಿದ್ದರೂ ಅವುಗಳನ್ನು ಕಾರ್ಯಾಧಾರ ಕಲ್ಪನೆಗಳನ್ನಾಗಿ (hypothesis) ಸ್ವೀಕರಿಸಿದರೆ ನಾವು ಇತಿಹಾಸದ ಆಕರವನ್ನು ಧರ್ಮಗ್ರಂಥಗಳಿಂದಲೂ ಪಡೆಯಬಹುದು. ನಾವು ಸಾಂಪ್ರದಾಯಿಕ ಕಲ್ಪನೆಗಳ ಬಂಧನದಿಂದ ಮುಕ್ತರಾಗಿ ಒಕ್ಕೈ ಚಪ್ಪಾಳೆಯ ಸ್ವರವನ್ನು ಕೇಳಲು ನೀರವ ಏಕಾಂತದ ಕ್ಷಣಗಳಿಗೆ ಹಿಂದಿರುಗಬೇಕು.

ಪ್ರಾಗಿಟರನು ಇಂಥ ಕಲ್ಪನೆಗಳನ್ನು ಆಧರಿಸಿಯೇ ಅನೇಕ ಆರ್ಯ ಕುಟುಂಬಗಳ ವಂಶಾವಳಿಯ ಇತಿಹಾಸವನ್ನು ಸಿದ್ಧಪಡಿಸಿದ್ದಾನೆ. ಇತಿಹಾಸದ ಗುಣಾವಗುಣಗಳನ್ನು ಹೀಗೆ ಹೇಳಿದ್ದಾನೆ.

"ಕೇವಲ ಧಾರ್ಮಿಕ ಹಾಗೂ ಪುರೋಹಿತಶಾಹೀ ವೃತ್ತಾಂತಗಳಿಂದ ರೂಪಿತವಾಗಿದೆಯೆಂದು ಪ್ರಾಚೀನ ಭಾರತದ ಇತಿಹಾಸವು ಅಪಖ್ಯಾತಿಯನ್ನು ಹೊಂದಿರುವುದರಿಂದ ಅದು ನಿಜವಾದ ಅರ್ಥದಲ್ಲಿ ಇತಿಹಾಸದೊಡನೆ ಸಂಬಂಧಿಸಿಲ್ಲ. ಪೂರ್ತಿಯಾಗಿ ಇತಿಹಾಸ ಪ್ರಜ್ಞೆಯನ್ನು ಹೊಂದಿಲ್ಲ. ಯುರೋಪದ ಇತಿಹಾಸವನ್ನು ಕೇವಲ ಧರ್ಮಶಾಸ್ತ್ರವನ್ನು ಆಧರಿಸಿ ರಚಿಸಬೇಕೆಂದು ಆದೇಶಿಸಿದರೆ ಏನಾಗಬಹುದೋ ಅಂಥ ಇತಿಹಾಸದ ವಿಲಕ್ಷಣ ಗುಣಗಳನ್ನು ಇಲ್ಲಿಯೂ ಕಾಣಬಹುದು. ಯುರೋಪಕ್ಕೆ ಅನ್ವಯಿಸಿದಾಗ ನೀವು ನಗುವನ್ನು ಸೂಸಿದರೆ ಭಾರತಕ್ಕೆ ಅನ್ವಯಿಸಿದಾಗಲೂ ಅದೇ ತೆರನಾಗಿ ಸಮಾಧಾನಕರ ನಸುನಗುವನ್ನೇ ಸೂಸುವಿರಲ್ಲವೇ!"

ಅವನ ಈ ವಿಮರ್ಶೆ ನ್ಯಾಯಸಮ್ಮತವಾದರೂ ನಮಗೆ ಸಮ್ಮತವಾಗಿಲ್ಲ ಎಂದು ತೋರಿಕೆಯ ಮಾನ್ಯತೆ ನೀಡದೆ ಅವನ ಸಾಧನೆಯ ಶ್ಲಾಘನೆ ಮಾಡುತ್ತ ಸರಿಯಾಗಿ ಅರ್ಥ ಮಾಡಿಕೊಳ್ಳಲು ನಾವು ಪ್ರಯತ್ನಪಡಬೇಕು.

卐

3

ಕೊಂಕಣದಲ್ಲಿ ಆರ್ಯರ ವಸಾಹತುಗಳು

ಇತಿಹಾಸವು ಭೂತಕಾಲದ ಘಟನೆ ಹಾಗೂ ವಿಚಾರಗಳ ದಾಖಲೆ. ಅದು ವರ್ತಮಾನ ಜೀವನದ ಉಲ್ಲೇಖಕ್ಕಾಗಿ ಹಾಗೂ ಭಾವೀ ಕರ್ಮಪಥದ ಯೋಜನೆಗಾಗಿದೆ. ಆದರೆ 'ಇತಿಹಾಸ' ಪದದ ಪ್ರಚಲಿತ ಅರ್ಥ ಹೀಗಿದೆ. ಅದು ಆಗಾಗ್ಗೆ ಅನುಭವಿಸಿದ ಹಾಗೂ ಗ್ರಹಿಸಿಕೊಂಡಿರುವ ಘಟನೆಗಳಿಗೆ ಬೌದ್ಧಿಕವಾಗಿ ಹಾಗೂ ಭಾವನಾತ್ಮಕವಾಗಿ ಸ್ಪಂದಿಸುವ ದಾಖಲೆ. ಪ್ರತ್ಯಕ್ಷವೇ ಪ್ರಮಾಣ. ಪ್ರತ್ಯಕ್ಷ ಅಲ್ಲದ್ದು ಪ್ರಮಾಣ ಅಲ್ಲ ಎಂದು ತಿಳಿಸುವ ಜ್ಞಾನವು ಮಾನವನ ಬುದ್ಧಿಮಟ್ಟಕ್ಕೆ ನಿಲುಕದಷ್ಟು ಅಪಾರವಾಗಿದೆ. ಇತಿಹಾಸವು ನಾವು ಉಲ್ಲೇಖಿಸುವ ಪ್ರತ್ಯಕ್ಷ ಅನುಭವಕ್ಕಿಂತ ಓದಿದ, ಕಂಡ ಹಾಗೂ ಕೇಳಿದ ಅನುಭವಕ್ಕೇ ಸೀಮಿತವಾಗಿರಲು ಪ್ರೇರಿಸುತ್ತದೆ.

ಕಾಲವು ಹರಿಯುತ್ತಿರುವ ನದಿಯಂತೆ. ಅಂತಃಸತ್ವವೊಂದೇ ನಿತ್ಯ. ಬಾಹ್ಯರೂಪ ಅನಿತ್ಯ. ಅದು ನಿರಂತರ ಪರಿವರ್ತನಶೀಲ. ಆದ್ದರಿಂದ ಒಬ್ಬನು ಒಂದು ಸಲ ಮುಳುಗಿದ ನೀರಿನಲ್ಲಿ ಇನ್ನೊಮ್ಮೆ ಮುಳುಗಲಾರ ಎಂದು ಹೇಳುತ್ತಾರೆ. ಏಕೆಂದರೆ ಪ್ರತಿಯೊಬ್ಬನೂ ನದಿಯ ಸತ್ವದ ಅನುಭವ ತನಗಾಗಿದೆ ಎಂದು ಪ್ರತಿಪಾದಿಸಿದರೂ ಆ ನದಿಯ ರೂಪ ಮಾತ್ರ ಆಗಾಗ ಬದಲಾಗುತ್ತಿರುತ್ತದೆ. ಹೀಗಿದ್ದರೂ ಕ್ರಿಯೆ, ಪರಸ್ಪರ ಕ್ರಿಯೆ, ಸ್ವೀಕರಣ ಹಾಗೂ ವಿಕಸನದ ಮೂಲಕ ಆದಿವಾಸಿಯೂ ನಾಗರಿಕನಂತೆ ತೋರುತ್ತಿದ್ದಾನೆ. ಆದರೆ ಮಾನವನ ಆತ್ಮವು ಇದ್ದಂತೆಯೇ ಇದೆ. ರೂಪವು ಬದಲಾಗುತ್ತಿದೆ. ಭಾರತದಲ್ಲಿ ಅನೇಕ ಜನಾಂಗಗಳ ಸಮುದಾಯಗಳು ಪ್ರವೇಶಿಸಿದವು. ಅವುಗಳಲ್ಲಿ ನೆಗ್ರಿಟೋ, ಪ್ರೋಟೋ ಅಸ್ಟ್ರೋಲಾಯ್ಡ್, ದ್ರಾವಿಡ, ಮಂಗೋಲಿಯನ್ ಅಥವಾ ಆರ್ಯ ಜನಾಂಗಗಳೂ ಇವೆ. ಆ ಜನಾಂಗಗಳ ಮೂಲ ರೂಪವೂ ಸ್ಥಿರವಾಗಿ ಉಳಿಯಲಿಲ್ಲ. ಆದರೆ ಅವು ಯಾವವೂ ಭಾರತೀಯತೆಯ ಗುಣಲಕ್ಷಣವಾದ ವಿವಿಧತೆಯಲ್ಲೂ ಏಕತೆಯನ್ನು ವ್ಯಕ್ತಪಡಿಸುವ ವರ್ಣರಂಜಿತ ಚಿತ್ರವನ್ನು ಬದಲಿಸಲಿಲ್ಲ.

ಜನಾಂಗೀಯ ಸಮುದಾಯಗಳಲ್ಲಿ ನೆಗ್ರಿಟೋಗಳ ಕೆಲವೊಂದು ಸುಳಿವುಗಳಿದ್ದರೂ ಆ ಸಮುದಾಯದವರು ಹೇಳಿಕೊಳ್ಳುವಂಥ ವಿಶಿಷ್ಟ ಹೆಜ್ಜೆ ಗುರುತುಗಳನ್ನು ಬಿಟ್ಟು ಹೋಗಿಲ್ಲ. ಭೌತಿಕ ಉನ್ನತಿಯು ಒಂದು ಉನ್ನತ ನಗರೀಕೃತ ನಾಗರಿಕತೆ ಆಗಿಸುವಲ್ಲಿ ಪ್ರೋಟೋ ಅಸ್ಟ್ರೋಲಾಯ್ಡ್ ಮತ್ತು ದ್ರಾವಿಡ

ಜನಾಂಗಗಳು ಮಾತ್ರ ಪ್ರಗತಿಶೀಲ ಪ್ರಭಾವವನ್ನು ಬೀರಿವೆ. ಅನಂತರ ಬಂದ ಮೂಲತಃ ಅಲೆಮಾರಿಗಳಾದ ಆರ್ಯರು ಪ್ರಕೃತಿಯ ನವೋದಿತ ಶಕ್ತಿಯಿಂದ ಪ್ರಭಾವಿತರೂ, ಪೋಷಕರೂ ಆಗಿದ್ದರು. ನಗರಕೇಂದ್ರಿತ ನಾಗರಿಕತೆಯೊಂದಿಗೆ ಅವರು ಹೊಂದಿಕೊಂಡಿರಲಿಲ್ಲ. ಆದ್ದರಿಂದ ಅವರು ಮೊದಮೊದಲು ಭೌತಿಕ ಸಮೃದ್ಧಿಯನ್ನು ಇಷ್ಟಪಡಲಿಲ್ಲ. ಆದರೂ ಬೌದ್ಧಿಕ ಹಾಗೂ ಆಧ್ಯಾತ್ಮಿಕ ಅಡಿಪಾಯದ ಮೇಲೆ ತಮ್ಮ ವಿಶಿಷ್ಟ ಪ್ರತಿಭೆಯ ಪ್ರತಿಷ್ಠಾಪನೆ ಆಗುವುದನ್ನೇ ಇಷ್ಟಪಟ್ಟಿದ್ದರು. ಆರ್ಯರಿಗೆ ಭಾರತೀಯ ನಾಗರಿಕತೆಯನ್ನು ಸಕಲ ಸಂಸ್ಕೃತಿಗಳ ಸಾರವೂ, ಸಾರ್ವಭೌಮ ಸಮನ್ವಯತೆಯುಳ್ಳದ್ದೂ ಆಗಿರುವ ಸಮಗ್ರ ಉತ್ಪತ್ತಿಯನ್ನಾಗಿ ರೂಪಿಸಬೇಕಿತ್ತು. ಆದಕಾರಣ ಆಸ್ಟ್ರಿಕ್ ಮತ್ತು ದ್ರಾವಿಡ ಜನಾಂಗಗಳಿಂದ ಅನೇಕ ಮೂಲಸೂತ್ರಗಳನ್ನು ಪಡೆಯಲು ಅವರಿಗೆ ನೈಸರ್ಗಿಕ ಶಕ್ತಿಗಳು ನೆರವಿಗೆ ಬಂದವು. ಅಲ್ಲಿಯತನಕ ನಗರೀಕೃತ ಆರ್ಯೇತರ ನೆಲೆಸಿಗರಿಗಿಂತ ಅತ್ಯಂತ ಭಿನ್ನರಾಗಿರುವ ಆರ್ಯರು ಆರ್ಯೇತರರ ಆಚಾರ-ವಿಚಾರಗಳ ಪ್ರಭಾವದಲ್ಲಿ ಸಿಲುಕಲು ಇಷ್ಟಪಟ್ಟಿರಲಿಲ್ಲ. ವ್ಯಾಸರು ಸಂಸ್ಕರಿಸಿ ಸಂಪಾದಿಸಿದ ವೈದಿಕ ಗ್ರಂಥರಾಶಿಯು ಕೇವಲ ಆರ್ಯ ಸಂಸ್ಕೃತಿಯ ವಿಜೇತ ರಾಜ-ಮಹಾರಾಜರ ಹಾಗೂ ಪರಾಜಿತ ಶಾಸಕರನ್ನು ಮಾತ್ರ ಪ್ರತಿನಿಧಿಸಲಿಲ್ಲ. ಅದು ಆರ್ಯ ಮತ್ತು ಆರ್ಯೇತರ ಜನಾಂಗಗಳ ಸಾಮಾಜಿಕ, ಸಾಂಸ್ಕೃತಿಕ ಹಾಗೂ ಧಾರ್ಮಿಕ ದರ್ಶನಗಳ ಚಿತ್ರಣವನ್ನು ಒಳಗೊಂಡ ಸಂಯುಕ್ತ ದಾಖಲೆಯಾಗಿದೆ.

ಏಶಿಯಾಟಿಕ್ ಜರ್ನಲ್ ಆಫ್ ಬೆಂಗಾಲ್ ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಭಾರತದ ಪ್ರಾಚೀನ ಭೂಗೋಳ ಶಾಸ್ತ್ರದ ಕುರಿತು ಬರೆದ ತುಲನಾತ್ಮಕ ಪ್ರಬಂಧದಲ್ಲಿ ಕರ್ನಲ್ ವಿಲ್‌ಫರ್ಡರು ತಮ್ಮ ಅಭಿಪ್ರಾಯವನ್ನು ಹೀಗೆ ನೀಡಿದ್ದಾರೆ. "ನಾವು ಅರಿತಿರುವ ಇಂಡಿಯಾ ದೇಶದ ಅತಿ ಪ್ರಾಚೀನ ಹೆಸರು ಬ್ರಹ್ಮನ ಅನುಯಾಯಿಗಳು ಬರುವತನಕ 'ಕೋಳರ್' ಎಂದು ಸಾಮಾನ್ಯ ಬಳಕೆಯಲ್ಲಿತ್ತು. ಕಾಡು ಬೆಟ್ಟಗಳಲ್ಲಿರುವ ಅಸಂಖ್ಯ ಆದಿವಾಸೀ ಜನಾಂಗಗಳು ಈಗಲೂ ಈ ಹೆಸರನ್ನು ಉಳಿಸಿಕೊಂಡು ಬಂದಿವೆ. ಗುಸ್ತಾವ್ ಒಪ್ಪರ್ಟರು 'ಭಾರತದ ಮೂಲ ನಿವಾಸಿಗಳು' ಎಂಬ ಗ್ರಂಥದಲ್ಲಿ ಈ ಅಭಿಪ್ರಾಯವನ್ನೇ ಪುಷ್ಟೀಕರಿಸಿದ್ದಾರೆ.

"ಭಾರತದ ಮೂಲ ನಿವಾಸಿಗಳಲ್ಲಿ ಹೆಚ್ಚಿನ ಜನಾಂಗಗಳ ಹೆಸರು ನಿಜವಾಗಿಯೂ ಪರ್ವತಕ್ಕೆ ಸಂಬಂಧಿಸಿ ಉಲ್ಲೇಖಿಸಲ್ಪಟ್ಟಿದೆ. ಗೌಡ ಮತ್ತು ದ್ರಾವಿಡ ಜನಾಂಗಗಳನ್ನು ಸೂಚಿಸಲು ಮಲಯ ಮತ್ತು ಕೋ..... ಎಂಬ ಎರಡು ಪರ್ವತ ಸಂಬಂಧೀ ವಿಶಿಷ್ಟ ಪದಗಳಿವೆ. ಹೀಗೆ ಎರಡು ಹೆಸರಿನಿಂದಲೂ

ಕರೆಯುವ ರೂಢಿ ಭಾರತದ ತುಂಬ ವ್ಯಾಪಕವಾಗಿ ಪ್ರಚಲಿತವಾಗಿತ್ತು. ಈ ಎರಡು ಪದಗಳಿಂದಲೇ ನಿಷ್ಪನ್ನವಾದ ಜನಾಂಗಗಳ ಹೆಸರುಗಳು ಮಲ್ಲರು, ಮಾಳರು, ಮಾಳವರು ಮಲೆಯರು ಎಂದೂ ಕೋಳಿಗಳು, ಕೋಡುಲ್ಲರು, ಕೆಂಡರು, ಗೊಂಡರು, ಗಣದಾಸರು, ಕುರುವರು ಎಂದೂ ಆಗಿವೆ. ಈ ಎರಡೂ ಜನಾಂಗಗಳನ್ನು ನಾನು ಇನ್ನು ಮುಂದೆ ಮಲಯ ದ್ರಾವಿಡರು ಹಾಗೂ ಕೋ ದ್ರಾವಿಡರೆಂದೂ ಸಂಬೋಧಿಸುತ್ತೇನೆ." ಗುಂಜೀಕರರ ಅಭಿಪ್ರಾಯ ಹೀಗಿದೆ–

"ಕೋಲ ಅಥವಾ ಕೋಳೀ ಜನಾಂಗದಿಂದ ಕೋಲವನ್ ಪದ ನಿಷ್ಪನ್ನವಾಗಿದೆ. ಅದೇ ರೀತಿ ಗೊಂಡ ಜನಾಂಗದಿಂದ ಗೊಂಡವನ್ ಪದ ಬಂತು. ಕೋ ಜನಾಂಗಕ್ಕೆ ಸಂಬಂಧಿಸಿ ಕೊಂಕಣ ಪದ ಬಂದಿರಬಹುದು. ಅವರು ಈ ಪ್ರದೇಶದ ಮೂಲನಿವಾಸಿಗಳಿರಬಹುದು."

ಗುಸ್ತಾವ್ ಒಪ್ಪರ್ಟರೂ ಇದನ್ನೇ ಅನುಮೋದಿಸುತ್ತಾರೆ. ಸಮುದ್ರ ಯಾನೀ ಸುಮೇರಿಯನ್ನರಿಗೆ, ಅಸುರರೆಂದು ಕರೆಯಲ್ಪಡುವ ಅಸ್ಸೀರಿಯನ್ನರಿಗೆ, ಪಣಿಗಳೆಂದು ಕರೆಯಲ್ಪಡುವ ಫಿನೀಶಿಯನ್ನರಿಗೆ, ಹರಪ್ಪ ಅಥವಾ ಹರಿಯೂಪಿ ಯಾದಿಂದ ದೂರ ದೂರದ ಸ್ಥಳಗಳಿಗೆ ಪ್ರಯಾಣ ಮಾಡುತ್ತಿರುವ ವ್ಯಾಪಾರಸ್ಥರಿಗೆ ಕಡಲ ತೀರವು ಪ್ರವೇಶಕ್ಕೆ ಅನುವು ಮಾಡಿಕೊಟ್ಟಿತ್ತು. ನಂತರದ ದಿನಗಳಲ್ಲಿ ಪಶ್ಚಿಮ ಕಡಲ ತೀರದ ಅನೇಕ ಬಂದರುಗಳನ್ನು ಉಲ್ಲೇಖಿಸುವಾಗ ಭಾರತವನ್ನು ಕೋಲರಿನ್ ಎಂದು ಕರೆಯುತ್ತಿದ್ದ ಪುಲ್ವಾರ್ಕನು ಉಲ್ಲೇಖಿಸಿದ್ದಾನೆ. ವರರುಚಿಯು ತನ್ನ ಕಾಲದ ಪ್ರಾಕೃತ ಭಾಷೆಗಳ ಕುರಿತು ಹೇಳುವಾಗ ಸಹ್ಯ ಪರ್ವತದ ನಿವಾಸಿಗಳ ಭಾಷೆ ಪೈಶಾಚೀ ಪ್ರಾಕೃತ ಭಾಷೆ ಎಂದು ನಿರ್ಧರಿಸಿದ್ದಾನೆ.

ಭಾರ್ಗವ ಕುಲದವರಿಗೆ ಪಣಿಗಳ ಪರಿಚಯವಿದ್ದಂತೆ ದಸ್ಯುಗಳು, ದಾನವರು ಎಂದು ಖ್ಯಾತರಾದ ಅಸ್ಟ್ರೋಲಾಯ್ಡ್ ನಾಗಾಗಳ ಪರಿಚಯವೂ ಚೆನ್ನಾಗಿತ್ತು. ದಾಸರು ಇಲ್ಲವೆ ದಾನವರು ಎಂದು ಕರೆಯಲ್ಪಡುವ ಆ ಎರಡೂ ಜನಾಂಗಗಳು ಸಮುದ್ರ ವ್ಯಾಪಾರಿಗಳು. ಅಂಥವರು ಮೊದಲು ಇರಾನ್, ಅಸ್ಸೀರಿಯಾ ಮತ್ತು ಸುಮೇರಿಯಾ ದೇಶಗಳಲ್ಲಿದ್ದಾಗ ಹಡಗುಗಳನ್ನೂ, ತೀವ್ರಗಾಮೀ ಕುದುರೆಗಳ ರಥಗಳನ್ನೂ ಕಟ್ಟುವ ಕಲೆಯನ್ನು ಕಲಿತುಕೊಂಡಿದ್ದರು. ಮಾಟ–ಮೋಡಿ, ಇಂದ್ರಜಾಲ ವಿದ್ಯೆಯಲ್ಲಿಯೂ ಪರಿಣತರಾಗಿ ಇತರ ಆರ್ಯರನ್ನು ಭಯಭೀತರನ್ನಾಗಿ ಮಾಡಿದ್ದರು. ಆದ್ದರಿಂದಲೇ ರಾಜವಾಡೆಯವರು ನಾಗರ ವಸತಿಗಳನ್ನು ತಲ, ಅತಲ, ಪಾತಾಲ ಮತ್ತು ರಸಾತಲಗಳೆಂದು ಹೇಳುತ್ತಾರೆ. ಮುಖ್ಯ ಆರ್ಯರೊಡನೆ ಅನೇಕ ನಾಗರು ಸಮರಸರಾಗಿರುವ ವಾಸುಕಿ, ಶೇಷ,

ಅನಂತರು ಆರ್ಯರಿಗೆ ಸಮೀಪವರ್ತಿಗಳಾಗಿದ್ದರೂ ತಕ್ಷಕ, ಕಾರ್ಕೋಟಕ, ಕಾಲಿಯರಂಥ ನಾಗರು ಮಾತ್ರ ಕೊನೆತನಕ ಪ್ರಜಾಪೀಡಕರಾಗಿಯೇ ಇದ್ದರು.

ನಾಗತವರ್ಮ ಎಂಬ ಯಾತ್ರಾಸ್ಥಳದಲ್ಲಿರುವ ವಾಸುಕೀ ಮಂದಿರದಲ್ಲಿ ಸಾವಿರಾರು ಋಷಿಗಳು ವಾಸುಕಿಯ ಆರಾಧನೆಯನ್ನು ಮಾಡಿರುವರೆಂದು ಮಹಾಭಾರತದಲ್ಲಿ ಬಲರಾಮನು ಹೇಳುತ್ತಾನೆ. ಯದುವಂಶಜನಾದ ಮಹಿಷ್ಮಂತನು ನರ್ಮದಾ ನದೀತೀರದಲ್ಲಿ ಮಾಹಿಷ್ಮತೀ ನಗರವನ್ನು ತನ್ನ ರಾಜಧಾನಿಯನ್ನಾಗಿ ಸ್ಥಾಪನೆ ಮಾಡುತ್ತಾನೆ. ಮತ್ತು ಆ ಪ್ರದೇಶವನ್ನು ಅವನು ಕಾರ್ಕೋಟಕ ನಾಗನಿಂದ ಪ್ರಯತ್ನಪೂರ್ವಕ ಸ್ವಾಧೀನ ಪಡಿಸಿಕೊಂಡಿದ್ದನು. ನಾಗ್ವೇ ಎಂಬ ಪಟ್ಟಣವು ನಾಗವ್ಯಾಹ ಆಗಿತ್ತೆಂದು ಸ್ಕಂದ ಪುರಾಣ ಹೇಳುತ್ತದೆ. ಗೋಮಂತಕದ ದಕ್ಷಿಣದಲ್ಲಿರುವ ಅಹಿ ಕ್ಷೇತ್ರವು ಮಾರ್ಪಟ್ಟು ಹೈವ ಆಯಿತು. ದಕ್ಷಿಣದ ಕೇರಳದ ಕಡೆ ಹೋದಹಾಗೆ ನಾಗಸಂಪ್ರದಾಯ ಪ್ರಬಲವಾಗುತ್ತ ಹೋಗುತ್ತದೆ.

ಡಾ. ಎಸ್ಕೆ ಚಟರ್ಜಿಯವರು ಹೀಗೆ ತಮ್ಮ ಅಭಿಪ್ರಾಯ ನೀಡಿದ್ದಾರೆ. "ಕೆಲವೊಂದು ವಿಷಯಗಳಲ್ಲಿ ದ್ರಾವಿಡ ಮತ್ತು ಆಸ್ಟ್ರಿಕ್ ಕೊಡುಗೆಗಳು ಆರ್ಯರ ಕೊಡುಗೆಗಿಂತ ಅಗಾಧವೂ ಹೆಚ್ಚು ವ್ಯಾಪಕವೂ ಆಗಿತ್ತು ಎಂದು ಸರ್ವಸಮ್ಮತ ಅಭಿಪ್ರಾಯವಿದೆ".

ಇದನ್ನು ಡಾ. ಎಸ್. ರಾಧಾಕೃಷ್ಣನ್ ಅವರೂ ಹೀಗೆ ಸಮ್ಮತಿಸಿದ್ದಾರೆ. "ವೈದಿಕ ಧರ್ಮವು ಇತರ ಪಂಥಗಳ ಆಚಾರ, ಸಂಪ್ರದಾಯಗಳ ಸಾರವನ್ನು ಹೀರಿ, ಮೈಗೂಡಿಸಿಕೊಂಡು, ಕಾಪಾಡಿಕೊಂಡು ಬಂದಿದೆ. ಅವುಗಳನ್ನು ನಿರ್ನಾಮ ಮಾಡುವ ಬದಲು ತನ್ನ ಆವಶ್ಯಕತೆಗಳಿಗೆ ಹೊಂದಿಸಿಕೊಂಡಿದೆ. ದ್ರಾವಿಡರ ಹಾಗೂ ಭಾರತದ ಇತರ ಸ್ಥಳೀಯ ನಿವಾಸಿಗಳ ಸಾಮಾಜಿಕ ಜೀವನದಿಂದ ಅದು ಎಷ್ಟೆಲ್ಲ ಸ್ವೀಕರಿಸಿದೆ ಎಂದರೆ ಆರ್ಯರ ಸಂಪ್ರದಾಯ ಯಾವುದು, ಅನಾರ್ಯರದು ಯಾವುದು ಎಂದು ವಿಂಗಡನೆ ಮಾಡುವುದೇ ದುಸ್ತರವಾಗಿದೆ."

ಡಾ. ಡಿ. ಡಿ. ಕೋಸಂಬಿ ಅವರು ಮಾತ್ರ ಹೀಗೆ ತಮ್ಮ ಅಪಶ್ರುತಿಯನ್ನು ವ್ಯಕ್ತಪಡಿಸಿದರು. "ಆರ್ಯರು ಆಕ್ರಮಣ ಮಾಡಿ ಪುನಃಪುನಃ ನಾಶಪಡಿಸಿದ ತೃತೀಯ ಸಹಸ್ರಮಾನದ ನಗರ ಸಂಸ್ಕೃತಿಗಳಿಗೆ ಹೋಲಿಸಿದರೆ ಅವರಿನ್ನೂ ನಾಗರಿಕತೆಯನ್ನೇ ಹೊಂದಿರಲಿಲ್ಲ".

ಆರ್ಯರು ಭಾರತದ ಉಪಖಂಡಕ್ಕೆ ವಲಸೆ ಹೋದುದರ ಕುರಿತು ಅನೇಕ ಸಿದ್ಧಾಂತಗಳನ್ನು ಮಂಡಿಸಲಾಗಿದೆ. ಭಾರತದ ಮೇಲೆ ಆಕ್ರಮಣ ಮಾಡಿದ

ಆರ್ಯರು ಸಂಸ್ಕಾರಹೀನ ವಲಸೆಗಾರರಾದ ಅನಾರ್ಯರನ್ನು ಸೋಲಿಸಿ, ಇಲ್ಲಿ ಉನ್ನತ ಸುಸಂಸ್ಕೃತ ವಸಾಹತುಗಳನ್ನು ಸ್ಥಾಪಿಸಿದ್ದರೆಂದೂ ಅವರು ಸುಸಂಸ್ಕೃತರೂ ಉನ್ನತ ನಾಗರಿಕ ಪ್ರಜ್ಞೆ ಉಳ್ಳವರೂ ಆಗಿದ್ದರೆಂದು ಚಿತ್ರಿಸುವ ರೂಢಿ ಬ್ರಿಟಿಷರು ಆಡಳಿತ ನಡೆಸುತ್ತಿರುವ ಕಾಲದಲ್ಲಿ ಸರ್ವೇಸಾಮಾನ್ಯವಾಗಿತ್ತು. ಇಪ್ಪತ್ತನೆಯ ಶತಮಾನದ ಆರಂಭದಲ್ಲಿ ಮಾನವಶಾಸ್ತ್ರಜ್ಞರು, ಪ್ರಾಕ್ತನಶಾಸ್ತ್ರಜ್ಞರು, ಭಾಷಾತಜ್ಞರು ಮತ್ತು ಸಾಮಾಜಿಕ ಸಂಶೋಧಕರು ಸಿಂಧು ಕಣಿವೆ ಹಾಗೂ ಸರಸ್ವತೀ ನದಿಯ ನಾಗರಿಕತೆಗಳಲ್ಲಿ ಮಾಡಿದ ಉತ್ಖನನಗಳಿಂದ ದೊರೆತ ಜನಾಂಗಿಕ, ಸಾಮಾಜಿಕ, ಭಾಷಾಶಾಸ್ತ್ರೀಯ ಸಾಕ್ಷ್ಯಗಳನ್ನು ಆಧರಿಸಿ ಮಾಡಿದ ಆವಿಷ್ಕಾರಗಳನ್ನು ಸಾರ್ವಜನಿಕರ ಮುಂದೆ ಮಂಡಿಸಿದರು. ಆಗ ಆದಿವಾಸಿಗಳು ಅಸಂಸ್ಕೃತರಾಗಿರದೆ ಅಗಾಧ ಪ್ರಗತಿಯನ್ನು ಹೊಂದಿರುವ ನಗರವಾಸಿಗಳಾಗಿದ್ದರೆಂದು ತಿಳಿದುಬಂತು.

ಪ್ರಾಕೃತ ಉಪಭಾಷೆಗಳ ಮೂಲವು ವೇದ ಗ್ರಂಥಗಳ ಭಾಷೆಯಾದ ಸಂಸ್ಕೃತವಾಗಿತ್ತು ಎಂಬ ಪ್ರಮೇಯವನ್ನು ಆಧರಿಸಿ ಭಾಷಾತಜ್ಞರು ಸಾಮಾನ್ಯವಾಗಿ ಎಲ್ಲ ಪ್ರಾಕೃತ ಉಪಭಾಷೆಗಳ ಅಧ್ಯಯನ ಮಾಡಲು ಉಪಕ್ರಮಿಸಿದ್ದರು. ಪ್ರಕೃತಿಸಹಜ ಭಾಷೆ ಪ್ರಾಕೃತ. ಸಂಸ್ಕಾರ ಕೊಟ್ಟಾಗ ಅದು ಸಂಸ್ಕೃತ ಆಯಿತು. ಹೀಗೆ ಭಾಷೆ ಸುಸಂಸ್ಕೃತ ಎಂದು ಕರೆಯಲ್ಪಡುವುದಕ್ಕಿಂತ ಮುಂಚೆ ಮಂಗ ಮಾನವನ ಅರ್ಥವಿಲ್ಲದ ಗೊಜಗೊಜ ಶಬ್ದಗಳಿಂದ ಹಿಡಿದು ಮಾನವನ ಸಂವಹನಯೋಗ್ಯ ಶಬ್ದರೂಪದ ತನಕ ಭಾಷೆಗೊಂದು ಪ್ರಾಕೃತಿಕ ಅಥವಾ ಸಹಜರೂಪ ಇರಲು ಸಾಧ್ಯವೇ ಇಲ್ಲ ಎಂಬುದನ್ನು ಯಾರೂ ಆಲೋಚಿಸಿಲ್ಲ. ಭಾರತೀಯ ಭಾಷೆಗಳ ಮೂಲ ಶೋಧಕ ಭಾಷಾತಜ್ಞರಲ್ಲಿ ಒಬ್ಬರಾದ ಎ. ಎಫ್. ಎಫ್. ಎಚ್. ಹೊರ್ನ್‌ಲ್ಲರು ಭಾರತದ ಪ್ರಾಕೃತ ಭಾಷೆಗಳ ಅಧ್ಯಯನವನ್ನು ಕೈಗೊಂಡಾಗ `A Grammar of Eastern Hindi' ಎಂಬ ಗ್ರಂಥದಲ್ಲಿ ಅಪ್ರಜ್ಞಾಪೂರ್ವಕವಾಗಿ ಒಂದು ನಾಟಕೀಯ ಸಿದ್ಧಾಂತವನ್ನು ಮಂಡಿಸಿ ಹೀಗೆ ಸಮರ್ಥಿಸಿಕೊಂಡರು.

“ಎಂದೋ ಒಮ್ಮೆ ಗತಕಾಲದಲ್ಲಿ ಆರ್ಯರು ಮೊಟ್ಟಮೊದಲು ಭಾರತದ ವಾಯುವ್ಯ ಸರಹದ್ದಿನಲ್ಲಿರುವ ಕಂದಹಾರ ಪ್ರದೇಶ (ಗಂಧಾರ)ದಿಂದ ಇಳಿದು ಬಂದಾಗ ಅವರು ಮಾತನಾಡುವ ಭಾಷೆಯ ಏಕಮಾತ್ರ ಪ್ರಾಕೃತಿಕ ರೂಪವು ಮಾಗಧೀ ಆಗಿತ್ತು. ಅವರು ಕಾಲಕ್ರಮೇಣ ದಕ್ಷಿಣ ಮತ್ತು ಪೂರ್ವ ದಿಕ್ಕಿನತ್ತ ಬಂದು ತಲಪಿದ್ದರು. ಆರ್ಯರ ಎರಡನೆಯ ಅಲೆಯು ಉತ್ತರದ ಕಾಶ್ಮೀರ ಮತ್ತು ಲಡಾಕ್ ಪ್ರದೇಶದಿಂದ ಇಳಿದುಬಂತು. ಅವರು ಮಾತನಾಡುವ ಭಾಷೆಯ

ಪ್ರಾಕೃತಿಕ ರೂಪವು ಶೌರಸೇನೀ ಆಗಿತ್ತು. ಅವರು ಸರಸ್ವತೀ ನದಿಯ ಜಲಾವೃತ ಪ್ರದೇಶದಲ್ಲಿ ಈ ಮೊದಲು ವಲಸೆ ಬಂದ ಆರ್ಯರ ನಡುವೆ ಬಿರುಕನ್ನು ಉಂಟು ಮಾಡುವ ಬೆಣೆಯಂತೆ ಬಂದು ನೆಲೆಸಿದರು. ಕಾಲಕ್ರಮೇಣ ಅವರನ್ನೂ, ಅವರ ಭಾಷೆಯನ್ನೂ ಇನ್ನೂ ಪೂರ್ವಕ್ಕೆ ತಳ್ಳಿದರು." ಈ ಹೇಳಿಕೆಯನ್ನು ಆಧರಿಸಿ ಅವರು ಈ ತೀರ್ಮಾನಕ್ಕೆ ಬಂದರು.

"ಭಾರತದಲ್ಲಿ ಆರ್ಯ ಕುಲದ ಎರಡು ದೊಡ್ಡ ಪೀಳಿಗೆಗಳ ವಲಸೆಗಾರಿಕೆಯು ಬೇರೆ ಬೇರೆ ಕಾಲಾವಧಿಯಲ್ಲಿ ಆಯಿತು. ಈ ಎರಡೂ ಪೀಳಿಗೆಯುವರು ಮೂಲತಃ ಒಂದೇ ಭಾಷೆಯನ್ನು ಎರಡು ಭಿನ್ನ ಭಾಷಾಪ್ರಭೇದಗಳಲ್ಲಿ ಮಾತನಾಡುತ್ತಿದ್ದರು."

ಡಾ. ಎಸ್. ಕೆ. ಚಟರ್ಜಿಯವರು ಹೋರ್ನಲ್‌ರ ಈ ಅಭಿಪ್ರಾಯವನ್ನು ಅನುಮೋದಿಸಿದರು. ಎರಡು ಗುಂಪುಗಳು ಭಿನ್ನ ಉಪಭಾಷೆಗಳನ್ನು ಆಡುತ್ತಿದ್ದರೆಂಬುದನ್ನು ಗ್ರಿಯರ್ಸನ್ನರು ಒಪ್ಪಿಕೊಂಡರೂ ದ್ವಿಮುಖ ಪ್ರವೇಶದ ಸಿದ್ಧಾಂತವನ್ನು ಮಾತ್ರ ಒಪ್ಪಲಿಲ್ಲ. ಚಾಂದ್ ಮತ್ತು ರಿಸ್ಲೇ ಎಂಬ ಮಾನವ ಶಾಸ್ತ್ರಜ್ಞರೂ ಒಂದೇ ನಿರ್ಣಯಕ್ಕೆ ಬಂದು ತಮ್ಮ ಅಭಿಪ್ರಾಯವನ್ನು ಹೀಗೆ ಮಂಡಿಸಿದರು.

ಸುತ್ತಲಿನ ಪ್ರಕೃತಿ ಮತ್ತು ಮೇಲಿನ ವಿಶಾಲ ಆಕಾಶ ಇವೆರಡರ ನಡುವಿನ ಪ್ರಶಾಂತ ಮೌನಧ್ವನಿಗೆ ಸ್ಪಂದಿಸುವ, ಆಚಾರ-ವಿಚಾರಗಳಲ್ಲಿ ಸ್ವಾತಂತ್ರ್ಯ ಹೊಂದಿರುವ, ಸಂಚಾರೀ ಜೀವನವನ್ನು ರೂಢಿಸಿಕೊಂಡ ಡಾಲಿಕಸಿಫ್ಯಾಲಿಕ್ ಎಂಬ ಉದ್ದ ತಲೆಯ ಆರ್ಯರು ಮೊದಲು ಶೀತ ವಲಯದ ಸೈಬೀರಿಯಾದಿಂದ, ಇರಾನಿನ ಸಮತಲ ಪ್ರದೇಶದತ್ತ ಇಳಿದು ಬಂದರು. ಅಲ್ಲಿ ತಮ್ಮ ಜೀವನಶೈಲಿಗೆ ಒಗ್ಗದ ನಗರೀಕೃತ ಸಮಾಜವನ್ನು ನೋಡಿ ಹಿಂದೂಕುಶ ಪರ್ವತಶ್ರೇಣಿಯ ದುಸ್ತರ ಭೂಪ್ರದೇಶವನ್ನು ಹಾಯ್ದು ಇನ್ನೂಮುಂದೆ ಸಾಹಸಪೂರ್ವಕ ಪ್ರಯಾಣ ಮಾಡುತ್ತ, ಪಂಜಾಬದ ಬಯಲು ಪ್ರದೇಶದಲ್ಲಿ ಬಂದು ನೆಲೆಸಿದರು. ಇಲ್ಲಿಯೂ ಅಷ್ಟೇ ಒರಟು ವರ್ತನೆಯ, ವಿಚಿತ್ರ ಹಾಗೂ ಅಪರಿಚಿತ ಜನರು ಎದುರಾದರು. ಆದರೆ ಅವರು ಆತ್ಮಾಭಿಮಾನಿಗಳಾಗಿದ್ದರಿಂದ ತಾವು ಉದಾತ್ತ ಮನೋಭಾವದ ಆರ್ಯರು ಎಂದು ಕೊಚ್ಚಿಕೊಳ್ಳುತ್ತಿದ್ದರು. ಅವರು ಬೇರೆ ಬೇರೆ ಭಾಷೆಗಳನ್ನಾಡುವ, ತಮಗೆ ಸರಿಕಂಡಂತೆ ವರ್ತಿಸುವ, ಜುಗುಪ್ಸೆ ಹುಟ್ಟಿಸುವಷ್ಟು ಅಸಹಜವೂ, ನಿಕೃಷ್ಟವೂ ಆಗಿರುವ ತಿರಸ್ಕರಣೀಯ ಮತಾನುಯಾಯಿಗಳಾಗಿದ್ದುದರಿಂದ ಅವರ ಜೀವನಕ್ರಮದೊಡನೆ ಹೋರಾಡಿದರು. ಅವರ ನಗರಕೇಂದ್ರಿತ ಜೀವನವನ್ನು

ಹಾಳುಗೆಡವಿದರು. ಈ ಆರ್ಯ ಸಮುದಾಯಕ್ಕೆ ಭರತ ವಂಶಜರಾದ ವೃದ್ಧಶ್ರವಸ್, ದಿವೋದಾಸ, ಪಿಜವನ ಮತ್ತು ಸುದಾಸರಂಥ ಕ್ಷತ್ರಿಯರೂ, ವಸಿಷ್ಠ, ಗೃತ್ಸಮದ, ಕಣ್ವ, ದೀರ್ಘತಮ ಮತ್ತು ವಿಶ್ವಾಮಿತ್ರರಂಥ ಬ್ರಾಹ್ಮಣರೂ ಸೇರಿಕೊಂಡಿದ್ದರು. ಇವರೆಲ್ಲರೂ ಮಾಗಧೀ ಭಾಷೆಯನ್ನಾಡುತ್ತಿದ್ದರು.

ಬ್ರಾಚಿಸಿಫ್ಯಾಲಿಕ್ಸ್ ಎಂಬ ಗಿಡ್ಡ ತಲೆಯ ಆರ್ಯರು ಲಢಾಕ್ ಮತ್ತು ಕಾಶ್ಮೀರ ಮಾರ್ಗವಾಗಿ ಬಂದು ಸರಸ್ವತೀ, ದೃಷದ್ವತೀ ಮತ್ತು ಆಪಯಾ ನದಿಗಳ ಪರಿಮಿತಿಗೊಳಪಟ್ಟ ಪ್ರದೇಶದಲ್ಲಿ ನೆಲೆಸತೊಡಗಿದರು. ಅವರು ನೈಸರ್ಗಿಕ ಶಕ್ತಿಗಳು, ಹಿಮಾಲಯದ ಹಿಮ, ಹಿಮಗಾಳಿ, ಬೆಟ್ಟದಾಕಾರದ ಭೂಪ್ರದೇಶಗಳ ವಿರುದ್ಧ ಹೋರಾಟ ಮಾಡಿದರೇ ಹೊರತು ನಗರಕೇಂದ್ರಿತ ಸಮಾಜದ ವಿರುದ್ಧವಲ್ಲ. ಅವರು ತಮ್ಮ ಪ್ರಯಾಣಕಾಲದಲ್ಲಿ ಪರ್ವತ ಶ್ರೇಣಿಗಳ ಭವ್ಯತೆ, ಹಿಮಪಾತದ ನೀರವತೆ ಹಾಗೂ ಹರಿಯುವ ನದಿಗಳ ಕ್ಷಿಪ್ರ ಗತಿಯ ಅನುಭವವನ್ನೂ ಪಡೆದರು. ಕಾಣಲು ನಿಗೂಢವ್ಯಕ್ತಿಗಳಂತೆ ಕಂಡರೂ ದ್ವೇಷರಹಿತರಾದ ಪ್ರೇಮಮಯ ವ್ಯಕ್ತಿಗಳನ್ನೂ ಕಂಡರು. ತಮ್ಮ ಮೊದಲಿನ ಜೀವನಕ್ಕಿಂತ ಭಿನ್ನವಾಗಿರದ ಸಂಚಾರೀ ಜೀವನ ಸಾಗಿಸುತ್ತಿರುವವರನ್ನೂ ಕಂಡರು. ಆದಕಾರಣ ಅವರು ತಮ್ಮ ಪ್ರಯಾಣಮಾರ್ಗದಲ್ಲಿ ಕಂಡ ಜನಾಂಗಗಳಿಂದ ಅವರ ಮೇಲೆ ಆದ ಪ್ರಥಮ ಪ್ರಭಾವವು ಸ್ನೇಹಮಯ, ಅನುಕೂಲ ಹಾಗೂ ಅಪೇಕ್ಷಣೀಯ ವರ್ತನೆಯಿಂದ ಕೂಡಿತ್ತು. ಅವರು ಹಿಂದೂಕುಶ ಪರ್ವತವನ್ನು ದಾಟಿ ಬಂದ ಆರ್ಯರಿಗಿಂತ ಕಡಿಮೆ ಸ್ವಾಭಿಮಾನಿಗಳಾಗಿರಲಿಲ್ಲ. ಆದರೂ ಅವರು ಹಿಮಾವೃತ ನಿಗೂಢ ಹಾಗೂ ದಿವ್ಯ ಹಿಮಾಲಯದಲ್ಲಿ ವಾಸಿಸುವ ಗಂಧರ್ವರು, ಅಪ್ಸರೆಯರು ಮತ್ತು ಕಿನ್ನರರಂಥ ವ್ಯಕ್ತಿಗಳಿರಲಿ ಅಥವಾ ಬಯಲುಪ್ರದೇಶದಲ್ಲಿ ವಾಸಿಸುವ ದಾಸರು, ದಸ್ಯುಗಳು ಮತ್ತು ದಾನವರಿರಲಿ ಎಲ್ಲ ಸ್ಥಳೀಯ ಜನರೊಂದಿಗೆ ಸ್ನೇಹಮಯವಾಗಿ ವರ್ತಿಸುತ್ತಿದ್ದರು.

ಈ ಆರ್ಯರು ಮೂಲತಃ ಶೌರಸೇನೀ ಭಾಷೆಯನ್ನಾಡುವ ಕ್ಷತ್ರಿಯರಾಗಿದ್ದರು. ಪುರೂರವಸ್, ಆಯು, ನಹುಷ, ಯಯಾತಿ ಮತ್ತು ಅವರ ಐವರು ಪುತ್ರರಾದ ಪುರು, ಅನು, ತುರ್ವಸು, ದ್ರುಹ್ಯು ಮತ್ತು ಯದು ಅವರಲ್ಲಿ ಪ್ರಖ್ಯಾತರಾಗಿದ್ದರು. ಅವರ ಸಮೂಹದಲ್ಲಿ ಪುರೋಹಿತಶಾಹೀ ವರ್ಗದ ಅಭಾವವಿದ್ದುದರಿಂದ ಅವರು ಅಂಗಿರಸ್, ಅಥರ್ವಣ ಮತ್ತು ಭೃಗುಗಳನ್ನೇ ಅವಲಂಬಿಸಿದ್ದರು. ಮತ್ತು ಅಂಗಿರಸ್ಸಾದಿ ಪುರೋಹಿತರು ಇರಾನ್, ಅಸ್ಸೀರಿಯಾ, ಸುಮೇರಿಯಾದ ಆರ್ಯೇತರ ವಸಾಹತುಗಾರರಿಗೂ ಬೇಕಾಗಿದ್ದರು. ಪುರೂರವಸನು

ಊರ್ವಶೀ ಎಂಬ ಅಪ್ಸರೆಯೊಡನೆ ವಿವಾಹ ಮಾಡಿಕೊಂಡನು.

ಆಯುವು ದಾನವ ರಾಜಕುಮಾರಿ ಪ್ರಭಾಳೊಡನೆ ವಿವಾಹವಾದನು. ಯಯಾತಿಯು ವೃಷಪರ್ವಣ ದಾನವನ ಮಗಳು ಶರ್ಮಿಷ್ಠೆಯೊಡನೆ ಮತ್ತು ಶುಕ್ರಾಚಾರ್ಯ ಭಾರ್ಗವನ ಮಗಳಾದ ದೇವಯಾನಿಯೊಡನೆಯೂ ವಿವಾಹ ಮಾಡಿಕೊಂಡನು. ಭರತಕುಲದ ಸುದಾಸನು ವಿಶ್ವಾಮಿತ್ರರ ಸ್ಥಾನದಲ್ಲಿ ವಸಿಷ್ಠರನ್ನು ಕುಲಪುರೋಹಿತರನ್ನಾಗಿ ನೇಮಿಸಿದಾಗ, ಭರತಕುಲದ ವಿಶ್ವಾಮಿತ್ರರಿಗೆ ಅವಮಾನ ವಾಯಿತು. ಆಗ ಅವರು ಪೌರವರ ಪಂಕ್ತಿಯಲ್ಲಿ ಸೇರಿಕೊಂಡರು. ಅವರ ತಂಗಿಯಾದ ಸತ್ಯವತಿಯನ್ನು ಭಾರ್ಗವ ಋಚೀಕನಿಗೆ ಕೊಟ್ಟು ವಿವಾಹ ಮಾಡಿಸಿದರು. ಸುದಾಸ ಮತ್ತು ಯಯಾತಿಯ ಪುತ್ರರ ನಡುವೆ ಆದ ದಾಶರಾಜ್ಞ ಯುದ್ಧದಲ್ಲಿ ವಿಶ್ವಾಮಿತ್ರರು ಅವರಿಗೆ ಮಾರ್ಗದರ್ಶಕರಾದರು. ಭಾರ್ಗವರು ಯಯಾತಿಯ ಐದು ಪುತ್ರರೊಡನೆ ಹೊಂದಾಣಿಕೆ ಮಾಡಿಕೊಳ್ಳಲು ಆರ್ಯೇತರ ಜನಾಂಗದವರನ್ನು ಸೇರಿಸಿದರು. ಆ ಯುದ್ಧವು ಎಷ್ಟು ಭೀಕರವಾಗಿತ್ತೆಂದರೆ ಭರತಕುಲದವರು ಪೌರವರನ್ನು ದಾಸ ಜನಾಂಗದವರೆಂದು ಕರೆದರು. ಮತ್ತು ಅವರನ್ನು ಸೋಲಿಸಲು ಇಂದ್ರನ ಕೃಪೆಯನ್ನು ಯಾಚಿಸಿದರು.

ಈ ಎರಡು ಸಮೂಹಗಳಲ್ಲದೆ ವೇದ ಗ್ರಂಥಗಳಲ್ಲಿ ಪ್ರಾಚೀನ ದ್ರಷ್ಟಾರರೆಂದು ಉಲ್ಲೇಖಿಸಲ್ಪಟ್ಟ ಮೂರನೆಯ ಸಮೂಹವಿತ್ತು. ಅಥರ್ವಣ, ಅಂಗಿರಸ, ಭಾರ್ಗವರು ಸ್ವಾಭಿಮಾನಿಗಳಾಗಿದ್ದರೂ ಪೂರ್ವಾಗ್ರಹ ಪೀಡಿತ ರಲ್ಲದವರೂ, ಪಕ್ಷಪಾತರಹಿತರೂ, ಸಹನಶೀಲರೂ ಆಗಿದ್ದರು. ವಿಶಾಲದೃಷ್ಟಿಯುಳ್ಳ ಆರ್ಯರು ಹಾಗೂ ಆರ್ಯೇತರರೊಡನೆ ಮುಕ್ತವಾಗಿ ಬೆರೆಯುತ್ತಿದ್ದರು. ಇರಾಣದಲ್ಲಿದ್ದಾಗ ಅಥರ್ವಣರು ಅಗ್ನಿಪೂಜಕರಿಗೂ, ಅಹುರ ಮಜ್ದ ಅಥವಾ ಅಸ್ಸರ್‌ಮಜಸ್ ಎಂದು ಸ್ವೀಕೃತವಾಗಿರುವ ವರುಣನ ಆರಾಧಕರಿಗೂ ಪುರೋಹಿತರಾಗಿದ್ದರು. ಅವೆಸ್ತನ್ ಜನಾಂಗದವರಿಗೆ ದೇವನು ಮಾನ್ಯವಾಗಿರಲಿಲ್ಲ. ಅಸುರರು ಮತ್ತು ದಾಶರ ಕೋಟೆಗಳ ಮೇಲೆ ಸಿಂಧು ಹಾಗೂ ಸರಸ್ವತೀ ನಾಗರಿಕತೆಗಳ ಮೇಲೆ ಪ್ರಭುತ್ವ ಸಾಧಿಸಿದ ಹಾಗೂ ಸಪ್ತಸಿಂಧು ಪ್ರದೇಶದ ಆರ್ಯರಿಗೆ ಪೂಜಾರ್ಹನೂ, ಪ್ರಮುಖ ದೇವನೂ ಆದ ಇಂದ್ರನು ಅವರಿಗೆ ಪ್ರಮುಖ ದೇವನಾಗಿರಲಿಲ್ಲ.

ಈ ಕುಲತ್ರಯದಲ್ಲಿ ಪ್ರಮುಖವಾಗಿ ಭಾರ್ಗವ ಕುಲದವರು ಅತ್ಯಂತ ಕ್ರಿಯಾಶೀಲರಾಗಿದ್ದರು. ಅವರು ಬಹುಶಃ ಸುಮೇರಿಯಾ ಮತ್ತು ಅಸ್ಸೀರಿಯಾದ ತನಕ ಸುದೀರ್ಘ ಪ್ರಯಾಣ ಮಾಡಿದ್ದರು. ಆಗ ಅವರಿಂದ ಅಲ್ಲಿಯ ವಾಮಾಚಾರ,

ಮಂತ್ರ-ತಂತ್ರ, ಇಂದ್ರಜಾಲ ಹಾಗೂ ಗುಪ್ತ ವಿದ್ಯೆಯನ್ನೂ ಕಲಿತರು. ಫಿನೀಶಿಯನ್ನರಿಂದ ನೌಕಾಯಾನ ಕೌಶಲ್ಯ, ಅನೇಕ ಹುಟ್ಟು-ಜಲ್ಲುಗಳಿರುವ ಸಮುದ್ರ ನೌಕೆಗಳ ಹಾಗೂ ಶೀಘ್ರಗಾಮೀ ಅಶ್ವರಥಗಳ ನಿರ್ಮಾಣ ಮಾಡುವ ಕಲೆಯಂಥ ಸಕಲ ಜ್ಞಾನವನ್ನೂ ಕಲಿತರು. ಮತ್ತು ಈ ಕಾಲಾವಧಿಯಲ್ಲಿ ಆ ದೇಶದವರಿಗೆ ತಮ್ಮ ಆಧ್ಯಾತ್ಮಿಕ ಹಾಗೂ ದೇವತಾ ವಿಷಯಕ ಜ್ಞಾನದ ಪ್ರಸಾರವನ್ನು ಮಾಡಿದರು. ಸುಕ್ತಂಕರರು ತಮ್ಮ "Bhrigus and Bharatas – A Historical Study" ಎಂಬ ಗ್ರಂಥದಲ್ಲಿ ಉಲ್ಲೇಖಿಸಿರುವ ಪ್ರಕಾರ ಈ ಸಕಲ ಜ್ಞಾನಗಳ ಕೌಶಲ್ಯವು ಭಾರ್ಗವರನ್ನು ಸರ್ವಜ್ಞರೂ, ಸರ್ವಶಕ್ತರೂ ಆದ ಅತಿಮಾನಸರನ್ನಾಗಿ ಮಾಡಿತು. ಅವರು ತಮ್ಮ ನಿಯಮನಿಷ್ಠ ಕಠಿಣ ವ್ರತಾಚರಣೆ ಹಾಗೂ ಮಾಂತ್ರಿಕ ಅಥವಾ ಆಧ್ಯಾತ್ಮಿಕ ಶಕ್ತಿಗಳಿಂದ ಆ ಕಾಣದ ದೇವರಿಗಿಂತ ಹೆಚ್ಚಾಗಿ ಇಲ್ಲಿ ಈ ಭೂಮಿಯ ಮೇಲೆ ಚಲಿಸುವ ದೇವರಂತೆ ಕಂಡರು. ಇಂಥ ಪರಸ್ಪರ ಪ್ರಭಾವದಿಂದ ತ್ರಿಲೋಕಸಂಚಾರೀ ನಾರದರು ಶ್ವೇತದ್ವೀಪಕ್ಕೆ ನೀಡಿದ ಸಂದರ್ಶನವು ಭಾರತಕ್ಕೆ ಪಾಂಚರಾತ್ರ ಆಗಮದ ತತ್ತ್ವಜ್ಞಾನ ದೊರಕುವಂತೆ ಮಾಡಿರಬಹುದು.

ಸುಕ್ತಂಕರರ ಪ್ರಕಾರ ಭಾರ್ಗವರು ಮಹಾಭಾರತದಲ್ಲಿ ಅನೇಕ ಪುರಾಣಕಥೆಗಳನ್ನು ಸೇರಿಸಿದರು.

"ಮಹಾಕಾವ್ಯವು (ಭಾರತಯುದ್ಧದ ವಿವರವಾದ ವರ್ಣನೆ ಮಾಡುವ 'ಜಯ' ಕಾವ್ಯ) ಇತಿಹಾಸದ ಒಂದು ಸಂದಿಗ್ಧ ಘಟ್ಟದಲ್ಲಿದ್ದಾಗ ಅದನ್ನು ಭೃಗುಗಳು (ಧರ್ಮ ಮತ್ತು ನೀತಿ-ಸಾರದ ವಿಶೇಷ ತಜ್ಞರು. ಬಹುಶಃ ವೈಷ್ಣವ ಸಿದ್ಧಾಂತದ ಕಡೆಗೆ ಒಲವನ್ನು ಬೆಳೆಸಿಕೊಂಡವರು.) ಕರಗತ ಮಾಡಿಕೊಂಡಿದ್ದರು. ಅವರಿಗೆ ಈ ಮಹಾಕಾವ್ಯವನ್ನು ಮನೋರಂಜಕ ಆಖ್ಯಾನಗಳೊಡನೆ ಲೋಕಶಿಕ್ಷಣ ಮತ್ತು ಆತ್ಮಕಲ್ಯಾಣದ ವಾಹಕವನ್ನಾಗಿ ಅಭಿವೃದ್ಧಿಪಡಿಸುವ ಯೋಜನೆಯಿತ್ತು."

ಡಾ. ಎಸ್. ಕೆ. ಚಟರ್ಜಿಯವರು ಈ ವಿಚಾರವನ್ನೇ ಅನುಮೋದಿಸಿದ್ದಾರೆ. "ಮಹಾಭಾರತದಲ್ಲಿ ಭರತ ಭಾರ್ಗವರ ಆಖ್ಯಾನವನ್ನು ಪ್ರಜ್ಞಾಪೂರ್ವಕವಾಗಿ ಅಷ್ಟೇ ಅಲ್ಲ, ಉದ್ದೇಶಪೂರ್ವಕವಾಗಿ ಹೆಣೆದು ಸೇರಿಸಿದ್ದಾರೆಂಬ ನಿರ್ಧಾರವನ್ನು ನಾವು ನಿಃಸಂಕೋಚವಾಗಿ ಹೇಳಬಹುದು".

ವೇದ ಎಂದರೆ ಇಡೀ ಜಗತ್ತಿನ ಸಾಮಾಜಿಕ, ಸಾಂಸ್ಕೃತಿಕ, ಲೌಕಿಕ ಮತ್ತು ಆಧ್ಯಾತ್ಮಿಕ ಸಂಸ್ಕಾರವನ್ನೊಳಗೊಂಡ ಚಿರಂತನ ಮತ್ತು ನಿರ್ವಿಕಾರ ಜ್ಞಾನ. ಈ ಜ್ಞಾನಕ್ಕೆ ವಿಭಿನ್ನ ದೇಶ- ಕಾಲಗಳಲ್ಲಿ ವ್ಯಕ್ತವಾದ ಯಾವುದೇ ವಿಕಾಸದ ಹಂತದಲ್ಲಿರುವ ವಿವಿಧ ಅಚೇತನ ಅಥವಾ ಸಚೇತನ ಜೀವಿಗಳೆಲ್ಲವೂ

ನಿಃಸಂಶಯವಾಗಿ ತಮ್ಮ ವ್ಯಾಪಕ ಹಾಗೂ ಸಮಷ್ಟಿಗತ ಸಂಕಲನವನ್ನು ನೀಡಿವೆ. ಅದನ್ನು ವಿಶ್ವವ್ಯಾಪಕ ಧರ್ಮ, ಚಿರಂತನ ತತ್ತ್ವ, ಸನಾತನ ಧರ್ಮ ಎಂದು ಹೇಳುವರು. ದ್ರಷ್ಟಾರರು ತಮ್ಮ ದಿವ್ಯದೃಷ್ಟಿಯಿಂದ ಅದನ್ನು ಕಂಡಿದ್ದಾರೆ. ಪುರುಷಪ್ರಯತ್ನವಿಲ್ಲದೆ ಆ ದಿವ್ಯ ಜ್ಞಾನಜ್ಯೋತಿಯ ಒಂದು ಖಂಡವನ್ನು ದಾಖಲಿಸಿದ್ದಾರೆ. ಅದು 'ಪುರುಷಪ್ರಯತ್ನ ವಿನಾ ಪ್ರಕಟಿತಭೂತ'.

ಬಹಳಷ್ಟು ದೇವತಾ ಸ್ತುತಿಗಳು ನಮಗೆ ಭಾರತದಲ್ಲಿ ಪ್ರವೇಶಿಸಿದ ಆರ್ಯರಿಂದ ಆನುವಂಶಿಕವಾಗಿ ಬಂದಿವೆ ಎಂಬುದರಲ್ಲಿ ಸಂಶಯವೇ ಇಲ್ಲ. ಅವುಗಳಲ್ಲಿ ಕೆಲವನ್ನು ಭಾರತೀಯ ಆರ್ಯರ ಪ್ರಭಾವದಲ್ಲಿ ಬಂದ ಆರ್ಯೇತರರೂ ಕಂಡಿದ್ದಾರೆ. ಅವು ವೈಯಕ್ತಿಕ ಹಾಗೂ ಭಾವನಾತ್ಮಕ ಗುಣವುಳ್ಳ ವ್ಯಕ್ತಿಯ ಅಭಿವ್ಯಕ್ತಿಗಳಾಗಿವೆ. ಅವು ಪ್ರಾರಂಭದಲ್ಲಿ ದ್ರಷ್ಟಾರನ ಪ್ರಾಕೃತಿಕ ಭಾಷೆಯಲ್ಲಿ ವ್ಯಕ್ತವಾಗಿವೆ. ಹೋರ್ನಲ್ಲರು ಸೂಚಿಸಿರುವ ಪ್ರಕಾರ, ಅವು ಪ್ರಾದೇಶಿಕ ಭಾಷಾ ಪ್ರಭೇದಗಳಾದ ಮಾಗಧೀ ಅಥವಾ ಶೌರಸೇನೀ ಪ್ರಾಕೃತ ರೂಪದಲ್ಲಿ ಇದ್ದಿರಬಹುದೆಂದು ಅನಿಸುತ್ತದೆ. ಕಾಲಾಂತರದಲ್ಲಿ, ಭಿನ್ನ-ಭಿನ್ನ ಸಾಮಾಜಿಕ ಪರಿಸರಕ್ಕೆ ಸೇರಿದ ಜನಾಂಗಗಳ ಸಮುದಾಯಗಳು ನೀಡಿರುವ ಸ್ತುತಿಗಳು ಹೇರಳವಾಗಿ ಒಟ್ಟುಗೂಡಿದವು. ಆದಿಕಾಲದ ಸ್ತುತಿಗಳು ಬಹಳಷ್ಟು ಹಳೆಯವೂ ಮಂದಗ್ರಾಹಿಯೂ ಆದವು. ಕಾಲಕ್ರಮೇಣ ವಿಪುಲ ಸಂಖ್ಯೆಯ ಸ್ತುತಿಗಳು ಭಾರತೀಯ ಜೀವನ ಮತ್ತು ತತ್ತ್ವಜ್ಞಾನವನ್ನು ಮಾನವನ ಮೇಧಾಶಕ್ತಿಯ ಸಮ್ಮಿಳಿತ, ಸಂಗ್ರಹಾತ್ಮಕ ನಿರಂತರತೆಯ ಸಂಕೇತವನ್ನಾಗಿ ರೂಪಿಸಿದ್ದರೂ, ಹೇರಳವಾಗಿ ಒಟ್ಟುಗೂಡಿರುವ ಸ್ತುತಿಗಳನ್ನು ಜ್ಞಾಪಿಸಿ ಕಂಠಪಾಠ ಮಾಡಿ ಪಠನ ಮಾಡುವುದೂ ದುಸ್ತರವಾಯಿತು.

ಈ ಸ್ತುತಿಗಳು ಆರ್ಯರ ನಿಗೂಢ, ಆಧ್ಯಾತ್ಮಿಕ ಹಾಗೂ ಸಾಂಸ್ಕೃತಿಕ ಸಂಪ್ರದಾಯಗಳ ಪವಿತ್ರತೆಯನ್ನು ಪಡೆದಿದ್ದವು. ಆದಕಾರಣ, ಇಂದ್ರಿಯಾತೀತ ಪ್ರಜ್ಞೆಯಿಂದ ಪ್ರಾಪ್ತವಾದ ಜ್ಞಾನರಾಶಿಗೆ ರುಜುವಾತನ್ನು ಒದಗಿಸುವ ಸಲುವಾಗಿ ಒಂದು ಅತ್ಯಂತ ಪರಿಪಕ್ವ, ವಿವೇಚನಾತ್ಮಕ, ಉದಾತ್ತ ಮತ್ತು ಸುಸಂಸ್ಕೃತ ಮಾಧ್ಯಮವೊಂದರ ಅಗತ್ಯವಿತ್ತು. ಈ ಉದ್ದೇಶವನ್ನು ಈಡೇರಿಸುವುದಕ್ಕಾಗಿ ದ್ವಾಪರಯುಗವು ಪದಾರ್ಪಣ ಮಾಡಿದಾಗ ಸಾಕಷ್ಟು ಸಂಸ್ಕಾರಗೊಂಡು ಉದಾತ್ತರೂಪ ತಳೆದ ಸಂಸ್ಕೃತ ಭಾಷೆಯನ್ನು ಕೃಷ್ಣ ದ್ವೈಪಾಯನರು ಬಳಸಿದರು. ಸ್ಮರಣಶಕ್ತಿ ಹಾಗೂ ಮೇಧಾಶಕ್ತಿಯ ಹ್ರಾಸವಾಗುತ್ತಿರುವುದರಿಂದ ಇಷ್ಟು ಅಗಾಧ ಸಂಖ್ಯೆಯ ಶ್ಲೋಕಗಳನ್ನು ಕಂಠಪಾಠ ಮಾಡುವ ಕ್ರಮವು ಮಾನವಮಾತ್ರರಿಗೆ

ಅಸಾಧ್ಯವಾಯಿತೆಂದು ಭಾವಿಸಿ ಅವರು ಕೆಲವು ಪ್ರಾತಿನಿಧಿಕ ಸ್ತುತಿಗಳನ್ನು ಅಗಾಧ ಶ್ಲೋಕಗಳ ರಾಶಿಯಿಂದ ಸಂಗ್ರಹಿಸಿ ಋಷಿಕುಲಕ್ಕೆ ಅನುಗುಣವಾಗಿ ಅವುಗಳನ್ನು ಬೇರೆ ಬೇರೆ ಮಂಡಲಗಳಲ್ಲಿ ಹಾಗೂ ಋಕ್, ಯಜುರ್, ಸಾಮ ಮತ್ತು ಅಥರ್ವಣ ಎಂಬ ನಾಲ್ಕು ವಿಭಾಗಗಳಲ್ಲಿ ವ್ಯವಸ್ಥಿತಗೊಳಿಸಿದರು. ಆದ್ದರಿಂದ ಅವರು ವೇದವಿಭಾಜಕ 'ವ್ಯಾಸ'ರು (ಸಂಯೋಜಕರು, ವ್ಯವಸ್ಥಾಪಕರು) ಎಂದು ಪ್ರಖ್ಯಾತರಾದರು.

ಭಾಷೆ ಸುಸಂಸ್ಕೃತವಾದುದರಿಂದ ವಿದ್ವತ್ತ ಮತ್ತು ಅರ್ಹತೆ ಇರುವ ಬುದ್ಧಿಯಿಂದ ಮಾತ್ರ ತಿಳಿಯಬಹುದಾದ ದೇವತಾ ಸ್ತುತಿಗಳು ಸಾಮಾನ್ಯರಿಗೆ, ಬ್ರಹ್ಮೋಪದೇಶದ ದೀಕ್ಷೆ ಪಡೆಯದವರಿಗೆ ಹಾಗೂ ಪಡೆಯುವ ಅರ್ಹತೆ ಇಲ್ಲದವರಿಗೆ ಅರ್ಥವಾಗುತ್ತಿರಲಿಲ್ಲ. ಇಷ್ಟೇ ಅಲ್ಲದೆ ವೈದಿಕ ಗ್ರಂಥಗಳು ಬಳಸಿಕೊಂಡ ಭಾಷೆ ಸಂಸ್ಕೃತವಾಗಿದ್ದರೂ ಅದನ್ನು ಆ ಹೆಸರಿನಿಂದ ಕರೆಯದೆ 'ಛಂದಸ್' ಎಂದು ಕರೆಯುತ್ತಿದ್ದರು. 'ಛಂದಯತಿ ಇತಿ ಛಂದಸ್'. ಛಂದಸ್ ಎಂದರೆ ಪ್ರಚ್ಛನ್ನ, ಮುಚ್ಚಿಕೊಂಡದ್ದು, ಗುಪ್ತ.

ಅರವಿಂದರು ಅಂಥ ಗೋಪ್ಯವಾಗಿಡುವ ಆವಶ್ಯಕತೆಯ ವಿವರಣೆಯನ್ನು ಹೀಗೆ ನೀಡುತ್ತಾರೆ.

"ನಮ್ಮ ಬಳಿಯಿರುವ ಋಗ್ವೇದವೇ ಮಾನವನ ಮೇಧಾಶಕ್ತಿಯ ಆದಿಕಾಲದ ಗಣನೀಯ ದಾಖಲೆಯಾಗಿದೆ. ಮಾನವ ಜನಾಂಗದಲ್ಲಿ ಅಧ್ಯಾತ್ಮಶಾಸ್ತ್ರ ಹಾಗೂ ಮಾನಸಶಾಸ್ತ್ರದ ಜ್ಞಾನಭಂಡಾರವು ಗುಪ್ತವಾಗಿದ್ದಾಗ ಗ್ರೀಸ್ ದೇಶದ ಚರಿತ್ರಾರ್ಹವಾದ ಎಲ್ಯೂಸಿನ್ ಮತ್ತು ಆರ್ಫ್ಯೂಸನ ಗುಪ್ತ ಕರ್ಮಾಚರಣೆಗಳೂ ಕ್ಷೀಣ ಅವಶೇಷಗಳಾದವು.......... ಆತ್ಮಜ್ಞಾನದ ಪಾವಿತ್ರ್ಯ ಮತ್ತು ಗೋಪ್ಯತೆ ಹಾಗೂ ದೇವತೆಗಳ ನೈಜ ಭಾಷೆಯೇ ಅಧ್ಯಾತ್ಮ ಯೋಗಿಗಳ ಪ್ರಧಾನ ತತ್ತ್ವವಾಗಿತ್ತು. ಅವರ ಆಲೋಚನೆಯ ಪ್ರಕಾರ ಆತ್ಮಜ್ಞಾನವು ಸಾಮಾನ್ಯ ಮಾನವನ ಬುದ್ಧಿಗೆ ಅಸಂಗತವೂ ಬಹುಶಃ ಅಪಾಯಕಾರಿಯೂ ಆಗಿದೆ. ಅಥವಾ ಅಸಂಸ್ಕೃತ, ಅಸಭ್ಯ ಪಾಮರರಿಗೆ ಆತ್ಮಜ್ಞಾನವನ್ನು ಪ್ರಕಟಪಡಿಸಿದರೆ, ಹೇಗೋ ವಿಕೃತ ಚಟುವಟಿಕೆ, ಅಪಪ್ರಯೋಗ ಹಾಗೂ ಮೌಲ್ಯಗಳ ಹಾನಿಗೂ ಕಾರಣವಾಗಬಹುದು. ಆದ್ದರಿಂದ ಅವರು ಪಾಮರರಿಗೆ ಬಾಹ್ಯಪೂಜೆಯ ಬದುಕು ಪರಿಪೂರ್ಣ ವಲ್ಲದಿದ್ದರೂ ಪರಿಣಾಮಕಾರಿಯಾಗಿದೆ ಎಂದು ಸಮರ್ಥಿಸಿದರು. .... ಬ್ರಹ್ಮೋಪದೇಶ ಪಡೆದವರಿಗೆ ಅಂತಃಶಿಸ್ತನ್ನು ವಿಧಿಸಿದರು. ಪ್ರಾಜ್ಞರಿಗೆ ಆಧ್ಯಾತ್ಮಿಕ ಹಾಗೂ ಲೌಕಿಕ ಅರ್ಥವೂ, ಸಾಮಾನ್ಯ ಭಕ್ತವೃಂದಕ್ಕೆ ಲೌಕಿಕ ಅರ್ಥವೂ

ವ್ಯಕ್ತವಾಗುವಂತೆ ತಮ್ಮ ಜ್ಞಾನವನ್ನು ಭಾಷೆ, ಶಬ್ದ ಹಾಗೂ ಪ್ರತಿಮೆಗಳ ಆಚ್ಛಾದನೆಯಲ್ಲಿ ಗುಪ್ತವಾಗಿಟ್ಟರು".

ಋಗ್ವೇದದ ದ್ರಷ್ಟಾರನೂ ಹೀಗೆ ಹೇಳುತ್ತಾನೆ.

"ವಸ್ತುಗಳಿಗೆ ನಾಮ ನಿರ್ದೇಶನ ಮಾಡಲು ಬಯಸಿದಾಗ ಮೊಟ್ಟ ಮೊದಲು ಸಕಲ ಉಕ್ತಿಗಳಿಗೆ ಆದಿಮೂಲವಾದ ವಾಕ್ ಶಕ್ತಿಯನ್ನು ಬೃಹಸ್ಪತಿಯ ಮೂಲಕ ಕಳುಹಿಸಲಾಯಿತು. ಆಗ ದಿವ್ಯ ಗುಹ್ಯ ಶಕ್ತಿಯೊಂದಿಗೆ ಅತ್ಯುತ್ತಮ ಹಾಗೂ ನಿಷ್ಕಳಂಕವಾದ ಮಾತು ಪರಾ, ಪಶ್ಯಂತೀ, ಮಧ್ಯಮಾ ಮತ್ತು ವೈಖರೀ ಎಂದು ನಾಲ್ಕು ವರ್ಗಗಳಾಗಿ ಪ್ರಕಟವಾಯಿತು. ಜ್ಞಾನಿಗಳು ಇದನ್ನು ಅರಿತಿರುವರು. ಮೊದಲಿನ ಮೂರು ವರ್ಗಗಳಲ್ಲಿ ಆಧ್ಯಾತ್ಮಿಕ ರಹಸ್ಯ ಅಡಕವಾಗಿದೆ. ಮಾನವನು ಸಾಮಾನ್ಯವಾಗಿ ನಾಲ್ಕನೆಯ ವರ್ಗವಾದ ವೈಖರಿಯಲ್ಲಿ ಮಾತನಾಡುತ್ತಾನೆ."

'ಬೃಹದ್ದೇವತಾ' ಹೀಗೆ ನಿರ್ದೇಶಿಸುತ್ತದೆ.

ಋಕ್ಕುಗಳ ನಿಜವಾದ ಅರ್ಥವನ್ನು ಅರಿತವನು ಮಾತ್ರ ದಿವ್ಯ ತೇಜೋಮಯ ದೇವರನ್ನು ಅರಿಯಬಲ್ಲ. 'ಋಚೋ ಹ ಯೋ ವೇದ ಸ ವೇದ ದೇವಾನಾಂ' ದೇವರನ್ನು ಅರಿಯದ ಮೂಢರಿಗೆ ಋಕ್ಕುಗಳು ಹೇಗೆ ನೆರವಾಗಬಲ್ಲವು? 'ಋಚೋ ಅಕ್ಷರೇ ಪರಮೇ ವ್ಯೋಮನ್ ಯಸ್ಮಿನ್ ದೇವಾಧಿ ವಿಶ್ವೇ ನಿಷೇದುಃ। ಯಸ್ತನ್ನ ವೇದ ಕಿಂ ಋಚಾ ಕರಿಷ್ಯತಿ।' ಯಾಸ್ಕನು ಅಂಥವರಿಗೆ ಭಾರವನ್ನು ಹೊರುವ ಕಂಬಗಳೆಂದು ಕಡೆಗಣಿಸುತ್ತಾನೆ. 'ಸ್ಥಾಣುರಾಯಂ ಭಾರಹಾರಾಃ।' ವೇದಗಳ ವಿಷಯವೂ ಛಂದೋರೂಪವೂ ನಿಗೂಢವಾದ ಕಾರಣ ಅವು ಬ್ರಹ್ಮೋಪದೇಶ ಪಡೆಯದವರ ಬುದ್ಧಿಗೆ ಸುಲಭವಾಗಿ ನಿಲುಕದಿರುವುದರಿಂದ ಶಿಕ್ಷಾ (ಉಚ್ಚಾರಣ ಶಾಸ್ತ್ರ), ಕಲ್ಪ (ಕರ್ಮಕಾಂಡ), ವ್ಯಾಕರಣ, ನಿರುಕ್ತ (ಶಬ್ದ ನಿಷ್ಪತ್ತಿ), ಛಂದಸ್ಸು ಮತ್ತು ಜ್ಯೋತಿಷ ಎಂಬ ಆರು ವೇದಾಂಗಗಳನ್ನು ಸಹಾಯಕ ಗ್ರಂಥಗಳನ್ನಾಗಿ ಒದಗಿಸಲಾಯಿತು.

ಮೇಲ್ನೋಟಕ್ಕೆ ಋಗ್ವೇದ ಮತ್ತು ಅನಂತರದ ಬ್ರಾಹ್ಮಣ ಗ್ರಂಥಗಳಲ್ಲಿರುವ ಘಟನೆಗಳು ಪ್ರಮುಖವಾಗಿ ಆರ್ಯ – ಆರ್ಯೇತರ ಜನಾಂಗಗಳ ನಡುವಿನ ಘರ್ಷಣೆಯ ವಿವರಣೆಯೆಂದು ಕಂಡುಬರುತ್ತದೆ. ಆದರೆ ಸೂಕ್ಷ್ಮವಾಗಿ ಪರೀಕ್ಷಿಸಿದರೆ ಅವು ಜ್ಞಾನಿಗಳು ಹಾಗೂ ಅಜ್ಞಾನಿಗಳ ತಂಡದ ನಡುವಿನ ಘರ್ಷಣೆಯ ಪ್ರಯೋಗಗಳ ಮೂಲಕ ನಿರೂಪಿಸಿ ವಿವರಿಸಲೋಸುಗ ಸಾಂಕೇತಿಕ ವಿವರಣೆ ಹಾಗೂ ಸೂಚನೆಗಳಾಗಿ ಬಳಸಲ್ಪಟ್ಟಿವೆ ಎಂದು ಅರಿವಾಗುತ್ತದೆ. ಅದೇನೇ ಇದ್ದರೂ

ಲೌಕಿಕ ಕುರುಹುಗಳು ಪುರಾತತ್ತ್ವಶಾಸ್ತ್ರದ ಸಂಶೋಧನೆಗೆ ಸಹಾಯಕವಾಗಿವೆ. ವಿಶೇಷವಾಗಿ ಯಥೇಷ್ಟ ಹಾಗೂ ಪರಿಣಾಮಕಾರೀ ಸ್ಪಷ್ಟತೆಯುಳ್ಳ ಸಿಂಧು ಮತ್ತು ಸರಸ್ವತೀ ನಾಗರಿಕತೆಗಳು ಘಟನಾವಳಿಯ ಐತಿಹಾಸಿಕತೆಯ ವಿಷಯದಲ್ಲಿ ತುಂಬ ನೆರವಾಗಿವೆ.

ಕ್ಷತ್ರಿಯರಾದ ವೃದ್ಧಶ್ರವಸ್, ದಿವೋದಾಸ, ಪಿಜವನ, ಮತ್ತು ಸುದಾಸರಂಥವರ ರಾಜಾಶ್ರಯದಲ್ಲಿ ಬ್ರಾಹ್ಮಣ ಪುರೋಹಿತರಾಗಿ ವಸಿಷ್ಠ, ಗ್ರಸ್ತಮದ, ಕಣ್ವ, ದೀರ್ಘತಮ ಮತ್ತು ವಿಶ್ವಾಮಿತ್ರರಿದ್ದರು. ಅಂದು ಈ ಭರತಕುಲದವರು ಪಂಜಾಬದ ಸಮತಲ ಪ್ರದೇಶದಲ್ಲಿದ್ದಾಗ ಈ ಪ್ರದೇಶಕ್ಕೆ ಸಪ್ತಸಿಂಧವಃ ಎಂದು ಕರೆಯುತ್ತಿದ್ದರು. ಪುರೂರವ, ಆಯು, ನಹುಷ, ಯಯಾತಿ ಮತ್ತು ಅವರ ಐವರು ಪುತ್ರರಾದ ಪುರು, ಅನು, ತುರ್ವಸು, ದ್ರುಹ್ಯ ಮತ್ತು ಯದು ಇಂಥ ಪೌರವಕುಲದ ಕ್ಷತ್ರಿಯ ರಾಜರು ಸರಸ್ವತೀ ತೀರದಲ್ಲಿ ಮತ್ತು ನೆರೆಹೊರೆಯ ಪ್ರದೇಶಗಳಲ್ಲಿ ವಾಸಿಸುತ್ತಿದ್ದರು.

ಭರತ ಹಾಗೂ ಪೌರವ ಕುಲದವರು ಅಥರ್ವ - ಅಂಗಿರಸ - ಭಾರ್ಗವರನ್ನು ಪ್ರಾಚೀನ ದ್ರಷ್ಟಾರರೆಂದು ಗೌರವ ಸಲ್ಲಿಸಿದರೂ ಅವರೊಡನೆ ನಿಕಟ ಸಂಪರ್ಕವನ್ನು ಹೊಂದಿರಲಿಲ್ಲ. ಅವರ ಸಾಮೀಪ್ಯವು ಯಕ್ಷಿಣೀ ವಿದ್ಯೆ, ವಾಮಾಚಾರ, ನೌಕಾ ನಿರ್ಮಾಣ ಕಲೆಯಲ್ಲಿ ಪರಿಣತರಾಗಿದ್ದ ಆರ್ಯೇತರ ಜನಾಂಗದವರೊಡನೆ ವಿಶೇಷವಾಗಿ ಭಾರ್ಗವರೊಡನೆ ಇತ್ತು. ಹೀಗಿರುವುದರಿಂದ ಅವರು ಸಪ್ತಸಿಂಧು ಪ್ರದೇಶದಲ್ಲಿ ನೆಲೆಸಿದ ಇನ್ನೊಂದು ಆರ್ಯ ಜನಾಂಗದ ಮುಖ್ಯ ವಾಹಿನಿಯಿಂದ ದೂರವಿದ್ದರು. ದೀರ್ಘಕಾಲದ ತನಕ ಅವರ ಪವಿತ್ರ ಗ್ರಂಥವಾದ ಅಥರ್ವವೇದಕ್ಕೆ ಋಕ್, ಯಜುರ್, ಸಾಮವೇದಗಳಿಗೆ ಕೊಟ್ಟ ಮಾನ್ಯತೆಯನ್ನೂ ಕೊಟ್ಟಿರಲಿಲ್ಲ. ಮೊದಲ ಮೂರು ವೇದಗಳಿಗೆ ಮಾತ್ರ ತ್ರಯೀವಿದ್ಯಾ ಎಂದು ಗೌರವಿಸುತ್ತಿದ್ದರು. ಅಥರ್ವವೇದವನ್ನು 'ಕ್ಷಾತ್ರಂ' ಎನ್ನುತ್ತಿದ್ದರು. ನಂತರದ ದಿನಗಳಲ್ಲಿ ಅಥರ್ವವೇದಕ್ಕೆ ಚತುರ್ಥ ವೇದಗ್ರಂಥವೆಂಬ ಮಾನ್ಯತೆ ದೊರೆಯಿತು. ಭೃಗು ಮತ್ತು ಅಂಗಿರಸರು ಅಗ್ನಿಯನ್ನು ಸ್ವರ್ಗದಿಂದ ತರಿಸಿ ಬ್ರಹ್ಮಾವರ್ತದಲ್ಲಿ ಸ್ಥಾಪಿಸಿದ ಶ್ರೇಯಸ್ಸನ್ನು ಪಡೆದರು. ತನ್ನಿಮಿತ್ತವಾಗಿ ಬ್ರಹ್ಮಾವರ್ತವು ಯಜ್ಞ-ಯಾಗಗಳನ್ನು ನೆರವೇರಿಸಲು ದೈವೇಚ್ಛೆಯಿಂದ ನಿರ್ಧರಿಸಲ್ಪಟ್ಟ ಸ್ಥಳವಾಯಿತು. ಆದಕಾರಣ ಅಲ್ಲಿ ವಾಸಿಸುವ ಜನರು ಕೂಡ ಉದಾತ್ತ ಸ್ವಭಾವದವರೂ, ವ್ರತನಿಷ್ಠರೂ ಆದರು. ಅಥರ್ವಣರು ಮತ್ತು ಅಂಗಿರಸರು ನಂತರದ ಕಾಲದಲ್ಲಿ, ತಮ್ಮ ವಸತಿಯನ್ನು ಬ್ರಹ್ಮಾವರ್ತಕ್ಕೆ ಸ್ಥಳಾಂತರಿಸಿದಾಗ ಭಾರ್ಗವರು ಪಶ್ಚಿಮ

ಕರಾವಳಿಯ ಭೃಗುಕಚ್ಛದಲ್ಲಿ ತಮ್ಮ ವಾಸ್ತವ್ಯವನ್ನು ಮುಂದುವರಿಸಿದರು. ಆರ್ಯೇತರ ಸಮುದಾಯದ ಪ್ರಧಾನ ಪುರೋಹಿತರೂ, ಪೌರವರೊಡನೆ ವೈವಾಹಿಕ ಸಂಬಂಧ ಉಳ್ಳವರೂ ಆದ ಶುಕ್ರಾಚಾರ್ಯರು ಹಾಗೂ ಋಗ್ವೇದದಲ್ಲಿ ಹೆಸರಾಂತ ಮುನಿಗಳಾದ ಚ್ಯವನರು ಈ ಎರಡು ಗುಂಪುಗಳನ್ನು ಮುಂದಿನ ತಲೆಮಾರುಗಳಲ್ಲಿ ಒಂದುಗೂಡಿಸಿದರು.

ಸರಸ್ವತೀ ನದಿಯು ಭೂಮಿಯ ಮೇಲಿಂದ ಅದೃಶ್ಯವಾಗತೊಡಗಿದಾಗ, ಸಿಂಧ ಮತ್ತು ರಾಜಸ್ಥಾನಗಳು ಮರುಭೂಮಿಯಾಗತೊಡಗಿದವು. ಸಿಂಧೂ ಮತ್ತು ಸರಸ್ವತೀ ನಾಗರಿಕತೆಗಳು ನಷ್ಟವಾದವು. ಅಲ್ಲಿರುವ ಆರ್ಯರೂ, ಅನಾರ್ಯರೂ ಬಹುಮಟ್ಟಿನ ವಲಸೆ ಹೋಗುವುದಕ್ಕೆ ಕಾರಣವಾಯಿತು. ಜಯಶೀಲರಾದ ಆರ್ಯರು, ಅನಾರ್ಯರ ಉದ್ಯಮವನ್ನೂ, ಅವರ ಸಂಕಲ್ಪ ಶಕ್ತಿಯನ್ನೂ ನಾಶಪಡಿಸಿದ್ದರಿಂದ ಅನಾರ್ಯರು ವಿಂಧ್ಯ ಪರ್ವತ ಶ್ರೇಣಿಯನ್ನು ದಾಟಿ, ದಕ್ಷಿಣ ಭಾರತದ ಅಪರಿಚಿತ ಪ್ರದೇಶದತ್ತ ಹೋದರು. ಹೀಗೆ ಭೂಖಂಡದ ನಾಲ್ದೆಸೆಗೂ ಚದುರಿಹೋದರು. ವಿದೇಘ ಮಾಥವನ ನೇತೃತ್ವ ಹಾಗೂ ಗೋತಮ ಋಷಿಯ ಮಾರ್ಗದರ್ಶನದಲ್ಲಿ ಸ್ವತಃ ಆರ್ಯರೇ ಗಂಗಾನದಿಯ ಉತ್ತರ ದಂಡೆಗುಂಟ ಪೂರ್ವದ ಕಡೆಗೆ ಇಂದಿನ ಉತ್ತರಪ್ರದೇಶದ ಸದಾನೀರಾ (ಆಧುನಿಕ ಗಂಡಕೀ) ನದಿಯನ್ನು ತಲಪುವ ತನಕ ವಲಸೆ ಹೋದರು. ಇಕ್ಷ್ವಾಕುವು ಅಯೋಧ್ಯೆಯನ್ನು ರಾಜಧಾನಿಯನ್ನಾಗಿಸಿ ಕೋಸಲ ರಾಜ್ಯದಲ್ಲಿ ತನ್ನ ವಸಾಹತನ್ನು ಸ್ಥಾಪಿಸಿದನು. ಅವನ ಜ್ಯೇಷ್ಠ ಪುತ್ರನಾದ ವಿಕುಕ್ಷಿಯು, ಅವನ ನಂತರ ಕೋಸಲ ರಾಜ್ಯವನ್ನು ಆಳುತ್ತಿರುವಾಗ ಅವನ ದ್ವಿತೀಯ ಪುತ್ರನಾದ ನಿಮಿಯು ಸದಾನೀರಾ ನದಿಯ ಆಚೆಯ ದಡದಲ್ಲಿರುವ ವಿದೇಹ ಎಂಬ ವಸಾಹತನ್ನು ಸ್ಥಾಪಿಸಿದನು. ತನ್ನ ಮಗನಾದ ಮಿಥಿಯ ಹೆಸರಿನಲ್ಲಿ ನಗರಕ್ಕೆ ಮಿಥಿಲಾ ಎಂಬ ಹೆಸರನ್ನಿಟ್ಟನು. (ಮಿಥಿಲಾ ಅಥವಾ ಈಗಿನ ಜನಕಪುರ) ಮಿಥಿಲೆಯನ್ನೇ ತನ್ನ ರಾಜಧಾನಿ ಯನ್ನಾಗಿಸಿದನು. ನಂತರದಲ್ಲಿ ಬಂದ ವಿದೇಹದ ಎಲ್ಲ ದೊರೆಗಳು ಜನಕರೆಂದೇ ಖ್ಯಾತರಾದರು. ಉಪನಿಷತ್ಕಾಲದಲ್ಲಿ ಸೀತೆಯ ತಂದೆಯಾದ ಜನಕ ಮಹಾರಾಜನು ತನ್ನ ಜ್ಞಾನಕ್ಕಾಗಿ ಪ್ರಖ್ಯಾತನಾಗಿದ್ದನು. ತೃತೀಯ ಪುತ್ರನಾದ ದಂಡನು ದೂರ ಪ್ರದೇಶದಲ್ಲಿರುವ ದಂಡಕದಲ್ಲಿ ತನ್ನದೇ ವಸಾಹತನ್ನು ಸ್ಥಾಪಿಸಿದನು. ನಂತರದ ಕಾಲದಲ್ಲಿ, ಚ್ಯವನ ಋಷಿಯು ರಾಜನಿಗಿತ್ತ ಶಾಪದಿಂದ ಅದು ದಂಡಕಾರಣ್ಯ ಎಂಬ ದುರ್ಗಮ ಅರಣ್ಯವಾಯಿತು. ಭರತ ಕುಲದ ಆರ್ಯರು ಪೂರ್ವದಿಕ್ಕಿನತ್ತ ವಲಸೆ ಹೋದರು. ಅಂತೆಯೇ ಪೌರವ ಕುಲದ ಆರ್ಯರು, ಭಾರ್ಗವರು ಮತ್ತು ದಾನವರ ನಿಕಟ ಸಂಪರ್ಕದ ನಿಮಿತ್ತವಾಗಿ, ಭಾರತದ ನೈಋತ್ಯ ಪ್ರದೇಶಗಳ

ಕಡೆಗೆ ವಲಸೆ ಹೋಗಲು ಪ್ರಾರಂಭಿಸಿದರು. ಇನ್ನೂ ಮುಂಚೆಯೇ 'ದಾಶರಾಜ್ಞ' ಎಂಬ ಯುದ್ಧ ಮುಗಿದ ತಕ್ಷಣ, ಯಯಾತಿಯು ತನ್ನ ಸಾಮ್ರಾಜ್ಯವನ್ನು ತನ್ನ ಐವರು ಪುತ್ರರಿಗೆ ವಿಭಜಿಸಿ ಕೊಟ್ಟನು. ಅವನ ಪ್ರಿಯ ಪುತ್ರನಾದ ಪುರುವಿಗೆ ಮಧ್ಯದೇಶದ ರಾಜ್ಯಾಧಿಕಾರ ಸಿಕ್ಕಿತು. ಗಂಗಾ-ಯಮುನಾ ನದಿಗಳ ನಡುವಿನ ದೋಆಬದ ದಕ್ಷಿಣಾರ್ಧವು 'ಮಧ್ಯದೇಶ' ಆಗಿತ್ತು. ರೇವಾದ ಸುತ್ತಲಿನ ನೈಋತ್ಯ ಭಾಗವು ತುರ್ವಸುಗೆ ದೊರಕಿತು. ದ್ರುಹ್ಯುವಿಗೆ ಸಿಕ್ಕ ಪ್ರದೇಶವು ಚಂಬಲ್ ನದಿಯ ಉತ್ತರ ಭಾಗವೂ, ಯಮುನಾ ನದಿಯ ಪಶ್ಚಿಮ ದಿಕ್ಕಿನ ಆಗ್ನೇಯ ಭಾಗವೂ ಆಗಿತ್ತು. ಅನುಗೆ ಗಂಗಾ-ಯಮುನಾ ದೋಆಬ ಪ್ರದೇಶಗಳ ಉತ್ತರಭಾಗ ಸಿಕ್ಕಿತು. ಯದುವಿಗೆ ಚಂಬಲ್ ನದಿಯ ಆವೃತ ಪ್ರದೇಶ ಸಿಕ್ಕಿತು.

ಅಥರ್ವಣ ಮತ್ತು ಅಂಗಿರಸ ಕುಲದವರು ಬ್ರಹ್ಮಾವರ್ತದಲ್ಲಿ ನೆಲೆಸಬೇಕೆಂದು ಹೊರಟಾಗ, ಭೃಗುಕುಲದವರು ಭೃಗುಕಚ್ಛ (ಈಗಿನ ಭರೂಚ) ಎಂಬ ಪ್ರದೇಶದಲ್ಲಿ ನೆಲೆಸಬೇಕೆಂದು ಹೊರಟುನಿಂತರು. ಅಂಗಿರ ಕುಲದ ದಧೀಚಿ ಋಷಿಯ ಪುತ್ರನಾದ ಸಾರಸ್ವತ ಋಷಿಯ ಜನ್ಮ ವಿವರದ ದಾಖಲೆ ಮಹಾಭಾರತದಲ್ಲಿದೆ. ಸಾರಸ್ವತ ಸಮಾಜವು ಈ ಸಾರಸ್ವತ ಋಷಿಗೆ ತನ್ನ ನಿಷ್ಠೆಯನ್ನು ಸಲ್ಲಿಸುತ್ತದೆ. ಒಮ್ಮೆ ದಧೀಚಿ ಋಷಿಯು ಸರಸ್ವತೀ ನದೀತೀರದಲ್ಲಿ ಕಠೋರ ತಪಶ್ಚರ್ಯೆಯಲ್ಲಿ ತೊಡಗಿರುವಾಗ, ಇಂದ್ರನು ಅವನ ಉಗ್ರ ತಪಸ್ಸಿಗೆ ದಿಗಿಲುಗೊಂಡನು. ಅವನ ತಪೋಭಂಗಕ್ಕಾಗಿ ದೇವಲೋಕದ ಅಪ್ಸರೆಯಾದ ಅಲಂಬುಷಾಳನ್ನು ಕಳುಹಿಸಿಕೊಟ್ಟನು. ಅವಳನ್ನು ನೋಡಿದ ಋಷಿಯು ಮೋಹಪರವಶನಾದ. ಅವನ ಮನೋನಿಗ್ರಹ ತಪ್ಪಿ ವೀರ್ಯಸ್ಖಲನವಾಯಿತು. ಸನಿಹದಲ್ಲೇ ಹರಿಯುತ್ತಿರುವ ಸರಸ್ವತೀ ನದಿಯು ಅದನ್ನು ತನ್ನ ಗರ್ಭದಲ್ಲಿ ಸಂಗ್ರಹಿಸಿಕೊಂಡು ಓರ್ವ ಪುತ್ರನನ್ನು ಪ್ರಸವಿಸಿದಳು. ನದಿಯ ಈ ಉದಾತ್ತ ಕರ್ಮದಿಂದ ಸಂಪ್ರೀತನಾದ ದಧೀಚಿಯು ಸರಸ್ವತಿಗೆ ಹೀಗೆ ವರ ನೀಡಿದನು.

"ನಿನ್ನ ಪುತ್ರನು ಇನ್ನು ಮುಂದೆ ಸಾರಸ್ವತನೆಂದು ಲೋಕವಿಖ್ಯಾತನಾಗಿ ಮಹಾನ್ ತಪಸ್ವಿಯೂ ಜ್ಞಾನ (ಪ್ರಯೋಗಸಿದ್ಧ ಜ್ಞಾನ) ಮತ್ತು ವಿಜ್ಞಾನ (ದಿವ್ಯ ಜ್ಞಾನ)ದಲ್ಲಿ ಪರಿಣತನೂ ಆಗುವನು." ಆರ್ಯಾವರ್ತವು ಮುಂದಿನ ದಿನಗಳಲ್ಲಿ ಅನಾವೃಷ್ಟಿಯಿಂದ ಬರಗಾಲವನ್ನು ಎದುರಿಸುತ್ತಿದ್ದಾಗ ಬ್ರಾಹ್ಮಣರು ಬ್ರಹ್ಮಾವರ್ತವನ್ನು ತ್ಯಜಿಸಲು ಸಜ್ಜಾದರು. ಸಾರಸ್ವತ ಋಷಿಯೂ ಸಾಮೂಹಿಕ ನಿರ್ಗಮನ ತಂಡದಲ್ಲಿ ಸೇರಿಕೊಳ್ಳಬೇಕೆಂದು ಅಣಿಯಾಗುತ್ತಿದ್ದಾಗ, ಮಾತೆ ಸರಸ್ವತಿಯು ಪ್ರತ್ಯಕ್ಷಳಾಗಿ ಹೀಗೆ ಪ್ರಾರ್ಥಿಸಿಕೊಂಡಳು. "ಬ್ರಹ್ಮಾವರ್ತವನ್ನು ಬಿಡಬೇಡ. ಇಲ್ಲಿಯೇ

ಉಳಿದು ವೇದಜ್ಞಾನವನ್ನು ರಕ್ಷಿಸು."

ಬರಗಾಲ ಕೊನೆಗೊಂಡ ಬಳಿಕ ವೇದಪಾಠವನ್ನೇ ಮರೆತ ಬ್ರಾಹ್ಮಣರು ಬ್ರಹ್ಮಾವರ್ತಕ್ಕೆ ಹಿಂದಿರುಗಿದರು. ಸಾರಸ್ವತ ಋಷಿಗಳು ಅವರಿಗೆ ಇನ್ನೊಮ್ಮೆ ಜ್ಞಾನದೀಕ್ಷೆ ನೀಡಿದರು. ಆದ್ದರಿಂದಲೇ, ಸಾರಸ್ವತ ಸಮುದಾಯದವರು ಸಾರಸ್ವತ ಋಷಿಯನ್ನು ತಮ್ಮ ಆಶ್ರಯದಾತರೆಂದೂ, ಗೋಮಂತಕದಲ್ಲಿ ತಮ್ಮ ಪ್ರಥಮ ವಸಾಹತು ಸ್ಥಾಪನೆಗೆ ಕಾರಣರಾದ ಪರಶುರಾಮ ಭಾರ್ಗವರಿಗೆ ತಮ್ಮ ಸಂರಕ್ಷಕರೆಂದೂ ಮನ್ನಿಸುತ್ತ ಅವರಿಗೆ ಋಣಿಯಾಗಿದ್ದಾರೆ.

ಯಯಾತಿಯು ತನ್ನ ಮಗ ಯದುವಿಗೆ ಚಂಬಲನದಿಯ ಸುತ್ತಲಿನ ಕ್ಷೇತ್ರವನ್ನು ಒಪ್ಪಿಸಿದ ಬಳಿಕ, ಅವನ ವಂಶಜರು ಮುಂದಿನ ದಿನಗಳಲ್ಲಿ ಆ ಪ್ರದೇಶದಲ್ಲಿರುವ ರಾಕ್ಷಸೀ ಶಕ್ತಿಯನ್ನು ನಾಶಗೊಳಿಸಿ, ತಮ್ಮ ಆಡಳಿತವನ್ನು ಗುಜರಾತ, ಸೌರಾಷ್ಟ್ರದ ತನಕ ವಿಸ್ತರಿಸಿಕೊಂಡರು. ಯದುವಿಗೆ ಕ್ರೋಷ್ಟ್ರಿ ಮತ್ತು ಸಹಸ್ರಜಿತ್ ಎಂಬ ಈರ್ವರು ಪುತ್ರರಿದ್ದರು. ಅವರ ಪ್ರಧಾನ ಪುರೋಹಿತರೇ ಭಾರ್ಗವರು. ಕ್ರೋಷ್ಟ್ರಿಯು ಅಯೋಧ್ಯೆಯ ಸಗರನೊಡನೆ ಶಾಂತಿ-ಸಂಧಾನ ಮಾಡಿಕೊಂಡ ಬಳಿಕ, ತಾತ್ಕಾಲಿಕವಾಗಿ ವಿದರ್ಭದಲ್ಲಿ ಬಂದು ನೆಲೆಸಿದ. ಸಗರನ ಸಾವಿನ ಬಳಿಕ, ಅವನ ವಂಶಜರು ತಾವು ಕಳೆದುಕೊಂಡ ವಿದರ್ಭದ ಹೆಚ್ಚಿನ ಪ್ರದೇಶಗಳನ್ನು ಪುನಃ ಸ್ವಾಧೀನಪಡಿಸಿಕೊಂಡರು. ಈ ರಾಜವಂಶದ ಕೃತಭೀಮನಿಗೆ ನಾಲ್ವರು ಪುತ್ರರಿದ್ದರು. ಅವರಲ್ಲಿ ಒಬ್ಬನಾದ ಅಂಧಕನು ಮಥುರೆಯನ್ನು ಆಳಿದನು. ಅವನ ಮಗ ಕುಕುರನು ಉಗ್ರಸೇನನ ತಂದೆಯಾಗಿದ್ದ. ಉಗ್ರಸೇನನ ಮಗಳು ದೇವಕಿ. ದೇವಕಿಯ ಮಗ ಕೃಷ್ಣ. ಅವನು ಉಗ್ರಸೇನನ ಮೊಮ್ಮಗ, ಉಗ್ರಸೇನನ ಮಗ ಕಂಸನೇ ತಂದೆಯನ್ನು ಸಿಂಹಾಸನದಿಂದ ಪದಚ್ಯುತಗೊಳಿಸಿ ತಾನು ರಾಜನಾಗಿದ್ದಾಗ ಕೃಷ್ಣನು ಅವನ ವಧೆ ಮಾಡಿದ್ದ. ಇದು ಮಗಧ ದೊರೆ ಜರಾಸಂಧನನ್ನು ಸಿಟ್ಟಿಗೆಬ್ಬಿಸಿತು. ಅವನ ಮಗಳನ್ನು ಅವನಿಗೆ ಮದುವೆ ಮಾಡಿ ಕೊಡಲಾಗಿತ್ತು. ಜರಾಸಂಧನು ಮಥುರೆ ಮತ್ತು ಗೋಕುಲದ ಪ್ರಜೆಗಳನ್ನು ಪೀಡಿಸತೊಡಗಿದಾಗ ಕೃಷ್ಣನು ಭಾರತದ ಪಶ್ಚಿಮತೀರಕ್ಕೆ ಸ್ಥಳಾಂತರಿಸಿ ತನ್ನ ರಾಜ್ಯವನ್ನು ಸೌರಾಷ್ಟ್ರದಲ್ಲಿ ಸ್ಥಾಪಿಸಿದ. ತನ್ನ ಪ್ರೀತಿಪಾತ್ರರಿಗೆ ಕುರುಜಾಂಗಲ, ಪಾಂಚಾಲ, ಶೂರಸೇನ ಪ್ರದೇಶಗಳನ್ನೂ ದಾಟಿ ಯಮುನಾ ನದಿಯ ದಂಡೆಗುಂಟ ಮುಂದುವರಿದು ಬ್ರಹ್ಮಾವರ್ತಕ್ಕೆ ಬಂದು ತಲಪಿದ. ತದನಂತರ ಕುರುಕ್ಷೇತ್ರ ಮತ್ತು ಮತ್ಸ್ಯರಾಜ್ಯ, ಸಾರಸ್ವತ ಪ್ರದೇಶ (ಬಹುಶಃ ರಾಜಸ್ಥಾನ), ಮರುಧನ್ವನ ಪ್ರದೇಶವನ್ನೂ ದಾಟಿ ಸೌರಾಷ್ಟ್ರಕ್ಕೆ ಬಂದು ತಲಪಿದ. ಸುವೀರ ಮತ್ತು ಅಭೀರ

ಪ್ರದೇಶಗಳನ್ನೂ ದಾಟಿ ಆನರ್ತ (ಸೌರಾಷ್ಟ್ರ)ಕ್ಕೆ ಬಂದ. ದ್ವಾರಕೆಯನ್ನು ತನ್ನ ನೂತನ ರಾಜಧಾನಿಯನ್ನಾಗಿಸಿ ತನ್ನ ರಾಜ್ಯದ ಸ್ಥಾಪನೆ ಮಾಡಿಕೊಂಡ. ಯಾದವರಿಗೆ ಸಾರಸ್ವತರೊಡನೆ ಹೆಚ್ಚು ಸಂಪರ್ಕ ಇಲ್ಲದಿದ್ದರೂ ಭಾಗವತ ಪುರಾಣದಲ್ಲಿ (1.10) ಗೋಮಂತ ಗಿರಿಗೆ ಭೇಟಿ ನೀಡಿದ ಪ್ರಸ್ತಾಪ ಬರುತ್ತದೆ. ಜರಾಸಂಧನ ಪೀಡೆಯನ್ನು ಸಹಿಸಲು ಸಾಧ್ಯವಾಗದೆ ಕೃಷ್ಣನು ಗೋಮಂತ ಗಿರಿಗೂ ಹೋಗಿದ್ದ. ಇದೆಲ್ಲವೂ ದ್ವಾಪರಯುಗದ ಅಂತ್ಯಕಾಲದಲ್ಲಿ ಜರುಗಿದ ಪ್ರಸಂಗ.

ಯದುವಿನ ಇನ್ನೊಬ್ಬ ಮಗ ಸಹಸ್ರಜಿತ್, ಹೆಚ್ಚು ವ್ಯವಹಾರ ಕುಶಲನಾಗಿದ್ದ. ಅವನ ಹೈಹಯ ಕುಲ ಪಶ್ಚಿಮಭಾಗದ ಕರಾವಳಿಯಲ್ಲಿ ಆಡಳಿತ ನಡೆಸುತ್ತಿತ್ತು. ಅವನ ಮಗನಾದ ಮಾಹಿಷ್ಮಂತನು ಕಾರ್ಕೋಟಕ ನಾಗನನ್ನು ಆ ಪ್ರದೇಶದಿಂದ ಓಡಿಸಿ ನರ್ಮದಾ ನದೀತೀರದ ಮಾಹಿಷ್ಮತೀ ಎಂಬಲ್ಲಿ ತನ್ನ ರಾಜಧಾನಿಯನ್ನು ಸ್ಥಾಪಿಸಿದನು. ಚ್ಯವನ ಭಾರ್ಗವನು ಅವನ ಪುರೋಹಿತನೂ, ಸಲಹೆಗಾರನೂ ಆಗಿದ್ದ. ಹೈಹಯರು ತೀವ್ರಗಾಮೀ ಅಶ್ವರಥಗಳನ್ನೂ, ಅನೇಕ ಹುಟ್ಟುಗಳ ಸಮುದ್ರ ನೌಕೆಗಳನ್ನೂ ಕಟ್ಟುವ ಕೌಶಲ್ಯ ಮತ್ತು ಪರಿಣತಿಯನ್ನು ಭಾರ್ಗವರಿಂದ ಪಡೆದಿದ್ದರು. ಅದಕ್ಕಾಗಿ ಅವರು ದಕ್ಷಿಣಾ ರೂಪದಲ್ಲಿ ಅತುಲ ಐಶ್ವರ್ಯಗಳನ್ನೂ ಗಳಿಸಿದ್ದರು. ಮಾಹಿಷ್ಮಂತನ ಮಗ ಭದ್ರಶೇಣ್ಯನು ಗಂಗಾ-ಯಮುನಾ ನದಿಯ ನಡುವಣ ದೋಆಬ ಪ್ರದೇಶದಲ್ಲಿ ತನ್ನ ಸಾಮ್ರಾಜ್ಯವನ್ನು ಕಾಶಿಯ ಪರ್ಯಂತ ವಿಸ್ತರಿಸಿದನು.

ಅವನ ಪುತ್ರ ಕೃತವೀರ್ಯನು ದರ್ಪ ಹಾಗೂ ಉದ್ಧಟ ಸ್ವಭಾವದವನು. ತನ್ನ ಪೂರ್ವಜರು ದಕ್ಷಿಣಾರೂಪದಲ್ಲಿ ನೀಡಿದ ಸಂಪತ್ತನ್ನು ಮರಳಿ ಕೊಡುವಂತೆ ಭಾರ್ಗವರಿಗೆ ಕೇಳಿದಾಗ ಅವರು ತಿರಸ್ಕರಿಸಿ ಬಿಟ್ಟರೆಂದು ಕೃತವೀರ್ಯನು ಉದ್ರಿಕ್ತನಾಗಿ ಅವರಿಗೆ ಉಪದ್ರವ ಕೊಡುತ್ತಿದ್ದ. ಅವರು ತಮ್ಮ ಸುರಕ್ಷಿತ ಸ್ಥಿತಿಗಾಗಿ ಮಧ್ಯದೇಶಕ್ಕೆ ವಲಸೆ ಹೋಗುವಂತೆ ಬಲಾತ್ಕರಿಸಿದ. ಅಲ್ಲಿ ಚ್ಯವನನ ಮಗ ಔರ್ವನು ಹುಟ್ಟಿದ. ಔರ್ವನ ಮಗ ಋಚೀಕನು ಕನ್ಯಾಕುಬ್ಜ ದೊರೆಯ ಮಗಳಾದ ಸತ್ಯವತಿಯನ್ನು ವಿವಾಹ ಮಾಡಿಕೊಂಡನು. ಅವನು ಹೈಹಯರ ಮೇಲೆ ಶತ್ರುತ್ವವನ್ನು ಸಾಧಿಸುತ್ತಿರುವ ಕ್ಷತ್ರಿಯರ ನೆರವನ್ನು ಪಡೆದು ಹೈಹಯರನ್ನು ದಂಡಿಸುವ ಪ್ರಯತ್ನವನ್ನೂ ಮಾಡಿದ. ಆದರೆ ಅದು ಹೆಚ್ಚು ಯಶಸ್ಸು ಕಾಣಲಿಲ್ಲ.

ಹೈಹಯ ರಾಜವಂಶದಲ್ಲಿ ಅಸಂಖ್ಯ ಹುಟ್ಟುಗಳ ನೌಕೆಗಳನ್ನು ಹೊಂದಿರುವ ಅತ್ಯಂತ ಬಲಾಢ್ಯ ರಾಜನಾಗಿದ್ದ ಅರ್ಜುನನನ್ನು ಜನರು

ಸಹಸ್ರಬಾಹುವುಳ್ಳ ರಾಜ, 'ಕಾರ್ತವೀರ್ಯಾರ್ಜುನ' ಎಂದು ಸಂಬೋಧಿಸುತ್ತಿದ್ದರು. ಅವನು ದತ್ತಾತ್ರೇಯನ ಪರಮಭಕ್ತ. ಲಂಕಾಧೀಶ ರಾವಣನನ್ನು ಸೋಲಿಸಿದ್ದ. ಗಂಧರ್ವ ರಾಜನಾದ ಚಿತ್ರರಥನು ಪರಿವಾರ ಸಮೇತ ನದಿಯಲ್ಲಿ ಜಲಕ್ರೀಡೆ ಆಡುತ್ತಿದ್ದಾಗ ಹರಿಯುತ್ತಿರುವ ನರ್ಮದೆಯ ಪ್ರವಾಹವನ್ನೇ ತಡೆದು ನಿಲ್ಲಿಸಿದ್ದ. ಅವನು ಋಚೀಕನ ಮಗ ಜಮದಗ್ನಿಯ ಸಮಕಾಲೀನನಾಗಿದ್ದ. ಜಮದಗ್ನಿಯು ಕೊಂಚಮಟ್ಟಿಗೆ ಸ್ವಸ್ಥಚಿತ್ತನೂ, ಶಾಂತ ಸ್ವಭಾವದವನೂ ಆಗಿದ್ದನು. ಒಂದು ಸಲ ಹೈಹಯ ರಾಜಕುಮಾರರು ಮೃಗಯಾ ವಿಹಾರಕ್ಕಾಗಿ ಜಮದಗ್ನಿಯ ಆಶ್ರಮಕ್ಕೆ ಭೇಟಿ ಇತ್ತರು. ಆಗ ಋಷಿಯು ತಪೋನಿರತನಾಗಿದ್ದ. ತಮ್ಮ ಆಗಮನಕ್ಕೆ ತಿಲಮಾತ್ರವೂ ಪ್ರತಿಕ್ರಿಯೆ ತೋರಿಸದೆ ಇರುವುದನ್ನು ನೋಡಿ ಉದ್ಧಟ ಹೈಹಯರು ಸೊಕ್ಕಿನಿಂದ ಸಹಜ ಕ್ರಿಯೆಯಂತೆ ಋಷಿಯ ಶಿರಚ್ಛೇದನ ಮಾಡಿ ಹಾಗೆಯೇ ಸಾಗಿ ಹೋದರು. ಈ ನೀಚ ಹೇಡಿತನದ ಕೃತಿಯನ್ನು ನೋಡಿದ ಜಮದಗ್ನಿಯ ಕಿರಿಯ ಮಗ ಪರಶುರಾಮನು ಹೈಹಯ ಕುಲವನ್ನೇ ಭೂತಲದಿಂದ ನಿರ್ನಾಮ ಮಾಡುತ್ತೇನೆಂದು ಶಪಥ ತೊಡುತ್ತಾನೆ.

ಅವನು ಇಕ್ಷ್ವಾಕುಕುಲದ ಸಗರನ ನೇತೃತ್ವದಲ್ಲಿ ಹೈಹಯರ ಮೇಲೆ ಹಗೆತನ ಸಾಧಿಸುತ್ತಿದ್ದ ಕ್ಷತ್ರಿಯ ಕುಲದ ವ್ಯೂಹವನ್ನು ರಚಿಸುತ್ತಾನೆ. ಪರಶುರಾಮನ ಭಾವಾವೇಶವನ್ನೂ, ಆರ್ಯಾವರ್ತದಲ್ಲಿ ಕ್ಷಾತ್ರಶಕ್ತಿಯು ಘೋರವಿನಾಶ ಆಗುವುದನ್ನೂ ಭಾರ್ಗವಕುಲದ ಹಿರಿಯರು ಗಮನಿಸಿದರು. ಆಗ ಅವರು "ಆರ್ಯಾವರ್ತವು ಅರಾಜಕತೆ ಹಾಗೂ ಅವ್ಯವಸ್ಥೆಯಿಂದ ಅವನತಿಗೆ ಈಡಾಗದಿರಲು ಎಲ್ಲ ಕ್ಷತ್ರಿಯರ ಸಂಹಾರ ಮಾಡಬಾರದು" ಎಂದು ಪ್ರತಿಪಾದಿಸಿ ದರು. ಪರಶುರಾಮನು ಅವರ ಸಲಹೆಯನ್ನು ಮನ್ನಿಸಿ ತನ್ನ ಕದನಗಳನ್ನು ನಿಲ್ಲಿಸುತ್ತಾನೆ.

ಅವನು ತನ್ನ ಹಿರಿಯರ ಶ್ರಾದ್ಧ ಕರ್ಮವನ್ನು ನೆರವೇರಿಸಿದನು. ಮತ್ತು ಒಂದು ಕಾಲದಲ್ಲಿ ಮಹತ್ವಪೂರ್ಣ ನದಿಯಾಗಿದ್ದ ಸರಸ್ವತಿಯ ಅಳಿದುಳಿದ ಭಾಗವಾದ 'ಸಮಂತಪಂಚಕಮ್' ಎಂಬ ಐದು ರಕ್ತಗಳ ಮಡುವಿನ ನಡುವೆ ನಿಂತು, ತಾನು ವಧಿಸಿದ ಕ್ಷತ್ರಿಯರ ರಕ್ತತರ್ಪಣವನ್ನು ತನ್ನ ಪೂರ್ವಜರಿಗೆ ಯಜ್ಞದ ಆಹುತಿಯ ರೂಪದಲ್ಲಿ ನೀಡಿದನು. ಅದರ ಬಳಿಕ ಅವನು ಪ್ರಧಾನ ಪುರೋಹಿತರಾದ ಕಶ್ಯಪ ಮುನಿಗಳಿಗೆ ತಾನು ಗೆದ್ದು ಕೈವಶ ಮಾಡಿಕೊಂಡ ಭೂಮಿಯನ್ನು ಗುರುದಕ್ಷಿಣೆಯ ರೂಪದಲ್ಲಿ ದಾನ ಮಾಡಿದನು. ಪರಶುರಾಮನ ರೋಷಾವೇಶವನ್ನು ಚೆನ್ನಾಗಿ ಅರಿತಿರುವ ಕಶ್ಯಪ ಮುನಿಗಳು ಅವನನ್ನು

ಆರ್ಯಾವರ್ತದಿಂದ ಗಡೀಪಾರು ಮಾಡುವುದೇ ಯುಕ್ತಿಯುಕ್ತವೆಂದು ಭಾವಿಸಿ ಹೀಗೆ ಹೇಳಿದರು.

ಗಚ್ಛ ತೀರಂ ಸಮುದ್ರಸ್ಯ ದಕ್ಷಿಣಸ್ಯ ಮಹಾಮುನೇ।
ನ ತೇ ಮದ್ವಿಷಯೇ ರಾಮ ವಾಸ್ತವ್ಯಮಿಹ ಕರ್ಹಿಚಿತ್ ॥

'ಮಹರ್ಷಿಯೇ, ದಕ್ಷಿಣ ದಿಕ್ಕಿನಲ್ಲಿರುವ ಸಮುದ್ರದ ತೀರಕ್ಕೆ ಹೊರಟು ಹೋಗು. ಏಕೆಂದರೆ ನನಗೆ ದಾನವಾಗಿ ನೀಡಿದ ಭೂಮಿಯ ಮೇಲೆ ನೀನು ವಾಸಿಸುವಂತಿಲ್ಲ.'

ಪರಶುರಾಮನು ಭೃಗುಕಚ್ಛದಲ್ಲಿರುವ ತನ್ನ ಪೂರ್ವಜರ ಭೂಮಿಗೆ ಸಾಕಷ್ಟು ಹತ್ತಿರವಿದ್ದರೂ ಯಜ್ಞಸಂಸ್ಥೆಯಲ್ಲಿ ವಿಶ್ವಾಸವಿರದ ಆರ್ಯೇತರರು ವಾಸಿಸಿದ ದಂಡಕಾರಣ್ಯದಿಂದ ಬಲು ದೂರದಲ್ಲಿದ್ದ ತನಗೆ ಮೊದಲೇ ಪರಿಚಿತ ಪ್ರದೇಶವಾದ ದಕ್ಷಿಣ ದಿಕ್ಕಿನಲ್ಲಿರುವ ಪಶ್ಚಿಮ ಸಮುದ್ರದ ತೀರಕ್ಕೆ ಹೊರಟುಹೋಗುತ್ತಾನೆ.

ಸಮುದ್ರಯಾನಿಗಳ ಕುಲದವನಾದ ಪರಶುರಾಮನಿಗೆ ಉತ್ತರದ ವೈತರಣೀ ನದಿ (ಇಂದಿನ ದಮನದ ಸಮೀಪ)ಯಿಂದ ದಕ್ಷಿಣದ ಸುಬ್ರಹ್ಮಣ್ಯ ನದಿ (ಇಂದಿನ ಉತ್ತರ ಕನ್ನಡ ಜಿಲ್ಲೆಯ ಗಂಗಾವಳೀ ನದಿ)ಯ ತನಕ ಇರುವ ಉದ್ದ ಭೂಭಾಗದ ಪರಿಚಯವಿತ್ತು. ಕೇರುವ ಮರದ ಆಕಾರದಂತೆ ಇರುವುದರಿಂದ ಆ ಭೂಭಾಗಕ್ಕೆ 'ಶೂರ್ಪಾರಕ' ಎಂದು ಕರೆದಿದ್ದರು. ಸ್ಕಂದ ಪುರಾಣದ ಪ್ರಕಾರ ಅದರ ಉತ್ತರ ಭಾಗವು 'ಅಪರಾಂತ' ಎಂದೂ ದಕ್ಷಿಣ ಭಾಗವು 'ಗೋಮಂತಕ' ಎಂದೂ ಪ್ರಖ್ಯಾತವಾಗಿದೆ. "ಉತ್ತಮಂ ವ್ಯವಸ್ಥಿತಂ ಕ್ಷೇತ್ರಂ ಜವಾಧಿಕಂ ಸರ್ವತೀರ್ಥಾನ್ವಿತಂ ವಿಮಲಂ ನಿರ್ಮಲಂ ತೀರ್ಥ ಮುತ್ತಮಂ" ಹೀಗೆ ಉತ್ತಮ, ವ್ಯವಸ್ಥಿತ, ಧಾನ್ಯಸಮೃದ್ಧ, ಪವಿತ್ರ ನದಿಗಳಿರುವ, ಮಂಗಲಕರ, ಪರಿಶುಭ್ರ, ಉತ್ತಮ ತೀರ್ಥ ಕ್ಷೇತ್ರಗಳಿರುವ ಆ ಪ್ರದೇಶವು ಆರ್ಯಾವರ್ತಕ್ಕೆ ಸರಿಸಾಟಿಯಾಗಿ ನಿಲ್ಲಬಲ್ಲ ಮಂಗಲಕರ ಹಾಗೂ ನಿರ್ಮಲ ಭೂಮಿಯಾಗಿತ್ತು. ಕೋಸಲದ ದೊರೆ ಸಗರನು ಪರಶುರಾಮನ ಕದನಗಳಲ್ಲಿ ಸಹಾಯಕನಾಗಿದ್ದ. ಮತ್ತು ಅವನ ಅಂತ್ಯದೊಂದಿಗೆ ಕೃತಯುಗದ ಅಂತ್ಯವೂ ಸಂಭವಿಸಿತೆಂದು ಹೇಳುತ್ತಾರೆ. ಆದಕಾರಣ ಯುಗದ ಅಂತಿಮ ಅವಧಿಯಲ್ಲಿ ಈ ಭೂಭಾಗದ ಉದ್ಧಾರವು ಪರಶುರಾಮನಿಂದಲೇ ಆಗಿರಬಹುದು.

ಅನಂತರ ಅವನು ತನ್ನ ಹಿರಿಯರ ಪಿತೃಕಾರ್ಯವನ್ನು ನೆರವೇರಿಸಿ ಯಜ್ಞ-ಕಾರ್ಯದಲ್ಲಿ ಆಹುತಿಯನ್ನು ನೀಡಲು ಬ್ರಹ್ಮಾವರ್ತ ಎಂದು ಹೆಸರಾಂತ

ತ್ರಿಹೋತ್ರದ ಸಾರಸ್ವತ ಮುನಿಯ ಆಶ್ರಮದಿಂದ ಹತ್ತು ಬ್ರಾಹ್ಮಣ ಕುಟುಂಬಗಳನ್ನು ಕರೆಸಿಕೊಂಡ. "ವೇದ ವೇದಾಂಗ ಪಾರಂಗತಃ ಮಂತ್ರ ಔಷಧೀ ತಪೋ ಯೋಗಬಲೇನ ಜೀವಾತ್ಮನ್ಯವಃ" ಅವರು ವೇದ-ವೇದಾಂಗ ಪಾರಂಗತರೂ ಮಂತ್ರ, ಔಷಧಿ, ತಪಸ್ಸು ಹಾಗೂ ಯೋಗಬಲದಿಂದ ಆತ್ಮನಿಗ್ರಹಿಗಳೂ ಆಗಿದ್ದುದರಿಂದ ಅವರನ್ನು ಗೋಮಂತಕದಲ್ಲೇ ನೆಲೆಸುವಂತೆ ಮಾಡಿದನು. ಆ ಸ್ಥಳವು ಅವರನ್ನು ಜೀವನ-ನಿರ್ವಹಣೆಗೆ (ಭೋಜನಾರ್ಥಂ) ಯಜ್ಞ ಕಾರ್ಯನಿರ್ವಹಣೆಗೆ (ಯಜ್ಞಾರ್ಥಮ್) ಪಿತೃಗಳಿಗೆ ಆಹುತಿ ನೀಡಲಿಕ್ಕೆ (ಶ್ರಾದ್ಧಾರ್ಥಮ್) ಪ್ರಶಸ್ತವಾಗಿತ್ತು. ಭೋಜನಾರ್ಥಮ್ - ಜೀವನ-ನಿರ್ವಹಣೆಗೆ ಯೋಗ್ಯವಾದ ಸ್ಥಳ ಎಂದರೆ ಭೂಭಾಗದ ಉದ್ಧಾರ, ಭೂಭಾಗದ ಮೇಲೆ ನಿಂತ ಸಮುದ್ರದ ನೀರನ್ನು ಹೊರಹಾಕುವುದು, ಭೂಮಿಯನ್ನು ಕೃಷಿಗೆ ಯೋಗ್ಯ ಸಾಗುವಳಿ ಭೂಮಿಯನ್ನಾಗಿ ಮಾಡುವುದು, ದಟ್ಟಡವಿಯನ್ನು ಕಡಿದು ಹಾಕುವುದು. ಇವೇ ಮುಂತಾದ ಕೃಷಿ ಉದ್ಯಮದ ಭಾರೀ ಕಾರ್ಯಪಡೆಯ ಸಿಬ್ಬಂದಿಯಾಗಿ ಆ ಕಾಲದಲ್ಲಿ ಕುಣಬೀ ಜನಾಂಗದವರು ನೆಲೆನಿಂತಿದ್ದರು.

ಯದುವಂಶದ ಈ ಸದಸ್ಯರಲ್ಲದೆ ಮಹಾಭಾರತದಲ್ಲಿ ಯಾದವ ಪರಿವಾರಕ್ಕೆ ಸಂಬಂಧಿಸಿದ ಪದ್ಮವರ್ಣ, ಸಾರಸ ಮತ್ತು ಹರೀತ ಎಂಬ ಇನ್ನೂ ಮೂವರು ಕಾಣಬರುತ್ತಾರೆ. ಅವರು ಕೊಂಕಣದ ಬಲು ದೂರದ ದಕ್ಷಿಣ ಮತ್ತು ಪೂರ್ವಭಾಗದಲ್ಲಿ ತಮ್ಮ ಸಣ್ಣ-ಸಣ್ಣ ವಸಾಹತನ್ನು ಸ್ಥಾಪಿಸಿಕೊಂಡಿದ್ದರು. ಹೈಹಯರಷ್ಟು ಅಥವಾ ದ್ವಾರಕೆಯ ಯಾದವರಷ್ಟು ಪ್ರಬಲರಾಗಿರಲಿಲ್ಲ. ಪದ್ಮವರ್ಣನು ಕರವೀರಪುರ(ಈಗಿನ ಕೊಲ್ಲಾಪುರ)ವನ್ನು ತನ್ನ ರಾಜಧಾನಿಯನ್ನಾಗಿಸಿ ಪದ್ಮಾವತ ರಾಜ್ಯವನ್ನು ಸ್ಥಾಪಿಸಿಕೊಂಡಿದ್ದನು. ಸಾರಸನು ಕ್ರೌಂಚಪುರವನ್ನು ತನ್ನ ರಾಜಧಾನಿಯನ್ನಾಗಿಸಿ ಉತ್ತರ ಕನ್ನಡ ಜಿಲ್ಲೆಯ ಬನವಾಸಿಯಲ್ಲಿ ನೆಲೆಸಿದ್ದನು. ಹರೀತನು ತನ್ನ ಪುಟ್ಟ ರಾಜ್ಯವನ್ನು ಬಹುಶಃ ಕಾರವಾರ ಸಮೀಪದ ಅಂಜದೀವ ನಡುಗಡ್ಡೆಯಲ್ಲಿ ಸ್ಥಾಪಿಸಿಕೊಂಡಿದ್ದನು ಅಲ್ಲಿ ಮೊಗೇರರೆಂದು ಕರೆಯಲ್ಪಡುವ ಮಡಗೂರರು ಸಮುದ್ರದ ಶಂಖ-ಚಿಪ್ಪುಗಳನ್ನು ಸಂಗ್ರಹಿಸುತ್ತಿದ್ದರು. ಈ ಸ್ಥಳಗಳು ದಕ್ಷಿಣಭಾಗದ ಕೇರಳಪರ್ಯಂತ ವಿಸ್ತರಿಸಿಕೊಂಡಿರುವ ಹೈವ ಅಥವಾ ಹೈಗ ಎಂದು ಕರೆಯಲ್ಪಡುವ ಕನ್ನಡ ದೇಶದ ಅಹಿಕ್ಷೇತ್ರದಿಂದ ಅಷ್ಟೇನೂ ದೂರದಲ್ಲಿ ಇರಲಿಲ್ಲ. ಗೋಮಂತಕದಲ್ಲಿ ಸ್ಥಾಪನೆಗೊಂಡ ಪ್ರಥಮ ವಸಾಹತುಗಳಿಂದ ಪ್ರಚೋದನೆ ಪಡೆದು ಆ ಭಾಗವನ್ನು ಕಾಲಾಂತರದಲ್ಲಿ ಪರಶುರಾಮ ಸೃಷ್ಟಿಯೆಂದು ಸೇರಿಸಿಕೊಳ್ಳಲಾಯಿತು.

卐

4

ಕೊಂಕಣ ತೀರದಲ್ಲಿ ಸಾರಸ್ವತರ ವಸಾಹತುಗಳು

ಬ್ರಹ್ಮಾವರ್ತದಿಂದ ಕೊಂಕಣ ತೀರಕ್ಕೆ ವಲಸೆ ಬಂದಿರುವ ಎಲ್ಲ ಸಾರಸ್ವತರಲ್ಲಿ ಮೊಟ್ಟಮೊದಲು ಬಂದ ಹತ್ತು ಬ್ರಾಹ್ಮಣ ಕುಟುಂಬಗಳ ವಿಷಯವಂತೂ ಅನೇಕ ದಂತಕಥೆಗಳಲ್ಲಿ ಹಾಗೂ ಪೌರಾಣಿಕ ಐತಿಹ್ಯಗಳಲ್ಲಿ ಅಡಕವಾಗಿದೆ. ಬಂದವರು ಒಂದು ನಿಶ್ಚಿತ ಉದ್ದೇಶದಿಂದ ಬಂದಿದ್ದರು. ಅವರಿಗೆ ಈ ಗೋಮಂತಕ ತೀರವು ಅತಿದೂರದ ಅಪರಿಚಿತ ಪ್ರದೇಶವಾದರೂ ಆರ್ಯಾವರ್ತದಷ್ಟೇ ಪವಿತ್ರ ಹಾಗೂ ಮಂಗಳಕರವಾಗಿತ್ತು. ಇಲ್ಲಿ (ಭೋಜನಾರ್ಥಂ) ಜೀವನ ನಿರ್ವಹಣೆಗೆ ಅಗತ್ಯವಿರುವ ಆಹಾರ-ವಸತಿ ಮುಂತಾದ ಸಕಲ ಸಂಪನ್ಮೂಲಗಳನ್ನು ಒದಗಿಸಿ, ಪರಶುರಾಮನು ಅವರ ಮೂಲಕ (ಶ್ರಾದ್ಧಾರ್ಥಂ) ತನ್ನ ಪೂರ್ವಜರ ಪಿತೃ ಕಾರ್ಯಗಳನ್ನು ಮಾಡಿಸಿ, (ಯಜ್ಞಾರ್ಥಂ) ಧಾರ್ಮಿಕ ಯಜ್ಞ-ಯಾಗಗಳನ್ನು ನೆರವೇರಿಸತೊಡಗಿದ್ದ. ಅನಂತರ ಬಂದವರೆಲ್ಲರೂ ವಾಸ್ತವಿಕವಾಗಿ, ಧಾರ್ಮಿಕ, ಆರ್ಥಿಕ ಮತ್ತು ಸಾಮಾಜಿಕ ಕಾರಣಗಳಿಗಾಗಿ ದೇಶಾಂತರ ಪರ್ಯಟನೆ ಮಾಡಿ ವಲಸೆ ಬಂದವರು.

ಪ್ರಥಮ ವಸಾಹತು

ಮಹಾಭಾರತ ಹಾಗೂ ಅನಂತರದ ಸ್ಕಂದಪುರಾಣದಲ್ಲಿ ನಿರೂಪಿಸಿದಂತೆ ಪರಶುರಾಮನು, ದುರಹಂಕಾರದಿಂದ ಮೆರೆಯುತ್ತಿರುವ ಕ್ಷತ್ರಿಯ ಕುಲವನ್ನು ಭೂತಲದಿಂದಲೇ ಮೂಲೋತ್ಪಾಟನೆ ಮಾಡುತ್ತಿದ್ದ. ಆಗ ಗುರು-ಹಿರಿಯರು ಅವನ ಈ ಕೋಪದ ಘೋರ ಪರಿಣಾಮದ ದುರಂತ ಛಾಯೆಯನ್ನು ಊಹಿಸಿ, ಅವನಿಗೆ ಹೀಗೆ ಬುದ್ಧಿವಾದ ಹೇಳಿದರು. "ಶಾಂತನಾಗು. ಎಲ್ಲ ಕ್ಷತ್ರಿಯರನ್ನೂ ನಾಶ ಮಾಡಬೇಡ. ಹೀಗೆ ಮಾಡುತ್ತ ಹೋದರೆ, ಇಡೀ ಆರ್ಯಾವರ್ತ ಪ್ರದೇಶವು ಕ್ಷತ್ರಿಯರಿಂದ ಸಿಗುವ ರಕ್ಷಣೆಯನ್ನೇ ಕಳೆದುಕೊಳ್ಳಬೇಕಾದೀತು".

ಈ ವಿವೇಚನಾಯುಕ್ತ ಸಲಹೆಯನ್ನು ಕೇಳಿ, ಪರಶುರಾಮನು ತನ್ನ ಸಂಹಾರ ಕ್ರಿಯೆಯನ್ನು ನಿಲ್ಲಿಸಿದ. ಅನಂತರ ಅವನು "ಸಮಂತ ಪಂಚಕಮ್" ಎಂಬ ಧರ್ಮಕ್ಷೇತ್ರದ ರಕ್ತದ ಐದು ಕುಂಡಗಳಲ್ಲಿ ತನ್ನ ತಂದೆ ಮತ್ತು ಪೂರ್ವಜರ ಶ್ರಾದ್ಧ ಕರ್ಮವನ್ನು ನೆರವೇರಿಸಿದ. ತಾನೇ ವಧೆಗೈದ ಕ್ಷತ್ರಿಯರಿಗೆ ಅವರ ರಕ್ತದ ತರ್ಪಣ ಕೊಟ್ಟ. ಬಳಿಕ ಪ್ರಧಾನ ಪುರೋಹಿತರಾದ ಕಶ್ಯಪ ಮುನಿಗೆ ತಾನು

ಗೆದ್ದು ವಶಪಡಿಸಿಕೊಂಡ ಪ್ರದೇಶವನ್ನು 'ದಕ್ಷಿಣೆ'ಯ ರೂಪದಲ್ಲಿ ದಾನಮಾಡಿದ. ಪರಶುರಾಮನ ಕೋಪಾಟೋಪದ ಅರಿವಿರುವ ಕಶ್ಯಪ ಮುನಿಯು ಆರ್ಯಾವರ್ತವನ್ನು ರಕ್ಷಿಸಲೋಸುಗ ಪರಶುರಾಮನಿಗೆ ಹೀಗೆ ಆದೇಶವಿತ್ತ.

"ಗಚ್ಛ ತೀರಂ ಸಮುದ್ರಸ್ಯ ದಕ್ಷಿಣಸ್ಯ ಮಹಾಮುನೇ ।
ನ ತೇ ಮದ್ವಿಷಯೇ ರಾಮ ವಾಸ್ತವ್ಯಮಿಹ ಕರ್ಹಿಚಿತ್ ॥"

– "ಎಲೈ ಮಹಾಮುನಿಯೇ, ಸಮುದ್ರ ತೀರದ ದಕ್ಷಿಣ ದಿಕ್ಕಿನತ್ತ ಹೋಗು. ಏಕೆಂದರೆ ಹೇ ರಾಮಾ, ನನಗೆ ದಾನವಾಗಿ ನೀಡಿರುವ ಭೂಮಿಯ ಮೇಲೆ ನೀನು ವಾಸಿಸುವಂತಿಲ್ಲ."

ಈ ಬಹಿಷ್ಕಾರದ ನಿಮಿತ್ತ, ಯಜ್ಞ-ಯಾಗ ಹಾಗೂ ಪಿತೃಗಳ ಶ್ರಾದ್ಧ-ಕರ್ಮವನ್ನು ನೆರವೇರಿಸಲು ಇರುವ ಪರಮ ಪವಿತ್ರ ಭೂಮಿಯೇ ಪರಶುರಾಮನ ಕೈತಪ್ಪಿ ಹೋಯಿತು. ಆದಕಾರಣ, ಅವನು ಭಾರತದ ಪಶ್ಚಿಮ ಕರಾವಳಿಯ ದಕ್ಷಿಣೋತ್ತರ ಭೂಭಾಗವಾದ ಉದ್ದಪಟ್ಟಿಯನ್ನು ಉತ್ತಮ ಸ್ಥಿತಿಗೆ ತಂದು ಉದ್ಧರಿಸಿದ. (ಕವಿಗಳು ವರ್ಣಿಸಿರುವಂತೆ, ಅವನು ಸಮುದ್ರರಾಜನಲ್ಲಿ ಈ ಭೂಭಾಗವನ್ನು ಬೇಡಿ ಪಡೆದ.) ಈ ಭೂಭಾಗವು ಶೂರ್ಪ (ಮೊರ)ದ ಆಕಾರವಿರುವುದರಿಂದ ಅದು 'ಶೂರ್ಪಾರಕ' ಎನಿಸಿಕೊಂಡಿತು. ಹಾಗೂ ಅದರ ಉತ್ತರಭಾಗ ಅಪರಾಂತವೆಂದೂ, ದಕ್ಷಿಣ ಭಾಗ ಗೋಮಂತಕ ಎಂದೂ ಆಯಿತು. ಮುಂದೆ ಆರ್ಯಾವರ್ತದಷ್ಟೇ ಪವಿತ್ರ ಹಾಗೂ ಪುಣ್ಯಭೂಮಿಯನ್ನು ಹುಡುಕಿ ಅಲ್ಲಿ ಯಜ್ಞ-ಯಾಗ, ಶ್ರಾದ್ಧ ಕರ್ಮಾದಿ ಧಾರ್ಮಿಕ ಕ್ರಿಯೆಗಳನ್ನು ನೆರವೇರಿಸಲು ಬ್ರಹ್ಮಾವರ್ತ ಅಥವಾ ತ್ರಿಹೋತ್ರದಿಂದ ಹತ್ತು ಗೋತ್ರಗಳ ಬ್ರಾಹ್ಮಣ ಕುಟುಂಬಗಳನ್ನು ಕರೆತಂದನು.

"ಭಾರದ್ವಾಜ: ಕೌಶಿಕಶ್ಚ ವತ್ಸ ಕೌಂಡಿಣ್ಯ ಕಾಶ್ಯಪಾಃ ।
ವಸಿಷ್ಠೋ ಜಮದಗ್ನಿಶ್ಚ ವಿಶ್ವಾಮಿತ್ರಶ್ಚ ಗೌತಮ: ।
ಅತ್ರಿ ದಶರ್ಷಯಶ್ಚೇತೇ ಸ್ಥಾಪಿತಾಸ್ತತ್ರ ಚೈವ ಹಿ ॥"

ಈ ಹತ್ತು ಬ್ರಾಹ್ಮಣ ಕುಟುಂಬಗಳು ಭಾರದ್ವಾಜ, ಕೌಶಿಕ, ವತ್ಸ, ಕೌಂಡಿಣ್ಯ, ಕಾಶ್ಯಪ, ವಸಿಷ್ಠ, ಜಮದಗ್ನಿ, ವಿಶ್ವಾಮಿತ್ರ, ಗೌತಮ ಮತ್ತು ಅತ್ರಿ ಎಂಬ ಹತ್ತು ಮಹರ್ಷಿಗಳ ಗೋತ್ರದವರಾಗಿದ್ದರು.

ಈ ಎಲ್ಲ ಹತ್ತು ಋಷಿಗಳ ಗೋತ್ರಿಗಳು ತ್ರಿಹೋತ್ರ ನಿವಾಸಿಗಳು.

"ತ್ರಿಹೋತ್ರ ನಿವಾಸಿನಶ್ಚೈವ ಪಂಚಗೌಡಾಂತರೇ ಸ್ಥಿತಾ: ।

ಉತ್ತಮಾ ರಾಜಪೂಜಿತಾ ಸುದರ್ಶನಾಃ ಸದಾಚಾರಶ್ಚತುರಾಃ ಸರ್ವ ಕರ್ಮಸು।"

ಅವರು ಉತ್ತಮರು, ರಾಜನಿಂದ ಗೌರವ ಪಡೆದವರು, ಲಕ್ಷಣವಂತರು, ಸದಾಚಾರಿಗಳು, ಸಕಲ ಕಾರ್ಯಗಳಲ್ಲಿ ಚತುರರೂ ಆಗಿದ್ದರು. ಹೀಗೆ ಬಂದವರಲ್ಲಿ, ಕೌತ್ಸ, ವತ್ಸ ಮತ್ತು ಕೌಂಡಿಣ್ಯ ಗೋತ್ರದವರು ಕುಶಸ್ಥಲೀ (ಕುಠ್ಠಾಲ) ಮತ್ತು ಕೇಲೋಶಿಯಲ್ಲಿ ನೆಲೆಸಿದರು. ಉಳಿದ ಆರು ಕುಟುಂಬದವರು ಮಠಗ್ರಾಮ (ಮಡಗಾಂವ), ವರೇಣ್ಯ (ವೇರಣೇ), ಲೋಟಲೀ ಮತ್ತು ಕುಶಸ್ಥಲೀಯಲ್ಲಿ ನೆಲೆಸಿದರು. ಚೂಡಾಮಣಿಯಲ್ಲಿ (ಚೋಡಣೇ) ಹತ್ತು ಕುಟುಂಬದವರು ಹಾಗೂ ದೀಪವತಿ (ದೀವಾಡೀ) ಮತ್ತು ಗೋಮಾಂಚಲದ ನಡುವೆ ಒಟ್ಟು ಹನ್ನೆರಡು ಕುಟುಂಬದವರು ನೆಲೆಸಿದರು. ಹೀಗೆ ಅರವತ್ತಾರು (ಸಾಷಷ್ಟ) ಕುಟುಂಬದವರು ನೆಲೆಸಿದ ವಸಾಹತನ್ನೇ ಸಾಷಷ್ಟಿ ಎಂದು ನಾಮಾಂಕನ ಮಾಡಲಾಯಿತು. ಸಾಷಷ್ಟಿಯೇ ಇಂದಿನ ಸಾಲಸೀಟ್ (Salcete).

ತದನಂತರ, ತಾನು ಉದ್ಧರಿಸಿದ ಪಶ್ಚಿಮ ಕರಾವಳಿಯಲ್ಲಿ ಅವನು ಹರಿಹರೇಶ್ವರ, ಮುಕ್ತೇಶ್ವರ, ವಾಲುಕೇಶ ದೇವರ ಹೆಸರಿನಲ್ಲಿ ಬಾಣಗಂಗಾ, ಕುಶಸ್ಥಲೀ ಹಾಗೂ ಮಡಗಾಂವಗಳಲ್ಲಿ ದೇವಾಲಯಗಳನ್ನು ಕಟ್ಟಿಸಿದ. ಅಲ್ಲದೆ ಭಕ್ತಕೋಟಿಯ ಫಲಾಭಿವೃದ್ಧಿಗಾಗಿ ಗೋಮಾಂಚಲದಲ್ಲಿ ಮಂಗೇಶ, ಮಹಾಲಕ್ಷ್ಮೀ, ಮಹಾಲಸಾ, ಶಾಂತಾದುರ್ಗಾ, ನಾಗೇಶ, ಸಪ್ತಕೋಟೀಶ್ವರ ಕುಲದೇವತೆಗಳ ವಿಗ್ರಹಗಳನ್ನು ಪ್ರತಿಷ್ಠಾಪಿಸಿದ.

ತ್ರಿಹೋತ್ರ ಯಾವುದು?

ಗೋಮಂತಕದಲ್ಲಿ ಪರಶುರಾಮನು ಬ್ರಾಹ್ಮಣ ಕುಟುಂಬಗಳನ್ನು ಕರೆತಂದು ಅವರಿಗೆ ಅಲ್ಲಿ ನೆಲೆಸುವಂತೆ ಮಾಡಿರುವ ಕುರಿತು ಏಕಾಭಿಪ್ರಾಯ ಇದ್ದರೂ, 'ತ್ರಿಹೋತ್ರವಾಸಿನಶ್ಚೈವ ಪಂಚಗೌಡಾಂತರೇ ಸ್ಥಿತಾ: ।' ಎಂಬ ಉಕ್ತಿಯಲ್ಲಿ ಬಂದಿರುವ ತ್ರಿಹೋತ್ರವನ್ನು ಗುರುತಿಸುವ ವಿಷಯದಲ್ಲಿ ವಾದ-ವಿವಾದಗಳಿವೆ. ಭಾರತದಲ್ಲಿ ಸಾಮಾನ್ಯವಾಗಿ ಚಾರಿತ್ರಿಕ ಕಥಾನಿರೂಪಣೆಗಳು ಸಿಗದಿರುವಾಗ, ಪೌರಾಣಿಕ ಗ್ರಂಥಗಳೇ ಚಾರಿತ್ರಿಕ ಘಟನೆಗಳಿಗೆ ಮೂಲ ಆಕರಗಳಾಗುತ್ತವೆ. ಆದರೆ ಜಾಗರೂಕತೆಯಿಂದ ಸ್ವೀಕರಿಸುವ ಅಗತ್ಯವಿದೆಯೇ ಹೊರತು ನಿಃಸಂದೇಹ ಸಾಕ್ಷ್ಯವಾಗಿ ಸ್ವೀಕರಿಸಲು ಬರುವುದಿಲ್ಲ. ಏಕೆಂದರೆ "ಪುರಾಣಮಿತ್ಯೇವ ನ ಸಾಧು ಸರ್ವಂ". ಪುರಾಣ ಧರ್ಮಗ್ರಂಥಗಳಲ್ಲಿರುವ ಸಮರ್ಥನೆಗಳನ್ನು ನಂತರ ಬಂದ ವ್ಯಾಖ್ಯಾನ ಗ್ರಂಥಗಳು ನ್ಯಾಯಸಮ್ಮತವೆಂದು ಮನ್ನಿಸಿದರೂ, ಅವುಗಳಲ್ಲಿರುವ

ಕಾಲ್ಪನಿಕ ವಿವರಣೆಗಳಿಂದ ಸತ್ಯಾಂಶವನ್ನು ಬೇರ್ಪಡಿಸುವಾಗ ನಾವು ಸಾಕಷ್ಟು ಕಾಳಜಿ ವಹಿಸಬೇಕು.

ಸರಸ್ವತೀ ನದಿಯು ಆರ್ಯರಿಂದ ದೈವತ್ವದ ಸ್ಥಾನವನ್ನು ಪಡೆದುಕೊಂಡಿದ್ದರೂ, ಅದು ವೇದಪೂರ್ವ ಕಾಲದಿಂದಲೂ ಮಹತ್ವಪೂರ್ಣ ನದಿಯಾಗಿತ್ತು. ಆರ್ಯರಿಗಿಂತ ಮೊದಲು, ಆರ್ಯೇತರರು ವಾಸಿಸುವ ಕೋಟೆ-ಕೊತ್ತಲಗಳಿಂದ ಆವೃತ ನಗರ ಪ್ರದೇಶಗಳು ಮತ್ತು ಕೃಷಿ ವ್ಯವಸಾಯದ ಹೊಲಗದ್ದೆಗಳು ಈ ನದಿಯ ತೀರದಲ್ಲೇ ಪಸರಿಸಿಕೊಂಡಿದ್ದುದರಿಂದ ಆರ್ಯೇತರರ ಆರ್ಥಿಕ ಜೀವನದಲ್ಲಿ ಈ ನದಿ ಮಹತ್ತರವಾದ ಪಾತ್ರವನ್ನು ವಹಿಸಿತ್ತು. ಆರ್ಯೇತರ ಪಣೀ ಜನಾಂಗದವರು ಈ ನದಿಯಲ್ಲಿ ನೌಕಾಯಾನದ ಮೂಲಕ ದೂರ-ದೂರದ ಪ್ರದೇಶಗಳಾದ ಸುಮೇರ, ಅಸ್ಸೀರಿಯಾ, ಮೆಸೊಪೊಟೇಮಿಯಾದ ತನಕ ತಮ್ಮ ಆಹಾರ ಹಾಗೂ ಇತರ ಸರಕು-ಸಾಮಗ್ರಿಗಳನ್ನು ಸಾಗಿಸುತ್ತಿದ್ದರು. "ಆರ್ಯೇತರ ಪಣೀ ಜನರು ಒಂದು ಮಹತ್ವಪೂರ್ಣ ವಾಣಿಜ್ಯ ಮಾರ್ಗವಾದ ಸರಸ್ವತೀ ನದಿಯನ್ನು ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರು. ಆದರೆ ಭರತ ಜನಾಂಗದ ರಾಜನಾದ ದಿವೋದಾಸನು ಈ ನದೀ ನಿಯಂತ್ರಣವನ್ನು ಪಣೀ ಜನಾಂಗದವರಿಂದ ಕೈವಶ ಮಾಡಿಕೊಂಡನು." ಎಂದು ಋಗ್ವೇದದಲ್ಲಿ ಪ್ರಸ್ತಾಪವಿದೆ. ಅಂದಿನಿಂದ ಆರ್ಯರಿಗೆ ಅದು ಪವಿತ್ರ ನದಿಯಾಯಿತು. ಹಿಂದೆ ಆರ್ಯೇತರ ಜನಾಂಗದವರು ಇಟ್ಟಂಗಿಗಳನ್ನು ತಯಾರಿಸುವ ಸಲುವಾಗಿ ಹಾಗೂ ತಮ್ಮ ನಗರ, ಕಣಜ, ಕಾಲುವೆ ಹಾಗೂ ಕೋಟೆ-ಕೊತ್ತಳಗಳ ನಿರ್ಮಾಣವನ್ನು ಮಾಡುವ ಸಲುವಾಗಿ ಪೂರ್ವಾಪರ ವಿವೇಚನೆ ಮಾಡದೆ, ನದೀ ತೀರದ ನಿಬಿಡವಾದ ಅರಣ್ಯದಲ್ಲಿ ಬೆಳೆದ ಗಿಡ-ಮರಗಳನ್ನು ಕಡಿದೊಗೆದರು. ಇದರಿಂದ, ಆ ಅರಣ್ಯದ ನಿತ್ಯ ಹರಿದ್ವರ್ಣದ ಸಸ್ಯ ಸಮೃದ್ಧಿಯು ಹೇಳ ಹೆಸರಿಲ್ಲದಂತೆ ನಾಶವಾಗತೊಡಗಿತು. ತತ್ಪರಿಣಾಮವಾಗಿ, ಮಳೆ ಸಕಾಲದಲ್ಲಿ ಬೀಳಲಿಲ್ಲ. ಜಲಮೂಲ ಕಡಿಮೆಯಾಗತೊಡಗಿತು. ಭೋರ್ಗರೆದು ಹರಿಯುವ ನದಿಗಳು ನಿರ್ಜಲವಾದವು. ನದಿಯ ಒಡಲೆಲ್ಲ ನೀರಿಲ್ಲದೆ ಬರಿದಾಗಿ, ಭಾರೀ ಮರಳು ದಿಣ್ಣೆಯ ಭೂಮಿಯಾಗಿ ಬದಲಾಯಿತು. ಪವಿತ್ರ ಸರಸ್ವತೀ ನದಿ ಇದಕ್ಕೆ ಅಪವಾದವಾಗಲಿಲ್ಲ. ಹಿಂದೊಮ್ಮೆ ಮೈದುಂಬಿ, ಮದವೇರಿ ಹರಿಯುವ ನದಿಯು ಶಕ್ತಿಶಾಲೀ ನದಿಯ ನಿಸ್ತೇಜ ಪ್ರತಿಬಿಂಬವಾಗಿ ಸೊರಗಿ ಹೋಯಿತು. ಪ್ರಜೆಗಳ ಅತಿಶಯ ಪಾಪಕರ್ಮದ ನಿಮಿತ್ತ ಸರಸ್ವತೀ ನದಿ ಅದೃಶ್ಯವಾಯಿತೆಂದು ಪುರಾಣ ಕಥೆಗಳು ಆರೋಪಿಸಿವೆ. ಆರ್ಯರಿಂದ ನಗರಗಳ ಹಾಗೂ ಕೋಟೆಗಳ ನಾಶವಾದುದರಿಂದ ಆರ್ಯೇತರರ ಸಿಂಧೂ ಮತ್ತು ಸರಸ್ವತೀ ತೀರದ ನಾಗರಿಕತೆಗಳ ಅಂತ್ಯವಾಯಿತು. ಅವರು

ಭಾರತದ ಇತರ ಭಾಗಗಳಿಗೆ ಚದರಿ ಹೋದರು. ಪಂಚನದಿಗಳು ಹಾಗೂ ಸರಸ್ವತೀ ನದಿಯ ನೀರುಂಡ ತೀರಗಳು ಬರಡು ಭೂಮಿಯಾಗಿ ಪರಿಣಮಿಸಿದ ಪ್ರಯುಕ್ತ ಆರ್ಯರೂ ಪೂರ್ವದ ಕಡೆ ವಲಸೆ ಹೋದರು. ಶತಪಥ ಬ್ರಾಹ್ಮಣದಲ್ಲಿ ಈ ಕುರಿತು ವಿವರಣೆ ದೊರಕುತ್ತದೆ. ಹೀಗೆ ಸತ್ಯಯುಗ ಅಥವಾ ಕೃತಯುಗದ ಈ ಅಂತಿಮ ಅವಧಿಯಲ್ಲಿ ಸರಸ್ವತೀ ನದಿ ಭೂತಲದಿಂದ ಅದೃಶ್ಯವಾಯಿತು. ತತ್ಪರಿಣಾಮವಾಗಿ ಸಿಂಧೂ ಮತ್ತು ಸರಸ್ವತೀ ನಾಗರಿಕತೆಗಳು ಅಂತ್ಯಗೊಂಡವು. ಅಷ್ಟೇ ಅಲ್ಲ; ಆರ್ಯರು ಕೂಡ ಸಪ್ತಸಿಂಧುಗಳಿಂದ ನೀರುಂಡ ಪ್ರದೇಶವನ್ನು ಬಿಟ್ಟು, ಬೇರೊಂದು ದೇಶದಲ್ಲಿ ನೆಲೆಸಲು ವಲಸೆ ಹೋದರು.

ಇವೇ ಮೊದಲಾದ ಘಟನೆಗಳು, ನೂತನ ಸಂಶೋಧನ ಮತ್ತು ಸಾಕ್ಷ್ಯಾಧಾರಗಳ ಹಿನ್ನೆಲೆಯೊಂದಿಗೆ ನಾವೀಗ ಆರ್. ಬಿ. ಗುಂಜೀಕರರು ಸರಸ್ವತೀ ಮಂಡಲ (1884)ದಲ್ಲಿ ಬಿಹಾರದ ತಿರಹುತ್ ಎಂದರೆ ತ್ರಿಹೋತ್ರ ಎಂದು ಮಂಡಿಸಿದ ಅಭಿಪ್ರಾಯದ ಪುನರ್ ಮೌಲ್ಯೀಕರಣ ಹಾಗೂ ಪುನಃಪರಿಶೀಲನೆಯನ್ನು ಮಾಡಬೇಕಾಗಿದೆ. ಇದು ಕೇವಲ ಧ್ವನಿಸಾಮ್ಯದಿಂದ ಮೂಡಿದ ಸಲಹೆಯೇ ಹೊರತು ಇದಕ್ಕೆ ತಾತ್ತ್ವಿಕ, ಸಾಹಿತ್ಯಿಕ, ಚಾರಿತ್ರಿಕ, ಇಲ್ಲವೆ ಪುರಾತತ್ತ್ವಶಾಸ್ತ್ರದ ಯಾವುದೇ ಆಧಾರ ಕಂಡುಬರುವುದಿಲ್ಲ. ಪುರಾತತ್ತ್ವಶಾಸ್ತ್ರ, ಮಾನವಶಾಸ್ತ್ರ ಹಾಗೂ ಭಾಷಾಶಾಸ್ತ್ರದ ಅಧ್ಯಯನದಲ್ಲಿ ತೀವ್ರ ಪ್ರಗತಿಯಾಗಿದ್ದರೂ, ಗುಂಜೀಕರರು ಮಂಡಿಸಿದ ಈ ದೋಷಪೂರ್ಣ ಅಭಿಪ್ರಾಯವನ್ನು ದೀರ್ಘಕಾಲದಿಂದ ವಿಶೇಷತಃ ಮಂಜೇಶ್ವರ ಗೋವಿಂದ ಪೈ, ವಿ. ಎನ್. ಕುಡ್ವಾ, ಚಂದ್ರಕಾಂತ ಕೇಣಿಯಂಥ ಅನೇಕ ವಿದ್ವಾಂಸರು ಕೂಡ ಮನ್ನಿಸುತ್ತ ಬಂದಿದ್ದಾರೆ. ತಾಳಮಕ್ಕಿ, ಜಾಯಸ್ವಾಲ್, ಸಾಲೆತೊರೆ, ಪ್ರಿಯೋಳಕರ, ಸೋಂದೆ, ಸೂರ್ಯನಾಥ ಕಾಮತ ಮೊದಲಾದವರು ಮಂಡಿಸಿರುವ ಅನ್ಯ ಅನೇಕ ಪರ್ಯಾಯ ಸೂಚನೆಗಳು ಆಧುನಿಕ ಮಾನವಶಾಸ್ತ್ರ, ಪುರಾತತ್ತ್ವಶಾಸ್ತ್ರ, ಭಾಷಾಶಾಸ್ತ್ರ ಮತ್ತು ತುಲನಾತ್ಮಕ ದಾಖಲಿತ ಸಾಕ್ಷ್ಯಗಳನ್ನು ಆಧರಿಸಿ ಮಾಡಿದ ಸಂಶೋಧಕರ ಅಭಿಪ್ರಾಯಗಳಾಗಿವೆ. ಆದರೂ ಅವುಗಳನ್ನು ಯಾರೊಬ್ಬರೂ ಈತನಕ ಗಮನಿಸಿ, ಪರಿಶೀಲನೆ ಮಾಡುವ ಗೋಜಿಗೆ ಹೋಗಿಲ್ಲ.

"ತ್ರಿಹೋತ್ರವಾಸಿನಶ್ಚೈವ ಪಂಚಗೌಡಾಂತರೇ ಸ್ಥಿತಾ:।" ಎಂಬ ಉಕ್ತಿಯಲ್ಲಿ 'ತ್ರಿಹೋತ್ರವಾಸಿನಃ' ಎಂದರೆ ತ್ರಿಹೋತ್ರದಲ್ಲಿ ನೆಲೆಸಿರುವವರು. 'ಪಂಚಗೌಡಾಂತರೇ ಸ್ಥಿತಾ:' ಎಂದರೆ ಪಂಚಗೌಡ ಎಂಬ ಪ್ರದೇಶದಲ್ಲಿ ಎಲ್ಲರೂ ಸೇರಿ ವಾಸ ಮಾಡುವವರು. ತ್ರಿಹೋತ್ರ, ತ್ರಿಹೋತ್ರಪುರ ಹಾಗೂ ಗೌಡಪ್ರದೇಶ ಎಂಬ ಪದಗಳು ಹಿಂದಿನ ಯಾವುದೇ ಪೌರಾಣಿಕ ಗ್ರಂಥ ಅಥವಾ ಚಾರಿತ್ರಿಕ

ದಾಖಲೆಗಳಲ್ಲಿ ಕಂಡುಬರುವುದಿಲ್ಲ. ಸ್ಕಂದಪುರಾಣದಲ್ಲಿ ಮಾತ್ರ ಅನೇಕ ಪ್ರಾದೇಶಿಕ ಪ್ರಕ್ಷಿಪ್ತ ವಿಷಯಗಳನ್ನು ಅನಂತರ ಸೇರಿಸಿ ಅದನ್ನು ವಿಸ್ತೃತಗೊಳಿಸಲಾಗಿದೆ.

ಬ್ರಹ್ಮಾವರ್ತ

ವೇದಕಾಲದಲ್ಲಿ ಸರಸ್ವತೀ, ದೃಷದ್ವತೀ ಮತ್ತು ಆಪಯಾ ನದಿಗಳಿಂದ ಆವೃತವಾದ ಪ್ರದೇಶವು ಯಜ್ಞ-ಯಾಗಗಳನ್ನು ನೆರವೇರಿಸಲು ಪವಿತ್ರ ಪ್ರದೇಶವಾಗಿತ್ತು. ಬ್ರಹ್ಮಾವರ್ತವು ದೇವನಿರ್ಮಿತ ಪ್ರದೇಶ ಎಂಬ ಉಲ್ಲೇಖವು ಪ್ರಪ್ರಥಮವಾಗಿ ಮನುಸ್ಮೃತಿಯಲ್ಲಿ ದೊರಕುತ್ತದೆ. ಅಲ್ಲಿರುವವರು ಜಗದಾದಿಮೂಲವಾದ ಸತ್ಯದ (ಸತ್) ಜ್ಞಾನಾನುಸಂಧಾನದಲ್ಲಿ ನಿರತ ರಾಗಿರುವವರು. ಸತ್-ಆಚಾರಿಗಳು (ಸದಾಚಾರಿ). ಬಹುಶಃ ಬ್ರಾಹ್ಮಣಗಳ ರಚನಾಕಾಲದಲ್ಲಿ ಸರಸ್ವತೀ ನದಿ ನಿರ್ಜಲವಾಗಿ ಬತ್ತುತ್ತಿರುವಾಗ, ಆರ್ಯ ಜನಾಂಗದವರು ಪೂರ್ವಾಭಿಮುಖವಾಗಿ ವಲಸೆ ಹೋಗತೊಡಗಿದರು. ಆಗ ಕಾಶೀ ಮತ್ತು ಪ್ರಯಾಗ ಕ್ಷೇತ್ರಗಳು ಯಜ್ಞ-ಯಾಗಾದಿಗಳನ್ನು ನೆರವೇರಿಸಲು ಸ್ಥಳಾಂತರಗೊಂಡ ಬ್ರಹ್ಮಾವರ್ತದ ಪರಮ ಮಂಗಲ ಪ್ರದೇಶಗಳಾಗಿ ಮಹತ್ವವನ್ನು ಪಡೆದುಕೊಂಡವು. ಅಂದಿನಿಂದ ಈ ಪ್ರದೇಶವು ಮೊದಲಿನ ಹೆಸರಿಗಿಂತ ಭಿನ್ನವಾಗಿ ಮೂರು ನದಿಗಳಿಂದ ಆವೃತ ಪ್ರದೇಶ 'ತ್ರಿಹೋತ್ರ' ಎಂದೇ ಪ್ರಖ್ಯಾತವಾಯಿತು. ಮತ್ತು ಅಲ್ಲಿಯ ನಿವಾಸಿಗಳು ತ್ರಿಹೋತ್ರಪುರವಾಸಿಗಳೆಂದು ಪ್ರಖ್ಯಾತರಾದರು.

ತ್ರಿಹೋತ್ರ ಶಬ್ದದ ಉತ್ಪತ್ತಿ ಹೀಗಿದೆ. 'ತ್ರಿ' ಎಂದರೆ ಮೂರು, 'ಹೋತ್ರಸ್' ಪದ 'ಸ್ರೋತಸ್' ಎಂಬ ಪದದ ಪಾಠಾಂತರ ರೂಪ. 'ಸ್ರೋತಸ್' ಎಂದರೆ ಜಲಪ್ರವಾಹ. ನದತ್ಯಾಕಾಶ ಗಂಗಾಯಾಃ ಸ್ರೋತಸ್ಯುದ್ದಮಾದಿಗ್ಗಜೇ' (-ಋ 01:78) ಹೀಗೆ, ತ್ರಿಸ್ರೋತಸ್, ತ್ರಿಹೋತ್ರಸ್ ಅಥವಾ ಬ್ರಹ್ಮಾವರ್ತ ಎಂಬ ಪ್ರದೇಶವು ಸರಸ್ವತೀ, ದೃಷದ್ವತೀ ಮತ್ತು ಆಪಯಾ ಎಂಬ ಮೂರು ನದಿಗಳ ಪ್ರವಾಹದಿಂದ ಆವೃತವಾಗಿದೆ. ಇಲ್ಲಿ ಅಂಗಿರ ಮತ್ತು ಭೃಗು ಋಷಿಗಳು ಸ್ವರ್ಗಲೋಕದಿಂದ ತಂದ ಯಜ್ಞಾಗ್ನಿಯನ್ನು ಸ್ಥಾಪಿಸಿದರು. ಅದು ದೇವತೆಗಳೂ ಯಜ್ಞಗಳನ್ನು ನೆರವೇರಿಸಬಹುದಾದ ಮಂಗಲಕರ ಭೂಮಿಯಾಯಿತು. "ದೇವ ವೈ ಸತ್ರಸಮತ ಋದ್ಧಿ ಪರಿಮಿತಾಂ ಯಶಕಾಮಯಾ" ಬ್ರಹ್ಮಾವರ್ತವು ಬ್ರಾಹ್ಮಣತ್ವದ ಪುನಶ್ಚೇತನಕ್ಕಾಗಿರುವ ಅತ್ಯಂತ ಮಂಗಳಕರ ಪವಿತ್ರ ಕೇಂದ್ರ ಎಂದು ಮಹಾಭಾರತ ಸಾರುತ್ತದೆ. ಬ್ರಹ್ಮನು ಸರಸ್ವತೀ ನದೀ ತೀರದಲ್ಲಿ ಯಜ್ಞಗಳನ್ನು ನೆರವೇರಿಸುವಾಗ, ಸರಸ್ವತಿಯು ಏಳು ನಿರ್ಮಲ ಪ್ರವಾಹಗಳಾಗಿ ಕಾಣಿಸಿಕೊಂಡಳು.

'ಸುಪ್ರಭಾ ಕಾಂಚನಾಕ್ಷೀ ಚ ವಿಶಾಲಾ ಚ ಮನೋರಮಾ।
ಸರಸ್ವತೀ ಚೋಘವತೀ ಸುರೇಣುರ್ವಿಮಲೋದಕಾ ॥'

ಸಿಂಧು, ಸರಸ್ವತೀ, ಶತದ್ರು (ಸತಲಜ್), ವಿಪಾಶ (ಬಿಯಾಸ್), ಪರುಷ್ಣೀ (ರಾವಿ), ಅಸಿಕ್ನೀ (ಚಿನಾಬ್) ಮತ್ತು ವಿತಸ್ತಾ (ಝೀಲಮ್) ಎಂಬ ಋಗ್ವೇದ ಕಾಲೀನ ಸಪ್ತನದಿಗಳ ಪ್ರಸ್ತಾಪ ಇಲ್ಲಿ ಸೂಚ್ಯವಾಗಿ ಬಂದಿದೆ.

ಮಹಾಭಾರತದ ಪ್ರಕಾರ ದಧೀಚಿಮುನಿ ತಪಸ್ಸನ್ನು ಆಚರಿಸುತ್ತಿದ್ದಾಗ ಇಂದ್ರನು ಅವನ ತಪಸ್ಸಿನ ತೀವ್ರತೆಗೆ ಭಯಭೀತನಾಗಿ, ಅವನ ತಪೋಭಂಗ ಮಾಡಲು ಓರ್ವ ಅಪ್ಸರೆಯನ್ನು ಕಳಿಸುತ್ತಾನೆ. ಅವಳೇ ಸ್ವರ್ಗಲೋಕದ ಸುಂದರಿ ಅಲಂಬುಷಾ. ಅವಳ ಸೌಂದರ್ಯ ನೋಡಿ ಮರುಳಾದ ದಧೀಚಿ ಮುನಿಯ ಚಿತ್ತ ಚಂಚಲವಾಯಿತು. ವೀರ್ಯ ಸ್ಖಲನವಾಗಿ ಅವನ ತಪೋಭಂಗವಾಯಿತು. ಆಗ ಆ ವೀರ್ಯವನ್ನು ಸರಸ್ವತೀ ನದಿಯು ತನ್ನ ಗರ್ಭದಲ್ಲಿ ಸ್ವೀಕರಿಸಿ, ಒಬ್ಬ ಮಗನಿಗೆ ಜನ್ಮ ನೀಡುತ್ತಾಳೆ. ಆಗ ಆ ಮುನಿಯು ತನ್ನ ಊರ್ಜಸ್ವಿತ ವೀರ್ಯವು ನಶಿಸಿಹೋಗದಂತೆ ಸಂರಕ್ಷಿಸಿಕೊಳ್ಳಬೇಕೆಂಬ ದೂರದೃಷ್ಟಿಯಿಂದ ಸರಸ್ವತೀ ದೇವಿಗೆ ಹೀಗೆ ಆಶೀರ್ವದಿಸುತ್ತಾನೆ.

ಪ್ರಸೂತಾನಿ ಮಹಾಭಾಗೇ ಸರಸೋ ಬ್ರಹ್ಮಣಃ ಪುರಾ।
ಜಾನಂತಿ ತ್ವಾಂ ಸುರಶ್ರೇಷ್ಠೇ ಮುನಯಃ ಸಮಶಿತವ್ರತಾಃ।
ಮಮ ಪ್ರಿಯಕರೀ ಚಾಪಿ ಸತತಂ ಪ್ರಿಯದರ್ಶನೇ ।
ತಸ್ಮಾತ್ ಸಾರಸ್ವತಂ ಪುತ್ರಮದ್ಧಾ ವರವರ್ಣಿನೀ ।
ತವೈವ ನಾಮ್ನಾ ಪ್ರಥಿತಃ ಪುತ್ರಸ್ತೇ ಲೋಕಭಾವನಃ।
ಸಾರಸ್ವತ ಇತಿ ಖ್ಯಾತೋ ಭವಿಷ್ಯತಿ ಮಹಾತಪಃ॥

"ನೀನು ಬ್ರಹ್ಮನ ಮನಸ್ಸು ಎಂಬ ಸರೋವರ (ಮಾನಸ ಸರೋವರ)ದಲ್ಲಿ ಜನಿಸಿದವಳಾದುದರಿಂದ ಋಷಿಗಳು ನಿನ್ನನ್ನು ಸರಸ್ವತೀ ಎಂದು ಕರೆದಿರುವರು. ನೀನು ನನ್ನ ಮಗನಿಗೆ ಜನ್ಮ ನೀಡಿರುವುದರಿಂದ ಸದಾಕಾಲ ಪೂಜನೀಯಳಾಗುವೆ. ನಿನ್ನ ಮಗ ಸರಸ್ವತೀ ಪುತ್ರ, ಸಾರಸ್ವತ ಮಹಾಮುನಿಯೆಂದು ಜಗದ್ವಿಖ್ಯಾತ ನಾಗುವನು."

ಆ ಮಗು ಸರಸ್ವತೀ ನದೀ ತೀರದಲ್ಲಿ ಘೋರ ತಪಃಸಾಧನೆ ಮಾಡುತ್ತಿತ್ತು. ಬ್ರಹ್ಮಾವರ್ತವು, ದೀರ್ಘಕಾಲದ ದುರ್ಭಿಕ್ಷ ಮತ್ತು ಅನಾವೃಷ್ಟಿಯ ಬಾಧೆಗೊಳಗಾದ ಸಂದರ್ಭದಲ್ಲಿ, ಸಕಲ ಬ್ರಾಹ್ಮಣರೂ ಆ ಪ್ರದೇಶದಿಂದ ಪಲಾಯನ ಮಾಡುತ್ತಿದ್ದರು.

ಆಗ, ಸಾರಸ್ವತನೂ ಅವರನ್ನು ಅನುಸರಿಸುತ್ತಿರುವುದನ್ನು ನೋಡಿ, ತಾಯಿ ಸರಸ್ವತಿ ಅವನ ಬಳಿ ಹೀಗೆ ಅಂಗಲಾಚಿ ಬೇಡುತ್ತಾಳೆ.

'ನ ಗಂತವ್ಯಮಿತಃ ಪುತ್ರ ತವಾಹಾರಮಹಂ ಸದಾ।

ದಾಸ್ಯಾಮಿ ಮತ್ಸ್ಯಪ್ರವರಾನುಯ್ಯತಾಮಿಹ ಭಾರತ॥'

'ಮಗನೇ, ನೀನು ಇಲ್ಲಿಂದ ಹೋಗಬೇಡ. ನಿನಗೆ ನಾನು ಮತ್ಸ್ಯವನ್ನು ಆಹಾರವನ್ನಾಗಿ ನೀಡುತ್ತೇನೆ.

ಸಾರಸ್ವತನು ಅಲ್ಲೇ ಇದ್ದು ವೇದಗಳಲ್ಲಿರುವ ಜ್ಞಾನದ ಸಂರಕ್ಷಣೆ ಮಾಡುತ್ತ ಯಜ್ಞ-ಯಾಗಾದಿಗಳನ್ನು ನೆರವೇರಿಸುತ್ತಿದ್ದ. ದೇಶಾಂತರ ಹೊರಟ ಬ್ರಾಹ್ಮಣರು ಮರಳಿ ಅಲ್ಲಿಯೇ ಬಂದರು. ಆದರೆ ಅವರೆಲ್ಲರೂ ಕಾಲಪ್ರವಾಹದ ಸೆಳೆತಕ್ಕೆ ಸಿಕ್ಕು, ಶಾಸ್ತ್ರಜ್ಞಾನರಹಿತರಾಗಿದ್ದರು. ಇದನ್ನರಿತ ಮುನಿಯು ಅವರಿಗೆ ಪುನರಪಿ ದೀಕ್ಷಾ-ಸಂಸ್ಕಾರವನ್ನು ನೀಡಿದ. ಮಹಾಮುನಿಯ ಈ ಮಹತ್ತಮ ಸಾಧನೆಯನ್ನು ಇತ್ತೀಚಿನ ತಲೆಮಾರಿನವರೂ ಆಗಾಗ್ಗೆ ನೆನಪು ಮಾಡುತ್ತಿದ್ದಾರೆ. ಬೌದ್ಧಮತಾನುಯಾಯಿ ಅಶ್ವಘೋಷನೂ ತನ್ನ 'ಬುದ್ಧಚರಿತ'ದಲ್ಲಿ 'ಸಾರಸ್ವತಶ್ಚಾಪಿ ಜಗಾದ ನಷ್ಟಂ ವೇದ ಪುನರ್ಯಂದದೃಶುರ್ನ ಪೂರ್ವೇ। ಎಂದು ಜ್ಞಾಪಿಸಿ ಕೊಳ್ಳುತ್ತಾನೆ.

ಈ ಜನಾಂಗದ ಮೂಲಪುರುಷನ ಮಹಾನ್ ಸಾಧನೆ ಹಾಗೂ ಬೌದ್ಧಿಕ ಪ್ರಜ್ಞೆಗೆ ಹಾಗೂ ಮುನಿಯ ಜನ್ಮದಾತೆಯಾದ ಸರಸ್ವತಿಗೆ ಸಾರಸ್ವತ ಜನಾಂಗವು ಚಿರಋಣಿಯಾಗಿದೆ. ಆದರೆ, ಅರ್ಹತೆಯಿಂದ ತಾವು ಸಾರಸ್ವತರು, ಮುಂದುವರಿದವರು ಎಂದು ಬೀಗುತ್ತಿರುವ ಈ ಸಮಾಜದ ಇಂದಿನ ಪೀಳಿಗೆಯವರು ಇಂಥ ಶ್ರೇಷ್ಠ ಪೂರ್ವಪುರುಷನಿಂದ ಸ್ಫೂರ್ತಿಯನ್ನು ಇಂದಿಗೂ ಪಡೆಯುತ್ತಿರುವರೇ? ನಿಜಕ್ಕೂ ಇದು ಚಿಂತನಾರ್ಹ ವಿಷಯವಾಗಿದೆ.

ಆಶ್ರಯದಾತನು ಬ್ರಹ್ಮಾವರ್ತದ ನಿವಾಸಿಯಾದ ಪರಶುರಾಮನು. ಅಲ್ಲಿಂದ ಅವನು ಬ್ರಾಹ್ಮಣ ಕುಟುಂಬಗಳನ್ನು ಗೋಮಂತಕಕ್ಕೆ ವಲಸೆ ಬರುವಂತೆ ಕರೆದುಕೊಂಡು ಬಂದಿರಬೇಕೆಂದು ಹೇಳುವುದು ನ್ಯಾಯಸಮ್ಮತವಾಗಿದೆ. ಈ ಪ್ರದೇಶವು ತ್ರಿಹೋತ್ರ, ತ್ರಿಹೋತ್ರಕ ಅಥವಾ ತ್ರಿಹೋತ್ರಪುರ. ಮತ್ತು ಇಲ್ಲಿಯ ನಿವಾಸಿಗಳು ತ್ರಿಹೋತ್ರಪುರವಾಸಿಗಳು. ಎಸ್. ಎಸ್. ತಾಳಮಕ್ಕಿಯವರು ತ್ರಿಹೋತ್ರದ ಮೂಲ ತ್ರಿಗರ್ತ ಅಥವಾ ತಿರಹೋತ ಇರಬಹುದೆಂದು ಎರಡು ಪರ್ಯಾಯ ಸೂಚನೆಗಳನ್ನು ನೀಡಿದ್ದಾರೆ.

1. ತ್ರಿಗರ್ತ ಎಂದರೆ ಹಿಮಾಚಲ ಪ್ರದೇಶದ ಶಿವಾಲಿಕ ಬೆಟ್ಟದಲ್ಲಿರುವ ಮೂರು ಗ್ರಾಮಗಳ ಸಮೂಹ. ಅಲ್ಲಿ ಪ್ರಾಚೀನ ಕಾಲದಲ್ಲಿ ತ್ರಿಹೋತ್ರಿ ಬ್ರಾಹ್ಮಣರು ಯಜ್ಞಯಾಗಗಳನ್ನು ನೆರವೇರಿಸುತ್ತಿದ್ದರು.

2. ತೀರ–ಭೋತ ಎಂದರೆ ಎತ್ತರದ ಪ್ರದೇಶ ಅಥವಾ ತಿಬೇಟದಂಥ ಪರ್ವತ ಪ್ರದೇಶಕ್ಕೆ ಹೋಲಿಸಿದಾಗ ತಿರ–ಹೋತ ಎಂದರೆ ಕಣಿವೆ ಪ್ರದೇಶ ಅಥವಾ ನದೀತಳದಲ್ಲಿರುವ ಭೂಮಿ.

3. ಸ್ಕಂದ ಪುರಾಣದ 'ಗೋಮಾಂಚಲ ಮಾಹಾತ್ಮ್ಯಂ'ವು ಹೀಗೆ ಜ್ಞಾಪಿಸುತ್ತದೆ. "ಕೃತಯುಗದಲ್ಲಿ ಬ್ರಹ್ಮನೂ ತಪಃಸಾಧನೆ ಮಾಡಿದ. ಮಾಂಗಿರೀಶನ ಆಶೀರ್ವಾದದಿಂದ ತ್ರಿಹೋತ್ರಕದಲ್ಲಿ ಅದ್ಭುತವಾದ ಮಾಂಗಿರೀಶ ಲಿಂಗವನ್ನು ಪ್ರತಿಷ್ಠಾಪಿಸಿದ".

ಪೂರ್ವಕೃತಯುಗೇ ಪುತ್ರ ಮಮಾಜ್ಞಯಾ ವಿರಿಂಚಿನಾ।
.. .. ತಪಃ ಕೃತ್ವಾ ತ್ರಿಹೋತ್ರಕೇ ಮಾಂಗಿರೀಶ ಪ್ರಸಾದಾತ್ತು
ಕರ್ಮಾಧೀನಂ ಜಗತ್ಕೃತಂ ॥..........
ಬ್ರಹ್ಮಣಾ ಸ್ಥಾಪಿತಂ ಲಿಂಗಂ ಮಾಂಗಿರೀಶ ಮಹಾದ್ಭುತಂ ।
ಪರ್ವತೇ ಸತ್ಕೃತೇ ತತ್ರ ದೇಶತ್ರಿಹೋತ್ರಪೂರ್ವಯೋಃ॥

ಆದ ಕಾರಣ, ಮಾಂಗಿರೀಶ ಮತ್ತು ತ್ರಿಹೋತ್ರಕ ಎಂದರೆ ಯಾವುದು ಎಂಬುದನ್ನು ಸರಿಯಾಗಿ ಗುರುತಿಸಬೇಕಾಗಿದೆ. ಆರ್ಯರು ಮೊಟ್ಟಮೊದಲು ಪಂಜಾಬದ ಸಮತಲ ಪ್ರದೇಶದಲ್ಲಿ ಇಳಿದು ಬರುತ್ತಿರುವಾಗ. ಪಶ್ಚಿಮದ ಅಫಘಾನಿಸ್ಥಾನದಿಂದ ಪ್ರಾರಂಭಿಸಿ ವಾಯವ್ಯ ಸರಹದ್ದಿನ ಪ್ರಾಂತ, ಪಶ್ಚಿಮ ಪಂಜಾಬ, ಪಾಕಿಸ್ಥಾನದ ಸಿಂಧ ಪ್ರದೇಶ, ಭಾರತದ ಪೂರ್ವ ಪಂಜಾಬ ಹಾಗೂ ರಾಜಸ್ಥಾನದ ತನಕ ಸಾಗಿಬಂದರು. ಸಪ್ತನದಿಗಳಾದ ಸಿಂಧು, ಸರಸ್ವತಿ, ಸತಲಜ್, ಬಿಯಾಸ್, ರಾವಿ, ಚೆನಾಬ್ ಮತ್ತು ಝೇಲಮ್ ಎಂಬ ಸುಪರಿಚಿತ ನದೀ ತೀರದಗುಂಟ ತಮ್ಮ ನೆಲೆಗಳನ್ನು ಸ್ಥಾಪಿಸಿಕೊಂಡರು. ಗಂಗಾ–ಯಮುನಾ ನದಿಗಳು ಅವರ ವಸಾಹತು ಸ್ಥಳಗಳಿಂದ ಹೊರತಾಗಿದ್ದವು. ಕೋಸಲ ಮತ್ತು ವಿದೇಹಗಳ ಪ್ರಸ್ತಾಪವು ಶತಪಥ ಬ್ರಾಹ್ಮಣಗಳಲ್ಲಿ ಬರುತ್ತದೆ. ವೈದಿಕ ಸಾಹಿತ್ಯದಲ್ಲಿ ಬರುವುದಿಲ್ಲ. ಆದ ಕಾರಣ, ಬ್ರಹ್ಮನು ತಪಃಸಾಧನೆಗೈದ ಪ್ರದೇಶವಾದ ಆ ಬ್ರಹ್ಮಾವರ್ತವೇ ತ್ರಿಹೋತ್ರಕ ಇರಬೇಕು. ಈ ಮೊದಲೇ ತಿಳಿಸಿದಂತೆ ಬ್ರಹ್ಮನೂ, ದೇವತೆಗಳೂ ತಪಸ್ಸನ್ನು ಮಾಡಿರುವ ಸ್ಥಳವಾದುದರಿಂದ ಅದು ಬ್ರಹ್ಮಾವರ್ತ

ಎಂದು ಪ್ರಖ್ಯಾತವಾಗಿದೆ.

ಲಾಟ್ಯಾಯನ ಶ್ರೌತಸೂತ್ರದ ಪ್ರಕಾರ, ಸರಸ್ವತಿಯು ವಿನಶನ ಎಂಬಲ್ಲಿ ಭೂತಳದಿಂದ ಅದೃಶ್ಯಳಾದಳು. ಅಲ್ಲಿಂದ ಮುಂದೆ ಆ ನದಿಯ ಹರಿವನ್ನು ಯಾರೂ ನೋಡಿಲ್ಲ.

'ಸರಸ್ವತೀ ನಾಮ ನದೀ ಪ್ರತ್ಯಕ್ ಸ್ರೋತಾ ಪ್ರವಹತಿ ತಸ್ಯಾ ಪ್ರಾಗಪರಭಾಗೌ ಸರ್ವಲೋಕಪ್ರತ್ಯಕ್ಷೌ ಮಧ್ಯಮಸ್ತುಭಾಗಃ ಭೂಮ್ಯಂತರ್ನಿಮಗ್ನಃ ಪ್ರವಹತಿ ನಾಸೌ ಕೇನಚಿದ್ ದೃಶ್ಯತೇ ತದ್ವಿನಶನಮುಚ್ಯತೇ।'

ಇದು ಪ್ರಾಯಶಃ ಕೃತಯುಗದ ಅಂತ್ಯಕಾಲದಲ್ಲಿ ಘಟಿಸಿರಬಹುದು. ನದಿ ಬತ್ತಿ ಹೋಗುತ್ತಿದ್ದಾಗಲೇ ಆರ್ಯರು ಪೂರ್ವಾಭಿಮುಖವಾಗಿ ಗಂಗೆಯ ಉತ್ತರ ಭಾಗದ ದಂಡೆಗುಂಟ ದೇಶಾಂತರ ಪ್ರಯಾಣ ಮಾಡಿದರು. ವಿದೇಘ ಮಾಥವನು ಯಜ್ಞಾಗ್ನಿಯನ್ನು ತನ್ನ ಮುಖದಲ್ಲಿರಿಸಿ ಮುನ್ನಡೆದ. ಹೋಗುವಾಗ ಭೂಮಿಯನ್ನು ಆರ್ಯರ ವಲಸೆಗೆ ಯೋಗ್ಯವನ್ನಾಗಿ ಮಾಡಲು ಪವಿತ್ರಗೊಳಿಸುತ್ತ ಹೋದ. ಸದಾನೀರಾ ನದಿಯ (ಆಧುನಿಕ ಗಂಡಕೀ ನದಿ) ಪರ್ಯಂತ ಸಾಗಿಹೋದ. ಆದರೆ ಆ ಸದಾನೀರಾ ನದಿಯನ್ನು ಮಾತ್ರ ಪವಿತ್ರಗೊಳಿಸಲಿಲ್ಲ. ಆಗ ವೈವಸ್ವತ ಮನುವಿನ ಜೇಷ್ಠ ಪುತ್ರ ಇಕ್ಷ್ವಾಕು ರಾಜನು ಅಯೋಧ್ಯೆಯನ್ನು ತನ್ನ ರಾಜಧಾನಿ ಯನ್ನಾಗಿ ಮಾಡಿ, ಕೋಸಲ ದೇಶದ ಸ್ಥಾಪನೆ ಮಾಡಿಕೊಳ್ಳುತ್ತಾನೆ. ವಿದೇಘ ಮಾಥವನು ಅಗ್ನಿಗೆ ಕೇಳಿದ,

'ನಾನು ಎಲ್ಲಿ ಹೋಗಿ ನೆಲೆ ನಿಲ್ಲಬೇಕು?' ಆಗ ಅಗ್ನಿ ಹೀಗೆ ಉತ್ತರಿಸಿದ.
'ಸದಾನೀರಾ ನದಿಯ ಪೂರ್ವಭಾಗದ ಪ್ರದೇಶದ ಪರ್ಯಂತ.'

ಆದ್ದರಿಂದ ವಿದೇಘ ಮಾಥವನು ನದಿಯ ಆಚೆಯ ದಡದಲ್ಲಿ ತನ್ನ ರಾಜ್ಯದ ಸ್ಥಾಪನೆ ಮಾಡಿಕೊಂಡಿದ್ದರಿಂದ ಆ ಪ್ರದೇಶಕ್ಕೆ 'ವಿದೇಹ' ಎಂದೂ, ತನ್ನ ಮಗ ಮಿಥಿಯ ನೆನಪಿಗಾಗಿ, ರಾಜಧಾನಿಗೆ ಮಿಥಿಲಾನಗರ ಎಂದೂ ನಾಮಕರಣ ಮಾಡಿದ. ಅನೇಕ ತಲೆಮಾರುಗಳ ಬಳಿಕ, ಈ ವಂಶದಲ್ಲಿ ಜನಕ ಮಹಾರಾಜನ ಜನನವಾಗಿತ್ತು. ಜನಕನು ಸೀತೆಯ ತಂದೆ. ಉಪನಿಷತ್ತಿನಲ್ಲಿ ಬರುವ ಯಾಜ್ಞವಲ್ಕ್ಯರ ಸಂವಾದದ ಸಂದರ್ಭದಲ್ಲಿ, ಜನಕನ ಪ್ರಸ್ತಾಪ ಆಗಾಗ್ಗೆ ಬರುತ್ತಿರುತ್ತದೆ. ಅವನು ಹೀಗೆ ಉದ್ಗರಿಸಿದ್ದ.

ಅನಂತಂ ಬತ ಮೇ ವಿತ್ತಂ ಯಸ್ಯ ಮೇ ನಾಸ್ತಿ ಕಿಂಚನ ।
ಮಿಥಿಲಾಯಾಂ ಪ್ರದೀಪ್ತಾಯಂ ನ ಮೇ ಕಿಂಚಿತ್ ಪ್ರದಹ್ಯತೇ ॥

"ನನ್ನ ಸಂಪತ್ತು ಅಪರಿಮಿತವಾಗಿದೆ. ಅದ್ಯಾವುದೂ ನನ್ನದಲ್ಲ. ಮಿಥಿಲಾನಗರಿಯೆಲ್ಲ ಸುಟ್ಟು ಹೋದರೂ, ನನ್ನದಾವುದೂ ಸುಟ್ಟು ಹೋಗುವುದಿಲ್ಲ." ಅನೇಕ ತಲೆಮಾರುಗಳ ಪರ್ಯಂತ ಕೋಸಲ ಮತ್ತು ವಿದೇಹದ ನಡುವೆ ಸದಾನೀರಾ ನದಿ ವಿಭಾಜಕ ರೇಖೆಯಾಗಿದೆ.

ತಿರಹುತ್ ವಿದೇಹಕ್ಕೆ ಸಂಬಂಧಪಟ್ಟಿದೆ. ತಿರಹುತ್ ಅಥವಾ ತಿರಭುಕ್ತಿಯು ಸ್ಕಂದಪುರಾಣದಲ್ಲಿ ಎಲ್ಲೂ ತ್ರಿಹೋತ್ರ, ತ್ರಿಹೋತ್ರಕ ಅಥವಾ ತ್ರಿಹೋತ್ರಪುರ ಎಂದು ಗುರುತಿಸಲ್ಪಟ್ಟಿಲ್ಲ. ಹಾಗೂ ಉಲ್ಲೇಖಿಸಲ್ಪಟ್ಟಿಲ್ಲ. ಬೃಹತ್ ವಿಷ್ಣುಪುರಾಣದ ಮಿಥಿಲಾಖಂಡದಲ್ಲಿ ತಿರಹುತ್ ಅಥವಾ ತಿರಭುಕ್ತಿಯ ಉಲ್ಲೇಖ ಬಂದರೂ ಅದು ತ್ರಿಹೋತ್ರ ಎಂದು ಗುರುತಿಸಲ್ಪಟ್ಟಿಲ್ಲ. ಪುರುಷೋತ್ತಮ ದೇವನ 'ತ್ರಿಖಂಡಶೇಷ ಕೋಶ'ವು ತಿರಭುಕ್ತಿಯನ್ನು ಹೀಗೆ ಉಲ್ಲೇಖಿಸುತ್ತದೆ.

ಗಂಗಾತೀರಾವಧಿಗತಾ ಯದ್‌ಭಾವೋ ಭಾಗ್ನ ಭುಕ್ತಿಃ।
ನಾಮ್ನಾ ಸೈವ ತ್ರಿಭುವನ ವಿಶ್ರುತಾ ತಿರಭುಕ್ತಿ॥

ಶ್ಯಾಮನಾರಾಯಣ ಸಿಂಘರ 'ಮಿಥಿಲೆಯ ಇತಿಹಾಸ' ಎಂಬ ಕೃತಿಯನ್ನಾಧರಿಸಿ, ಪ್ರಿಯೋಳಕರರು ಶ್ರೀ ಶಾಂತಾದುರ್ಗಾ ಚತುಃಷಷ್ಟ್ಯಬ್ದಿ ಮಹೋತ್ಸವ ಗ್ರಂಥದಲ್ಲಿ ಈ ತಪ್ಪನ್ನು ಹೀಗೆ ಎತ್ತಿ ಹಿಡಿದಿದ್ದಾರೆ. "ಮಾಡದೋಳದ ಬಳಿಯಿರುವ ಮಂಗೇಶಿಯ ದೇವಾಲಯದಲ್ಲಿ ಮಂಗೇಶ ಎಂಬ ಕುಲದೇವತೆಯನ್ನು ಹಿಂದೊಮ್ಮೆ ಪರಶುರಾಮನು ತಂದು ಸ್ಥಾಪಿಸಿದನು. ಆ ದೇವತೆಯನ್ನು ಬಿಹಾರದ ಮೊಂಘೀರದಿಂದ ತಂದಿರಬಹುದು. ಪುರಾಣ ಕಥೆಯಲ್ಲಿ ಪಾರ್ವತಿಯು ಶಿವನಿಗೆ 'ಮಾಂಗಿರೀಶ ತ್ರಾಹಿ' ಎಂದು ಪ್ರಾರ್ಥಿಸುವ ಬದಲಿಗೆ ಶಬ್ದ ಸ್ಖಾಲಿತ್ಯದಿಂದ 'ಮಾಂಗೀಶ ತ್ರಾಹಿ' ಎಂದಳು. ಬಿಹಾರದ ಮೊಂಘೀರದ ಈಶ ಮಾಂಗಿರೀಶನೇ ಮಂಗೇಶ." ಇದು ಶಬ್ದವ್ಯುತ್ಪತ್ತಿಯ ಆಧಾರದಿಂದ ಮಾಡುವ ಮೊಂಡು ವಾದ. ಅಸಮಂಜಸ ಎನಿಸುವಷ್ಟು ಶಾಬ್ದಿಕ ಕಸರತ್ತು.

ಪರಶುರಾಮನು ಪಶ್ಚಿಮ ಕರಾವಳಿಯ ಕೊಂಕಣ ಪಟ್ಟಿಯ ಉದ್ಧಾರ ಮಾಡಿ ಗೋಮಂತಕದಲ್ಲಿ ಬ್ರಾಹ್ಮಣರನ್ನು ನೆಲೆಸುವ ವ್ಯವಸ್ಥೆ ಕೈಗೊಂಡಾಗ, ವಿದೇಹದ ದಕ್ಷಿಣ (ಬಿಹಾರ) ಹಾಗೂ ಅದರಾಚೆಯ ಭೂಭಾಗವು ಯಜ್ಞಾಗ್ನಿಯಿಂದ ಇನ್ನೂ ಪವಿತ್ರೀಕೃತವಾಗಿರಲಿಲ್ಲ. ಯಾಸ್ಕ ಮತ್ತು ಸಾಯಣಾಚಾರ್ಯರ ಅಭಿಪ್ರಾಯದ ಪ್ರಕಾರ, ಅಲ್ಲಿ ಆಗ ಕೀಕಟ ದೇಶದ

(ಮಗಧ) ಅನಾರ್ಯರು ವಾಸಿಸುತ್ತಿದ್ದರು. ಕೇಣಿಯವರು ತನ್ನ Origin of Magadha ಎಂಬ ಲೇಖನದಲ್ಲಿ ಅವರು ದ್ರಾವಿಡರಾಗಿದ್ದರೆಂದು ಗುರುತಿಸಿದ್ದಾರೆ. ಅವರು ವೇದ ಶಾಸ್ತ್ರಗಳ ಜ್ಞಾನದ ಪರಿಚಯವಿಲ್ಲದವರಾಗಿದ್ದರು. ವಿಶ್ವಾಮಿತ್ರನು ಇಂದ್ರನಿಗೆ ಹೀಗೆ ಕೇಳಿದ್ದ. "ನಿನ್ನ ಗೋವುಗಳಿಂದ (ವೈದಿಕ ಜ್ಞಾನ) ಕೀಕಟರಿಗೇನು ಪ್ರಯೋಜನವಾದೀತು? ಅವರಿಗೆ ಹಾಲನ್ನು (ಜ್ಞಾನಧಾರೆ) ಹಿಂಡಲಿಕ್ಕೆ ಬರುವುದಿಲ್ಲ. ಅದನ್ನು ಸೋಮರಸ(ಬ್ರಹ್ಮಾನಂದ)ದೊಂದಿಗೆ ಬೆರೆಸಲಿಕ್ಕೂ ಬರುವುದಿಲ್ಲ."

ಕಾಲಾಂತರದಲ್ಲಿ, ಈ ದಕ್ಷಿಣ ಭಾಗವು ಮಗಧ ಎಂದು ಪ್ರಖ್ಯಾತವಾಯಿತು. ಆದಕಾರಣ, ವಿದೇಹದಲ್ಲಿ ತಿರಹುತ್ ಮತ್ತು ಮೊಂಘೀರ ಇದೆಯೆಂದೂ, ಪರಶುರಾಮನು ಬ್ರಾಹ್ಮಣರನ್ನು ಅದೇ ರೀತಿ ಮಂಗೇಶ ಕುಲದೇವತೆಯನ್ನು ವಿದೇಹದಿಂದ (ಬಿಹಾರ) ಕರೆದುಕೊಂಡು ಬಂದನೆಂದೂ, ಯಾವುದೋ ಒಂದು ಕಾಲ್ಪನಿಕ ವ್ಯಾಪ್ತಿಯಿಂದ ಸಾಧಿಸುವ ಸಾಹಸವು ಕರುಣಾಜನಕ ಸಂಗತಿಯೇ ಸೈ. ತ್ರಿಹೋತ್ರವು ಸರಸ್ವತೀ ನದಿತೀರದ ಬ್ರಹ್ಮಾವರ್ತವೇ ಹೊರತು ಇನ್ನಾವುದೂ ಅಲ್ಲ. ಸಾರಸ್ವತ ಸಮಾಜವು ಈ ಪೂರ್ವಗ್ರಹೀತ ವಿಚಾರವನ್ನು ಆದಷ್ಟು ಬೇಗ ತನ್ನ ಮನಸ್ಸಿನ ಮೂಲೆಯಿಂದ ಕಿತ್ತೊಗೆದರೆ ಕ್ಷೇಮ. ಏಕೆಂದರೆ ಹಾಗೆ ಮಾಡಿದಾಗಲೇ ಅದಕ್ಕೆ ತನ್ನ ವೈಭವಯುತ ಪರಂಪರೆಯ ಪ್ರಜ್ಞೆ ಮೂಡುತ್ತದೆ.

ಗೌಡ ಪ್ರದೇಶ ಯಾವುದು?

ಅದೇ ರೀತಿ, 'ತ್ರಿಹೋತ್ರವಾಸಿನಶ್ಚೈವ ಪಂಚಗೌಡಾಂತರೇ ಸ್ಥಿತಾ:' ಎಂಬ ಉಕ್ತಿಯಲ್ಲಿ ಬಂದ 'ಗೌಡ' ಎಂದರೆ ಯಾವುದು? ಬಂಗಾಳದಲ್ಲಿ ಕ್ರಿ. ಶ. 1060ರಲ್ಲಿದ್ದ ಸೇನ ರಾಜವಂಶದ ರಾಜಧಾನಿ ಗೌಡ ಅಥವಾ ಗೌರ ಎಂದರೆ ಯಾವುದು? ಇವೆಲ್ಲದರ ಕುರಿತು ಪುನರ್ನಿರ್ಧಾರ ಮಾಡುವ ಅಗತ್ಯವಿದೆ. ಕೊಂಕಣೀ ಮತ್ತು ಬಂಗಾಲೀ ಭಾಷೆಯ ಕೆಲವು ಶಬ್ದಗಳಲ್ಲಿರುವ ಧ್ವನಿಸ್ವಾಮ್ಯ ಹಾಗೂ ಈ ಎರಡು ಭಾಷಿಕರಲ್ಲಿರುವ ಮತ್ಸ್ಯ ಪ್ರಾಶಸ್ತ್ಯದ ಆಹಾರ ಸಾಮ್ಯವನ್ನು ಪರಿಗಣಿಸಿ, ಪರಶುರಾಮನು ಗೌಡಸಾರಸ್ವತರನ್ನು ಬಂಗಾಲದಿಂದ ಗೋಮಂತಕಕ್ಕೆ ವಲಸೆ ಬರುವಂತೆ ಕರೆತಂದನೆಂದು ಕೆಲವರು ನಿರ್ಧರಿಸಿದರು. ಆದರೆ ಪೌರಾಣಿಕ ವಿವರಣೆ ಮತ್ತು ಶಬ್ದಸಾಮ್ಯಗಳು ತರ್ಕಸಮ್ಮತ ಮತ್ತು ವಿವೇಚನಾಯುಕ್ತ ನಿರ್ಧಾರವನ್ನು ಮಂಡಿಸಲಾರವು.

ಸರಸ್ವತೀ ನದಿಯ ಪ್ರವಾಹದ ಪ್ರಮಾಣವು ತಗ್ಗುತ್ತ ಹೋಗಿ ತಟವರ್ತೀ ಭೂಪ್ರದೇಶವು ಆಶ್ರಯರಹಿತವಾದ ಬಳಿಕ, ಸಿಂಧು-ಸರಸ್ವತೀ ನಾಗರಿಕತೆಗಳು

ಅವನತಿಯ ಹಂತವನ್ನು ತಲಪಿದವು. ಆಗ ಜಯಶಾಲೀ ಆರ್ಯರೂ, ಪರಾಜಿತ ಅನಾರ್ಯರೂ ಕೃತಯುಗದ ಮಧ್ಯಕಾಲದಲ್ಲಿ ಪೂರ್ವಾಭಿಮುಖವಾಗಿ ದೇಶಾಂತರ ವಾಸಮಾಡಲು ಹೊರಟರೆಂಬುದನ್ನು ನಾವು ಈ ಮೊದಲೇ ಗಮನಿಸಿದ್ದೇವೆ. ಇಕ್ಷ್ವಾಕು ವಂಶದವರು ಕೋಸಲ ರಾಜ್ಯದಲ್ಲಿ ಆಧಿಪತ್ಯವನ್ನು ಸ್ಥಾಪಿಸಿ, ಅಯೋಧ್ಯೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡರು. ಸದಾನೀರಾ ನದಿಯ ಆಚೆಯ ಪ್ರದೇಶದಲ್ಲಿ ವಿದೇಘ ಮಾಥವನು ರಾಜ್ಯಾಡಳಿತವನ್ನು ನಡೆಸುತ್ತಿದ್ದನು. ಸಗರ ರಾಜನ ಮರಣದೊಂದಿಗೆ ಕೃತಯುಗದ ಅಂತ್ಯಕಾಲ ಸಂಭವಿಸಿತು. ಅನಂತರದ ದಿನಗಳಲ್ಲಿ, ಸಗರನ ವಂಶಜನಾದ ಭಗೀರಥನು ಸ್ವರ್ಗಲೋಕದಿಂದ ಪವಿತ್ರ ಗಂಗಾಮಾತೆಯ ಅವತರಣವಾಗುವಂತೆ ಮಾಡಿದ ನೆಂಬ ಪ್ರತೀತಿಯಿದೆ. ಕಾವ್ಯದ ಕಲ್ಪನಾಂಶವನ್ನು ತೆಗೆದುಹಾಕಿದರೆ ಅವನ ಕಾಲದಲ್ಲಿ ಗಂಗೆಯು ಪವಿತ್ರ ನದಿಯ ಮಾನ್ಯತೆ ಪಡೆಯಿತು. ಪ್ರಯಾಗದಲ್ಲಿ ಗಂಗಾ, ಯಮುನಾ, ಮತ್ತು ಪುರಾಣಕಾಲೀನ ಸರಸ್ವತೀ ಈ ಮೂರು ನದಿಗಳು ಕೂಡುವುದರಿಂದ ಅದು ತ್ರಿವೇಣೀ-ಸಂಗಮ ಎಂದೂ, ವಾರಣಾಸಿಯು ಶಿವಕ್ಷೇತ್ರ ಎಂದೂ ಪ್ರಖ್ಯಾತವಾಯಿತು. ಇವು ಪವಿತ್ರ ಯಾತ್ರಾಸ್ಥಳವಾಗಿ ಬ್ರಹ್ಮಾವರ್ತದ ಸ್ಥಾನವನ್ನು ಆಕ್ರಮಿಸಿಕೊಂಡವು.

ಇಂಥ ಘಟನೆಗಳು ಸಂಭವಿಸುತ್ತಿದ್ದಂತೆ, ಬ್ರಹ್ಮಾವರ್ತವು ತನ್ನ ಆಧ್ಯಾತ್ಮಿಕ ಸಂಬಂಧವನ್ನು ಕಳೆದುಕೊಂಡಿತು. ಆಗ ಪ್ರಯಾಗ ಮತ್ತು ವಾರಣಾಸಿ ಕ್ಷೇತ್ರಗಳು ಯಜ್ಞ-ಯಾಗಗಳನ್ನು ನೆರವೇರಿಸುವ ಸಲುವಾಗಿ ಬ್ರಹ್ಮಾವರ್ತದ ಮಾನ್ಯತೆಯನ್ನು ಆಕ್ರಮಿಸಿಕೊಂಡವು. ಅಯೋಧ್ಯೆಯು ಆರ್ಯರ ಆಧ್ಯಾತ್ಮಿಕ ಮತ್ತು ಸಾಂಸ್ಕೃತಿಕ ಕೇಂದ್ರವಾಯಿತು. ಪಾರ್ಗಿಟರನು ಸಿದ್ಧಪಡಿಸಿದ ವಂಶಾವಳಿಯ ಕೋಷ್ಟಕದ ಪ್ರಕಾರ, ದಾಶರಥೀ ರಾಮನ ಕಾಲಕ್ಕಿಂತ ಪರಶುರಾಮನು ಅನೇಕ ಪೀಳಿಗೆಗಳ ಪೂರ್ವದಲ್ಲಿದ್ದನು. ಜನಕನು ಮಿಥಿಲೆಯಲ್ಲಿ ರಾಜ್ಯಭಾರ ಮಾಡುತ್ತಿದ್ದ. ಹಾಗೂ ಯಾಜ್ಞವಲ್ಕ್ಯನು ಅವನ ಆಸ್ಥಾನಗಳನ್ನು ಸಂದರ್ಶಿಸುತ್ತಿದ್ದ ಕಾಲವು ತ್ರೇತಾಯುಗದ ಅಂತಿಮ ಕಾಲವಾಗಿತ್ತು. ಏಕೆಂದರೆ ದಾಶರಥೀ ರಾಮನ ನಿರ್ಯಾಣ ಕಾಲದೊಂದಿಗೆ ತ್ರೇತಾಯುಗದ ಅಂತ್ಯವಾಯಿತು. ದೀಕ್ಷಿತರರು ತಮ್ಮ Aryanisation of Eastern India ಎಂಬ ಲೇಖನದಲ್ಲಿ ವ್ಯಕ್ತಪಡಿಸಿದ ಅಭಿಪ್ರಾಯದ ಪ್ರಕಾರ, ದ್ವಾಪರಯುಗದಲ್ಲಿ ಶ್ರೀ ಕೃಷ್ಣನು ನರಕಾಸುರನನ್ನು ಸೋಲಿಸಿದಾಗ ಆರ್ಯರ ನೆಲೆಗಳು ಆಸ್ಸಾಮದ ಕಾಮರೂಪದ ತನಕ ತಲಪಿದ್ದವು.

ಸ್ಕಂದ ಪುರಾಣವು ಅನಂತರ ಬಂದ ಪುರಾಣ ಎಂದು ಮಾನ್ಯತೆ

ಪಡೆದಿದೆ. ಈ ಪುರಾಣದ ಸಹ್ಯಾದ್ರಿ ಖಂಡದಲ್ಲಿ ಬ್ರಾಹ್ಮಣರು ದಕ್ಷಿಣ ಭಾರತದ ಕಡೆ ವಲಸೆ ಹೋದ ಅನೇಕ ವೃತ್ತಾಂತಗಳಿವೆ. ನಂತರದ ಶತಮಾನಗಳಲ್ಲಿ ಬಹುಶಃ ಉತ್ತರ ಭಾರತದಲ್ಲಿ ಬುದ್ಧನ ಕಾಲದ ಬಳಿಕ ಬೌದ್ಧ ಪ್ರಭಾವವು ಉಚ್ಛ್ರಾಯ ಸ್ಥಿತಿಯಲ್ಲಿದ್ದಾಗ ಬ್ರಾಹ್ಮಣರು ಹಿಂದೂ ರಾಜರು ಆಳುತ್ತಿದ್ದ ದಕ್ಷಿಣಭಾಗಕ್ಕೆ ಮತ್ತು ವಿಂಧ್ಯೋತ್ತರ ಭಾಗಕ್ಕೆ ವಲಸೆ ಹೋದರು. ಈ ಅವಧಿಯಲ್ಲೇ ವಿಂಧ್ಯ ಪರ್ವತದ ದಕ್ಷಿಣ ಹಾಗೂ ಉತ್ತರ ಭಾಗಗಳಾಗಿ ಪಂಚ ಬ್ರಾಹ್ಮಣರ ಕೇಂದ್ರಗಳು ವಿಂಗಡಿಸಲ್ಪಟ್ಟವು.

ಮಹಾರಾಷ್ಟ್ರಾಂಧ್ರ ದ್ರವಿಡಾಃ ಕರ್ನಾಟಶ್ಚೈವ ಗುರ್ಜರಾಃ।
ದ್ರಾವಿಡಾಃ ಪಂಚಧಾ ಪ್ರೋಕ್ತಾ ವಿಂಧ್ಯದಕ್ಷಿಣವಾಸಿನಃ॥
ಸಾರಸ್ವತಾಃ ಕಾನ್ಯಕುಬ್ಜಾ ಗೌಡೋತ್ಕಲ ಮೈಥಿಲಾಃ ।
ಗೌಡಾಃ ಪಂಚವಿಧಾ ಪ್ರೋಕ್ತಾ ವಿಂಧ್ಯಾದುತ್ತರ ವಾಸಿನಃ॥

ಹೀಗೆ, ಗೌಡರು ಎಂದರೆ, ಸಾರಸ್ವತ, ಕಾನ್ಯಕುಬ್ಜ, ಗೌಡ, ಉತ್ಕಲ ಹಾಗೂ ಮೈಥಿಲ ಎಂಬ ಐದು ಪ್ರಕಾರದ ಬ್ರಾಹ್ಮಣ ವಸಾಹತುಗಳು. ಅವರು ನೆಲೆಸಿರುವ ಪ್ರದೇಶದ ಮೂಲಕ, ಇಲ್ಲಿ ಅವರನ್ನು ಹೀಗೆ ಗುರುತಿಸಲಾಗಿದೆ.

ಸಾರಸ್ವತರು – ವಾಯವ್ಯ ದಿಕ್ಕಿನ ಸರಸ್ವತೀ ತೀರದಲ್ಲಿ.

ಕಾನ್ಯಕುಬ್ಜರು – ನೈಋತ್ಯ ದಿಕ್ಕಿನ ಕನ್ನೌಜದಲ್ಲಿ.

ಉತ್ಕಲರು – ಆಗ್ನೇಯ ದಿಕ್ಕಿನ ಓಡಿಶಾದಲ್ಲಿ.

ಮೈಥಿಲರು – ಈಶಾನ್ಯ ದಿಕ್ಕಿನ ಮಿಥಿಲೆಯಲ್ಲಿ ಅಥವಾ ಉತ್ತರ ಬಿಹಾರದಲ್ಲಿ.

ಗೌಡರು– ಅಯೋಧ್ಯೆ ಅಥವಾ ಗೌಡ ಪ್ರದೇಶವನ್ನು ಕೇಂದ್ರ ಭಾಗವನ್ನಾಗಿಸಿ, ಕೇಂದ್ರದ ಸುತ್ತಲೂ ಇರುವ ಅರ್ಧ ವೃತ್ತದಲ್ಲಿ.

ಆದಕಾರಣ ಗೌಡ ಪ್ರದೇಶದ ಸುತ್ತಲೂ ಇರುವ ಈ ಎಲ್ಲ ಐದು ಬ್ರಾಹ್ಮಣ ವಸಾಹತುಗಳೇ 'ಪಂಚ ಗೌಡಾಂತರೇ ಸ್ಥಿತಾಃ' ಎಂದು ಪರಿಚಿತವಾಗಿವೆ. ಆದ್ದರಿಂದ, ಪಂಚಗೌಡಾಂತರ್ಗತ ಸಾರಸ್ವತರು, ಬಂಗಾಳದ ಸೇನ ರಾಜವಂಶದ ರಾಜಧಾನಿಯಾದ 'ಗೌಡ' ಅಥವಾ 'ಗೌರ'ದಿಂದ ತರಲ್ಪಟ್ಟವರಲ್ಲ. ಅವರು ಸರಸ್ವತೀ ನದೀ ತೀರದ ಬ್ರಹ್ಮಾವರ್ತ ಅಥವಾ ತ್ರಿಹೋತ್ರದಿಂದಲೇ ತರಲ್ಪಟ್ಟವರು. ಪರಶುರಾಮನು ಬ್ರಾಹ್ಮಣ ಕುಟುಂಬಗಳನ್ನು ಗೋಮಂತಕಕ್ಕೆ ಕರೆತಂದಾಗ, ದೂರದ ಬಂಗಾಲಕ್ಕೆ ಸಂಬಂಧಿಸಿದ ಅಂಗ–ವಂಗ ದೇಶಗಳಿರಲಿ, ಮಗಧ

ಪ್ರದೇಶ ಕೂಡ ಬ್ರಾಹ್ಮಣ ಪ್ರಭಾವದ ಪ್ರದೇಶವಾಗಿರಲಿಲ್ಲ. ಮೊಟ್ಟಮೊದಲು, ಬ್ರಹ್ಮಾವರ್ತ ಅಥವಾ ತ್ರಿಹೋತ್ರದಿಂದ ತರಲ್ಪಟ್ಟ ಸಾರಸ್ವತರೇ ಸದ್ಯದ ಗೌಡ ಸಾರಸ್ವತರು. ಆದರೆ ಕೆಲ ಕಾಲಾನಂತರ, ಕಾಶ್ಮೀರದಿಂದ ನೈಋತ್ಯ ದಿಕ್ಕಿನ ಕಡೆ, ಪ್ರತ್ಯೇಕವಾಗಿ ವಲಸೆ ಬಂದವರೇ ಸಾರಸ್ವತರು.

ದೀಕ್ಷಿತರ್ ಕೂಡ ತಮ್ಮ 'Aryanisation of Eastern India' ಎಂಬ ಲೇಖನದಲ್ಲಿ ತಮ್ಮ ಅಭಿಪ್ರಾಯವನ್ನು ಹೀಗೆ ಮಂಡಿಸಿದ್ದಾರೆ.

"ದ್ವಾಪರಯುಗದಲ್ಲಿ ಕೃಷ್ಣನು ನರಕಾಸುರನನ್ನು ಸೋಲಿಸಿದ ಬಳಿಕ, ಆರ್ಯರ ವಸಾಹತುಗಳು ಆಸ್ಸಾಮದ ಕಾಮರೂಪದ ತನಕ ಮಾತ್ರ ಪಸರಿಸಿದ್ದವು. ವಂಗದೇಶದ ಪೂರ್ವಭಾಗ ಹಾಗೂ ಅಂಗ ದೇಶದ ಪಶ್ಚಿಮ ಭಾಗಗಳೂ ಆರ್ಯರ ಪ್ರಭಾವಕ್ಕೆ ಮಣಿದಿದ್ದವು. ಕೃತಯುಗದಲ್ಲಿ ಆರ್ಯರು ಬಂಗಾಲವನ್ನು ತಲಪಿರಲಿಲ್ಲ. ಆದ್ದರಿಂದ, ಅಷ್ಟು ದೂರದ ಪ್ರದೇಶದಿಂದ ಪರಶುರಾಮನು ವಂಗ ದೇಶೀಯರನ್ನು ತರುವುದು ಶಕ್ಯವಾಗಿರಲಾರದು. ಪಂಡಿತ ಜ್ವಾಲಾಪ್ರಸಾದ ಮಿಶ್ರರು 'ಜಾತಿಭಾಸ್ಕರ'ದಲ್ಲಿ ಹೀಗೆ ಹೇಳಿದ್ದಾರೆ. "ಕನ್ನೌಜ ದೇಶದ ರಾಜನಾದ ವೀರಸಿಂಹನು ಇತ್ತೀಚಿನ ಕಾಲಘಟ್ಟದಲ್ಲಿ ಕ್ರಿ. ಶ. 1097ರಲ್ಲಿ ವಂಗ ದೇಶದ ರಾಜ ಆದಿಸುರನ ವಿನಂತಿಯ ಮೇರೆಗೆ ಬಂಗಾಲಕ್ಕೆ ಕಾನ್ಯಕುಬ್ಜ ಬ್ರಾಹ್ಮಣರನ್ನು ಕಳುಹಿಸಿದ್ದ."

ಗೌಡ ಸಾರಸ್ವತರು ಬಂಗಾಲದವರಲ್ಲ ಎಂದು ಬಂಗಾಲೀ ಬ್ರಾಹ್ಮಣರೇ ಹೇಳುತ್ತಿದ್ದರು. ಅಷ್ಟೇ ಅಲ್ಲ; ಕನ್ನಿಂಗ್ ಹ್ಯಾಮ್ ಕೂಡ ಈ ಸಂಗತಿಯನ್ನು ಪರಿಶೀಲಿಸಿ ಹೀಗೆ ಹೇಳಿದ್ದ.

"ಗೌಡವು ಬಂಗಾಲ ದೇಶದ ಹೆಸರು. ಗೌಡ ನಾಮಾಂಕಿತ ಬ್ರಾಹ್ಮಣರು ಹಿಂದುಸ್ಥಾನದವರೇ ಆದರೂ ಬಂಗಾಲದವರಲ್ಲ. ಅವರು ಹೆಚ್ಚಾಗಿ ದಿಲ್ಲೀ ಪ್ರಾಂತದಲ್ಲಿ ನೆಲೆಸಿದವರು. ಬಂಗಾಲೀ ಬ್ರಾಹ್ಮಣರು ಕನ್ನೌಜದ ದೃಢೀಕೃತ ವಲಸೆಗಾರರು."

ಆದ್ದರಿಂದ ಕ್ರಿ.ಶ. 1060ರಲ್ಲಿದ್ದ ಬಂಗಾಲದ ಸೇನ ರಾಜವಂಶದ ರಾಜಧಾನಿ ಗೌಡ ಅಥವಾ ಗೌರದ ಜೊತೆ ಗೌಡಸಾರಸ್ವತರ ಸಂಬಂಧವನ್ನು ಕಲ್ಪಿಸುವುದು ಶಾಸ್ತ್ರ ಸಮ್ಮತವಲ್ಲ. ಇದಕ್ಕೆ ಚಾರಿತ್ರಿಕ ಅಥವಾ ಭೌಗೋಲಿಕ ಸಾಕ್ಷ್ಯಾಧಾರವಿಲ್ಲ. ಇಂಥ ನಿರಾಧಾರ ಸಮರ್ಥನೆಯೇ ದೋಷಯುತವಾಗಿದೆ.

ಎರಡನೆಯ ವಸಾಹತು

ಉತ್ತರ ಗುಜರಾತವನ್ನು ತಮ್ಮ ಮಧ್ಯವರ್ತೀ ವಸತಿಯನ್ನಾಗಿ ಮಾಡಿ ಸಾರಸ್ವತರು ಗೋಮಂತಕದಲ್ಲಿ ಎರಡನೆಯ ಸಲ ವಲಸೆ ಬಂದರು. ವೇದಪೂರ್ವ ಕಾಲದಲ್ಲಿ ನಗರ ಸಂಸ್ಕೃತಿಯಿಂದ ಉದ್ಯಮಶೀಲರಾಗಿದ್ದ ಅನಾರ್ಯರು ಗಂಗಾನದಿಯ ದಕ್ಷಿಣ ತೀರದ ಪ್ರದೇಶವಾದ ಬಿಹಾರದಲ್ಲಿ ಹೊಸದಾಗಿ ಕಂಡು ಹಿಡಿದ ಕಬ್ಬಿಣದ ಅದಿರು ಮತ್ತು ಕಲ್ಲಿದ್ದಲ ಗಣಿಗಳಿಂದ ಪ್ರಬಲ ಆರ್ಥಿಕ ಶಕ್ತಿಯಾಗಿ ಹೊರಹೊಮ್ಮಿದರು. ಮಗಧ ದೇಶದ ಕೊನೆಯ ಹಿಂದೂ ಆಳರಸರೇ ನಂದರಾಗಿದ್ದರು. ಅವರ ಸ್ಥಳದಲ್ಲಿ ಚಂದ್ರಗುಪ್ತ ಮೌರ್ಯ ಸಿಂಹಾಸನಾರೂಢನಾದ. ಅವನಿಗೆ ಬಹುಶಃ ಶೂದ್ರ ಅಥವಾ ಅನಾರ್ಯ ಸ್ತ್ರೀ ಮುರಾ ಎಂಬವಳು ಜನ್ಮ ನೀಡಿದಳು. ಆ ಕಾಲದಲ್ಲಿಯೇ ತಮ್ಮ ಕ್ರಾಂತಿಕಾರೀ ವಿಚಾರಗಳಿಂದ ವೇದಶಾಸ್ತ್ರಗಳನ್ನು ವಿರೋಧಿಸುವ ಪಾಶುಪತ, ಕಾಲಾಮುಖ, ಲಕುಲೀಶ, ಕಾಪಾಲಿಕ, ಶಾಕ್ತ ಮತ್ತು ಅಘೋರೀ ಪಂಥದವರು ಮುಂಚೂಣಿಯಲ್ಲಿದ್ದರು. ಆದರೆ ಅವರೆಲ್ಲರಿಗಿಂತ ವೈದಿಕ ಧರ್ಮದ ಭವಿಷ್ಯದ ಮೇಲೆ ಮಹಾವೀರ ಮತ್ತು ಗೌತಮ ಬುದ್ಧರ ಅತ್ಯಂತ ದೂರಗಾಮೀ ಪ್ರಭಾವ ಆಗಿರುವಂತೆ ಕಾಣುತ್ತದೆ. ವೇದಕಾಲದಲ್ಲಿ ಪಣಿಗಳು ಸಮೃದ್ಧ ವ್ಯಾಪಾರಿಗಳಂತೆ ಮುಂಚೂಣಿಯಲ್ಲಿದ್ದರು. ಬುದ್ಧನು ಜನಸಾಮಾನ್ಯರಲ್ಲಿ ಜಾತಿ-ಮತ-ಪಂಥಗಳ ಭೇದಭಾವ ಮಾಡದೆ ತನ್ನ ಉಪದೇಶವನ್ನು ತಿಳಿಹೇಳುತ್ತಿದ್ದಾಗ ಬ್ರಾಹ್ಮಣ್ಯದ ಪ್ರಾಬಲ್ಯವನ್ನು ವಿರೋಧಿಸುವ ಅವನ ಸಂಘದಲ್ಲಿ ಅನಾರ್ಯರೇ ಮೊದಲಿಗರಾಗಿ ಸೇರುತ್ತಿದ್ದರು. ಅನಾರ್ಯರು ಅರ್ಥಿಕ ಶಕ್ತಿಯಾಗಿ ಹೊರಹೊಮ್ಮಿ ಬುದ್ಧ, ಮಹಾವೀರರ ಸಂದೇಶದಿಂದ ನೂತನ ಪ್ರಜ್ಞೆಯನ್ನು ಪಡೆದು ಜಾಗೃತರಾದರು. ತಮಗೆ ಲೌಕಿಕದಲ್ಲಿ ಇದ್ದ ಹಾಗೆ ಆಧ್ಯಾತ್ಮಿಕ ಕಾರ್ಯಕಲಾಪಗಳಲ್ಲೂ ಸಮಪಾಲು ಬೇಕೆಂದು ಪ್ರತಿಪಾದಿಸ ತೊಡಗಿದರು. ಆಗ ತಾವೇ ವೇದ ಸಂರಕ್ಷಕರು, ಯಜ್ಞ-ಯಾಗಗಳ ನಿರ್ವಹಣೆಗೆ ಏಕಮೇವ ಪ್ರಧಾನ ಪುರೋಹಿತರು ಎಂದು ಬೀಗಿ ಮೆರೆಯುತ್ತಿರುವ ಬ್ರಾಹ್ಮಣರು, ಇಂಥ ಕ್ರಾಂತಿಕಾರೀ ಆಂದೋಲನ ಮುಂದುವರಿಯುತ್ತ ಹೋದರೆ, ತಮ್ಮ ಬಳಿಯಿದ್ದ ಎಲ್ಲ ಆರ್ಥಿಕ ಶಕ್ತಿಯೂ ಖಂಡಿತವಾಗಿ ಕೈತಪ್ಪಿ ಹೋಗುತ್ತದೆ ಎಂದು ಮನಗಂಡರು. ಆದ್ದರಿಂದ, ಅವರು ಮೊಟ್ಟ ಮೊದಲು ಬುದ್ಧ ಮತ್ತು ಮಹಾವೀರರ ತತ್ತ್ವಗಳು ಅವೈದಿಕ ಎಂದೂ, ತಮ್ಮ ಪ್ರತಿಭಟನೆ ಮಾಡುತ್ತಿರುವುದು ವೇದ ವಿರೋಧೀ ಕೃತ್ಯವೆಂದೂ ಸಾರಿದರು. ಅಶೋಕನು ಸಂಘ ಶಕ್ತಿಯ ಉತ್ಸಾಹದಿಂದ ಬುದ್ಧನ ಸಂದೇಶ ದಿಗ್ದಿಗಂತ ವ್ಯಾಪಿಸುವ ಹಾಗೆ ಪ್ರಚಾರ ಮಾಡಿದ. ಬೌದ್ಧಮತವು

ಕ್ರಿ. ಪೂ. 197ರಲ್ಲಿ ತನ್ನ ಉಚ್ಛ್ರಾಯಾವಸ್ಥೆಯಲ್ಲಿದ್ದಾಗ, ಭದ್ರಬಾಹು ಮುನಿಯ ನೇತೃತ್ವದಲ್ಲಿ ಸುಮಾರು 15,000 ಜೈನ ಮತಸ್ಥರು ಉತ್ತರ ಪ್ರದೇಶ, ಬಿಹಾರ ಮತ್ತು ಓಡಿಸಾದಿಂದ ಭಾರತದ ದಕ್ಷಿಣ ಹಾಗೂ ಪಶ್ಚಿಮ ಪ್ರದೇಶದ ಕಡೆ ವಲಸೆ ಹೋಗಬೇಕಾಯಿತೆಂದು ಚಾರಿತ್ರಿಕ ದಾಖಲೆಯಿದೆ. ಹೀಗೆ, ಜೈನ ಮತಸ್ಥರೇ ತಮ್ಮ ಅನಿಶ್ಚಿತತೆಯನ್ನು ಎದುರಿಸಬೇಕಾದ ಪ್ರಸಂಗ ಬಂದಿರುವಾಗ, ಇನ್ನು ಈ ವಿಷಯದಲ್ಲಿ ಬ್ರಾಹ್ಮಣರು ಅವರಿಗಿಂತ ಬಹಳ ಹಿಂದುಳಿಯುವ ಸಾಧ್ಯತೆ ಇದೆಯೇ?

ಕುಶಾನ ರಾಜನಾದ ಕನಿಷ್ಕನೂ (ಕ್ರಿ. ಪೂ. 120) ಬೌದ್ಧಮತವನ್ನು ಸ್ವೀಕರಿಸಿ, ಸುಸಂಯೋಜಿತ ಮಹಾಯಾನ ಪಂಥದ ಪ್ರಸಾರ ಕಾರ್ಯಕ್ಕೆ ಸಾಧನವಾದ. ಆಗ ಹಿಂದೂ ಸಂಸ್ಕಾರ-ವಿಧಿಯ ಬೃಹತ್ ಪ್ರಮಾಣದ ಪ್ರಭಾವದಲ್ಲಿದ್ದ ಬ್ರಾಹ್ಮಣರು ಬೌದ್ಧ ಮತವನ್ನು ಸ್ವೀಕರಿಸಲು ಇಷ್ಟಪಡಲಿಲ್ಲ. ಅವರು ಹಿಂದೂ ರಾಜರ ಆಧಿಪತ್ಯದಲ್ಲಿರುವ ಕಾಶ್ಮೀರ ದೇಶ ಅಥವಾ ದಕ್ಷಿಣ ಭಾಗದ ಪ್ರದೇಶಗಳತ್ತ ಬಲವಂತವಾಗಿ ವಲಸೆ ಹೋಗಬೇಕಾಯಿತು. ಸ್ವಾತಿ ಗುಪ್ತರು ತಮ್ಮ 'Migrant Brahmanas in Northern India' (ಉತ್ತರ ಭಾರತಕ್ಕೆ ವಲಸೆ ಹೋದ ಬ್ರಾಹ್ಮಣರು) ಎಂಬ ಕೃತಿಯಲ್ಲಿ ಹೀಗೆ ದಾಖಲಿಸಿದ್ದಾರೆ.

"ಕನಿಷ್ಕನ ಅಡಳಿತ ಕಾಲ ಮತ್ತು ಸುಮಾರು ಕ್ರಿ. ಶ. 646ರಲ್ಲಾದ ಹರ್ಷವರ್ಧನನ ಮರಣಕಾಲ ಈ ನಡುವಿನ ಅವಧಿಯಲ್ಲಿ ಬೌದ್ಧಮತದ ಪ್ರಭಾವ ಉತ್ತುಂಗ ಸ್ಥಿತಿಯಲ್ಲಿದ್ದಾಗ, ಬ್ರಾಹ್ಮಣರ ಪ್ರಭಾವ ಉತ್ತರ ಭಾರತದಲ್ಲಿ ಕ್ಷೀಣವಾಗಿತ್ತು. ಅಲ್ಲದೆ ಗುಪ್ತರ ಚಕ್ರಾಧಿಪತ್ಯದ (ಕ್ರಿ. ಶ. 465-1030) ಅವನತಿಯಾಗಿತ್ತು. ಪಾಲ, ರಾಷ್ಟ್ರಕೂಟ, ಗುರ್ಜರ, ಪ್ರತೀಹಾರ ಮತ್ತು ಪರಮಾರ ರಾಜರಿಂದ ಅನೇಕ ಕಾನ್ಯಕುಬ್ಜ, ಮೈಥಿಲ ಹಾಗೂ ಉತ್ಕಲ ಬ್ರಾಹ್ಮಣರು ಅನುದಾನವನ್ನು ಸ್ವೀಕರಿಸಿ, ಗುಜರಾತ, ಮಹಾರಾಷ್ಟ್ರ ಹಾಗೂ ಕೊಂಕಣಪಟ್ಟಿಯ ಕಡೆ ವಲಸೆ ಹೋದರು."

ಈ ಅವಧಿಯಲ್ಲಿ, ವತ್ಸಗೋತ್ರದ ದೇವಶರ್ಮಾ, ಕೌಂಡಿಣ್ಯ ಗೋತ್ರದ ಲೋಮಶರ್ಮಾ ಮತ್ತು ಕೌಶಿಕ ಗೋತ್ರದ ಶಿವಶರ್ಮಾ ಎಂಬ ಮೂವರು ಕಾನ್ಯಕುಬ್ಜ ಬ್ರಾಹ್ಮಣರು ದಕ್ಷಿಣ ಭಾರತದ ರಾಮೇಶ್ವರದ ತನಕ ಸಂಚರಿಸಿದರು. ಮರುಪ್ರಯಾಣ ಮಾಡುವಾಗ ಗೋಕರ್ಣವನ್ನು ಸಂದರ್ಶಿಸಿ, ಕೊನೆಯಲ್ಲಿ ಗೋಮಂತಕ ಪ್ರದೇಶವು ಪ್ರಶಾಂತ ಹಾಗೂ ಪರಮ ಮಂಗಲಕರವಾದುದೆಂದು ಕಂಡು, ಅಲ್ಲೇ ಸ್ಥಾಯಿಯಾಗಿರಲು ನಿರ್ಧರಿಸಿದರು. ದೇವಶರ್ಮಾ, ಲೋಮ

ಶರ್ಮಾ ಇವರೀರ್ವರು ಕುಶಸ್ಥಲಿಯಲ್ಲಿ ಮತ್ತು ಶಿವಶರ್ಮಾ ಕೇಲೋಶಿಯಲ್ಲಿ ನೆಲೆಸಿದರು. ಅವರು ಅಲ್ಲಿ ಈ ಮೊದಲೇ ವಲಸೆ ಹೋದ ಸಾರಸ್ವತ ಬ್ರಾಹ್ಮಣರೊಂದಿಗೆ ಹಾಲು–ಸಕ್ಕರೆ ಬೆರೆತಿರುವಂತೆ ಒಂದಾದರು. ಪರಶುರಾಮನು ಸಾರಸ್ವತರನ್ನು ಗೋಮಂತಕದಲ್ಲಿ ಪ್ರಥಮ ವಲಸೆಗಾರರನ್ನಾಗಿ ಕರೆತಂದ 1090 ವರ್ಷಗಳ ಬಳಿಕ, ಈ ಘಟನೆ ಸಂಭವಿಸಿದೆಯೆಂದು ಡಾ. ಜೆ. ಡಿ. ಕುನ್ಹಾ ಅವರು Konkani and Konkani Literature (ಕೊಂಕಣೀ ಭಾಷೆ ಮತ್ತು ಕೊಂಕಣೀ ಸಾಹಿತ್ಯ) ಎಂಬ ಕೃತಿಯಲ್ಲಿ ನಿರ್ಧರಿಸಿದ್ದಾರೆ. ಐದನೆಯ ಶತಮಾನದ ಚತುರ್ಥಪಾದದಲ್ಲಿ ಅನೇಕ ಬ್ರಾಹ್ಮಣರು ಕದಂಬ ಕುಲದ ಮಯೂರಶರ್ಮ (ಕ್ರಿ. ಶ. 345), ವಲ್ಲಭಿಯ ಮೈತ್ರಕರು, ಚಾಲುಕ್ಯರು (8ನೆಯ ಶತಮಾನ) ಹಾಗೂ ಗುಜರಾತ ರಾಜ್ಯದ ಸಿಧಾಪುರದ ಸೋಳಂಕಿ ರಾಜರ ಆಡಳಿತ ಕಾಲದಲ್ಲಿ ಪಶ್ಚಿಮ ಕರಾವಳಿಯತ್ತ ವಲಸೆ ಹೋಗಿದ್ದರು. ಅಂದು ಮಯೂರಶರ್ಮನು ಹೀಗೆ ನೊಂದು ನುಡಿದಿದ್ದನಂತೆ.

"ಅಯ್ಯೋ! ಇದು ಕಲಿ ಕಾಲ. ಅಧಿಕಾರ ಬಲದ ಮುಂದೆ, ಬ್ರಾಹ್ಮಣತ್ವವು ಅಸಹಾಯಕವಾಗಿದೆ. ಬ್ರಾಹ್ಮಣನಲ್ಲಿ ಯಜ್ಞ ಕಾರ್ಯಕ್ಕೆ ಅಗತ್ಯವಿರುವ ಸಮಿಧೆ, ಕುಶ ಮತ್ತು ಇತರ ಸಾಮಗ್ರಿಗಳನ್ನು ಬಳಸುವ ಬುದ್ಧಿಕೌಶಲ್ಯ ಇದೆ. ಆದರೆ ಅವನ ಬಾಹುಗಳಿಗೆ ಪ್ರಪಂಚದ ದಿಗ್ವಿಜಯವನ್ನು ಸಾಧಿಸುವ ಮಹಾತ್ವಾಕಾಂಕ್ಷೆಯಿಂದ ಇದೀಗ ಝುಗಝುಗಿಸುವ ಪ್ರಖರ ಯುದ್ಧ – ಸಾಮಗ್ರಿಗಳನ್ನೂ ಹಿಡಿಯಬೇಕಾದ ಪ್ರಸಂಗ ಒದಗಿ ಬಂದಿದೆಯಲ್ಲವೇ!"

ಆರನೆಯ ಶತಮಾನದ ನಂತರ ಕೊಂಕಣದ ದಕ್ಷಿಣ ಭಾಗದಲ್ಲೂ ಬ್ರಾಹ್ಮಣರು ಭದ್ರತೆ ಮತ್ತು ಮಾನ್ಯತೆಯನ್ನು ಅರಸುತ್ತ ಸ್ಥಳದಿಂದ ಸ್ಥಳಕ್ಕೆ ನಿರಂತರ ಸಂಚಾರ ಮಾಡುತ್ತಿದ್ದರು. ಕ್ರಿ. ಶ. 749ರಲ್ಲಿ ಎರಡನೆಯ ಗಂಗ ದೊರೆ ಸಾರೀಪುರುಷ ಕ್ರಿ. ಶ. 749ರಲ್ಲಿ ಪೃಥಿವೀ ಕೊಂಗಣೀ ಮಹಾರಾಜ ಇವರೀರ್ವರೂ ಆಗಿನ ಮೈಸೂರು ಪ್ರಾಂತದ ಬೇಲೂರು ಗ್ರಾಮದಲ್ಲಿ, ಅಂಗಿರಸ, ಭರದ್ವಾಜ ಮತ್ತು ವಸಿಷ್ಠ ಗೋತ್ರಜರಾದ 120 ಬ್ರಾಹ್ಮಣರಿಗೆ ಅನುದಾನವನ್ನು ನೀಡಿದರು. ಚಾಲುಕ್ಯ ದೊರೆ ತ್ರಿಭುವನ ಮಲ್ಲದೇವನ ಕ್ರಿ. ಶ. 1113ರ ಶಾಸನವು, ಶಿಶುಗುತ್ತಿಯಲ್ಲಿ ಜರುಗಿದ ಶೈವ ಸಿದ್ಧಾಂತದ ಶಾಸ್ತ್ರಾರ್ಥದಲ್ಲಿ ಭಾಗವಹಿಸಿದ 'ಸಾರಸ್ವತ ಮಹೋದಯ ಶ್ರೀಮತ್‌ಸೋಮೇಶ್ವರ'ನ ಕುರಿತು ಹೇಳುತ್ತದೆ. ಇನ್ನೊಂದು ದಕ್ಷಿಣ ಕನ್ನಡ ಜಿಲ್ಲೆಯ ಬಾರಕೂರಿನ ಕೋಟೆಕೇರಿ ಪಂಚಲಿಂಗೇಶ್ವರ ದೇವಾಲಯದಲ್ಲಿ ದೊರೆತ ಕ್ರಿ. ಶ. 1155ರ ಶಿಲಾಶಾಸನವು ಕಾಶ್ಮೀರೀ ಸಾರಸ್ವತ

ಮಲ್ಲಿಕಾರ್ಜುನ ಪಂಡಿತನ ಕುರಿತು ಹೇಳುತ್ತದೆ. ಕಾಶ್ಮೀರದ ಪಜ್ಜೇರದಲ್ಲಿ ಜನಿಸಿದ ಈತನು ಶ್ರೀನಗರದ ಪುರಾತನ ಹೆಸರಾದ ಪ್ರವರಪುರದ ರಾಜ್ಯ ಕಾರ್ಯಭಾರಪ್ರವೀಣ ಎನಿಸಿಕೊಂಡಿದ್ದ. ಕಾಶ್ಮೀರಕ್ಕೆ ಧಾರ್ಮಿಕ ಹಾಗೂ ಭೂ-ಭೌತ ವಿಜ್ಞಾನದ ರೋಚಕ ಹಿನ್ನೆಲೆಯಿದೆ. ಶತಕೋಟಿ ವರ್ಷಗಳ ಹಿಂದೆ, ಹಿಮಾಲಯದ ದಕ್ಷಿಣ ಭೂಭಾಗ ಆಫ್ರಿಕಾ ಖಂಡಕ್ಕೆ ಸಂಲಗ್ನವಾಗಿತ್ತೆಂದು ಹೇಳುತ್ತಾರೆ. ಭೂಗರ್ಭದ ವಿಪ್ಲವದ ನಿಮಿತ್ತ, ಅದು ಆಫ್ರಿಕಾದ ಪ್ರಧಾನ ಭೂಭಾಗದಿಂದ ಬೇರ್ಪಟ್ಟಿತು. ಪ್ರಚಂಡ ಶಕ್ತಿಯಿಂದ ತಳ್ಳಲ್ಪಟ್ಟ ಈ ಭೂಭಾಗವು ಏಶಿಯಾದ ಕಡೆ ಎತ್ತರಕ್ಕೇರಿತು. ಆಗಿನ ಏಶಿಯಾ ಖಂಡದ ದಕ್ಷಿಣ ಭಾಗವು ಭವ್ಯ ಹಿಮಾಚಲ ಶ್ರೇಣಿಯನ್ನು ಸೃಷ್ಟಿ ಮಾಡಲು ಆ ಭೂಭಾಗವನ್ನೇ ಎತ್ತಿ ಹಿಡಿಯಿತು. ಇದರಿಂದ ಅಲ್ಲಿ ಮೊದಲಿದ್ದ ಅಖಂಡ ಭೂಪ್ರದೇಶದ ನಕ್ಷೆಗೆ ಒಂದು ಹೊಸ ರೂಪವನ್ನೇ ನೀಡಿತು. ಕಾಶ್ಮೀರದ ಪಶ್ಚಿಮ ಭಾಗದಲ್ಲಿ ಒಂದು ಬೃಹತ್ ಸರೋವರ ರೂಪಿತವಾಯಿತು. ಇದು ಹಿಂದೂ ಪುರಾಣದ ಸತೀಸರಸ್. ಈ ಸತೀ ಶಿವನ ಅರ್ಧಾಂಗಿನಿ. ಕೆಲ ಕಾಲಾನಂತರ ಕಶ್ಯಪಮುನಿ ಈ ಸರೋವರದ ಹೆಚ್ಚುವರಿ ನೀರನ್ನು ಬರಿದು ಮಾಡಿ, ಒಣ ಭೂಮಿಯಾಗುವಂತೆ ಪರಿವರ್ತಿಸಿ, ಅದನ್ನು ಮಾನವ ವಸತಿಗೆ ಲಭ್ಯವಾಗುವಂತೆ ಕರುಣಿಸಿದನಂತೆ. ಅಂದಿನಿಂದ ಶಿವನು ಪರ್ವತಗಳ ಅಧಿದೇವತೆ. ಭರ್ರನೆ ಬೀಸುವ ಗಾಳಿಯಾದ ಮರುತರು ಶಿವನ ಸಹಚರರು. ಹರಿಯುತ್ತಿರುವ ನದಿಗಳು ಶಿವನ ನೀಳ ಕೇಶರಾಶಿ. ನಾಗಗಳು ನೀಲಕಂಠನ ಕಂಠಹಾರ. ಸಿಂಧು ಕಣಿವೆ ಹಾಗೂ ಸರಸ್ವತೀ ನಾಗರಿಕತೆಗಳ ಕಾಲದಿಂದಲೂ ಶಿವಭಕ್ತರಾದ ನಾಗಾ ಜನರು ಪುರಾಣಕಾಲೀನ ಸ್ಮೃತಿ ಚಿತ್ರಗಳಾಗಿದ್ದಾರೆ. ಇಲ್ಲಿ ಸತೀದೇವಿ ಅಥವಾ ಶಾರದಾದೇವಿಯೇ 'ಕಾಶ್ಮೀರ ಪುರವಾಸಿನೀ ಶಾರದಾದೇವಿ' ಎಂದು ವರ್ಣಿಸಲ್ಪಟ್ಟ ಮಾತೃದೇವತೆ. ಹೀಗೆ ಶೈವಮತ ಸಂಬಂಧವಿರುವುದರಿಂದ, ಕಾಶ್ಮೀರವು ಮಾತೃದೇವತೆ, ಅಲ್ಲಿ ಆಳುವ ಅರಸರು ಶಿವಾಂಶಸಂಭೂತರೆಂದು ಪರಿಗಣಿತರಾಗಿದ್ದಾರೆ.

'ಕಾಶ್ಮೀರಾ ಪಾರ್ವತೀ ತತ್ರ ರಾಜಾ ಜ್ಞೇಯೋ ಹರಾಂಶಜಃ'

ಸಾರಸ್ವತರು ಕಾಶ್ಮೀರದಲ್ಲಿ ನೆಲೆಸಿದಂದಿನಿಂದ, ಸರಸ್ವತೀ ದೇವಿ ಮತ್ತು ಅವಳ ಪ್ರಖ್ಯಾತ ಪುತ್ರ ಸಾರಸ್ವತ ಮುನಿಗಳು ಆ ಪ್ರದೇಶದ ಧಾರ್ಮಿಕತೆಯ ಭಾಗವಾಗಿದ್ದರು.

"ಸರಸ್ವತೀಂ ಮಹಾಮಾಯಾಂ ಕಾಶ್ಮೀರ ಪುರವಾಸಿನೀ
ಶತದ್ರೇರಸಮಂತಾತ್ ಸಾರಸ್ವತ ಮಹಾಮುನೀ॥"

ಭಾರತದ ಪಶ್ಚಿಮ ಕರಾವಳಿ ಭಾರ್ಗವರಾಮನ ಭೂಮಿ ಹಾಗೂ ದ್ವಾರಕಾನಗರಿ ಶ್ರೀ ಕೃಷ್ಣನ ಪ್ರಖ್ಯಾತ ಭೂಮಿ ಎಂದು ಕಾಶ್ಮೀರೀ ಸಾರಸ್ವತರಿಗೆ ಚೆನ್ನಾಗಿ ಗೊತ್ತಿತ್ತು. ಜೀವಿತ ಅರಸನ ಪ್ರಪ್ರಥಮ ಚಾರಿತ್ರಿಕ ದಾಖಲೆಯಾದ 'ರಾಜತರಂಗಿಣಿ'ಯ ಕವಿ ಕಲ್ಹಣನು ತನ್ನ ಕಾವ್ಯದಲ್ಲಿ ಕಾಶ್ಮೀರದ ಈ ಸಾರಸ್ವತರ ಉಲ್ಲೇಖವನ್ನು ಮಾಡುತ್ತಾನೆ. ಕಾಶ್ಮೀರದ ದೊರೆ ಲಲಿತಾದಿತ್ಯ ಮುಕ್ತಿಪಾದನು (ಕ್ರಿ. ಶ. 600–736) ಭಾರತದ ಪಶ್ಚಿಮ ಕರಾವಳಿಯ ಅನೇಕ ಸ್ಥಳಗಳ ಕುರಿತು ಹೇಳುತ್ತಾನೆ. 'ವಿಕ್ರಮಾಂಕದೇವ ಚರಿತ' ಕಾವ್ಯದಲ್ಲಿ ಕವಿ ಬಿಲ್ಹಣನು ಕಾಶ್ಮೀರದಿಂದ ಮಥುರಾ, ಕನ್ಯಾಕುಬ್ಜ, ಅಯೋಧ್ಯಾ, ಪ್ರಯಾಗ ಮತ್ತು ವಾರಣಾಸಿಯ ಮಾರ್ಗವಾಗಿ ಅನ್ಹಿಲವಾಡಾ (ಪಾಟಣ) ಮತ್ತು ಸೋಮನಾಥದ ತನಕ ತಾನು ಕೈಗೊಂಡ ತೀರ್ಥಯಾತ್ರೆಯ ಕುರಿತು ವಿವರಿಸುತ್ತಾನೆ. ಅವನು ದ್ವಾರಕೆಗೆ ಭೇಟಿ ನೀಡಿದಾಗ ಅಲ್ಲಿ ಸರಿಯಾದ ರಕ್ಷಣೆ ಹಾಗೂ ಆಶ್ರಯ ಸಿಗುವುದಿಲ್ಲವೆಂದರಿತು ಅವನು ವೇರಾವಳದಿಂದ ಉತ್ತರಕನ್ನಡ ಜಿಲ್ಲೆಯ ಹೊನ್ನಾವರದ ತನಕ ನೌಕಾಪ್ರಯಾಣ ಮಾಡುತ್ತಾನೆ. ಗೋಕರ್ಣವನ್ನು ಸಂದರ್ಶಿಸಿ, ರಾಮೇಶ್ವರದ ತನಕ ತನ್ನ ಯಾತ್ರೆಯನ್ನು ಮುಂದುವರಿಸಿ, ಅನಂತರ ಆಂಧ್ರಪ್ರದೇಶದ ಕಲ್ಯಾಣಕ್ಕೆ ಹೋಗುತ್ತಾನೆ. ಅಲ್ಲಿ ಚಾಲುಕ್ಯ ದೊರೆ ಪರಮಾನಂದಿ ಅವನನ್ನು ಸ್ವಾಗತಿಸಿ, 'ವಿದ್ಯಾಪತಿ' ಎಂಬ ಬಿರುದನ್ನು ನೀಡಿ ಗೌರವಿಸುತ್ತಾನೆ.

ಭಾರತದ ಪಶ್ಚಿಮ ಕರಾವಳಿಯಲ್ಲಿ ಮೊದಲು ಬಂದ ಬ್ರಾಹ್ಮಣ ವಲಸೆಗಾರರಿಗೆ ಕೈರಾ ಜಿಲ್ಲೆಯಲ್ಲಿ ವಲ್ಲಭಿಯ ಮೈತ್ರಕರಿಗೆ ಪ್ರಾಪ್ತವಾದಂತೆ ಅಗ್ರಹಾರಗಳು ದಾನರೂಪವಾಗಿ ಪ್ರಾಪ್ತವಾದವು. ಚಾಲುಕ್ಯ ದೊರೆಗಳು ಗೋವಿಂದನ ಪುತ್ರ ಕಾಂಚಲನಿಗೆ ಕ್ರಿ.ಶ. ಸುಮಾರು 737–740ರಲ್ಲಿ ಭೂಮಿಯನ್ನು ದತ್ತಿಯಾಗಿ ಕೊಟ್ಟರು. ಗುಜರಾತದ ಸಂಜನಾದ ಕಣಾದುಕದಲ್ಲಿ ದಶಮೀ ದೇವಿಯ ಮಂದಿರದ ನಿರ್ವಹಣೆಗಾಗಿ ಕ್ರಿ.ಶ. 926–927ರಲ್ಲಿ ಅನುದಾನ ನೀಡಿದರು. ಗುಜರಾತದ ಸಿಧಾಪುರದ ಸೋಳಂಕಿ ದೊರೆ ಮೊದಲನೆಯ ಮೂಲ ರಾಜನು ದುರ್ಲಭಾಚಾರ್ಯನ ಪುತ್ರ ದುರ್ಗಾಚಾರ್ಯ ಎಂಬ ಕಾನ್ಯಕುಬ್ಜ ಬ್ರಾಹ್ಮಣನಿಗೆ ದತ್ತಿ ನೀಡಿರುವುದನ್ನು ಹತ್ತನೆಯ ಶತಮಾನದ ರಸಮಾಲನು ಉಲ್ಲೇಖಿಸಿರುತ್ತಾನೆ. ಅದೂ ಅಲ್ಲದೆ, ಅವನು ತನ್ನ ಸಾಮ್ರಾಜ್ಯದಲ್ಲಿರುವ ಸರಸ್ವತೀ ನದೀತೀರದಲ್ಲಿ ಯಜ್ಞ ಕಾರ್ಯವನ್ನು ನೆರವೇರಿಸುವ ಸಲುವಾಗಿ ನೈಮಿಷಾರಣ್ಯ, ಚ್ಯವನಾಶ್ರಮ, ಪ್ರಯಾಗ, ಕನ್ಯಾಕುಬ್ಜ, ವಾರಣಾಸಿ, ಗಂಗಾದ್ವಾರ ಮತ್ತು ಕುರುಕ್ಷೇತ್ರದ ಅನೇಕ ಸಾರಸ್ವತ ಬ್ರಾಹ್ಮಣರನ್ನು ಆಗಾಗ್ಗೆ ಕರೆಸಿಕೊಂಡು ಅಲ್ಲಿ ಅವರು ವಲಸೆ ಬರಬೇಕೆಂದೂ ಪ್ರೋತ್ಸಾಹಿಸುತ್ತಿದ್ದ. ವಿದೇಶೀ ಪ್ರವಾಸಿ ಅಲ್‌ಬರೂನಿಯ ಪ್ರಕಾರ,

ಆ ಸರಸ್ವತೀ ತೀರವು ಗುಜರಾತ ರಾಜ್ಯದ ಸೋಮನಾಥ ಕ್ಷೇತ್ರದ ಪೂರ್ವದಿಕ್ಕಿನಲ್ಲಿ ಅಂಬೆಸೆತದಷ್ಟು ಅಂತರದ ಸಮುದ್ರವನ್ನು ಸೇರುತ್ತಿತ್ತು. ಹನ್ನೆರಡನೆಯ ಶತಮಾನದ ಹೇಮಚಂದ್ರ ಸೂರಿ ಕೂಡ ತನ್ನ 'ದ್ವಾರಸ್ಯ ಕಾವ್ಯ'ದಲ್ಲಿ ಸಿಧಾಪುರದ ಶ್ರೀಸ್ಥಳದಲ್ಲಿ ಅಂಥ ಸಾರಸ್ವತ ವಸಾಹತುಗಳು ಇದ್ದವೆಂಬುದನ್ನು ಉಲ್ಲೇಖಿಸಿ ಹೀಗೆ ಹೇಳುತ್ತಾನೆ. 'ಅನ್ಹಿಲ್ಲಾಪುರ ನಗರದ ಗುಂಟ ಹರಿಯುತ್ತಿರುವ ಸರಸ್ವತೀ ನದಿಯ ತಿಳಿಯಾದ ನೀರು ಅಲ್ಲಿಯ ಭೂಪ್ರದೇಶವನ್ನೂ, ವಾಯುಮಂಡಲವನ್ನೂ ಪವಿತ್ರವಾಗಿರಿಸಿದೆ. ಯಜ್ಞಕುಂಡದಿಂದ ವೀರಯೋಧರನ್ನು ಹುಟ್ಟಿಸಬಲ್ಲ ವಸಿಷ್ಠ ಅಥವಾ ವಿಶ್ವಾಮಿತ್ರಸಮ ಬ್ರಾಹ್ಮಣರೂ ಇಲ್ಲಿ ವಾಸಿಸುತ್ತಾರೆ.' ಮೂಲ ರಾಜನ ಪುತ್ರ ಚಾಮುಂಡರಾಜನು ಅವರಿಗೆ ತನ್ನ ರಾಜ್ಯದಲ್ಲಿ ಕಾಯಂ ವಸತಿಯ ವ್ಯವಸ್ಥೆಗಾಗಿ ಭೂಮಿಯನ್ನು ದತ್ತಿರೂಪದಲ್ಲಿ ನೀಡುವ ಆಶಯವನ್ನು ವ್ಯಕ್ತಪಡಿಸಿದಾಗ ಅವರು ಹೀಗೆ ಹೇಳಿದ್ದರು.

"ಎಲೈ ದೊರೆಯೇ, ನಾವು ರಾಜಕಾರ್ಯವನ್ನು ನಿರ್ವಹಿಸಲು ಶಕ್ತರಲ್ಲ. ಹೀಗಿರುವಾಗ, ಈ ಭೂಮಿಯನ್ನು ಪಡೆಯುವುದಾದರೂ ಯಾಕೆ? ಅದು ಕೇವಲ ಸರ್ವನಾಶಕ್ಕೆ ಕಾರಣವಾಗುತ್ತದೆ. ಜಮದಗ್ನಿ ಪುತ್ರನಾದ ಪರಶುರಾಮನು ಕ್ಷತ್ರಿಯರನ್ನು ಇಪ್ಪತ್ತೊಂದು ಸಲ ಪರಾಜಿತರನ್ನಾಗಿ ಮಾಡಿ, ಅವರಿಂದ ತಾನು ಗೆದ್ದ ಭೂಮಿಯನ್ನು ನಮಗೇ (ಸಾರಸ್ವತ ಬ್ರಾಹ್ಮಣರಿಗೆ) ನೀಡಿದ್ದನಲ್ಲವೇ?".

ಹಾಗಿದ್ದರೂ, ಅವರು ದೊರೆಯ ಅಪೇಕ್ಷೆಯಂತೆ ಸಿಧಾಪುರದಲ್ಲಿ ವಾಸ ಮಾಡಿದರು. ಕ್ರಿ. ಶ. 986–987ರ ಕಡಿ ದಾನಶಾಸನ ಈ ಸ್ಥಳವನ್ನು 'ನಿಜಭುಜೋಪರಾಜಿತ ಸಾರಸ್ವತ ಮಂಡಲ' ಎಂದು ಉಲ್ಲೇಖಿಸುತ್ತದೆ. ಸೋಳಂಕಿ ದೊರೆ ಕರ್ಣನು ಗೋವಾ ಕದಂಬ ದೊರೆ ಜಯಕೇಶಿಯ ಮಗಳು ಮ್ಯಾಮಲ್ಲದೇವಿಯೊಡನೆ ಮದುವೆಯಾಗಿದ್ದ. ಕ್ರಿ. ಶ. 1125ರಲ್ಲಿ ಜಯಕೇಶಿಯು ವಾರಸುದಾರ ಚಟ್ಟಾಯನನು ಸೌರಾಷ್ಟ್ರದ ಸೋಮನಾಥ ಕ್ಷೇತ್ರವನ್ನು ಸಂದರ್ಶಿಸಿದಾಗ, ಸಿಧಾಪುರದ ದೊರೆ ಸಿದ್ಧರಾಜ ಜಯಸಿಂಹನನ್ನು ಭೇಟಿ ಮಾಡಿದ್ದ. ಈ ಸಂಪರ್ಕವು ಹೊಯ್ಸಳರ ದೊರೆ ವೀರ ಬಲ್ಲಾಳನ (ಕ್ರಿ.ಶ. 1173–1220) ಆಳ್ವಿಕೆಯಲ್ಲಿಯೂ ಮುಂದುವರಿಯಿತು.

ಇದರಲ್ಲಿ ಕೆಲವು ಸಾರಸ್ವತರು ಸಿಧಾಪುರದಿಂದ ದಕ್ಷಿಣಾಭಿಮುಖವಾಗಿ ಗೋಮಂತಕದ ತನಕ ದೇಶಾಂತರ ವಲಸೆ ಹೋಗಿರುವ ಸಾಧ್ಯತೆ ಸಾಕಷ್ಟಿದೆ. ಅವರು ಈಗಿನ ಚಿತ್ರಾಪುರ ಸಾರಸ್ವತರ ಪೂರ್ವಜರಾಗಿದ್ದರು. ಅವರಿಗೆ ಕಾಶ್ಮೀರದ

ಘನಿಷ್ಠ ಸಂಬಂಧವಿದ್ದುದರಿಂದ ಅವರು ಗುಜರಾತದ ಮೂಲಕ ವಲಸೆ ಬಂದಿರಬಹುದೆಂದು ಸ್ಪಷ್ಟವಾಗುತ್ತದೆ. ಗೋಮಂತಕದಲ್ಲಿ ಈ ಮೊದಲೇ ವಲಸೆ ಬಂದ ಸಾರಸ್ವತರಲ್ಲಿ ಮತ್ತು ಇವರಲ್ಲಿ ಸಾಕಷ್ಟು ಭಿನ್ನತೆ ಇರುವುದು ಸ್ಪಷ್ಟವಾಗಿ ಎದ್ದುಕಾಣುತ್ತದೆ. ಚಿತ್ರಾಪುರ ಸಾರಸ್ವತರನ್ನು ಭಾನಪರೆಂದೂ ಕರೆಯುತ್ತಾರೆ. ಭಾನಪ್ಪ ಅಥವಾ ಭಾನಪ್ಪ ಒಡೆಯರ್ ಎಂಬ ವ್ಯಕ್ತಿಯ ನಿಮಿತ್ತ ಈ ಹೆಸರು ಬಂದಿರಬಹುದೇ? ಸಾರಸ್ವತ ಜನಾಂಗದ ಭಾನಪ್ಪ ಒಡೆಯರ್ ಕ್ರಿ. ಶ. 1451ರಲ್ಲಿ ಬಾರಕೂರಿನ ಗವರ್ನರ್ ಆಗಿದ್ದ. ಅಂಥ ಪ್ರಮುಖ ವ್ಯಕ್ತಿಯ ನಾಮಬಲ ಈ ಸಮುದಾಯಕ್ಕೆ ಬಂದಿರಬಹುದೆಂದು ಜನಸಾಮಾನ್ಯರ ಗ್ರಹಿಕೆಯಾಗಿದೆ. ಅಲ್ಲದೆ ಕವಿ ಲಿಂಗಣ್ಣನು ಗಜನಪುರದ ಭಾನಪ್ಪ ಎಂಬ ವ್ಯಕ್ತಿ ಶೃಂಗೇರಿ ಮಠದ ಜಗದ್ಗುರು ಶಂಕರ ಭಾರತಿಯವರಿಗೆ ಕಂಗವಳ್ಳಿ ಎಂಬ ಗ್ರಾಮವನ್ನು ದಾನವಾಗಿತ್ತನೆಂದು ಉಲ್ಲೇಖಿಸುತ್ತಾನೆ.

ಈ 'ಭಾನಪ್ಪ' ಪದದ ವ್ಯುತ್ಪತ್ತಿಯೇ ಭ್ರಮಾತ್ಮಕವಾಗಿದೆ. ತಪ್ಪು ಅಭಿಪ್ರಾಯವನ್ನೂ ಮೂಡಿಸಬಹುದು. 'ಭಾನಪ್ಪ' ಈ ಪದದಲ್ಲಿ 'ಭಾನು' ಎಂಬ ಸಂಸ್ಕೃತ ಪದವಿದೆ. ಭಾನು ಎಂದರೆ ಪ್ರಕಾಶ, ತೇಜ, ರಾಜ, ಸಾರ್ವಭೌಮ. ಶಿವನ ಒಂದು ಹೆಸರೂ ಹೌದು. ಶಿವನು ವಿಷ್ಣು ಮತ್ತು ಬ್ರಹ್ಮನಿಗೆ ತನ್ನ ನಿಜರೂಪವನ್ನು ಜ್ಯೋತಿಸ್ತಂಭದಂತೆ ಪ್ರಕಟಪಡಿಸಿದ. ಆದ್ದರಿಂದ ಭಾನು ಅಥವಾ ಭಾನ ಈ ಪದವು ತೇಜಸ್ವಿ, ಉದಾತ್ತ ಚರಿತ ಮತ್ತು ಜ್ಞಾನೀ ವ್ಯಕ್ತಿಯನ್ನು ಪ್ರತಿನಿಧಿಸುತ್ತದೆ. ಕಾಶ್ಮೀರ ಮತ್ತು ಹಿಮಾಚಲ ಪ್ರದೇಶದ ಬ್ರಾಹ್ಮಣರು ಉದಾತ್ತ, ಸಜ್ಜನ ಎಂದು ಸೂಚಿಸಲು ಸೂರಜಭಾನ, ಬೃಜಭಾನ ಎಂದು ಮುಂತಾಗಿ 'ಭಾನ' ಪದಪ್ರಯೋಗ ಮಾಡುತ್ತಾರೆ. ಆದ್ದರಿಂದ, ಕಾಶ್ಮೀರದಿಂದ ಬಂದ ಸಂಪ್ರದಾಯನಿಷ್ಠ ಸ್ಮಾರ್ತರಾದ ಚಿತ್ರಾಪುರ ಸಾರಸ್ವತರು ಕೂಡ ಭಾನಪ್ಪ ಪದ ಪ್ರಯೋಗ ಮಾಡತೊಡಗಿದರು. ಭಾನಪ್ಪ ಒಡೆಯರ ಪಾಲಕರು ತಮ್ಮ ಮಗನಿಗೆ ಶಿವನ ಹೆಸರಿಟ್ಟು ಕರೆಯಬೇಕೆಂದು ಬಹುಶಃ ಭಾನಪ್ಪ ಎಂದು ನಾಮಕರಣ ಮಾಡಿರಬಹುದು. ಭಾನಪ್ಪ ಎಂದರೆ ಭಾನೇಶ್ವರ (ಭಾನ+ಈಶ್ವರ). ಜ್ಯೋತಿಸ್ವರೂಪನಾದ ತೇಜಸ್ವಿ ದೇವರು. ಆದ ಕಾರಣ, ಅಂಕೋಲೆಯ ಬಳಿಯಿರುವ ಅವರ್ಸೆಯ ಕಾತ್ಯಾಯನೀ ದೇವಾಲಯದ ದೇವರನ್ನು ಭಾನೇಶ್ವರನೆಂದು ಸಂಬೋಧಿಸಬೇಕೇ ಹೊರತು ಬಾಣೇಶ್ವರ ಅಲ್ಲ. ಆದರೆ, ಪರಶುರಾಮನು ಭೂಸ್ವಾಧೀನಕ್ಕಾಗಿ ಇಲ್ಲಿಂದ ಸಮುದ್ರದ ಕಡೆ, ಬಾಣಪ್ರಯೋಗ ಮಾಡಿದನೆಂದೂ ಗೋಮಂತಕದ ಬಾಣಾವಲಿಯಿಂದ ಮೂರ್ತಿಯನ್ನು ಸ್ಥಳಾಂತರಿಸಿದನೆಂದೂ ದೋಷಯುತವಾದ ಸಂಬಂಧವನ್ನು ಕೆಲವರು

ಕಲ್ಪಿಸಿಕೊಂಡಿದ್ದಾರೆ.

ಶೈವ ಸಂಪ್ರದಾಯದವರಾದುದರಿಂದ, ಸಾರಸ್ವತರು ಮಂಗೇಶ ಮತ್ತು ಶಾಂತಾದುರ್ಗೆಯ ಆರಾಧಕರು. ಅವರು ದೀರ್ಘಕಾಲದಿಂದಲೂ, ಕವಳೇ ಮಠವನ್ನು ಗುರುಪೀಠವೆಂದು ಸ್ವೀಕರಿಸಿದ್ದರು. ಪೋರ್ಚುಗೀಸ್ ಕ್ರಿಶ್ಚಿಯನ್ನರ ಮತಾಂತರ ಮತ್ತು ಹಿಂಸಾಚಾರಗಳ ದುಷ್ಪರಿಣಾಮದಿಂದ ರೋಸಿಹೋಗಿ, ಅವರು ಪಶ್ಚಿಮ ಕರಾವಳಿಯ ದಕ್ಷಿಣೋತ್ತರ ಕನ್ನಡ ಜಿಲ್ಲೆಗಳಿಗೆ ಸ್ಥಳಾಂತರ ಮಾಡಿದ ವಿಚಾರವನ್ನು ನಾವು ನಂತರ ಪರಿಶೀಲಿಸುವಾ.

ಈ ತನಕ, ವಲಸೆ ಹೋಗುವುದು ಹೊರಗಿನ ಪ್ರದೇಶದಿಂದ ಗೋಮಂತಕದ ತನಕ ಇತ್ತು. ಈಗ ಗೋಮಂತಕದಿಂದ ಹೊರಪ್ರದೇಶಗಳಿಗೆ ವಲಸೆ ಹೋದ ಪ್ರಥಮ ಪ್ರಕರಣ ಬರುತ್ತದೆ.

ಪ್ರಥಮ ವಲಸೆ

ಆಪತ್ಕಾಲದ ಅತ್ಯಂತ ಆಕಸ್ಮಿಕ ಒತ್ತಡದಿಂದಲೇ ಸಾರಸ್ವತರು ಮೊಟ್ಟ ಮೊದಲಸಲ ದೇಶಾಂತರ ಪ್ರಯಾಣ ಮಾಡುವ ಪ್ರಸಂಗ ಒದಗಿಬಂತು. ಕಾಲ ರಹಸ್ಯದ ಕುರಿತು ಅಥರ್ವವೇದದ ದ್ರಷ್ಟಾರರು ಹೀಗೆ ವರ್ಣಿಸಿರುವರು.

'ಕಾಲೋ ಅಶ್ವೋ ವಹತಿ ಸಪ್ತರಶ್ಮಿಃ........

ತಾಮ್ ಆರೋಹಂತಿ ಕವಯೋ ವಿಪಶ್ಚಿತಃ।'

ಕಾಲವು ಒಂದು ಅಶ್ವ. ಅದು ತನ್ನನ್ನು ಹಿಂಬಾಲಿಸುವ ಏಳು ಕಾಂತಿಯುತ ಕಿರಣಗಳನ್ನು ಎಳೆದುಕೊಂಡು ಹೋಗುತ್ತದೆ. ಸೂಕ್ಷ್ಮ ಸಂವೇದನೆ, ಧೈರ್ಯ ಹಾಗೂ ಜಾಗೃತಪ್ರಜ್ಞೆ ಉಳ್ಳವರು ಮಾತ್ರ ಆ ಅನಿಯಂತ್ರಿತ ಅಶ್ವದ ಮೇಲೆ ಸವಾರಿ ಮಾಡಬಲ್ಲರು. ಬ್ರಾಹ್ಮಣರು ರಣರಂಗದಲ್ಲಿ ಹೋರಾಡಲು ಅಥವಾ ಅಪಾರ ಧನರಾಶಿಯನ್ನು ದಕ್ಷಿಣೆಯಾಗಿ ಸ್ವೀಕರಿಸಲೂ ಹಿಂಜರಿದಿಲ್ಲ. ಪ್ರಾಚೀನ ಯುಗಗಳಲ್ಲಿ ವಸಿಷ್ಠ, ಅಂಗಿರಸ್, ಭಾರ್ಗವ, ವಿಶ್ವಾಮಿತ್ರರಂಥ ಬ್ರಾಹ್ಮಣರೂ ಶ್ರೇಷ್ಠ ತತ್ತ್ವದರ್ಶಿಗಳಾಗಿರುವಂತೆ ಬೃಹತ್ ಪರಿವಾರವುಳ್ಳ ವೀರಯೋಧ ರಾಗಿದ್ದರೆಂಬುದನ್ನು ಕಾಣುತ್ತೇವೆ. ಆದರೆ ಬ್ರಾಹ್ಮಣ ಕಾಲದಲ್ಲಿ ಅವರು ತಮ್ಮ ಕರ್ತವ್ಯಕರ್ಮವಾದ ಪೌರೋಹಿತ್ಯಕ್ಕೆ ಹೆಚ್ಚು ಹೆಚ್ಚು ಲಕ್ಷ್ಯವಹಿಸಿ ರಣರಂಗದಲ್ಲಿ ಹೋರಾಡುವವರನ್ನು ಕ್ಷತ್ರಿಯರ ಪಾಲಿಗೇ ಬಿಟ್ಟುಕೊಟ್ಟರು. ಆದರೆ ವೇದೋತ್ತರ ಯುಗದಲ್ಲಿ ಅನಾರ್ಯರ ಸಮುದಾಯವು ಆರ್ಯ ಸಮುದಾಯಗಳಿಗೆ ಒಂದಾಗಿ

ಬೆರೆತು ಹೋದುದರಿಂದ ವ್ಯಾಪಾರ ಹಾಗೂ ವಾಣಿಜ್ಯೋದ್ಯಮದಲ್ಲಿ ನಿಪುಣರಾದ ವೈಶ್ಯರಿಗೆ ಹಾಗೂ ಆರ್ಥಿಕ ಯೋಗಕ್ಷೇಮದಲ್ಲಿ ನಿಷ್ಣಾತರಾದ ಶ್ರಮಿಕ ಶೂದ್ರರಿಗೆ ಶಕ್ತಿಸಂತುಲನದ ಹಸ್ತಾಂತರವಾಯಿತು. ಆಗ ತಮ್ಮ ಉದ್ಯಮಗಳ ಮೂಲಕ ತಲೆ ಎತ್ತುತ್ತಿರುವ ವೈಶ್ಯರ ಹಾಗೂ ಶೂದ್ರರ ವೈಯಕ್ತಿಕ ಸಾಹಸವು ಬ್ರಾಹ್ಮಣರ ಪ್ರತಿಷ್ಠೆಯ ಮೇಲೆ ಕರಾಳ ಛಾಯೆಯಾಗಿ ಪರಿಣಮಿಸಿತು. ಮೊದಲಿನ ವರ್ಣಾಶ್ರಮ ಪದ್ಧತಿ ಅವಿಚ್ಛಿನ್ನ ಪರಂಪರೆಯಾಗಿ ಮುಂದುವರಿಯಲಿಲ್ಲ. ಮತ್ತು ಗುಣ-ಕರ್ಮಗಳನ್ನು ಆಧರಿಸಿರುವ ವರ್ಗೀಕೃತ ಸಮಾಜ-ಪದ್ಧತಿಯ ಸ್ಥಾನದಲ್ಲಿ ಜಾತಿಪದ್ಧತಿ ಆಕ್ರಮಿಸಿಕೊಂಡಿತು. ಸಂಪತ್ತು ಸಾಮಾಜಿಕ ಪ್ರತಿಷ್ಠೆಯನ್ನು ನಿರ್ಧರಿಸುವ ಮಾನದಂಡವಾಯಿತು. ಅನಾರ್ಯ ವೈಶ್ಯರು ಹಾಗೂ ಶೂದ್ರರು ತಮ್ಮ ವಿಭಿನ್ನ ಹಿನ್ನೆಲೆಗಳಿಂದ ಬ್ರಾಹ್ಮಣ ಹಾಗೂ ಕ್ಷತ್ರಿಯರ ಮುಂದೆ ಒಂದು ಸಮಸ್ಯೆಯನ್ನೇ ಒಡ್ಡಿದರು.

ಮೊದಲಿನ ಪ್ರಭಾವೀ ಸ್ಥಾನ-ಮಾನಕ್ಕೇ ವಿಶಿಷ್ಟ ತರದ ಸವಾಲನ್ನು ಎದುರಿಸುತ್ತ ಬ್ರಾಹ್ಮಣರು 'ಆಪದ್ಧರ್ಮ'ದ ತತ್ತ್ವಗಳನ್ನು ಆಹ್ವಾನಿಸಿ, ಧರ್ಮಶಾಸ್ತ್ರದ ನೂತನ ನೀತಿ-ಸಂಹಿತೆಯನ್ನು ಕ್ರೋಢೀಕರಿಸಿದರು. ಈ ನೂತನ ನೀತಿಯನ್ನು ಆಧರಿಸಿ, ಈ ತನಕ ನಿಮ್ನ ವರ್ಗದವರಿಗಾಗಿ ನಿಗದಿಪಡಿಸಿದ ವೃತ್ತಿಗಳನ್ನು ಬ್ರಾಹ್ಮಣರು ನಿರ್ವಹಿಸಬಹುದೆಂದು ಅನುಮತಿಯನ್ನು ನೀಡಲಾಯಿತು. ಯಜ್ಞ-ಕಾರ್ಯಗಳನ್ನು ನೆರವೇರಿಸುವುದಕ್ಕಿಂತ ವ್ಯಾಪಾರ-ವಾಣಿಜ್ಯೋದ್ಯಮಗಳ ಮೇಲೆ ಪ್ರಭುತ್ವವನ್ನು ಸಾಧಿಸುವುದೇ ಆರ್ಥಿಕ ದೃಷ್ಟಿಯಿಂದ ಹೆಚ್ಚು ಲಾಭದಾಯಕ ಎಂದು ಅರಿತ ಬ್ರಾಹ್ಮಣರು ಮತ್ತು ಕ್ಷತ್ರಿಯರು ವಣಿಗ್ ವೃತ್ತಿಯನ್ನೇ ಆಯ್ಕೆಮಾಡಿಕೊಂಡರು. ಗೋಮಂತಕದ ಸಾರಸ್ವತ ಬ್ರಾಹ್ಮಣರು ಈ ಪ್ರಭಾವಗಳಿಗೆ ಅಪವಾದಗಳಾಗಿರಲಿಲ್ಲ. ವೇದಪೂರ್ವ ಕಾಲದಲ್ಲಿ ಭಾರತದ ಪಶ್ಚಿಮ ಕರಾವಳಿಯು ಅನಾರ್ಯರ ಆಧಿಪತ್ಯದಲ್ಲಿತ್ತು. ಸಿಂಧು-ಸರಸ್ವತೀ ನಾಗರಿಕತೆಗಳ ಕಾಲದಲ್ಲಿ ವ್ಯಾಪಾರೀ ಸಮುದಾಯದ ಪಣಿಗಳು ಸುಮೇರ, ಅಸ್ಸೀರಿಯಾ ಮತ್ತು ಮೆಸೊಪೊಟೇಮಿಯಾ ಮುಂತಾದ ಅತಿ ದೂರದ ದೇಶಗಳಿಗೆ ಸರಕು ಸಾಗಣೆ ಮಾಡುವ ಸಲುವಾಗಿ ಬಂದರಗಳನ್ನು ಉಪಯೋಗಿಸುತ್ತಿದ್ದರು. ಕ್ರಿಶ್ಚಿಯನ್ ಶತಮಾನದ ಆರಂಭಕಾಲದಲ್ಲಿ ಗೋವಾ ಪಟ್ಟಣ ಒಂದು ಬೃಹತ್ ಬಂದರವಾಗಿತ್ತು. ಅದನ್ನು ಗ್ರೀಕರು ಮೆಲಿಂಡಾ ಮತ್ತು ಅರಬರು ಸಿಂದಬೂರ ಎಂದು ಕರೆಯುತ್ತಿದ್ದರು. ಅಶೋಕನ ಆಧಿಪತ್ಯದಲ್ಲಿರುವ ಮೌರ್ಯ ಸಾಮ್ರಾಜ್ಯವು ಸೌರಾಷ್ಟ್ರದ ಗಿರಿನಾರದ ತನಕ ವ್ಯಾಪಿಸಿಕೊಂಡಿತ್ತು. ಅವರಿಗೆ ಸೋಪಾರಾ ವ್ಯಾಪಾರೀ ಕೇಂದ್ರವಾಗಿತ್ತು. ಅಶೋಕನ ಬಂಧು ಲಂಕಾದ ತನಕ ಧರ್ಮಪ್ರಚಾರಕರನ್ನು

ಒಯ್ದುದ್ದು ಸೋಪಾರಾದಿಂದಲೇ. ತದನಂತರ ಅಲ್ಲಿಯು ಆಳರಸರು ಹಿಂದೂಗಳಾಗಿದ್ದರು. ಅವರಲ್ಲಿ ಭೋಜರು 300 ವರ್ಷಗಳ ತನಕ ಆಳಿದರು. ಸುಮಾರು ಹತ್ತನೆಯ ಶತಮಾನದಲ್ಲಿ ಕದಂಬರು ಗೋಮಂತಕದ ಆಳರಸರಾಗಿ ಚಂದ್ರಪುರವನ್ನು (ಚಂದೋರ) ರಾಜಧಾನಿಯನ್ನಾಗಿ ಮಾಡಿಕೊಂಡರು.

ವೇದ ಕಾಲದ ಬಳಿಕ, ವಸಿಷ್ಠ, ವಿಶ್ವಾಮಿತ್ರ, ಶುಕ್ರಾಚಾರ್ಯ, ಗೋತಮ, ಭರದ್ವಾಜ ಮತ್ತು ಇತರ ಋಷಿಗಳು ಕುಲಪುರೋಹಿತರೂ, ರಾಜ್ಯಾಡಳಿತದ ಸಲಹೆಗಾರರೂ ಆಗಿ ಉನ್ನತ ಸ್ಥಾನಾಪನ್ನರಾಗಿದ್ದರು. ಹೀಗೆ, ಆಗ ಬ್ರಾಹ್ಮಣ-ಕ್ಷತ್ರಿಯರ ನಡುವೆ ಗಾಢ ಸಂಬಂಧವಿತ್ತು. ಅಂಥ ಸ್ಥಾನವನ್ನು ಹೊಂದಲು, ಸಾರಸ್ವತರು ಕ್ರಿ.ಶ. 810ರಿಂದ 1260ರ ಅವಧಿಯಲ್ಲಿ ಗೋಮಂತಕದ ಹೊರಗೆ ಉತ್ತರ ಕೊಂಕಣಕ್ಕಿರುವ ಶಿಲಾಹಾರರ ಆಸ್ಥಾನಗಳಿಗೆ ಪ್ರಥಮ ವಲಸೆಗಾರರಾಗಿ ಹೊರಟರು. ಅವರ ಆಸ್ಥಾನದಲ್ಲಿ ಸಂಗಲಮ್ಮೈ, ಅಣ್ಣ ಪೈ, ಸಿಂಹ ಪೈ, ನಾಗಲ್ಯೆ, ರುದ್ರ ಪೈ, ಮಹದೇವ್ಯೆ ಪ್ರಭು, ಸೋಮನ್ಯೆ ಪ್ರಭು, ಲಕ್ಷ್ಮಣ್ಯೆ ನಾಯಕ, ಲಕ್ಷ್ಮಣ್ಯೆ ಪ್ರಭು, ಚಿತ್ತಮ್ಮೈ ಪ್ರಭು, ವೇಸು ಪಡವಾಳ, ಲಕ್ಷ್ಮಣ ಪ್ರಭು, ವಾಸುಗೀ ನಾಯಕ, ಅನಂತ ಪೈ ಪ್ರಭು, ಉದಯ ಪ್ರಭು, ಮೈ ನಾಯಕ, ದಾಡ ಪ್ರಭು, ಬೇಬಲ ಪ್ರಭು ಹೀಗೆ ಅನೇಕ ಸಾರಸ್ವತರು ಪ್ರಧಾನಮಂತ್ರಿ, ಕೋಶಾಧಿಕಾರಿ, ಆಡಳಿತಗಾರ ಆಗಿ ಅಭಿವೃದ್ಧಿ ಹೊಂದಿದರು. ಲಕ್ಷ್ಮಣ ನಾಯಕ ಅಥವಾ ಲಕ್ಷ್ಮಣ ಪ್ರಭು ಮುಂಬೈಯಲ್ಲಿ ವಾಲುಕೇಶ್ವರ ಮಂದಿರದ ನಿರ್ಮಾಣವನ್ನು ಮಾಡಿದರು. ಗೋಮಂತಕದಲ್ಲಿ ಸಪ್ತಕೋಟೀಶ್ವರ ಮಂದಿರದ ಜೀರ್ಣೋದ್ಧಾರ ಮಾಡಿದರು. ಚಿತ್ತಮ್ಮೈ ಪ್ರಭು ಪ್ರಖ್ಯಾತ ಜ್ಯೋತಿಷಿ ಹಾಗೂ ಯಜನ, ಯಾಜನ, ಅಧ್ಯಯನ, ಅಧ್ಯಾಪನ, ದಾನ, ಪ್ರತಿಗ್ರಹಾದಿ ಷಟ್ಕರ್ಮನಿರತ ಪಂಡಿತರಾಗಿದ್ದರು.

ಆಪದ್ಧರ್ಮ ತತ್ತ್ವಗಳು ಅತ್ಯಂತ ಆಕರ್ಷಕವಾಗಿ ಕಾಣಿಸಿಕೊಂಡಿದ್ದು ಇದೇ ಅವಧಿಯಲ್ಲಿ. ಆದಕಾರಣ ಸಾರಸ್ವತ ಬ್ರಾಹ್ಮಣರ ಜೊತೆಗೂಡಿ, ಅನೇಕ ಸ್ವದೇಶಬಾಂಧವ ವೈಶ್ಯರು ಉತ್ತರ ಕೊಂಕಣದ ಕಡೆ ಹೋದಾಗ ಅವರಿಗೆ ಒಂದು ಅಪರಿಚಿತ ಪ್ರದೇಶದಲ್ಲಿ ಇದರಿಂದ ಪ್ರಭಾವಿತರಾಗದೇ ಇರಲು ಸಾಧ್ಯವಾಗಲಿಲ್ಲ. 'ಬಲ್ಲಿ'ಯ ಕ್ರಿ.ಶ. 1094ರ ತಾಮ್ರಶಾಸನದಲ್ಲಿ ದುರ್ಗಾಶೇಟರ ಪುತ್ರ ಬಾಬಣ ಶೇಟ್ ಹಾಗೂ ಅವರ ಸಹೋದರ ಧನಂ ಶೇಟರು ಶಿಲಾಹಾರ ದೊರೆಗಳ ಆಸ್ಥಾನಕ್ಕೆ ಸಾರಸ್ವತರ ಜೊತೆಗೂಡಿ ಹೋದವರು ಎಂದು ಉಲ್ಲೇಖವಿದೆ. ಸ್ವದೇಶ ಬಾಂಧವರಾದ ವೈಶ್ಯರಿಗೆ ಸಹಾಯ ಮಾಡುವುದು ಸಾರಸ್ವತರಿಗೆ ಸಹಜವಾಗಿತ್ತು. ಅವರ ನೌಕೆಗಳು ಠಾಣಾ, ನಾಗಾಂವ್, ಸೋಪಾರಾ ಮತ್ತು

ಚೌಳ ಬಂದರಗಳಲ್ಲಿ ಬಂದು ಸೇರಿದಾಗ ಅವರಿಗೆ ರಿಯಾಯತಿಯನ್ನೂ, ಆಮದು ತೆರಿಗೆಯಿಂದ ವಿನಾಯತಿಯನ್ನೂ ನೀಡುತ್ತಿದ್ದರು. ಒಂದೇ ಪ್ರದೇಶದ ಈ ಶ್ರೀಮಂತ ವೈಶ್ಯರ ನಿಕಟ ಸಂಪರ್ಕ ಹಾಗೂ ಒಂದೇ ಭಾಷೆಯನ್ನು ಆಡುವ ನಿಮಿತ್ತದಿಂದ ವ್ಯಾಪಾರೋದ್ಯಮ ಕ್ಷೇತ್ರದ ಸಂಬಂಧವೂ ಸುಭದ್ರವಾಗಿ ನೆಲೆಯೂರಿತು. ಸಾರಸ್ವತರು ವ್ಯಾಪಾರ ಹಾಗೂ ವಾಣಿಜ್ಯೋದ್ಯಮದಲ್ಲಿ ಆಸಕ್ತಿಯನ್ನು ವಹಿಸತೊಡಗಿದರು. ರಾಜಾ ಮಲ್ಲಿಕಾರ್ಜುನನ ಮಂತ್ರಿಗಳಾದ ಮಹದೇವಯ್ಯ ಪ್ರಭು ಮತ್ತು ಸೋಮನಯ್ಯ ಪ್ರಭು ಇಬ್ಬರೂ ಬಾಬಣ್ಣ ಶ್ರೇಷ್ಠಿಯ (ಶೇಟ) ವ್ಯಾಪಾರೀ ಪಾಲುದಾರರಾಗಿದ್ದಾರೆಂದು ಕ್ರಿ. ಶ. 1172ರ ಶಾಸನ ಹೇಳುತ್ತದೆ. ಬ್ರಾಹ್ಮಣರ ಜ್ಞಾನ ಮತ್ತು ವೈಶ್ಯರ ವ್ಯವಹಾರ ಕೌಶಲ್ಯದಿಂದ ಅವರಿಗೆ ಯಶಸ್ಸು ಲಭಿಸಿತು. ಇದನ್ನು ಅವರು ಭವಿಷ್ಯದಲ್ಲಿ ಸ್ಥಾನಿಕ ರಾಜಪರಿವಾರದೊಡನೆ ಮತ್ತು ವಿದೇಶೀ ವ್ಯಾಪಾರಸ್ಥರೊಡನೆ ತಮ್ಮ ಘನಿಷ್ಠ ಸಂಬಂಧವನ್ನು ಬೆಳೆಸುವಲ್ಲಿ ಸಮರ್ಥರಾದರು.

ಉತ್ತರ ಕೊಂಕಣದಲ್ಲಿ ವಹಿಸಿದ ಆಸಕ್ತಿಯು ಗೋಮಂತಕದ ತನಕ ವ್ಯಾಪಿಸಿತು. ಸಾರಸ್ವತರು ವ್ಯಾಪಾರ ಮತ್ತು ವಾಣಿಜ್ಯೋದ್ಯಮದಲ್ಲಿ ಹೆಚ್ಚು ಹೆಚ್ಚು ಆಸಕ್ತರಾದರು. ಆದಕಾರಣ, ಸಾರಸ್ವತರಿಗೂ ಬರಲಿರುವ ಪೀಳಿಗೆಯು ಇಂಥ ವಾಣಿಜ್ಯ ವೃತ್ತಿಯನ್ನು ನಿರಂತರವಾಗಿ ಮುಂದುವರಿಸಿಕೊಂಡು ಹೋಗುವುದು ಅಸಂಗತ ಎನಿಸಲಿಲ್ಲ. ದೇವ ಪೈ, ಶ್ರಿಯ ಪೈ, ದಾಮ ಪೈ ಮತ್ತು ಮಹಾಳ ಪೈಯಂಥ ಅನೇಕ ಬ್ರಾಹ್ಮಣರು ಚಂದ್ರಪುರದ ದೊರೆ ಗುಹಲ್ಲದೇವನ ಮಂತ್ರಿಗಳಾಗಿದ್ದರೆಂದು ನಾವು ಕಾಣುತ್ತೇವೆ. ಚಂದ್ರಪುರ ರಾಜಧಾನಿಯನ್ನಾಗಿ ಮಾಡಿಕೊಂಡ ಗೋಮಂತಕದ ಕದಂಬ ದೊರೆಗಳು ಇವರ ಸಲಹೆಯನ್ನು ಪಡೆದು, ಮಸಾಲೆ ಪದಾರ್ಥ ಮತ್ತು ಕುದುರೆಗಳ ವ್ಯಾಪಾರದಲ್ಲಿ ಸಾಕಷ್ಟು ಲಾಭವನ್ನು ಗಳಿಸಿದರು.

ಕ್ರಿ. ಶ. 1000ದಲ್ಲಿ ದೇವಗಿರಿಯ ಯಾದವ ದೊರೆ ಎರಡನೆಯ ಭಿಲ್ಲಮನು ಗೋಮಂತಕದ ತನಕ ತನ್ನ ರಾಜ್ಯ ವಿಸ್ತಾರ ಮಾಡಿದಾಗ, ಅವನು ತನ್ನೊಡನೆ ಅನೇಕ ಸಾರಸ್ವತ ಬ್ರಾಹ್ಮಣರನ್ನು ನಾಸಿಕಕ್ಕೆ ಕರೆದುಕೊಂಡು ಹೋದನು. ಅಲ್ಲಿ ಮ್ಹಾಳ ಪೈ, ಇಂದ ಪೈ, ದೇವ ಪೈ, ಅಲ್ಲಾಪೈ, ವಿಕ್ಕ ಪೈ ಮತ್ತು ಇತರರಿಗೆ ಅವನು ಭೂಮಿಯನ್ನು ದತ್ತಿ ನೀಡಿದನು. ಕ್ರಿ.ಶ. 1271ರಲ್ಲಿ ಉತ್ತರ ಕೊಂಕಣದ ಕೊನೆಯ ಶಿಲಾಹಾರ ದೊರೆ ಸೋಮದೇವನು ಸೋತ ಬಳಿಕ, ದೇವಗಿರಿಗೆ ಸಾರಸ್ವತರ ಸಾಮೂಹಿಕ ವಲಸೆ ಹೋಗುವ ಸನ್ನಿವೇಶ ಒದಗಿಬಂತು. ಅದರಲ್ಲಿ ಮೈದೇವ ಪಂಡಿತನ ಕುರಿತು ಹೀಗೆ ವರ್ಣಿಸಲಾಗಿದೆ.

'ತತ್ಪಾದ ಪದೋಪ ಜೀವಿ ಶ್ರೀಮಾನ್ ಮಹಾಪ್ರಧಾನ ಸರ್ವಾಧಿಕಾರೀ ಮಹಾ ಪರಮ ವಿಶ್ವಾಸೀ ರಾಜನಾಯಕ ನಾರಾಯಣ ಶ್ರೀ ಮಾಧವ ಪಂಡಿತ'ನು ಸಿಂಘಣನ ಆಳ್ವಿಕೆಯಲ್ಲಿ ಶ್ರೇಷ್ಠ ಆಡಳಿತಗಾರನೂ, ವೀರಯೋಧನೂ ಆಗಿದ್ದ. ಅವನ ಅಜ್ಜ ದೇವಶರ್ಮನು 'ವೇದ ವೇದಾಂಗ ಪಾರಗಃ ಶ್ರುತಿ ಅಧ್ಯಯನ ಸಂಪನ್ನಃ ಸತ್ಯವಚನೀ ಜಿತೇಂದ್ರಿಯಃ ಕಾಶ್ಯಪೋ ದೇವಶರ್ಮಾ ಬ್ರಾಹ್ಮಣೋ ಬ್ರಹ್ಮವಿತ್ತಮಃ ಯಜುಶಾಮ್ ಪಾರಗೋ ದಾಂತಃ ಷಟ್ಕರ್ಮ ನಿರತೋಽಭವತ್' ಎಂದು ವರ್ಣಿತನಾಗಿದ್ದಾನೆ. ಹದಿಮೂರನೆಯ ಶತಮಾನದಲ್ಲಿ ಅಚ್ಯುತ ನಾಯಕನೆಂಬ ಸಾರಸ್ವತನು ರಾಮದೇವ ಯಾದವ ಎಂಬ ದೊರೆಯ ಕಾಲದಲ್ಲಿ ಉತ್ತರ ಕೊಂಕಣದ ಗವರ್ನರ್ ಆಗಿದ್ದ. ಅವನು ಸಮರ್ಥ ಆಡಳಿತಗಾರನೂ, ಕೊಡುಗೈ ದಾನಿಯೂ ಆಗಿದ್ದ. ಅವನು ಖೇತಲ ಪ್ರಭು, ನಾರಾಯಣ ಪ್ರಭು, ಅನಂತ ಪ್ರಭು, ವಚ್ಚು ನಾಯಕರಂಥ ಅನೇಕ ಸಾರಸ್ವತ ಬ್ರಾಹ್ಮಣರಿಗೆ ಸಾಲಸೀಟದಂಥ ಸ್ಥಳಗಳಲ್ಲಿ ಮುಂಬಯಿಯ ಬಳಿಯಿರುವ ಭೂಮಿಯನ್ನು ದತ್ತಿ ನೀಡಿದ. ಇನ್ನು, ಮಹಾಲ ಪೈ, ವಚ್ಚಾ ಪೈ, ವಿಕ್ಕಾ ಪೈ ಮತ್ತು ದಂಡ ಪೈ ಮುಂತಾದವರು ಸಂಗಮನೇರ ಜಿಲ್ಲೆಯಲ್ಲಿ ಭೂಮಿಯನ್ನು ದತ್ತಿ ಪಡೆದರು.

ಯಾದವರ ಆಧಿಪತ್ಯದಲ್ಲಿ, ಸಾರಸ್ವತರು ಅಭಿವೃದ್ಧಿ ಹೊಂದಿದರು. ಹೇಮಾದ್ರಿ ಅಥವಾ ಹೇಮಾಡ ಪಂತನು ರಾಜನ ಆಸ್ಥಾನದಲ್ಲಿ ಓರ್ವ ಗಣ್ಯ ಸಾರಸ್ವತ ಆಡಳಿತಗಾರನಾಗಿದ್ದನು. ಅವನು ಭೂ ಕಂದಾಯ ಸಂಗ್ರಹ ಮಾಡಿ, ಲೆಕ್ಕಪತ್ರದ ದಾಖಲೆಯನ್ನಿಡುವುದಕ್ಕಾಗಿ ಶೇಣವೈ ಪದ್ಧತಿಯನ್ನು ಜಾರಿಗೆ ತಂದ. ಹೇಮಾಡ ಪಂತನು ಪಂಡರಪುರದ ವಿಟ್ಠಲ ಮಂದಿರದ ಜೀರ್ಣೋದ್ಧಾರ ಮಾಡಿದಾಗ ಶ್ರೀಪತಿ ದಣಾಯಕ, ಕೊಂಕಣ ಕೇಶವದೇವ, ಶೇಣವೈ ಲಖಿಮಿ ದೇವೈ, ಶೇಣವೈ ಚಾಂದವೈ, ದಳವೈ ಕುಮಾರುಪುತ್ರ, ಲಾಡ ಹರಿದೇವ ಮತ್ತು ಇತರ ಅನೇಕ ಸಾರಸ್ವತ ಬ್ರಾಹ್ಮಣರು ಧಾರಾಳವಾಗಿ ದೇಣಿಗೆಯನ್ನು ನೀಡಿರುವರು. ಈ ಮಂದಿರದಲ್ಲಿ 84 ದಾನಿಗಳ ಪಟ್ಟಿಯನ್ನು 'ಚೌರ್ಯಾಶೀ ಲೇಖ' ಎಂಬ ಸುರಕ್ಷಿತವಾಗಿರಿಸಿದ ಶಿಲಾಶಾಸನದಲ್ಲಿ ಕೊರೆದಿಟ್ಟ ಹೆಸರುಗಳಿಂದ ನಾವು ಇದನ್ನು ಅರಿಯಬಹುದು.

ಕ್ರಿ.ಶ. 1294ರಲ್ಲಿ ಅಲ್ಲಾಉದ್ದೀನ ಖಿಲಜಿಯು ರಾಮದೇವನ ಮಗ ಶಂಕರ ದೇವನನ್ನು ಮತ್ತು ಅವನ ಅಳಿಯ ಹರಪಾಲ ದೇವನನ್ನು ಸೋಲಿಸಿದ. ಕ್ರಿ. ಶ. 1318ರಲ್ಲಿ ದೇವಗಿರಿ ಸಾಮ್ರಾಜ್ಯದ ಪತನವಾಯಿತು. ಹನ್ನೆರಡನೆಯ ಶತಮಾನದಿಂದ ಮುಸ್ಲಿಮರ ಆಕಸ್ಮಿಕ ಆಕ್ರಮಣವು ದಕ್ಷಿಣದಲ್ಲಿ ಅತ್ಯಲ್ಪ

ಪ್ರಮಾಣದಲ್ಲಿತ್ತು. ಆದರೆ, ಹದಿನಾಲ್ಕನೆಯ ಶತಮಾನದಲ್ಲಿ ಮಹಮ್ಮದ್ ಬಿನ್ ತುಘಲಕ್ ಮತ್ತು ಅಲ್ಲಾಉದ್ದೀನ್ ಖಿಲಜೀ ಕ್ರಿ.ಶ. 1312ರಲ್ಲಿ ತಮ್ಮ ಪ್ರಭಾವ ಮತ್ತು ನಿಯಂತ್ರಣವು ಗೋವಾದ ಕಡೆಗೂ ಹರಡುವಂತೆ ನೋಡಿಕೊಂಡರು. ಕದಂಬರು ಆಗ ಚಾಂದೋರದ ಕಡೆಗೆ ತಮ್ಮ ನೆಲೆಯನ್ನು ತಾತ್ಕಾಲಿಕವಾಗಿ ಬದಲಾಯಿಸಿದರು. ಆದರೂ, ಮುಸ್ಲಿಮ್ ಆಕ್ರಮಣಕಾರರು ಚಂದೋರವನ್ನೂ ಆಕ್ರಮಿಸಿ ಕದಂಬ ಕುಲವನ್ನು ನಾಮಾವಶೇಷವನ್ನಾಗಿ ಮಾಡಿದರು. ಆಗ ಕ್ರಿ. ಶ. 1352ರಲ್ಲಿ ಕದಂಬರ ಆಳ್ವಿಕೆಯ ಕೊನೆಯಾಯಿತು.

ಬಹಮನೀ ಸುಲ್ತಾನರು ಸಾವಕಾಶವಾಗಿ ಪಶ್ಚಿಮ ಕರಾವಳಿಯಲ್ಲಿ ತಮ್ಮ ಸಾಮ್ರಾಜ್ಯ ವಿಸ್ತರಣೆಯನ್ನು ಮಾಡುತ್ತ ರತ್ನಾಗಿರಿಯ ಧಾಬೋಲ ಬಂದರವನ್ನು ನಿಯಂತ್ರಿಸುತ್ತಿದ್ದರು. ಅಲ್ಲಾಉದ್ದೀನನ ಆಡಳಿತ ಕಾಲದಲ್ಲಿ ಗೋಮಂತಕದ ಹಿಂದುಗಳು ಮುಸ್ಲಿಮರ ಧಾರ್ಮಿಕ ಚಿತ್ರಹಿಂಸೆಯಿಂದ ರೋಸಿ ಹೋದರು. ಹದಿಮೂರನೆಯ ಶತಮಾನದಲ್ಲಿ ಯೂಸೂಫ್ ಗೂರ್ಗಿಯು ಪುರಾತನ ಸಪ್ತಕೋಟೀಶ್ವರ ಮಂದಿರವನ್ನು ಧ್ವಂಸ ಮಾಡಿದನು. ತತ್ಪರಿಣಾಮವಾಗಿ ಸಾರಸ್ವತರು ಬಹುಶಃ ದೇವಭೂಮಿ ಗೋಮಂತಕದಿಂದ ದಕ್ಷಿಣದ ಮಲಬಾರ (ಕೇರಳ) ತೀರದ ಕಡೆಗೆ ಮೊಟ್ಟಮೊದಲ ಸಲ ಸಾಮೂಹಿಕ ವಲಸೆ ಹೋಗಿರಬಹುದು. ಮಲಬಾರವು ಅವರಿಗೆ ಈ ಮೊದಲೇ ವ್ಯಾಪಾರೀ ಹೊರಠಾಣೆಯಾಗಿ ಸುಪರಿಚಿತವಾಗಿತ್ತು. ಕೋಚೀನದ ನಂತರದ ದಿವಾನನೊಬ್ಬನು ಕ್ರಿ.ಶ. 1858ರಲ್ಲಿ ಹೀಗೆ ಜ್ಞಾಪಿಸಿಕೊಳ್ಳುತ್ತಾನೆ. "ಕೊಂಕಣಿಗರು ಕ್ರಿ.ಶ. 1294ರಲ್ಲಿ ತಮ್ಮ ಜನ್ಮಭೂಮಿ ಕೊಂಕಣ ಪ್ರದೇಶವನ್ನು ಬಿಟ್ಟು ಕೋಚೀನಕ್ಕೆ ತಮ್ಮ ದೇವತಾವಿಗ್ರಹಗಳೊಂದಿಗೆ ಮೊಟ್ಟ ಮೊದಲನೆಯ ಸಲ ಸಾಮೂಹಿಕ ವಲಸೆ ಬಂದಿದ್ದರೆಂಬ ಬಗ್ಗೆ ಪಾರಂಪರಿಕ ನಂಬಿಕೆಯಿದೆ. ಅವರು ಕೋಚೀನ ಮಹಾರಾಜ ನಿಂದ ದತ್ತಿ ಭೂಮಿಯನ್ನೂ, ರಕ್ಷಣೆಯ ಅಭಯವನ್ನೂ ಪಡೆದು ಕೋಚೀನದ ಕೊಂಕಣಸ್ಥ ಮಹಾಜನರ ವಸತಿಯಲ್ಲಿ ನೆಲೆಸಿದರು."

ಕ್ರಿ.ಶ. 1354ರಲ್ಲಿ ಹರಿಹರ-ಬುಕ್ಕರು ಸ್ಥಾಪಿಸಿದ ವಿಜಯನಗರ ಸಾಮ್ರಾಜ್ಯವು ಗೋಮಂತಕದ ಜನಮನದಲ್ಲಿ ಆಶಾಕಿರಣ ಮೂಡಿಸಿತ್ತು. ಈ ಮೊದಲೇ ಕಾಶ್ಮೀರದಿಂದ ಗೋಮಂತಕಕ್ಕೆ ಬಂದಿದ್ದ ಕಾಶ್ಮೀರೀ ಸಾರಸ್ವತ ಬ್ರಾಹ್ಮಣನಾದ ಮಾಧವಾಚಾರ್ಯನು ಅಥವಾ ಮಾಧವ ಮಂತ್ರಿಯು ಚಂದ್ರಗುತ್ತಿ ದೊರೆಯ ಬಳಿ ನಿಯುಕ್ತನಾಗಿದ್ದ. ಆದರೆ, ಕ್ರಿ.ಶ. 1355ರಲ್ಲಿ ಮೃತ್ಯುಪತ್ರ ಬರೆದಿಡದೆ ಮಡಿದ. ಆಗ ಹರಿಹರ-ಬುಕ್ಕರ ತಮ್ಮನಾದ ಮಾರಪ್ಪನು ಆ ರಾಜ್ಯದ

ಸಿಂಹಾಸನವನ್ನು ಆಕ್ರಮಿಸಿ ರಾಜ್ಯವನ್ನು ಸ್ವಾಧೀನಪಡಿಸಿಕೊಂಡ. ಮಾಧವ ಮಂತ್ರಿ, ಮಾರಪ್ಪನ ಅಧೀನನಾಗಿ ಸ್ವಲ್ಪ ಕಾಲ ಕೆಲಸ ಮಾಡಿದ ನಂತರ ವಿಜಯನಗರಕ್ಕೆ ಹೋದ. ಅಲ್ಲಿ ಮಂತ್ರಿ, ಶಾಸಕ ಮತ್ತು ಯೋಧನಾಗಿ ನಿರತನಾದ. ಅವನು ಕ್ರಿ.ಶ. 1366ರಲ್ಲಿ ವಿಜಯನಗರ ಸಾಮ್ರಾಜ್ಯದ ಆಡಳಿತವನ್ನು ಗೋಮಂತಕದ ತನಕ ವಿಸ್ತರಿಸಿದ. ಗೋಮಂತಕ ಪ್ರದೇಶ ಮತ್ತು ಧಾಬೋಲ ಬಂದರದಿಂದ ಮುಸ್ಲಿಮರನ್ನು ಗಡೀಪಾರು ಮಾಡಿದ. ಈ ಮೊದಲು ಮುಸ್ಲಿಮರಿಂದ ವಿಧ್ವಸ್ತವಾದ ಸಪ್ತಕೋಟೀಶ್ವರ ಮಂದಿರದ ಜೀರ್ಣೋದ್ಧಾರ ಮಾಡಿದ. ಭಾರತದ ವಿಭಿನ್ನ ಭಾಗಗಳಿಂದ ಪ್ರಾಚೀನ ಶಾಸ್ತ್ರಗ್ರಂಥಗಳನ್ನು ಸಂಗ್ರಹಿಸಿ ತನ್ನ ಸಹೋದರನಾದ ಸಾಯಣಾಚಾರ್ಯನ ಮೇಲ್ವಿಚಾರಣೆಯಲ್ಲಿ ಅವುಗಳ ಟೀಕೆಯೊಂದಿಗೆ ಸಂಪಾದನ ಕಾರ್ಯವನ್ನು ಮಾಡಿ, ವೇದಾಧ್ಯಯನ ಪುನರುತ್ಥಾನಕ್ಕೆ ನಿಮಿತ್ತನಾದ. ಕ್ರಿ.ಶ. 1368ರ ಶಿಕಾರಿಪುರದ ಒಂದು ಶಿಲಾಶಾಸನವು ಅವನನ್ನು ವಿದ್ವಾಂಸ ಬ್ರಾಹ್ಮಣನೂ, ವೀರಕ್ಷತ್ರಿಯನೂ ಆಗಿದ್ದನೆಂದು ವರ್ಣಿಸುತ್ತದೆ. ಅವನು ಮೂವತ್ತೆಂಟು ವರ್ಷ ಕಾಲ ವಿಜಯನಗರ ಸಾಮ್ರಾಜ್ಯದ ದೀರ್ಘಾವಧಿ ಸೇವೆ ಮಾಡಿ, ಅದನ್ನು ಹಿಂದೂ ಧರ್ಮ ಮತ್ತು ಸಂಸ್ಕೃತಿಯ ಬೃಹತ್ ಭದ್ರಕೋಟೆಯನ್ನಾಗಿ ಮಾಡಿದ. ಮುಸ್ಲಿಂ ಆಳ್ವಿಕೆಯಲ್ಲಾದ ನಷ್ಟವನ್ನು ಭರ್ತಿ ಮಾಡಿದ. ವಿಜಯನಗರ ಸಾಮ್ರಾಜ್ಯದಲ್ಲಿ ಪ್ರಖ್ಯಾತರಾದ ಇನ್ನೂ ಇಬ್ಬರು ಗಣ್ಯ ಸಾರಸ್ವತರು ವಸಂತ ಮಾಧವ ಮತ್ತು ಮಾಯ್ ಶೆಣಾಯ್ ವಾಗಳೆ. ವಸಂತ ಮಾಧವನು ಗೋವಾದ ನಾಗೇಶೀ ದೇವಾಲಯಕ್ಕೆ ಭೂಮಿಯನ್ನು ದತ್ತಿ ನೀಡಿದ. ಮಾಯ್ ಶೆಣಾಯಿ ವಾಗಳೆ ಕ್ರಿ.ಶ. 1366ರಿಂದ ಹದಿಮೂರು ವರ್ಷಕಾಲ ಪ್ರಥಮ ಬುಕ್ಕನ ವಿಶ್ವಸ್ತ ಮಾಂಡಲಿಕನಾದ ಚಿಕ್ಕರಾಜ ಒಡೆಯರ್‌ನ ಬಳಿ ಮಂತ್ರಿಯಾಗಿದ್ದ.

ಮೊಹಮ್ಮದ್ ಶಾಹ ಬಹಮನಿಯ ಪ್ರಾದೇಶಿಕ ಶಾಸಕರು ತಾಳೀಕೋಟೆ ಯುದ್ಧದಲ್ಲಿ ವಿಜಯನಗರದ ದೊರೆಯನ್ನು ಪರಾಜಿತಗೊಳಿಸಿ, ತಾವು ಸ್ವತಂತ್ರರೆಂದು ಘೋಷಿಸಿಕೊಂಡಾಗ ಕ್ರಿ. ಶ. 1565ರಲ್ಲಿ ವಿಜಯನಗರ ಸಾಮ್ರಾಜ್ಯದ ಪತನವಾಯಿತು. ವಿಜಾಪುರದ ಆದಿಲಶಾಹನ ಆಡಳಿತದಲ್ಲಿ (ಕ್ರಿ. ಶ. 1482–1518) ಗೋಮಂತಕವು ಒಳಪಟ್ಟಿತ್ತು. ಆದಿಲಶಾಹನ ತಾಯಿ ಮೊದಲು ಹಿಂದುವಾಗಿದ್ದರಿಂದ, ಅವನು ಹಿಂದುಗಳ ಮೇಲೆ ಅನುಕಂಪವನ್ನು ತೋರುತ್ತಿದ್ದ. ಆದರೂ ವಿಜಯನಗರದ ಪತನದೊಂದಿಗೆ ತಾವು ಅಭದ್ರರಾದೆವು ಎಂದು ಹಿಂದೂ ಪ್ರಜೆಗಳು ಭಾವಿಸ ತೊಡಗಿದರು. ನಿಜಾಮರ ಆಡಳಿತ ಕಾಲದಲ್ಲಿ, ಸಾಬಾಜೀ ಅನಂತ ಎಂಬ ಸಾರಸ್ವತನು ದೌಲತಾಬಾದ ಕೋಟೆಯ ಗವರ್ನರ್

ಆಗಿದ್ದ. ಹೈದರಾಬಾದದ ಸಿಂಹಾಸನಾರೂಢನಾದ ತರುಣ ರಾಜನ ಮೇಲೆ ದಾಳಿ ಮಾಡಲು ಪ್ರಯತ್ನಿಸುತ್ತಿದ್ದ ಔರಂಗಜೇಬನ ಪ್ರಯತ್ನವನ್ನು ಅವನು ಅನೇಕ ಸಲ ವಿಫಲಗೊಳಿಸಿದ. ಇದರ ಪರಿಣಾಮವಾಗಿ, ಅವನು 'ಬಹುತ ಚತುರ' ಎಂಬ ಪ್ರಶಂಸೆಗೆ ಪಾತ್ರನಾದ. ಅಂದಿನಿಂದ ಅವನನ್ನು ಸಾಬಾಜೀ ಚತುರೇ ಎಂದು ಕರೆಯತೊಡಗಿದರು. ಅವನು ಪ್ರಶಾಸನವನ್ನು ಕ್ರಮಬದ್ಧಗೊಳಿಸಿದ. ಭೂಮಾಪನದ ಮೌಲ್ಯವನ್ನು ಪರಿಷ್ಕರಿಸಿದ. ರೈತರಿಗೆ ಸಾಲವನ್ನು ನೀಡಿ, ಕೃಷಿ ಅಭಿವೃದ್ಧಿಯನ್ನೂ ಮಾಡಿದ.

ಶಿವಾಜಿಯು 'ಹಿಂದವೀ ರಾಜ್ಯ'ವನ್ನು ಸ್ಥಾಪಿಸಿದ ಬಳಿಕ, ಹಿಂದೂ ಧರ್ಮದ ಪುನರುತ್ಥಾನ ಆಗತೊಡಗಿತು. ಕ್ರಿ.ಶ. 1664ರಲ್ಲಿ ಶಿವಾಜಿ ಮೊಟ್ಟ ಮೊದಲು ಗೋಮಂತಕದ ಅತಿಕ್ರಮಣ ಮಾಡಿ, ಬಿಚೋಲಿಮ್ ಮತ್ತು ಪೆರ್ಣೆಯನ್ನು ವಶಪಡಿಸಿಕೊಂಡ. ಅದೇ ವೇಳೆ, ಪೋರ್ಚುಗೀಸರು ಗೋಮಂತಕದ ಪ್ರಜೆಗಳ ಮೇಲೆ ತಮ್ಮ ಪ್ರಭಾವ ಬೀರಿದ್ದರು. ಕ್ರಿ. ಶ. 1683ರಲ್ಲಿ, ಸಂಬಾಜಿಯು ಬಾರದೇಸ್ ಮತ್ತು ಸಾಲಸೀಟನ್ನು ಸ್ವಾಧೀನಪಡಿಸಿಕೊಂಡಾಗ, ಪೋರ್ಚುಗೀಸರ ಪತನ ಸಮೀಪಿಸುತ್ತಿದೆ ಎಂದೇ ಅನಿಸಿತ್ತು. ಆದರೆ ಅದೇ ಸಮಯದಲ್ಲಿ ಮರಾಠರನ್ನು ಗಡಿಭಾಗದಿಂದ ಹಿಂದೆ ಸರಿಯುವಂತೆ ಮುಸ್ಲಿಮರು ಬಲಪ್ರಯೋಗ ಮಾಡುತ್ತಿದ್ದು ದರಿಂದ ಪೋರ್ಚುಗೀಸರು ಬಚಾವಾದರು. ಕ್ರಿ. ಶ. 1739ರಲ್ಲಿ, ಪೋರ್ಚುಗೀಸರು ಮತ್ತು ಮರಾಠರ ನಡುವೆ ಆದ ಒಂದು ಒಪ್ಪಂದ ಪತ್ರದ ಮೇರೆಗೆ ಗೋಮಂತಕದಲ್ಲಿ ಸ್ವಲ್ಪಮಟ್ಟಿಗೆ ಶಾಂತಿ ನೆಲೆಸಿತ್ತು. ಆದರೂ, ಪೋರ್ಚುಗೀಸರು ಸ್ಥಳೀಯ ಕ್ರಿಶ್ಚಿಯನ್ನರಿಂದ ಪಿಂಟೋ – ದಂಗೆ ಎಂಬ ವಿರೋಧವನ್ನು ಎದುರಿಸಬೇಕಾಯಿತು. ದೊರೆಗಳು ಪಕ್ಷಪಾತ ಮಾಡಿ ತಮ್ಮನ್ನು ಕಡೆಗಣಿಸುತ್ತಿದ್ದಾರೆಂದು ದಂಗೆಕೋರರ ಆಪಾದನೆಯಾಗಿತ್ತು. ಸಾತಾರಾದ ಹಿಂದಿನ ಆಳರಸರಾದ ರಾಣೆಗಳು ಪೋರ್ಚುಗೀಸರ ವಿರುದ್ಧ 150 ವರ್ಷಗಳ ತುಂಬ, ಹೆಚ್ಚೆಂದರೆ ಇಂಥ 14 ದಂಗೆಗಳನ್ನಾದರೂ ಸಂಘಟಿಸಿ ವಿಫಲರಾಗಿದ್ದರು. ಪೋರ್ಚುಗೀಸರ ರಾಜ್ಯಾಡಳಿತದ ಕುರಿತು ನಂತರ ಪರಿಶೀಲಿಸುವಾ. ಮರಾಠರ ಆಡಳಿತವಿದ್ದಾಗ ಶಿವಾಜಿ ಗೋಮಂತಕದ ಮೇಲೆ ಮಾಡಿದ ಪ್ರಥಮ ಆಕಸ್ಮಿಕ ಆಕ್ರಮಣದ ನಂತರ, ಹಿಂದುಗಳು ಮರಾಠಾ ಸಂಸ್ಕೃತಿಯ ಪ್ರಭಾವದಲ್ಲಿ ಬಂದರು. ಮರಾಠರ ಬಳಿಯಿದ್ದ ಸಾರಸ್ವತರು ಅವರ ಶಾಸಕಾಂಗದಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದರು. ಶಿಲಾಹಾರರು ಮತ್ತು ದೇವಗಿರಿ ಯಾದವರ ಆಸ್ಥಾನದಲ್ಲಿ ಆಡಳಿತ ನಡೆಸಿದ ಅನುಭವದ ಹಿನ್ನೆಲೆಯಿದ್ದುದರಿಂದ ಅವರು ಮರಾಠಾ ದೊರೆಗಳ ನಿಕಟ ಪರಿಚಯವನ್ನು ಪಡೆದರು. ಅವರಲ್ಲಿ ವ್ಯಾಪಾರ, ವಾಣಿಜ್ಯ ಮತ್ತು ವಿದೇಶೀ

ಭಾಷೆಗಳ ಜ್ಞಾನದ ಅನುಭವವಿತ್ತು. ಪೋರ್ಚುಗೀಸ್, ಡಚ್ ಮತ್ತು ಇಂಗ್ಲಿಷ್ ವ್ಯಾಪಾರಿಗಳ ಜೊತೆ ವ್ಯಾಪಾರ ಮತ್ತು ವಾಣಿಜ್ಯೋದ್ಯಮದ ಸಂಬಂಧವಾಗಿ ಮಾತುಕತೆ ಮತ್ತು ಸಂಧಾನ ಬೆಳೆಸಲು ಅವರಲ್ಲಿದ್ದ ಅನುಭವವು ಮರಾಠರ ಅಧೀನದಲ್ಲಿದ್ದ ಇತರ ಬ್ರಾಹ್ಮಣರಿಗಿಂತ ಒಂದು ಕೈ ಮೇಲಾಗಿತ್ತು. ಶಿವಾಜಿ ಮತ್ತು ಅವನ ನಿಷ್ಠಾವಂತ ಅನುಯಾಯಿಗಳಾದ ಮಾಳವರು ಮೂಲತಃ ಕ್ಷಾತ್ರಗುಣ ಸಂಪನ್ನರಾದುದರಿಂದ, ರಾಜ್ಯಾಡಳಿತದ ಬಹ್ವಂಶ ಚಿತ್ಪಾವನ, ಕರ್ಹಾಡೇ, ಹಾಗೂ ಕಾಯಸ್ಥರಂಥ ಬ್ರಾಹ್ಮಣರ ಬಳಿ ಇತ್ತು. ಸಾರಸ್ವತರೂ ಅವರೊಡನೆ ಸಹಭಾಗಿ ಗಳಾಗಿದ್ದರು. ರಾಮೋಜಿ ಶಣೈ ಕೋಠಾರಿ, ತುಕಾ ಶಣೈ, ನಾರಾಯಣ ವಿಟ್ಠಲ ಸಿನಾಯ್ ದುಮೋ, ಪೀತಾಂಬರ ಶಣೈ, ನಾರೋ ರಾಮ ಮಂತ್ರಿ, ಲಖಬಾ ಅನಂತ ಲಾಡ ಮತ್ತು ರಣಛೋಡ ಕೃಷ್ಣ ಶಣೈರಂಥ ಅನೇಕ ಸಾರಸ್ವತರು ಮರಾಠಾ ಆಡಳಿತವಿರುವ ಶಿವಾಜೀ ಸಂಸ್ಥಾನದಲ್ಲಿ ಪ್ರಭಾವೀ ಹುದ್ದೆಗಳನ್ನು ಅಲಂಕರಿಸಿದ್ದರು.

ಆದರೂ, ಮರಾಠಾ ಆಡಳಿತವಿದ್ದಾಗ, ಸಾರಸ್ವತರ ಕೊಡುಗೆಗಳಿಗೆ ಸ್ಪಷ್ಟ ಮಾನ್ಯತೆ ಮತ್ತು ಗೌರವವು ಮುಖ್ಯವಾಗಿ ಪೇಶವಾ ಪಟ್ಟಕ್ಕೇರಿದ ಚಿತ್ಪಾವನರಿಂದ ಸಿಗಲಿಲ್ಲ. ಅಷ್ಟೇ ಅಲ್ಲ; ದೇಶಸ್ಥ, ಕರ್ಹಾಡೇಯಂಥ ಇತರ ಬ್ರಾಹ್ಮಣರಿಂದಲೂ ಸಿಗಲಿಲ್ಲ. ಪ್ರಾರಂಭದ ಕಾಲದಲ್ಲಿ ಶಿವಾಜಿ ಮತ್ತು ನಂತರ ಬಂದ ಪೇಶವಾ ಆಡಳಿತವಿದ್ದಾಗ ಕೂಡ ಸಾರಸ್ವತರನ್ನು ಅಪಮಾನ ಮಾಡುವ ಸಲುವಾಗಿ ಎಲ್ಲ ತರಹದ ಪ್ರಯತ್ನಗಳನ್ನೂ ಮಾಡಲಾಗಿತ್ತು. 'ಭಾರತ ಇತಿಹಾಸ ಸಂಶೋಧಕ ಮಂಡಲ'ವು ಶಿವಾಜಿಗೆ ಹೇಗೆ ದಾರಿ ತಪ್ಪಿಸಿದರು ಎಂಬುದರ ಕುರಿತು ಒಂದು ನಿದರ್ಶನ ನೀಡುತ್ತದೆ.

ಕೊಂಕಣ ಶೇಣವಿಗಳೆಂಬ ಸಾರಸ್ವತರು ಮೊದಲು ಬ್ರಾಹ್ಮಣರಾಗಿದ್ದರು. ಆದರೆ, ಅನಾವೃಷ್ಟಿ ನಿಮಿತ್ತ ದುರ್ಭಿಕ್ಷ ಬಂದೊದಗಿದ್ದರಿಂದ ಸ್ವಸಮಾಜದಿಂದ ಬಹಿಷ್ಕೃತರಾದರು. "ಏತೇ ಕೌಂಕಣಾಃ ಶೇಣವೀತಿ ನಾಮ್ನಾ ಪ್ರಸಿದ್ಧಾಸ್ತು ಪೂರ್ವೇ............. ಬ್ರಾಹ್ಮಣಾ ಏವ ಸ್ಥಿತಾಃ ಪರಂತು ಅವೃಷ್ಟ್ಯಾ ದುರ್ಭಿಕ್ಷಾದಿನಾ ಭ್ರಷ್ಟಚಾರಾಃ ಜಾತಾಃ ।" ಎಂದು ಸ್ಪಷ್ಟಪಡಿಸಿದರು. ಇಷ್ಟು ಸಾಲಲಿಲ್ಲವೆಂದೋ ಏನೋ, ಮಾಧವ ಕರ್ಹಾಡೇ ತನ್ನ 'ಶತಪ್ರಶ್ನಕಲ್ಪಲತಿಕಾ' ಎಂಬ ಕೃತಿಯಲ್ಲಿ ಹೀಗೆ ಸಾರಸ್ವತರ ಅಪಹಾಸ್ಯ ಮಾಡಿದ್ದಾನೆ. 'ಅವರು ಸ್ನಾನವಾದ ಬಳಿಕ ತಮ್ಮ ಯಜ್ಞೋಪವೀತದಿಂದ ಆಹಾರಕ್ಕಾಗಿ ಮೀನು ಹಿಡಿಯುತ್ತಿದ್ದರು.'

ಶತಸೂತ್ರೇಣ ಚಾಕೃಷ್ಯ ಸ್ನಾನೋರ್ಧ್ವಂ ಮೀನಮೇವ ಚ ।

ಗೃಹೀತ್ವಾ ಭಕ್ಷತೇ ಯಸ್ಮಾಚ್ಛಣವೀತ್ಯಭಿಧಾ ತು ಸಾ॥

ಚಿತ್ಪಾವನರು, ದೇಶಸ್ಥರು ಮತ್ತು ಕರ್ಹಾಡೇ ಬ್ರಾಹ್ಮಣರು ತಾವು ಮಹಾರಾಷ್ಟ್ರದ ನಿವಾಸಿಗಳು, ಸಾರಸ್ವತರು ಹೊರಗಿನವರು ಎಂದು ಪರಿಗಣಿಸುತ್ತಿದ್ದರು. ಅವರ ಬ್ರಾಹ್ಮಣ ಲಕ್ಷಣಗಳನ್ನು ಸಂಶಯ ದೃಷ್ಟಿಯಿಂದ ನೋಡಿ, ಸಾರಸ್ವತರು ಮಾತ್ರ ತ್ರಿಕರ್ಮಿಗಳು ಮತ್ತು ಇತರ ಎಲ್ಲ ಬ್ರಾಹ್ಮಣರು ಷಟ್ಕರ್ಮಿಗಳು ಎಂದು ಸಾಧಿಸುತ್ತಿದ್ದರು. ಇಂಥ ನಿಂದೆಗಳನ್ನು ಕೇಳಿದರೂ ಸಾರಸ್ವತರು ಮಹಾರಾಷ್ಟ್ರದಲ್ಲಿ ಅಭಿವದ್ಧಿಪಥದಲ್ಲಿದ್ದರು. ಇದು ಏಕನಾಥೀ ಭಾಗವತದಂಥ ಧಾರ್ಮಿಕ ಗ್ರಂಥಗಳಲ್ಲಿಯೂ ಶಬ್ದಗಳನ್ನು ಬದಲಾಯಿಸಿ ಪ್ರಕ್ಷೇಪಣ ಮಾಡಲು ಉತ್ತೇಜಿಸಿತು.

ಕಾಸ್ತ ಆಣಿ ಸಾಸ್ವತ । ಇತ್ಯಾದಿ ಪೃವೃತ್ತಿ ಸಮಸ್ತ। ಶುದ್ಧ ಅನುಲೋಮಜ। ಎಂಬುದನ್ನು

'ಪೃವೃತ್ತಿ ಕಾಸ್ತ ಆಣಿ ಸಾರಸ್ವತ। ಇತ್ಯಾದಿ ನಾಂವೇ ಜೇ ವರ್ತತ ।

ತೇ ಜಾಣ ಸಮಸ್ತ ಅನುಲೋಮಜ ।' ಎಂದು ಇತರ ಬ್ರಾಹ್ಮಣರು ಪ್ರಕ್ಷೇಪಣ ಮಾಡಿರುವರು. ಅನುಲೋಮಜ ಎಂದರೆ ಮಿಶ್ರಜಾತಿಯವರು.

ನಾನಾ ಫಡನವೀಸನು ಶಾಹು ಮಹಾರಾಜನಿಗೆ ಸಲಹೆಗಾರನೆಂದು ನೇಮಕಗೊಂಡ ಮೇಲೆ, ಚಿತ್ಪಾವನ ಬ್ರಾಹ್ಮಣರ ಮಹತ್ವವು ಇತರ ಬ್ರಾಹ್ಮಣರ ಮತ್ತು ಕಾಯಸ್ಥರ ಟೀಕೆಗೆ ಗುರಿಯಾಯಿತು. ಇತರರ ಭಟ್ಟಂಗಿತನದಿಂದ ತಮ್ಮ ಪ್ರಗತಿಗೆ ಅಡ್ಡಿಯಾಗುವುದೆಂದು ಸಾರ್ಸ್ವತರಿಗೆ ಅನಿಸಲೇ ಇಲ್ಲ. ಅವರು ಮರಾಠರ ಆಡಳಿತ ಕಾಲದಲ್ಲಿ ಯಾವುದೇ ವಿಷಾದ-ಪಶ್ಚಾತ್ತಾಪಗಳಿಗೆ ಆಸ್ಪದ ನೀಡದೆ ಹಾಯಾಗಿ ನೆಮ್ಮದಿಯಿಂದಿದ್ದರು. ಯೋಧರು, ಸಮರ್ಥ ಶಾಸಕರು ಹಾಗೂ ವಿದೇಶೀ ವ್ಯಾಪಾರಿಗಳೊಡನೆ ವ್ಯಾಪಾರ - ವಾಣಿಜ್ಯದ ವ್ಯವಹಾರಗಳಲ್ಲಿ ನಿಪುಣ ಸಂಧಾನಕಾರರೂ ಆಗಿ ಅವರಿಗೆ ಯಶಃಪ್ರಾಪ್ತಿಯೊಂದಿಗೆ, ಲೌಕಿಕ ಸುಖದ ಫಲಪ್ರಾಪ್ತಿಯೂ ಆಗಿತ್ತು. ಆದ್ದರಿಂದಲೇ ಅವರು ಇತರರಿಂದಾದ ಅಪಮಾನ-ನಿಂದೆಗಳಿಂದ ನಿರ್ಲಿಪ್ತರಾಗಿದ್ದಿರಬಹುದು. ಬಹುಶಃ ಅವುಗಳಿಗೆ ಉಗ್ರ ಪ್ರತಿಭಟನೆಯನ್ನು ಸಲ್ಲಿಸಬೇಕೆಂದೂ ಅವರಿಗೆ ಹೊಳೆದಿರಲಿಕ್ಕಿಲ್ಲ. ಅವರು ಎಷ್ಟರ ಮಟ್ಟಿಗೆ ಮಹಾರಾಷ್ಟ್ರದ ಪೂರ್ಣ ಪ್ರಭಾವಕ್ಕೊಳಗಾಗಿದ್ದರೆಂದರೆ ಮರಾಠೀ ಭಾಷೆಯನ್ನಷ್ಟೇ ಅಲ್ಲ, ಅವರ ಪುರಾತನ ಪರಂಪರೆ, ವರ್ತನೆ ಹಾಗೂ ಪಗಡೀ

ಉಡುಪನ್ನು ತಮ್ಮದನ್ನಾಗಿಸಿಕೊಂಡರು. ತಮ್ಮ ಕುಲದೇವತೆಗಳ ಪೋಷಾಕು ಕೂಡ ಪುಣೇರೀ ಬ್ರಾಹ್ಮಣನ ಪೋಷಾಕಿನಂತೆ ತೋರಬೇಕೆಂದು ಬದಲಾಯಿಸಿ ಕೊಂಡರು.

ಚಿತ್ಪಾವನರು 'ತಾವು ಶುದ್ಧ ಬ್ರಾಹ್ಮಣರು, ಸಾರಸ್ವತರೊಡನೆ ಸಹಪಂಕ್ತಿಭೋಜನ ಮಾಡುವುದು ತಮ್ಮ ಪ್ರತಿಷ್ಠೆಗೇ ಕುಂದು' ಎಂದು ಭಾವಿಸಿದ್ದರು. ಅವರ ಬ್ರಾಹ್ಮಣತ್ವದ ಅರ್ಹತೆಯ ಬಗ್ಗೆ ಸಂಶಯ ಪಡುತ್ತಿದ್ದರು. The History of Marathas ಎಂಬ ಕೃತಿಯಲ್ಲಿ ನ್ಯಾಯಾಧೀಶ ರಾನಡೇಯವರು ಒಂದು ಘಟನೆಯನ್ನು ಹೀಗೆ ಉಲ್ಲೇಖಿಸಿರುತ್ತಾರೆ.

ಶ್ರೇಷ್ಠ ಸಾರಸ್ವತ ಯೋಧನಾದ ಬಕ್ಷಿ ಬಹಾದುರ ಜೀವಾಬದಾದಾ ಕೇರಕರನು, ನಿಜಾಮರೊಡನೆ ಹೋರಾಡಿ ಗೆದ್ದು ವಿಜಯೋತ್ಸವದೊಂದಿಗೆ ಮರಳಿ ಬಂದ ಬಳಿಕ ಪೇಶವೆಯನ್ನು ಸಂತೋಷಕೂಟಕ್ಕೆ ಬರುವಂತೆ ಆಮಂತ್ರಣ ನೀಡುತ್ತಾನೆ. ಆಗ ಪೇಶವಾ ಹೀಗೆ ಕೇಳಿದನಂತೆ.

'ಇವರದು ಶೇಣವಿ ಜನಾಂಗ. ಇವರೊಡನೆ ಪಂಕ್ತಿ ಭೋಜನ ಮಾಡುವುದು ಸರಿಯಾದೀತೇ? ಇವರ ಆಮಂತ್ರಣವನ್ನು ಹೇಗೆ ಒಪ್ಪಲಿ?'

ಆಗ ಚಾಣಾಕ್ಷ ನಾನಾ ಫಡಣವೀಸನು ಹೀಗೆ ಸೂಕ್ತ ಸಲಹೆ ನೀಡಿದ –'ಶೇಣವಿಯಾದರೇನಂತೆ? ಜೀವಾಬನ ಇಚ್ಛೆಯನ್ನು ಕಡೆಗಣಿಸಬಾರದು. ಅವನು ತನ್ನ ಖಡ್ಗವನ್ನು ಬಳಸಿದ್ದು ಸರಿಯಾಗಿದೆ ಎಂದಾಗಲೇ ಪೇಶವಾ ಒಂದು ಹಣ್ಣಿನ ಹೋಳನ್ನು ಕಚ್ಚಿ ತನ್ನ ಒಪ್ಪಿಗೆ ನೀಡಿದ. ಆಗ ಜೀವಾಬದಾದಾ ಕೇರಕರನು ತನಗೆ ಅಪಮಾನವಾಯಿತೆಂದು ತೋರಿಸಿಕೊಳ್ಳದೆ 'ಉದ್ದೇಶ ಫಲಿಸಿತು' ಎಂದು ಹಿರಿಹಿರಿ ಹಿಗ್ಗಿದ.

ವೇದ ಸಂರಕ್ಷಕ ಸಾರಸ್ವತ ಮುನಿಯ ಜ್ಞಾನದ ವಾರಸುದಾರರು ನಾವು ಎಂದು ಬೀಗುವಂಥ ಸಾರಸ್ವತರು 'ತಮ್ಮ ಯಜಮಾನನು (?) ತಮ್ಮೊಡನೆ ಕುಳಿತು ಭೋಜನ ಸ್ವೀಕರಿಸಿದ್ದರಿಂದ ತಾವು ಗೌರವಕ್ಕೆ ಅರ್ಹರಾದೆವೆಂದು' ಹೀಗೆ ಬೀಗುತ್ತಿರುವುದು ನಿಜಕ್ಕೂ ವಿಚಿತ್ರವೆಂದು ತೋರುತ್ತದೆ. ಬಹುಶಃ ಪರೋಪಕಾರಕ್ಕಾಗಿ ಆಡಳಿತದ ಸಲಹೆಗಾರರಾಗಿ ದೀರ್ಘಕಾಲದ ಸೇವೆ ಸಲ್ಲಿಸಿ, ಎಲ್ಲರ ಉದ್ಧಾರಕ್ಕಾಗಿ ರಣರಂಗದಲ್ಲಿ ವೀರಯೋಧರಾಗಿ ಹೋರಾಡಿದ್ದೇವೆ' ಎಂಬ ಭಾವನೆಯಿಂದ ಪ್ರಚೋದಿತರಾಗಿ, ಅವರು ಅಧಿಕಾರ, ಪ್ರತಿಷ್ಠೆ ಮತ್ತು ಅಭಿವೃದ್ಧಿಯ ಆಮಿಷಕ್ಕೆ ಬಲಿಯಾಗಿರಬಹುದು.

ದ್ವಿತೀಯ ವಲಸೆ

ಪ್ರಥಮ ಹಂತ

ದ್ವಿತೀಯ ವಲಸೆ ಎರಡು ಹಂತಗಳಲ್ಲಿತ್ತು. ಪ್ರಥಮ ಹಂತ ಸಾರಸ್ವತರಲ್ಲಿ ಯುಕ್ತಾಯುಕ್ತ ವಿವೇಚನೆ ಮತ್ತು ದೂರದೃಷ್ಟಿಯ ಕೊರತೆಯ ಪರಿಣಾಮವಾಗಿ ಸಂಭವಿಸಿತು. ಬ್ರಾಹ್ಮಣರ ಬುದ್ಧಿಮತ್ತೆ ಮತ್ತು ವಾಣಿಜ್ಯ ಸಂಬಂಧೀ ಚಾಣಾಕ್ಷತೆಯಲ್ಲಿರುವ ಅವರ ಅಪಾರ ಆತ್ಮವಿಶ್ವಾಸವು ಸ್ವದೇಶ, ಸಂಸ್ಕೃತಿ ಮತ್ತು ಧರ್ಮರಕ್ಷಣೆಗಿಂತ ಧನರಕ್ಷಣೆಯ ಅತ್ಯಾಶೆಯನ್ನು ಕೆರಳಿಸುತ್ತ ಹೋಯಿತು. ಅದು ಅವರ ಅಧಃಪತನ ಮತ್ತು ದೀನ ಶರಣಾಗತಿಗೂ ಪ್ರಮುಖ ಕಾರಣವಾಯಿತು. ಸೋತರೆ, 'ನನ್ನ ಪ್ರಾರಬ್ಧಕರ್ಮ' ಎಂದೂ, ಗೆದ್ದರೆ, 'ನನ್ನ ಬುದ್ಧಿಯ ಸಾಹಸ' ಎಂದೂ ಆರೋಪಿಸಿಕೊಳ್ಳುವ ಗುಣ ಬ್ರಾಹ್ಮಣರ ಗುಣಧರ್ಮವೇ ಆಗಿತ್ತು. ವಿದೇಶೀಯರು ತಮ್ಮ ಸ್ವಂತ ಹಿತಾಸಕ್ತಿಗಾಗಿ ಭಾರತೀಯರ ವಿರುದ್ಧ ಭಾರತೀಯರೇ ಹೋರಾಡುವಂತೆ ಪ್ರಚೋದಿಸಿದ ಅಸಂಖ್ಯ ಉದಾಹರಣೆಗಳು ಭಾರತದ ಇತಿಹಾಸದ ತುಂಬ ಸಿಗುತ್ತವೆ. ಅಲೆಕ್ಸಾಂಡರನು ಭಾರತದ ಮೇಲೆ ದಂಡೆತ್ತಿ ಬಂದಾಗ ಹಾಗೂ ಮುಸ್ಲಿಮರು ತಮ್ಮ ಆಕಸ್ಮಿಕ ಆಕ್ರಮಣದಿಂದ ಭಾರತವನ್ನು ಗುಲಾಮಗಿರಿಗೆ ತಳ್ಳಿದಾಗ ನಡೆದದ್ದು ಇದೇ. ಇದೇ ವಿಧಾನದಿಂದ ಡಚ್ಚರು, ಪೋರ್ಚುಗೀಸರು ಮತ್ತು ಆಂಗ್ಲರು ಇಲ್ಲಿ ಬಂದು ಸ್ಥಳೀಯರನ್ನು ಗೆದ್ದರು. ತಮ್ಮ ಸದ್ಯದ ಆರ್ಥಿಕ ಅಭಿವೃದ್ಧಿಯನ್ನು ಸಾಧಿಸಲು ಹೋರಾಡುತ್ತಿರುವವರಿಗೆ ಗತ ಇತಿಹಾಸದ ಕಡೆಗೆ ಗಮನವೀಯುವಷ್ಟು ಪುರಸತ್ತೇ ಇರುವುದಿಲ್ಲ. ಯಾರೊಬ್ಬರೂ ಇತಿಹಾಸವನ್ನು ಓದುವುದಿಲ್ಲ. ಮಾನವನು ತನ್ನ ವಿವೇಚನಾ ಶಕ್ತಿಯನ್ನೂ, ಚಿತ್ತಸ್ವಾಸ್ಥ್ಯವನ್ನೂ ಕಳೆದುಕೊಂಡಾಗ, ಇಂದ್ರಿಯಗಳು ಅವನ ಕರ್ಮಪಥವನ್ನು ನಿಯಂತ್ರಿಸಿ, ನಿರ್ಧಾರ ಕೈಕೊಳ್ಳುವ ಕೆಲಸವನ್ನು ನಿರ್ವಹಿಸುತ್ತವೆ.

ಪೋರ್ಚುಗೀಸರು ಭಾರತಕ್ಕೆ ಬಂದದ್ದು ವ್ಯಾಪಾರಕ್ಕಾಗಿ, ಆಳಲಿಕ್ಕಲ್ಲ. ಭಾರತದಲ್ಲಿ ಸ್ಥಳೀಯ ನಾಯಕರು ತಮ್ಮ ಸಮಸ್ಯೆಯ ಪರಿಹಾರವನ್ನು ತಾವೇ ಮಾಡಿಕೊಳ್ಳದೆ, ವಿದೇಶದ ಅಪರಿಚಿತರನ್ನು ಆಮಂತ್ರಿಸುವ ಅವಿವೇಕದ ಕ್ರಮವನ್ನು ಅವರು ಗಮನಿಸಿದರು. ಆದ್ದರಿಂದ "ನಾವು ಈ ದೇಶದ ಉದ್ಯಮದಲ್ಲಿ ಹಣವನ್ನು ತೊಡಗಿಸಬೇಕು. ತಮ್ಮ ಪಾಲಿಗೆ ಇದೇ ಒಂದು ದೈವದತ್ತ ಅವಕಾಶ. ಈಗ ಈ ಅವಕಾಶವನ್ನು ಬಿಟ್ಟುಕೊಟ್ಟರೆ ಅವಿವೇಕವಾದೀತು," ಎಂದು ಅವರು ಭಾವಿಸಿದರು. ಅವರು ಈ ದೇಶದಲ್ಲಿ ತಮ್ಮ ಭದ್ರವಾದ ನೆಲೆಯನ್ನು ಸ್ಥಾಪಿಸುವ ಸಲುವಾಗಿ,

ಭಾರತದಲ್ಲಿಯೇ ಆಳವಾಗಿ ತಳವೂರಿದರು. ಗೋಮಂತಕಕ್ಕೂ ಬಂದರು. ಇಲ್ಲಿ ಹಿಂದೂ–ಮುಸ್ಲಿಂ ವ್ಯಾಜ್ಯವನ್ನು ಪರಿಹರಿಸುವಾಗ, ಒಂದು ಪಕ್ಷವನ್ನು ಪೂರ್ತಿ ತಳ್ಳಿ, ರಾಜ್ಯದ ಆಡಳಿತ ಸೂತ್ರವನ್ನು ಕೈವಶ ಮಾಡಿಕೊಂಡರು. ಅವರ ದೃಷ್ಟಿಯಲ್ಲಿ, ಈ ದೇವಭೂಮಿ ಗೋಮಂತಕವು (Gomantaka) ಸ್ವರ್ಣಭೂಮಿ ಗೋವಾ (Goa Dourado) ಆಗಿ ಪರಿಣಮಿಸಿತು. ಏಕೆಂದರೆ, ತಮ್ಮ ದೊರೆಗಾಗಿ ಹಾಗೂ ಚರ್ಚುಗಳಿಗೋಸ್ಕರ, ಅಲ್ಲಿಯ ಸಂಪತ್ತನ್ನು ದೋಚಲು ಪ್ರಶಸ್ತ ಭೂಮಿಯಾಗಿದೆ ಎಂದು ಅನಿಸಿತು. ಅಂದಿನಿಂದ ಆ ಪ್ರದೇಶವು ಪ್ರಾಚೀನ ವೇದಕಾಲದ ಶ್ರೇಷ್ಠ ಮೌಲ್ಯಗಳಿಂದ ಕುಸಿದು ಗುಲಾಮೀ ಸಮಾಜದ ಶೋಚನೀಯ ಸ್ಥಿತಿಗೆ ಜಾರಿತು. ಉನ್ನತ ಆಧ್ಯಾತ್ಮಿಕ ಶಿಖರದಿಂದ ಭ್ರಷ್ಟವಾಗಿ ಸಮಾಜವು ಲೌಕಿಕ ವ್ಯಾಮೋಹದ ಕೂಪಕ್ಕೆ ಕುಸಿಯಿತು.

ಇದಕ್ಕೂ ಮುನ್ನ, ಆದಿಲಶಾಹೀ ಆಡಳಿತವು ನವಾಯತ ಮುಸ್ಲಿಂ ವ್ಯಾಪಾರಿಗಳನ್ನು ಭಟಕಳದಿಂದ ಗೋವಾಕ್ಕೆ ಆಹ್ವಾನಿಸಿತ್ತು. ಇದರಿಂದ ವ್ಯಾಪಾರವು ತಮ್ಮ ಕೈತಪ್ಪಿ, ಅರಬರಿಗೆ ಹಸ್ತಾಂತರವಾಗುವುದಂತೂ ನಿಶ್ಚಿತ ಎಂಬ ಕಳವಳದಿಂದ ಹಿಂದೂ ವ್ಯಾಪಾರಿಗಳು ಭಯಭೀತರಾದರು. ಆಗ, ಆದಿಲಶಾಹೀ ಆಸ್ಥಾನದಲ್ಲಿ, ಸರದೇಸಾಯಿ ಆಗಿದ್ದ ಮ್ಹಾಳ ಪೈ ಎಂಬ ಓರ್ವ ಶ್ರೀಮಂತ ವರ್ತಕ ಈ ಹಿಂದೂ ವ್ಯಾಪಾರಿಗಳ ನಾಯಕನಾದ. ಆದರೆ, ಅವರ ಬಳಿ ಮುಸ್ಲಿಂ ಪ್ರಭುತ್ವವನ್ನು ವಿರೋಧಿಸುವಷ್ಟು ಸಾಕಷ್ಟು ಸಾಧನ–ಸೌಕರ್ಯಗಳಿರಲಿಲ್ಲ. ಆಗ, ಅವರು ಮುಸ್ಲಿಮರ ವಿರೋಧ ಮಾಡಿ, ಹಿಂದುಗಳ ಆರ್ಥಿಕ ಅನುಕೂಲತೆಯನ್ನು ರಕ್ಷಿಸಲು ಹೊನ್ನಾವರದ ತಿಮ್ಮೋಜಿ ನಾಯಕನ ಸಹಾಯಕ್ಕಾಗಿ ಕೈಚಾಚಿದರು. ಅವನು ಓದು–ಬರಹ ಬಾರದ, ಓರ್ವ ಡಕಾಯಿತ ಯೋಧನಾಗಿದ್ದ. ತಿಮ್ಮೋಜಿ ನಾಯಕನು ನಿರಕ್ಷರ ಕುಕ್ಷಿಯಾದರೂ ಮೂರ್ಖನಾಗಿರಲಿಲ್ಲ. ಪ್ರಬಲ ಆಶ್ರಯವಿದ್ದ ಶತ್ರುವಿನೊಡನೆ ಹೋರಾಡಬೇಕೆಂದಿದ್ದರೆ, ಹೊನ್ನಾವರದಲ್ಲಿ ವಸತಿ ಹೂಡಿದ ಪೋರ್ಚುಗೀಸರ ಸಹಾಯ ಪಡೆಯಬೇಕೆಂಬ ಸೂಚನೆ ನೀಡಿದ. ಮುಸ್ಲಿಂ ಆಡಳಿತದಿಂದ ಮುಕ್ತವಾದ ಬಳಿಕ ಗೋವಾ ಪ್ರದೇಶವನ್ನು ತಾನೇ ಆಳಬಹುದೆಂದು, ಅವಕಾಶವಾದಿಯ ಹಾಗೆ ತಿಮ್ಮೋಜಿ ತನ್ನ ಮನಸ್ಸಿನಲ್ಲಿ ಮಂಡಿಗೆ ತಿಂದಿರಬಹುದು. ಏಕೆಂದರೆ, ಪೋರ್ಚುಗೀಸ್ ಕಮಾಂಡರ್ ಅಲ್ಬುಕರ್ಕನು ವಿಜಯನಗರದ ದೊರೆಗೆ ನೀಡಿದ ಆಶ್ವಾಸನಾ ಪತ್ರದ ಮೇರೆಗೆ ಪೋರ್ಚುಗೀಸರು ವ್ಯಾಪಾರದಲ್ಲಿ ಮಾತ್ರ ಆಸಕ್ತರೆಂದು ಅವನು ನಂಬಿ ಮುನ್ನುಗ್ಗಿದ್ದ. ಆ ಶಾಸನಾಪತ್ರ ಹೀಗಿತ್ತು.

“ನನಗೆ ಪೋರ್ಚುಗೀಸ್ ದೊರೆ ಹೀಗೆ ಶಿಫಾರಸು ಮಾಡಿದ್ದಾನೆ.

ಈ ದೇಶದ ಅನ್ಯಧರ್ಮೀಯ ದೊರೆಗಳಿಗೆ ಮತ್ತು ಇಡೀ ಮಲಬಾರದವರಿಗೆ ಗೌರವ ನೀಡಿ ಅವರಿಗೆ ಮನಃಪೂರ್ವಕ ಸೇವೆ ಸಲ್ಲಿಸಬೇಕು. ಅವರೊಡನೆ ಚೆನ್ನಾಗಿ ವ್ಯವಹರಿಸಬೇಕು. ಅವರ ನೌಕೆಗಳನ್ನೂ, ಮಾರಾಟದ ಸರಕುಗಳನ್ನೂ ಕೈವಶ ಮಾಡಿಕೊಳ್ಳಬಾರದು. ಆದರೆ ನಾನು ನಿರಂತರ ಯುದ್ಧಮಾಡುತ್ತಿರುವುದು ಮೂರ ಜನಾಂಗದ ಮುಸ್ಲಿಮರೊಡನೆ. ಅವರನ್ನು ನಾನು ಸಂಹರಿಸಬೇಕು."

ಮ್ಹಾಳಪೈ ಈ ಮಾತಿಗಿಂತ ಸವಿಯಾದ ಹಾಗೂ ಸಮಾಧಾನಕರವಾದ ಮಾತನ್ನೇ ಕೇಳಿರಲಿಕ್ಕಿಲ್ಲ. ಆ ಬಿಳಿಯನ ಬಳಿ ಸುಳ್ಳಿಗಿಂತ ಬಿಳಿಯದು ಯಾವುದೂ ಇರಲಿಲ್ಲ. ಆದರೆ ಅದೊಂದು ಅಲ್ಪಕಾಲಿಕ ಸಮಾಧಾನವಾಗಿತ್ತು. ಅದು ನಿರೀಕ್ಷೆಗಿಂತ ಮೊದಲೇ ದೀರ್ಘಕಾಲಿಕ ಶಾಶ್ವತ ದುಃಸ್ವಪ್ನವಾಗಿ ಮಾರ್ಪಟ್ಟಿತು. ಕ್ರಿ.ಶ. 1505ರಲ್ಲಿ ಅಲ್ಬುಕರ್ಕ ಭಾರೀ ಶಸ್ತ್ರಾಸ್ತ್ರದೊಂದಿಗೆ ಪವಿತ್ರ ಗೋಮಂತಕ ಪ್ರದೇಶವನ್ನು ಪ್ರವೇಶಿಸಿ, ಆದಿಲಶಾಹಿಗಳನ್ನು ಗೋವಾದಿಂದ ಹಿಮ್ಮೆಟ್ಟುವಂತೆ ಮಾಡಿದ. ತೆರೆದ ಬಾಹುಗಳಿಂದ, ಕಣ್ಣು ಮುಚ್ಚಿ ಸ್ವಾಗತಿಸಿದ ಮ್ಹಾಳ ಪೈ ತನ್ನ ಪಕ್ಕದಲ್ಲೇ ಅಡಗಿರುವ ಅಪಾಯವನ್ನು ಗಮನಿಸಲೇ ಇಲ್ಲ. ಮುಸ್ಲಿಮರನ್ನು ಹೊರಕ್ಕೆ ಅಟ್ಟಿದ ನಂತರ, ಪೋರ್ಚುಗೀಸರಿಗೆ ಮಾಂಡವೀ ನದಿಯ ನೀರು ಸಿಹಿಯಾಗಿಯೂ ಇಲ್ಲಿಯ ವಾತಾವರಣ ಆಪ್ಯಾಯ ಮಾನವಾಗಿಯೂ ತೋರಿತು. ಗೋವಾದ ದೊರೆಯಾಗಬೇಕೆಂಬ ತಿಮ್ಮೋಜಿಯ ಕನಸು ನುಚ್ಚುನೂರಾಯಿತು. ಅವನು ಆರ್ಥಿಕ ಪರಿಹಾರ ಪಡೆದು ಮರಳಿ ಹೋಗಬೇಕಾಯಿತು. ಮ್ಹಾಳ ಪೈ ತಮಗೆ ಅಪಾಯಕಾರಿ ಮಿತ್ರನೆಂದು ಭಾವಿಸಿದ ಪೋರ್ಚುಗೀಸರು ದೇಶಭ್ರಷ್ಟತೆಯೇ ಅವನಿಗೆ ಸಲ್ಲಬೇಕಾದ ಬಹುಮಾನ ಎಂದು ಅವನನ್ನು ಅಲ್ಲಿಂದ ದೂರ ಸಾಗಿಸಿದರು. ಅವನು ತೀವ್ರ ಪಶ್ಚಾತ್ತಾಪದಿಂದ ತನ್ನ ಪರಿವಾರ, ಬಂಧು-ಬಳಗ ಹಾಗೂ ಆಳು-ಕಾಳುಗಳೊಡನೆ ದೂರದ ಕೋಚೀನಕ್ಕೆ ಹೋದನು. ಅವನು ಮೂಲತಃ ವ್ಯಾಪಾರಿಯಾದುದರಿಂದ ಕೋಚೀನ ಊರಿಗೆ ಪರಿಚಿತನಾಗಿದ್ದ. ಅಲ್ಲಿ ಸಾಕಷ್ಟು ಸಂಖ್ಯೆಯ ಸಾರಸ್ವತರು ಈ ಮೊದಲೇ ಹೋಗಿ ನೆಲೆಸಿದ್ದರು. ತಮ್ಮ ಉದ್ಯಮಗಳನ್ನು ಸ್ಥಾಪಿಸಿ, ಅರಬ ಮತ್ತು ಯಹೂದೀ ಜನಾಂಗದ ವ್ಯಾಪಾರಿಗಳೊಡನೆ ತೀವ್ರ ಪೈಪೋಟಿಯನ್ನೇ ನಡೆಸುತ್ತಿದ್ದರು.

ತಮ್ಮ ಮುಖಂಡನೇ ಗಡೀಪಾರಾಗಿದ್ದುದನ್ನು ನೋಡಿ, ಗೋಮಂತಕದ ಇತರ ವ್ಯಾಪಾರಿಗಳು ಜಾಗೃತರಾದರು. ಅವರು ಪೋರ್ಚುಗೀಸ್ ಆಡಳಿತದಲ್ಲಿ ತಮಗೆ ರಕ್ಷಣೆ ಬೇಕೆಂದು ಅಲ್ಬುಕರ್ಕನ ಬಳಿ ಒಂದು ನಿಯೋಗವನ್ನು ತೆಗೆದುಕೊಂಡು ಹೋಗಿದ್ದರು. ಅಲ್ಬುಕರ್ಕನು ತನ್ನ ಪೋರ್ಚುಗೀಸ್ ಆಡಳಿತವನ್ನು

ಭದ್ರಪಡಿಸಿಕೊಂಡು ಬಂದರ ಪ್ರದೇಶವನ್ನು ಬಲಪಡಿಸಿ ಅಲ್ಲಿ ಗೋದಾಮುಗಳನ್ನು ಸ್ಥಾಪಿಸಿದ ಕೂಡಲೆ, ಕ್ರೈಸ್ತ ಮತಪ್ರಚಾರಕರು ಕ್ರೈಸ್ತೇತರ ಹಿಂದುಗಳನ್ನು ಕ್ರಿಶ್ಚಿಯನ್ ಧರ್ಮಕ್ಕೆ ಮತಾಂತರ ಗೊಳಿಸಲು ಗೋವೆಗೆ ಬಂದಿಳಿದರು. ಆರಂಭದಲ್ಲಿ, ಹಿಂದುಗಳು ಅವರ ವಾಸ್ತವ್ಯದಿಂದ ಹೆಚ್ಚು ವ್ಯಾಕುಲರಾಗಿರಲಿಲ್ಲ. ಅವರು ಈ ಮೊದಲು ಅನೇಕ ವಿಭಿನ್ನ ಧಾರ್ಮಿಕ ದೊರೆಗಳ ಆಡಳಿತದ ಕಾಲದಲ್ಲಿ ಅಭಿವೃದ್ಧಿಯನ್ನು ಹೊಂದಿದ್ದರು. ಆದರೆ ಅವರಿಗೆ ಧಾರ್ಮಿಕ ಮತಾಂತರದ ಅನುಭವ, ಈ ಮೊದಲು ಪಡೆದ ಇತರ ಅನುಭವಕ್ಕಿಂತ ಭಿನ್ನ ತರದ್ದಾಗಿತ್ತು. ಅವರು ಸದ್ಯ ತಾವು ಪಡೆಯುತ್ತಿರುವುದು ಏನೆಂದು ತೋರಿಕೆಗಾದರೂ ವ್ಯಾವಹಾರಿಕ ಚೌಕಾಶಿ ಕೂಡ ಮಾಡಲಿಲ್ಲ. ಉಪಾಹಾರಕ್ಕೆಂದು ಮನೆಗೆ ಬಂದ ಅತಿಥಿ, ಮಧ್ಯಾಹ್ನದ ಊಟಕ್ಕೂ ನಿಂತು ದೀರ್ಘಾವಧಿಕಾಲ ಅಲ್ಲೇ ವಾಸ ಮಾಡಬಯಸಿದ. ಓರ್ವ ಪೋರ್ಚುಗೀಸ್ ವೈಸ್‌ರಾಯನು ಮುಂದೊಂದು ದಿನ ಹೆಮ್ಮೆಯಿಂದ ಹೀಗೆ ಸಮರ್ಥಿಸಿಕೊಂಡಿದ್ದ.

'ಪೋರ್ಚುಗೀಸರು ಒಂದು ಕೈಯಲ್ಲಿ ಖಡ್ಗವನ್ನೂ, ಇನ್ನೊಂದು ಕೈಯಲ್ಲಿ ಶಿಲುಬೆಯನ್ನೂ ಹಿಡಿದುಕೊಂಡು ಭಾರತವನ್ನು ಪ್ರವೇಶಿಸಿದರು. ಇಲ್ಲಿ ಹೇರಳ ಚಿನ್ನ ಇರುವುದನ್ನು ಕಂಡು, ಅವರು ಚಿನ್ನವನ್ನು ತಮ್ಮ ಚೀಲದಲ್ಲಿ ತುಂಬಿಕೊಳ್ಳುವ ಸಲುವಾಗಿ, ಶಿಲುಬೆಯನ್ನು ಪಕ್ಕದಲ್ಲಿರಿಸಿದರು.' ಹಿಂದೆ, ಹಿಂದುಗಳಿಗೆ ರಾತ್ರಿ ಕಾಲ ಮಾತ್ರ ಕರಾಳ ಹಾಗೂ ಅನಾಕರ್ಷಕ ಆಗಿತ್ತು. ಇಷ್ಟರಲ್ಲೇ, ಹಗಲು ಹೊತ್ತು ಕೂಡ ಕರಾಳವೂ ಅನಾಕರ್ಷಕವೂ ಆಯಿತು. ಮುಂದಿನ ದಿನಗಳಲ್ಲಿ ಗೋವಾ ಎಂದರೆ ಪೌರಸ್ತ್ಯ ರೋಮ್ ಎಂದು ವೈಭವೀಕರಿಸಿ ಪ್ರದರ್ಶಿಸಲು ಹೊರಟಿರುವ ಪೋರ್ಚುಗೀಸರೇ ಆ ದೇಶವನ್ನು 'ಕ್ರೈಸ್ತೇತರರ ನರಕ'ವನ್ನಾಗಿ ಪರಿವರ್ತಿಸುತ್ತಿದ್ದಾರೆ. ನಿಮ್ನ ವರ್ಗದವರಿಗೆ 'ನಿಮ್ಮ ಆರ್ಥಿಕ ಸ್ಥಿತಿಯನ್ನು ಸುಧಾರಿಸುತ್ತೇವೆ' ಎಂದು ಆಶ್ವಾಸನೆ ನೀಡಿ, ಮತ ಪ್ರಚಾರಕರು ಅತ್ಯಂತ ಉತ್ಸಾಹದಿಂದ ಮತಾಂತರ ಕಾರ್ಯವನ್ನೇನೋ ಪ್ರಾರಂಭಿಸಿದ್ದರು. ಆದರೆ ಇತರ ವರ್ಗಗಳ ಹಾಗೂ ಸಾರಸ್ವತರ ಬಳಿ ಬಂದಾಗ ಜನರು ಮತಾಂತರ ಹೊಂದುವುದಕ್ಕೆ ತಮ್ಮ ತೀವ್ರ ಪ್ರತಿಭಟನೆಯನ್ನು ವ್ಯಕ್ತಪಡಿಸಿದಾಗ ಅವರಿಗೆ ಅಡೆತಡೆ ಎದುರಾಯಿತು. ಆಗ ಪೋರ್ಚುಗೀಸರು ರೇಗಿ, ತಮ್ಮ ದೊರೆಗೆ ಹೀಗೊಂದು ವರದಿಯನ್ನು ಒಪ್ಪಿಸಿದ್ದರು.

"ಈ ದ್ವೀಪದಲ್ಲಿ ಶಣ್ಣೈ ಬ್ರಾಹ್ಮಣ ಎಂಬ ಒಂದು ಜನಾಂಗವಿದೆ. ಅವರು ಮತಾಂತರ ಆಗಲು ಒಪ್ಪುವುದಿಲ್ಲ. ಇತರರಿಗೂ ಮತಾಂತರ ಹೊಂದಲು

ಬಿಡುವುದಿಲ್ಲ. ನಮ್ಮ ಮತಾಂತರ ಕಾರ್ಯಕ್ಕೆ ಅಡ್ಡಿಪಡಿಸುತ್ತಿದ್ದಾರೆ. ಕ್ರೈಸ್ತೇತರರು ಅನಾಗರಿಕರಾಗಿಯೇ ಉಳಿಯುವಂತೆ ತಪ್ಪನ್ನು ಎಸಗುತ್ತಿದ್ದಾರೆ. ಕ್ರೈಸ್ತ ಧರ್ಮಕ್ಕೆ ಮತಾಂತರಗೊಳ್ಳಲು ಅಡ್ಡಿಪಡಿಸುವವರನ್ನು ಅಥವಾ ಕನಿಷ್ಠ ಪಕ್ಷ ಅವರ ಮುಖಂಡರನ್ನು ಈ ದ್ವೀಪದಿಂದಲೇ ಗಡೀಪಾರು ಮಾಡಬೇಕು. ಕೆಲವರು ಇಂಥ ಆಜ್ಞಾಪತ್ರ ಬರಬಹುದೆಂಬ ನಿರೀಕ್ಷೆಯಲ್ಲೇ ಇದ್ದಾರೆ. ಅಂಥವರು ತಾವಾಗಿ ಮತಾಂತರಗೊಳ್ಳಬಹುದೆಂದು ನಾನು ಅರಿತಿದ್ದೇನೆ."

ಕ್ರಿ.ಶ. 1541ರಲ್ಲಿ ಮೂರನೆಯ ಜೋಸ್ ಎಂಬ ದೊರೆ ಒಂದು ಆಜ್ಞಾರಾಯಸವನ್ನು ಕಳುಹಿಸಿದ್ದ.

"ಕ್ರೈಸ್ತೇತರರು ಈ ತನಕ ಸೈತಾನನ ಅಂಕಿತದಲ್ಲಿದ್ದರು. ದೇವರು ಈಗ ಅವರನ್ನು ಪಾಪಮುಕ್ತರನ್ನಾಗಿ ಮಾಡಲು ಬಯಸಿದ್ದಾನೆ. ಈತನಕ ಇದ್ದ ಹಿಂದು-ಮುಸ್ಲಿಮರ ಮಂದಿರ ಮಸೀದೆಗಳ ಅಸ್ತಿತ್ವವೇ ಇಲ್ಲದಂತೆ ಅವುಗಳನ್ನು ಧ್ವಂಸಗೊಳಿಸಬೇಕೆಂದು ದೇವರ ಆಜ್ಞೆಯಾಗಿದೆ."

ಹೀಗೆ ರಾಯಸ ಬಂದದ್ದೇ ತಡ, ಕ್ರಿ.ಶ. 1540ರಲ್ಲಿ ನ್ಯಾಯಾಧಿಕಾರಿಗಳಾದ ಮಿಗ್ಯೊಯೆಲ್ ವಾಝ್ ಮತ್ತು ಡಿಯಾಗೋ ಬೋರ್ಬಾ ಇವರ ನೇತೃತ್ವದಲ್ಲಿ ಬಲವಂತದ ಮತಾಂತರ ಕಾರ್ಯವನ್ನು ತ್ವರಿತಗೊಳಿಸಲಾಯಿತು. "ಧೋತಿ, ಸೀರೆ, ಚೋಲಿಯನ್ನು ಉಡಬಾರದು; ತುಳಸಿ ನೆಡಬಾರದು; ಹೂವುಗಳನ್ನು ಬಳಸಬಾರದು; ಭಾರತೀಯ ಸಂಗೀತ-ವಾದ್ಯಗಳನ್ನು ನುಡಿಸಬಾರದು" ಎಂದು ಜನರ ಮೇಲೆ ನಿಷೇಧ ಹೇರಿದರು. ಟಿಯೋಟೋನಿಯೋ ಆರ್. ಡಿಸೋಝಾರು 'Discoveries in Missionary Expansion and Asian Cultures' ಎಂಬ ತಮ್ಮ ಕೃತಿಯಲ್ಲಿ ಎಂ. ಮಾಸ್ಕರೇಂಸ್‌ನನ್ನು ಉದ್ಧರಿಸುತ್ತ ಹೀಗೆ ಹೇಳುತ್ತಾರೆ.

'ಗೋವೆಯ ಕ್ರಿಶ್ಚಿಯನ್ನರು ಮತಾಂತರವಾದ ನಂತರ ತಮ್ಮ ಹಿಂದಿನ ಸಕಲ ಹಿಂದೂ ಪದ್ಧತಿಗಳಿಗೆ ಏಕಾಏಕಿ ತಡೆ ಒಡ್ಡಬೇಕಿತ್ತು. ವೈಯಕ್ತಿಕ ಹೆಸರಿನಲ್ಲಿ ಬದಲಾವಣೆ ಮಾಡುವುದಷ್ಟೇ ಅಲ್ಲ; ತಮ್ಮ ಆಹಾರ ಕ್ರಮ, ಸಾಮಾಜಿಕ ಆಚಾರ-ವ್ಯವಹಾರ, ವೇಷ-ಭೂಷಣಗಳನ್ನು ಬದಲಿಸಿಕೊಂಡು ಅವರು ಐರೋಪ್ಯ ಕ್ರಿಶ್ಚಿಯನ್ನರ ಜೀವನ ವಿಧಾನಕ್ಕೆ ಹೊಂದಿಕೊಳ್ಳಬೇಕಿತ್ತು. ಹೊಸದೊಂದು ಮತವನ್ನು ಸ್ವೀಕರಿಸಿದರೂ ಅನೇಕ ಜನರು ತಮ್ಮ ಪ್ರಾಚೀನ ಸಂಪ್ರದಾಯವನ್ನು ಅನುಸರಿಸಿ, ಸಾಂಪ್ರದಾಯಿಕ ದೇವ-ದೇವತೆಗಳಲ್ಲಿ ಶ್ರದ್ಧೆಯನ್ನಿರಿಸಿಕೊಳ್ಳುವ ತಮ್ಮ ಕ್ರಮವನ್ನು (ಈಗಲೂ ನಡೆದು ಬಂದಿದೆ.) ಮುಂದುವರೆಸಿಕೊಂಡು ಬಂದಿದ್ದರು. ಇಂಥ

ಪ್ರಯತ್ನಗಳಿಗೆ ಅಂದು ಪ್ರಚಂಡ ವಿರೋಧವಿತ್ತು. ಟೊಯೊಟೋನಿಯೋ ಆರ್. ಡಿಸೋರ್ಝಾರು ಒಂದು ವಿನೋದಪೂರ್ಣ ಸಂಗತಿಯನ್ನು ಹೀಗೆ ಹೇಳುತ್ತಾರೆ.

"ಗೋವೆಯಲ್ಲಿ ನಮಗೆ ಅನೇಕ ಕಷ್ಟಗಳು ಎದುರಾದವು. ಮತಾಂತರಗೊಂಡ ವರ ಚಂಡಿಕೆಯನ್ನು (ಶೇಂಡಿ) ಕತ್ತರಿಸಬೇಕಿತ್ತು. ಗೋವೆಯ ತಲವಾಳಿಯಲ್ಲಿದ್ದ ಬಡಪಾಯಿ ಕ್ರೈಸ್ತೇತರರ ಅನಾಗರಿಕರಿಗೆ ಕ್ರಿಶ್ಚಿಯನ್ನರ ಉಡುಪನ್ನು ತೊಡಿಸಬೇಕಿತ್ತು. ಏಕೆಂದರೆ, ಅವರು ಶುದ್ಧ ಕ್ರಿಶ್ಚಿಯನ್ನರಾದ ಬಳಿಕವೇ ಅವರಲ್ಲಿ ಪವಿತ್ರಾತ್ಮನು ನೆಲೆಸುವಂತೆ ಮಾಡಬೇಕಿತ್ತು. ಇದೇ ಮತಾಂತರ ಕಾರ್ಯದಲ್ಲಿ ತಮಗಾದ ಮೊದಲಿನ ತೊಂದರೆ ಎಂದು ಕೋಪದಿಂದ ಕೆರಳಿದ ಜೇಸ್ಯುಯಿಟರು ದೂರುತ್ತಿದ್ದರು."

ಜನರ ವಿರೋಧದ ಬಗ್ಗೆ ಅವರಿಗೆ ಸ್ವಲ್ಪ ಮಾತ್ರವೂ ಅನುಕಂಪವಿರಲಿಲ್ಲ. ಮಾರ್ಚ್ 1546ರಲ್ಲಿ ಕಟ್ಟಿಗೆ, ಕಲ್ಲು ಅಥವಾ ಪಂಚಲೋಹಗಳಿಂದ ನಿರ್ಮಿತ ಮೂರ್ತಿಗಳ ಪೂಜೆಯನ್ನು ನಿಷೇಧಿಸಲಾಯಿತು. ದೇವಾಲಯಗಳನ್ನು ನೆಲಸಮಗೊಳಿಸಲಾಯಿತು. ಹಬ್ಬಹರಿದಿನಗಳನ್ನು ನಿಷೇಧಿಸಲಾಯಿತು. 1599ರಲ್ಲಿ ಮೂರನೆಯ ಜುವಾಂವ್ ದೊರೆಯು ಒಂದು ರಾಜಾಜ್ಞೆಯಿಂದ ಕ್ರಿಶ್ಚಿಯನ್ ಧರ್ಮವನ್ನು ಬಲಪ್ರಯೋಗ ಮಾಡಿ ಪ್ರಚಾರವಾಗುವಂತೆ ಪ್ರೋತ್ಸಾಹಿಸಿದನು. ನೆಲಸಮಗೊಳಿಸಿದ ಮಂದಿರಗಳ ಮತ್ತು ಭಗ್ನವಾದ ಮೂರ್ತಿಗಳ ಸಂಖ್ಯೆಯನ್ನು ಹೇಳಿ, ಪಾದ್ರಿಗಳು ಜಂಭ ಕೊಚ್ಚಿಕೊಳ್ಳುವುದು ಸರ್ವೇಸಾಮಾನ್ಯವಾಗಿತ್ತು. ನಿಷೇಧವನ್ನು ಸ್ವೀಕರಿಸಲು ಒಪ್ಪದ ಬ್ರಾಹ್ಮಣರನ್ನು ಗಲ್ಲಿಗೇರಿಸಿದರು. ಇಲ್ಲವೆ ಅವರನ್ನು ಪೋರ್ಚುಗೀಸರು ನೆಲೆಸಿದ ಪ್ರದೇಶಗಳಿಂದ ಬಹಿಷ್ಕೃತರನ್ನಾಗಿ ಮಾಡಿದರು. ಸಾರಸ್ವತ ಯೋಗಿವರೇಣ್ಯರಾದ ಕವಳೇ ಮತ್ತು ಪರ್ತಗಾಳೀ ಮಠದ ಪೀಠಾಧಿಕಾರಿಗಳು ಗೋವೆಯ ಗವರ್ನರ್ ಫ್ರಾಯರ್ ಎಂಟೋನಿಯೋನ ವಕ್ರದೃಷ್ಟಿಗೆ ಬಿದ್ದರು. ಅವನು ಅವರನ್ನು ಕೂಡ ಗೋವಾದಿಂದ ಗಡೀಪಾರಾಗುವಂತೆ ಶಿಪಾರಸು ಮಾಡಿದ್ದ. ಏಕೆಂದರೆ "ಮಠದವರು ಪೂಜೆಗಾಗಿ ಹೂಗಳನ್ನು ತರುತ್ತಾರೆ. ಮತ್ತು ಅವರು ಮಂದಿರ ಹಾಗೂ ಭೂತಸ್ಥಾನಗಳ ಧಾರ್ಮಿಕ ಕುರುಹುಗಳ ಮೂಲಕ ಸ್ಥಳೀಯರಲ್ಲಿ ಅಕ್ರೈಸ್ತ ಪದ್ಧತಿಯನ್ನೇ ಪುನಃಸ್ಥಾಪನೆ ಮಾಡುತ್ತಾರೆ. ಈ ಜನರನ್ನು ಈ ದ್ವೀಪದಿಂದ ಗಡೀಪಾರು ಮಾಡಿಸಿದರೆ, ಅವರಿಗೆ ಬೇರೆ ಜೀವನೋಪಾಯವೇ ಕಾಣದಿರುವುದರಿಂದ ಯಾರೇ ಆಗಲಿ ನಮ್ಮ ಪ್ರಭು ಕ್ರಿಸ್ತನ ಮತಕ್ಕೆ ಶರಣಾಗದೇ ಇರುವುದಿಲ್ಲ." ಎಂದು ಆಶ್ವಾಸನೆ ನೀಡುತ್ತಾನೆ. ಕ್ರೈಸ್ತನಿರಲಿ, ಪ್ರತಿಯೊಬ್ಬ ಧರ್ಮಶ್ರದ್ಧೆಯುಳ್ಳವನ ಅಂತರಂಗವನ್ನೇ ಕಲಕಿಬಿಟ್ಟಿತ್ತು ಈ ಪಾಷಂಡ ಮತದಂಡನೆಯ ಸೈತಾನೀ ಕಾನೂನು 'ಇಂಕ್ವಿಜಿಷನ್ (Inqui-

sition).' ಏಕೆಂದರೆ, ಕ್ರೈಸ್ತ ಮತದಲ್ಲಿರುವ ಉತ್ತಮ, ಉದಾರ ಹಾಗೂ ಸರ್ವಜನಾದರಣೀಯ ತತ್ತ್ವಗಳಿಗೆ ಕಲಂಕ ತಟ್ಟುವಂತೆ Tribunal do Santo Officio ಸಂಸ್ಥೆ ಎಲ್ಲರಲ್ಲೂ ಭೀತಿಯನ್ನು ಹುಟ್ಟಿಸಿತ್ತು.

ಕ್ರಿ. ಶ. 1541ರಲ್ಲಿ ಮಾರ್ಟಿನ್ ಆಫೋನ್‌ಸೋ ಡಿಮೇಲೋ, ತನ್ನ ದೊರೆಗೆ ಹೀಗೊಂದು ದೂರನ್ನು ನೀಡಿದ್ದ. 'ಕೃಷ್ಣ, ಲೋಕು ಮತ್ತು ಅನು ಶಣಾಯ್‌ರಂಥ ಪ್ರಭಾವಶಾಲೀ ಸಾರಸ್ವತರಿಲ್ಲದಿದ್ದರೆ, ಭಾರೀ ಸಂಖ್ಯೆಯ ಜನರನ್ನು ಮತಾಂತರ ಗೊಳಿಸಬಹುದಾಗಿತ್ತು. ಪೆದ್ರೋ ಫರ್ಡಿನಾಂಡ್ ಸರದೀನಾರ ಪ್ರಕಾರ, ಅವರು ಅತ್ಯಂತ ಘಾತಕರೂ, ಗೋವೆಯ ಕೈಸ್ತಮತ ವಿರೋಧಿಗಳೂ ಆಗಿರುವರು. ಈ ಮೊದಲು ಕೃಷ್ಣ ಮತ್ತು ಈಗ ಅವನ ಮಗ ದಾದಾಜೀ ಈರ್ವರೂ ಗೋವೆಯಲ್ಲಿ ನಮ್ಮ ಪವಿತ್ರ ಕ್ರೈಸ್ತ ಮತದ ಪ್ರಬಲ ಶತ್ರುಗಳಾಗಿದ್ದಾರೆ. ಕ್ರಿಸ್ತನ ನೆರವಿನಿಂದ ಈ ಗರ್ವಿಷ್ಠ ಮಗನನ್ನು ಅವನ ಉನ್ನತ ಅಧಿಕಾರದಿಂದ ಕೆಳಗಿಳಿಸಿ, ಅವನ ಅಧಿಕಾರವನ್ನು ಕ್ರಿಶ್ಚಿಯನ್ನರಿಗೆ ಹಸ್ತಾಂತರ ಮಾಡಿ, ಇಷ್ಟಾನುಸಾರ ಇತರ ಕೆಲವು ಗೌರವಸ್ಥ ಹಿಂದೂಗಳ ಗರ್ವಭಂಗ ಮಾಡಲು ನನಗೆ ಅನುಮತಿ ನೀಡಿದರೆ ಕ್ರೈಸ್ತ ಪಾದ್ರಿಗಳು ಮತ್ತು ಅವರ ಸನ್ಮಿತ್ರನಾದ ನಾನು ಒಂದು ವರ್ಷದೊಳಗೆ, ತಪ್ಪಿದರೆ ಎರಡೇ ವರ್ಷಗಳಲ್ಲಿ ಸಂಪೂರ್ಣ ದ್ವೀಪವನ್ನೇ ಕ್ರಿಶ್ಚಿಯನ್ ದೇಶವನ್ನಾಗಿ ಪರಿವರ್ತಿಸುತ್ತೇವೆ.' ಅಲ್ಲಿ ಈ ಒಂದು ಸಲಹೆಯನ್ನೂ ನೀಡಲಾಗಿತ್ತು. 'ಪೋರ್ಚುಗೀಸ್ ವ್ಯಾಪಾರಿಗಳೊಡನೆ ವ್ಯಾಪಾರ – ವಹಿವಾಟು ನಡೆಸುತ್ತಿರುವ ಕೃಷ್ಣನಿಗೆ ಸಂಧಾನಕ್ಕಾಗಿ ಪೋರ್ಚುಗಾಲಕ್ಕೆ ಬರುವಂತೆ ಆಹ್ವಾನ ನೀಡಿ ಅಲ್ಲಿ ಅವನನ್ನು ಬಲಾತ್ಕಾರಪೂರ್ವಕ ಮತಾಂತರ ಗೊಳಿಸಬೇಕು.' ಆದರೆ ಈ ವಿಶೇಷ ಯಾತ್ರೆಯ ತಂತ್ರ ಫಲಿಸಲಿಲ್ಲ. ಕೃಷ್ಣ ಮತಾಂತರವಾಗುವುದಿಲ್ಲ ಎಂದು ಪ್ರತಿಭಟಿಸಿದ. ಅಲ್ಲಿಂದ ಮರಳಿ ಬಂದ ಬಳಿಕ, ಬಿಜಾಪುರದ ದೊರೆ ಅವನನ್ನು ಸೆರೆಮನೆಯಲ್ಲಿಟ್ಟ. ಅವನು ಅಲ್ಲೇ ಸಾವನ್ನಪ್ಪಿದ. ಅವನ ಮಗ ದಾದಾಜಿ ಕೂಡ ಅಷ್ಟೇ ಪ್ರಭಾವಶಾಲಿಯಾಗಿದ್ದ. ಅವನ ಮನಸ್ಸು ವಜ್ರಸದೃಶ ಕಠೋರವಾಗಿತ್ತು. ಅವನೂ ಮತಾಂತರಕ್ಕೆ ಒಪ್ಪದೇ ವಿರೋಧಿಸಿದ. ತನ್ನ ಸರಕಾರೀ ಹುದ್ದೆಯನ್ನೂ ಕಳೆದುಕೊಂಡ. ತೆರವಾದ ಆ ಹುದ್ದೆ ಕುಟುಂಬ ಸಮೇತ ಕ್ರೈಸ್ತ ಮತವನ್ನು ಸ್ವೀಕರಿಸಿದ ಲೋಕು ಶಣೈಗೆ ಲಭಿಸಿತು.

ಹಿಂದೂಗಳು ಇಂಥ ಉಗ್ರಕ್ರಮಗಳಿಂದ ಬೇಸತ್ತರು. ಅವರು ಹಿಂದೂ ದೊರೆಗಳೇ ಆಳುವ ಪಕ್ಕದ ಪ್ರದೇಶಕ್ಕೆ ಬಲಾತ್ಕಾರಪೂರ್ವಕ ವಲಸೆ ಹೋಗಬೇಕಾಯಿತು. ಕೇಲೋಶಿಯ ಶಾಂತಾದುರ್ಗಾ ದೇವಾಲಯ ಮತ್ತು

ಕವಳೇ ಮಠದ ವಠಾರಗಳು ಉಧ್ವಸ್ತವಾದವು. ದೇವತಾ ವಿಗ್ರಹಗಳನ್ನು ಕವಳೆಗೆ ಸ್ಥಳಾಂತರಿಸಲಾಯಿತು. ಆಗ ಕವಳೇ ಮಠದಲ್ಲಿ ಪೀಠಸ್ಥರಾಗಿದ್ದ ಶ್ರೀ ವಿದ್ಯಾನಂದ ಸರಸ್ವತೀ ಸ್ವಾಮಿಗಳು ಈ ವಿದೇಶೀ ಆಡಳಿತದ ಪಾಷಂಡತನದ ನಿಮಿತ್ತ ಜುಗುಪ್ಸೆಗೊಂಡು ಮೊದಲು ರತ್ನಾಗಿರಿಯ ಗೋಳವಣಕ್ಕೆ ನಿರ್ಗಮಿಸಿ, ಅಲ್ಲಿಂದ ವಾರಣಾಸಿಗೆ ತಮ್ಮ ಸವಾರಿಯನ್ನು ಮುಂದುವರಿಸಿದರು. ಅವರೊಡನೆ ಹೋದ ಮಠದ ಅಸಂಖ್ಯ ಸಾರಸ್ವತ ಅನುಯಾಯಿಗಳು ಸಾವಂತವಾಡಿಯಲ್ಲೂ, ರತ್ನಾಗಿರಿಯಲ್ಲೂ ಸ್ಥಾಯಿಯಾದರು. ಕೆಲವರು ಪಕ್ಕದ ಬೆಳಗಾಂವ ಹಾಗೂ ಕರಾವಳಿಯ ಕನ್ನಡ ಜಿಲ್ಲೆಗಳಿಗೆ, ಇನ್ನೂ ಕೆಲವರು ದೂರದ ಪುಣೆ, ಠಾಣೆ, ಮುಂಬಯಿಯ ತನಕ ಹೋಗುವ ಸಾಹಸ ಮಾಡಿ ಅಲ್ಲಿಯ ರಹವಾಸಿಗಳಾದರು. ಆದರೂ ಗೋವಾದಲ್ಲಿರುವ ಧಾರ್ಮಿಕ ಮಠಗಳಿಗೆ ಹಾಗೂ ಕುಲದೇವತೆಗಳಿರುವ ಮಂದಿರಗಳಿಗೆ ತಮ್ಮ ನಿರಂತರ ಸಂಪರ್ಕವನ್ನು ತಪ್ಪದೆ ಮುಂದುವರಿಸಿಕೊಂಡು ಬಂದರು.

"ಕಾಶೀಮಠದ ಶ್ರೀ ಉಪೇಂದ್ರತೀರ್ಥ ಸ್ವಾಮೀಜಿಯವರು ಕ್ರಿ. ಶ. 1654ರಲ್ಲಿ ಹೊರಡಿಸಿದ್ದ ಒಂದು ರಾಯಸ ಕೋಚೀನದ ತಿರುಮಲ ದೇವಸ್ವಂದಲ್ಲಿದೆ. ಅದರ ಪ್ರಕಾರ, ಸಾಷಷ್ಟಿಯಿಂದಲೇ ಹನ್ನೆರಡು ಸಾವಿರ ಕುಟುಂಬಗಳು ವಲಸೆಹೋದವು. ಅವುಗಳಲ್ಲಿ ನಾಲ್ಕುನೂರು ಕುಟುಂಬಗಳು ಮಹಾರಾಷ್ಟ್ರದ ಕಡೆ ಹೋದರೆ, ಇನ್ನುಳಿದವು ಪಶ್ಚಿಮ ಕರಾವಳಿಯ ಕನ್ನಡ ಜಿಲ್ಲೆಗಳ ಕಡೆ ಹೋದವು."

ಇಂಥ ಬಲಾತ್ಕಾರದ ಮತಾಂತರದ ನಿಮಿತ್ತ, ಜನರು ಬಹುಸಂಖ್ಯೆಯಲ್ಲಿ ವಲಸೆ ಹೋಗುತ್ತಿದ್ದಂತೆ, ಗೋವೆಯ ಜನಸಂಖ್ಯಾ ನಕ್ಷೆಯ ಸ್ವರೂಪವೇ ಬದಲಾಗಿ, ಆ ಪ್ರದೇಶ ಜನರಹಿತವಾಗುತ್ತ ಹೋಯಿತು. ಕೃಷಿ ನೈಪುಣ್ಯದ ತೀವ್ರ ಕೊರತೆ, ಆರ್ಥಿಕ ಬಲಹೀನತೆ, ಕುಶಲಕರ್ಮಿಗಳ ಹಾಗೂ ಕಾರ್ಮಿಕರ ಅಭಾವ, ಗೋವಾದಲ್ಲಿ ಜರುಗಿದ ಪಾಷಂಡ ಮತದಂಡನೆಯ ಅತಿರೇಕ, ಇವೆಲ್ಲವುಗಳನ್ನೂ ನೋಡಿ ಪೂರ್ವಗ್ರಹಮುಕ್ತ ಚಿಂತಕರೂ, ರೋಮ್ ರಾಯಭಾರಿಯೂ ಆದ ಲಾರೆನ್ಸ್ ಪಾಯರ್ಸ್‌ರಂಥವರಿಗೆ ತೀವ್ರ ವಿಷಾದವಾಯಿತು. ಇಂಥ ಪ್ರಜಾಪೀಡನೆಯ ಕ್ರಮವು ದೊರೆಗೂ, ದೇವರಿಗೂ ಮಾಡಿದ ಅಪರಾಧವಾಗಿ ಪರಿಣಮಿಸುತ್ತದೆ ಎಂದು ಅವರು ದೊರೆಯ ಬಳಿ ತಮ್ಮ ಅಸಮಾಧಾನವನ್ನು ತೋಡಿಕೊಂಡರು. ಜಾನ್ ಕಾಪರನು ತನ್ನ Three presidencies of India (1853) ಎಂಬ ಕೃತಿಯಲ್ಲಿ ಹೀಗೆ ವರ್ಣಿಸಿದ್ದಾನೆ. "ಇಂಥ ಪ್ರಜಾಪೀಡನೆ

ಮತ್ತು ಧಾರ್ಮಿಕ ಹತ್ಯಾಕಾಂಡವು ಕೊನೆಗೂ ಪ್ರತಿಕೂಲ ಪರಿಣಾಮವನ್ನೇ ನೀಡಿದೆ. ದೊರೆಯ ಆಜ್ಞೆಯಿಂದ ಪೋರ್ಚುಗೀಸ್ ಕ್ರಿಶ್ಚಿಯನ್ನರು ಶಸ್ತ್ರಸನ್ನದ್ಧರಾಗಿ ರಕ್ತದೋಕುಳಿಯಾಡಿ ಇಡೀ ದೇಶವನ್ನೇ ವಂಚಿಸಿದ್ದಾರೆ. ಪರಿಣಾಮ ಮಾತ್ರ ಶೂನ್ಯ. ಮತಾಂತರಗೊಂಡ ಸ್ಥಳೀಯರಿಗೆ ಹಿಂದು-ಮುಸ್ಲಿಂ ಜನಾಂಗದವರು ಎಷ್ಟೆಂದರೂ ಪರಕೀಯರು. ಆದರೂ ಅವರ ವರ್ತನೆ, ಪಾಶ್ಚಾತ್ಯ ಜಗತ್ತಿನ ನಾಗರಿಕ ಧರ್ಮಯೋಧರ ವರ್ತನೆಗಿಂತ ಹೆಚ್ಚು ಅನುಕಂಪದಿಂದ ಕೂಡಿದೆ; ಮತ್ತು ಹೆಚ್ಚು ಸಹ್ಯವಾಗಿದೆ ಎಂದು ಭಾವಿಸಿ ಅವರು ವಿಧರ್ಮೀಯರ ಆದೇಶವನ್ನೇ ಅನುಸರಿಸುತ್ತಿದ್ದಾರೆ" 06-01-1515ರಂದು ಕಲೆ, ಸಂಸ್ಕೃತಿ, ವಾಸ್ತುಶಿಲ್ಪಕಲೆಯ ಸೂಕ್ಷ್ಮಗ್ರಾಹಿಯಾದ ಆಂಡ್ರ ಕೋಸಾಲಿಯು, ಇಲ್ಲಿ ದೇವಾಲಯಗಳನ್ನು ಯದ್ವಾತದ್ವಾ ಧ್ವಂಸ ಮಾಡಿದ್ದಾರೆಂದು ಆರೋಪಿಸುತ್ತಾನೆ. ಅಲ್ಲದೆ, ಪ್ರಾಚೀನ ದೇಶದ ವಾಸ್ತುಶಿಲ್ಪಕಲೆಯ ವೈಭವ ಹೇಗೆ ಧ್ವಂಸವಾಗಿದೆ ಎಂಬುದನ್ನು ತೋರಿಸಲು ಕೆಲವು ಭಗ್ನ ಮೂರ್ತಿಗಳನ್ನು ಪೋರ್ಚುಗಾಲ ದೇಶಕ್ಕೆ ಕಳಿಸುತ್ತಾನೆ.

ಓದು ಬರಹ ಬಲ್ಲವರು ವಲಸೆ ಹೋಗುವುದರ ಘಾತಕ ಪರಿಣಾಮವು ವ್ಯಾಪಾರ ಹಾಗೂ ವಾಣಿಜ್ಯೋದ್ಯಮದ ಮೇಲೆ ಆಗುತ್ತದೆಂಬುದನ್ನು ಪೋರ್ಚುಗಾಲ ಸರಕಾರವು ಈಗ ಅರ್ಥಮಾಡಿಕೊಳ್ಳುವಂತೆ ಆಯಿತು. ಮೂಢ ಕ್ರಿಶ್ಚಿಯನ್ ಮತಾಂತರಿಗಳ ಮೈತ್ರಿಗಿಂತ ಬುದ್ಧಿವಂತ ಅನಾಗರಿಕರೊಡನೆ ಮೈತ್ರಿಯೇ ಶ್ರೇಯಸ್ಕರ. ಕೃಷ್ಣನಂಥ ಮತಾಂತರ ವಿರೋಧಿಗಳೊಡನೆ ವ್ಯಾಪಾರವನ್ನು ಮಾಡುವುದು ಇನ್ನೂ ಶ್ರೇಯಸ್ಕರ. ಏಕೆಂದರೆ ಅಂಥವರ ಸಹಕಾರವನ್ನು ಪಡೆದೇ, ಪೋರ್ಚುಗೀಸರು ಅರಬರ ಅಧೀನವಿದ್ದ ವಾಣಿಜ್ಯ-ವ್ಯವಹಾರವನ್ನು ಕಸಿದುಕೊಳ್ಳುವಲ್ಲಿ ಯಶಸ್ವಿ ಯಾಗಿದ್ದರು. ಅಷ್ಟೇ ಅಲ್ಲ, ಅವರು ಪದೇ ಪದೇ ಬಡ ರೈತರಿಂದ ಲಭಿಸುವ ಕಂದಾಯವನ್ನು ಅವಲಂಬಿಸದೆ ಶ್ರೀಮಂತ ಬ್ರಾಹ್ಮಣರಿಂದ ಸಾಕಷ್ಟು ಕಂದಾಯವನ್ನು ಪಡೆದಿದ್ದರೂ ಅವರಿಗೆ ಕಂದಾಯ ವಸೂಲಿಯ ಕಾರ್ಯದಲ್ಲಿ ಭಾರೀ ನಷ್ಟವಾಯಿತು. ಈ ಸಂಗತಿ ವೈಸ್‌ರಾಯ್‌ನಿಗೆ ಬಿಡಿಸಲಾಗದ ಕಗ್ಗಂಟಾಗಿ ಪರಿಣಮಿಸಿತ್ತು. ಆಗ ಅವನು ದೊರೆಗಳಿಗೆ ಹೀಗೆ ಪತ್ರ ಬರೆದ.

'ದೇಶದ ಪ್ರಮುಖ ವಾಣಿಜ್ಯ - ವ್ಯವಹಾರವು ಹಿಂದುಗಳ ಸಂಪೂರ್ಣ ಹಿಡಿತದಲ್ಲಿರುವುದರಿಂದ ಹಿಂದೂಗಳಲ್ಲಿರುವಷ್ಟು ವಾಣಿಜ್ಯ ವಿಷಯುಕ ಸಂಪನ್ಮೂಲವು ಮತಾಂತರಗೊಂಡ ಕ್ರಿಶ್ಚಿಯನ್ನರ ಬಳಿ ಇರಲು ಸಾಧ್ಯವಿಲ್ಲ.'

'ನಾನು ನೋಡಿದ ವ್ಯಾಪಕ ಹಾನಿಯು ಪ್ರಾಪಂಚಿಕ ಹಂತದಿಂದ

ಹಿಡಿದು, ನನ್ನ ದೊರೆಯ ಹಿತಾಸಕ್ತಿಗೂ, ದೇಶದ ಕಲ್ಯಾಣಕ್ಕೂ ಪ್ರತಿಕೂಲ ಪರಿಣಾಮ ಬೀರಿದೆಯೆಂಬುದನ್ನು ಗಮನದಲ್ಲಿರಿಸಿ, ಆರ್ಚಬಿಶಪ್ ಹಾಗೂ ಇತರ ಎಲ್ಲರ ಅಭಿಪ್ರಾಯವನ್ನೂ ತೆಗೆದುಕೊಂಡಾಗ, ನಾವು ಜಾರಿಯಲ್ಲಿ ತಂದ ಇಂಕ್ವಿಜಿಷನ್ ಕಾನೂನು ಅತ್ಯಂತ ಕಠೋರವಾಗಿತ್ತು. ಅದನ್ನು ಇನ್ನು ಮುಂದೆ ಜಾರಿಯಲ್ಲಿ ತರಕೂಡದು. ಈ ಸಲಹೆಯನ್ನು ದೊರೆ ಒಪ್ಪಿಕೊಂಡು ವಲಸೆ ಹೋದ ಹಿಂದೂಗಳನ್ನು ತಮ್ಮ ತಮ್ಮ ಮನೆಗಳಿಗೆ ಬರುವಂತೆ ಆಮಂತ್ರಿಸಿದ. ವಲಸೆ ಹೋದ ಅನೇಕ ಜನರಲ್ಲಿ ಕುಟುಂಬದ ಒಬ್ಬ ಬಂಧು ಮಾತ್ರ ಗೋವಾದಲ್ಲಿ ಬಂದು ಕ್ರೈಸ್ತ ಮತವನ್ನು ಸ್ವೀಕರಿಸಿ, ತನ್ನ ಕುಟುಂಬಕ್ಕೆ ಸೇರಿದ ಭೂಮಿಯನ್ನು ತಾನೇ ರಕ್ಷಿಸಿಕೊಂಡಿರುವಂತೆ ನೋಡಲಾಯಿತು. ಆದ್ದರಿಂದ, ಕೆಲವರು ತಮ್ಮ ಭೂಮಿಯನ್ನು ಪಡೆದುಕೊಂಡು ಗೋವಾದಲ್ಲಿ ನೆಲೆಸಲು ಬಂದರೂ, ಸೂಕ್ತ ದಾಖಲೆ ಪತ್ರಗಳನ್ನು ಒದಗಿಸಲಾಗದೆ ಮರಳಿ ಹೋದರು. ಇನ್ನು ಕೆಲವರು ಆಗಲೇ ಹೊಸ ಸ್ಥಳದಲ್ಲಿ ಸ್ಥಿರವಾಗಿ ನೆಲೆಸಿದ್ದರಿಂದ ಪೋರ್ಚುಗೀಸರು ಬೀಸಿದ ಬಲೆಯ ಆಮಿಷವನ್ನು ನೆಚ್ಚಿ ಮೋಸ ಹೋಗಬಾರದೆಂದು ನಿರ್ಧರಿಸಿ ಇಲ್ಲಿ ಬರಲು ನಿರಾಕರಿಸಿದರು.

ಎರಡನೆಯ ಹಂತ

ತಮ್ಮ ಮೂಲ ಪ್ರದೇಶ ಕಾಶ್ಮೀರದಿಂದ ದೇಶಾಂತರ ಹೊರಟು, ಗುಜರಾತದ ಸೋಲಂಕೀ ದೊರೆಗಳ ಬಳಿ ಅಲ್ಪಕಾಲೀನ ವಾಸ್ತವ್ಯಮಾಡಿ ಗೋಮಂತಕಕ್ಕೆ ಬಂದು ನೆಲೆಸಿದ ಸಾರಸ್ವತ ಪಂಗಡಕ್ಕೆ ಸಂಬಂಧಿಸಿದೆ ಈ ಎರಡನೆಯ ಹಂತ. ಈ ನೂತನ ಪ್ರದೇಶದಲ್ಲಿ ಅವರು ತಮ್ಮ ಕುಲದೇವರಾಗಿ ಶಾಂತಾದುರ್ಗಾ ಮತ್ತು ಮಂಗೇಶರನ್ನು ಸ್ವೀಕರಿಸಿದರು. ಮತ್ತು ತಮ್ಮ ಆಧ್ಯಾತ್ಮಿಕ ಗುರುಗಳಾಗಿ ಕವಳೇಮಠದ ಸ್ವಾಮೀಜಿ ಯವರನ್ನು ಸ್ವೀಕರಿಸಿದರು. ಮುಸ್ಲಿಂ ಆಕ್ರಮಣಕಾರರು ಕೇಲೋಶಿಯ ಶಾಂತಾದುರ್ಗಾ ದೇವಾಲಯವನ್ನು ಹಾಗೂ ಕವಳೇ ಮಠದ ಪರಿಸರವನ್ನು ಧ್ವಂಸಗೊಳಿಸಿದಾಗ ಅಲ್ಲಿಯ ದೇವರ ವಿಗ್ರಹಗಳನ್ನು ಕವಳೆಗೆ ಸ್ಥಳಾಂತರಿಸಿದರು. ಆದರೆ ಆಗ ಕವಳೇ ಮಠದ ಪೀಠಾಧಿಕಾರಿ ಶ್ರೀ ವಿದ್ಯಾನಂದ ಸರಸ್ವತೀ ಅವರು ರತ್ನಾಗಿರಿ ಜಿಲ್ಲೆಯ ಗೋಳವಣಕ್ಕೆ, ಅಲ್ಲಿಂದ ವಾರಣಾಸಿಗೆ ಹೊರಟು ಹೋಗಿದ್ದರು. ಆಗ ಕೆಲವು ನಿಷ್ಠಾವಂತ ಅನುಯಾಯಿಗಳು ಅವರೊಡನೆ ವಾರಣಾಸಿಗೆ ಹೊರಟರು. ಇನ್ನು ಕೆಲವರು ಪೋರ್ಚುಗೀಸರು ನೆಲೆಸಿದ ಭೂಭಾಗದ ಹೊರಗಿನ ಸ್ಥಳಗಳಲ್ಲಿ ಸ್ಥಾಯಿಯಾಗಿ ನೆಲೆಸಿ ಮಠಕ್ಕೆ ತಮ್ಮ ನಿಷ್ಠೆಯನ್ನು ಮುಂದುವರಿಸಿದರು. ಆದರೆ ಗೋವೆಯನ್ನು ಬಿಟ್ಟುಹೋದ

ಅನೇಕರಿಗೆ ಗೋವಾದಲ್ಲಿ ಇಲ್ಲವೆ ಹತ್ತಿರದಲ್ಲಿ ತಮ್ಮ ಗುರುವಿನ ಅನುಪಸ್ಥಿತಿಯಿಂದ ಅನಾಥ ಪ್ರಜ್ಞೆ ಕಾಡತೊಡಗಿತ್ತು. ಪಕ್ಕದ ಕನ್ನಡ ಜಿಲ್ಲೆಗಳಿಗೆ ಮತ್ತು ಕೆಳದಿಯ ಕಡೆ ಹೋಗಿ ಶಾಸಕರಾದವರೂ ಮಠದ ಸಂಪರ್ಕವನ್ನು ಕಳೆದುಕೊಂಡಿದ್ದರು.

ತಮಗೆ ಆಧ್ಯಾತ್ಮಿಕ ಗುರುವಿಲ್ಲ ಎಂದು ಅವರು ಶೃಂಗೇರೀ ಮಠದ ಶ್ರೀ ಶಂಕರಾಚಾರ್ಯರ ಮಾರ್ಗದರ್ಶನವನ್ನು ಅರಸಿಕೊಂಡು ಹೋದರು. ಕ್ರಿ.ಶ.1630ರಲ್ಲಿ ವಾರಣಾಸಿಯಿಂದ ಗೋವೆಯ ಕವಳೇಮಠಕ್ಕೆ ಅಂದಿನ ಪೀಠಾಧಿಕಾರಿ ಯಾದ ಶ್ರೀ ಸಚ್ಚಿದಾನಂದ ಸ್ವಾಮಿಯವರು ಮರಳಿ ಬಂದಿದ್ದರು. ಆಗ ತಮ್ಮನ್ನು ಕವಳೇಮಠದ ಪೀಠಾಧಿಕಾರಿಯನ್ನಾಗಿ ಸ್ವೀಕರಿಸಬೇಕೆಂದು ತಮ್ಮ ಅಪೇಕ್ಷೆಯನ್ನು ವ್ಯಕ್ತಪಡಿಸಿದ್ದರು. ಗೋವೆಯಲ್ಲಿ ಇದ್ದವರು ಹಾಗೂ ನಿಕಟ ಗಡಿ ಪ್ರದೇಶದಲ್ಲಿದ್ದವರೇನೋ ಒಪ್ಪಿದರು. ಆದರೆ ಕಾಶ್ಮೀರ ಮೂಲದಿಂದ ಗೋವೆಗೆ ಬಂದು ನೆಲೆಸಿದ ಹಾಗೂ ಗೋವೆಯ ಮಠದೊಡನೆ ಸಂಪರ್ಕ ಕಳೆದುಕೊಂಡ ಸಾರಸ್ವತರು ಹೊಸ ಪೀಠಾಧಿಕಾರಿ ಯನ್ನು ಸ್ವೀಕರಿಸಲು ಮನಸ್ಸು ಮಾಡಲಿಲ್ಲ. ಇಂಥ ಅಸಮ್ಮತಿಯನ್ನು ವ್ಯಕ್ತಪಡಿಸಿದ ಸದಸ್ಯರನ್ನು ಕವಳೇಮಠದ ಸಂಪ್ರದಾಯದಿಂದ ಬಹಿಷ್ಕೃತರನ್ನಾಗಿ ಮಾಡಿದರು.

ಅಂಥ ಅನೇಕ ಸಾರಸ್ವತರು ಶೈವಪಂಥದ ನಿಷ್ಠಾವಂತ ಅನುಯಾಯಿಯಾದ ಕೆಳದಿ ದೊರೆ ಬಸಪ್ಪ ನಾಯಕನ ಬಳಿ ಅಧಿಕಾರಿಗಳಾಗಿದ್ದರು. ದೊರೆ 'ಶಿವ ತತ್ತ್ವರತ್ನಾಕರ'ದ ಗ್ರಂಥಕರ್ತನೂ ಆಗಿದ್ದ. ಅವನು ತನ್ನ ಆಸ್ಥಾನದಲ್ಲಿ ಸಾರಸ್ವತ ವಿದ್ವಾಂಸರೊಡನೆ ಧಾರ್ಮಿಕ ತತ್ತ್ವಗಳ ಕುರಿತು ಚಿಂತನ-ಮಂಥನ ಮಾಡಲು ಬಹಳ ಇಷ್ಟಪಡುತ್ತಿದ್ದ. ಅವರಲ್ಲಿ ಕಾಗಾಲ ನಾರಣಪ್ಪ, ಮಣಿಕೆರೆ ತಿಮ್ಮಯ್ಯ, ಧಾರೇಶ್ವರ ಲಕ್ಷ್ಮಯ್ಯ, ಚಂದಾವರ ನಾರಣಯ್ಯ, ನಾರಾಯಣ ನಾಡಕರ್ಣಿಯಂಥವರು ಉಚ್ಚ ಆಡಳಿತಾಧಿಕಾರಿಗಳಾಗಿದ್ದರು. ರಂಗಯ್ಯ ಅಮಲಾಡಿ, ಸಾಂತಯ್ಯ, ವೆಂಕಯ್ಯರಂಥ ಆಸ್ಥಾನ ಸಂಗೀತಕಾರರೂ ಇದ್ದರು.

ಲಿಂಗಾಯತ ಆಸ್ಥಾನಿಕರು ಈ ಸಾರಸ್ವತ ವಿದ್ವಾಂಸರ ಮೇಲೆ ಮತ್ಸರ ಪಡುತ್ತಿದ್ದರು. 'ಸ್ವಂತ ಆಧ್ಯಾತ್ಮಿಕ' ಗುರುವಿಲ್ಲದಿರುವುದರಿಂದ ಬ್ರಾಹ್ಮಣತ್ವದ ಸ್ಥಾನಮಾನ ಹಾಗೂ ಆಧ್ಯಾತ್ಮಿಕ ತತ್ತ್ವಗಳ ಮೇಲೆ ಶಾಸ್ತ್ರಾರ್ಥ ಮಾಡುವ ಅಧಿಕಾರ ನಿಮಗಿದೆಯೇ? ಎಂದು ಆಕ್ಷೇಪಣೆ ಎತ್ತುತ್ತಿದ್ದರು. ಸಾರಸ್ವತರ ಮನಸ್ಸಿನಲ್ಲಿ ಈ ಸಂಗತಿ ಕುಟುಕುತ್ತಿತ್ತು. ಆಗಲೇ ಅವರಿಗೆ ತಮ್ಮದೇ ಆದ ಗುರುವನ್ನು ಹೊಂದಿರಬೇಕೆಂಬುದರ ಮಹತ್ವದ ಕುರಿತು ಪ್ರಜ್ಞೆ ಮೂಡಿತ್ತು. ಆಗ ಅವರು ಕವಳೇಮಠದ ಸಂಪರ್ಕ ಕಡಿದುಕೊಂಡಿದ್ದರಿಂದ, ಸ್ವತಂತ್ರ ಗುರುಸಂಪ್ರದಾಯ

ವಿರುವ ಯೋಗ್ಯತಾಸಂಪನ್ನ ಓರ್ವ ಸೂಕ್ತವ್ಯಕ್ತಿಯನ್ನು ಶೋಧಿಸಿ, ಅವರನ್ನು ತಮ್ಮ ಗುರುಗಳನ್ನಾಗಿ ಸ್ವೀಕರಿಸಬೇಕೆಂದು ನಿರ್ಧರಿಸಿದರು. ಸಾಕಷ್ಟು ಶೋಧಕಾರ್ಯ ಮಾಡಿ ಮುಗಿಸಿದ ಬಳಿಕ, ಅವರು ಕೊನೆಯಲ್ಲಿ, ಗುರುಪೀಠದಲ್ಲಿ ಕುಳಿತು, ಧಾರ್ಮಿಕ ವಿಷಯಗಳಲ್ಲಿ ಮಾರ್ಗದರ್ಶನ ಮಾಡುವ ಯೋಗ್ಯತೆಯುಳ್ಳ ಓರ್ವ ತರುಣ ಸಂನ್ಯಾಸಿಯನ್ನು ಗೋಕರ್ಣದಲ್ಲಿ ಕಂಡುಹಿಡಿದರು. ಆ ಸಂನ್ಯಾಸಿ ಅವರ ಆಮಂತ್ರಣವನ್ನು ಸ್ವೀಕರಿಸಿ, ಅವರಿಗೆ ಮೊದಲ ಗುರುವಾದರು. ಶೃಂಗೇರಿಯ ಶಂಕರಾಚಾರ್ಯ ಪೀಠದ ಸ್ವಾಮಿಗಳಿಂದ ವಿಧ್ಯುಕ್ತ ದೀಕ್ಷೆ ಪಡೆದು ಪರಿಜ್ಞಾನಾಶ್ರಮ ಸ್ವಾಮೀಜಿ ಎಂಬ ನಾಮಾಭಿಧಾನದೊಂದಿಗೆ ಪೀಠಸ್ಥರಾದರು. ತತ್‌ಕ್ಷಣ, ಉತ್ತರ ಕನ್ನಡ ಜಿಲ್ಲೆಯ ಶಿರಾಲಿ ಊರಿನಲ್ಲಿ ಚಿತ್ರಾಪುರಮಠ ಎಂದು ಜನಜನಿತವಾದ ಒಂದು ನೂತನ ಮಠ ಮತ್ತು ಪರಂಪರೆ ಕ್ರಿ. ಶ. 1708ರಲ್ಲಿ ಅಸ್ತಿತ್ವಕ್ಕೆ ಬಂತು. ಆರಂಭದಲ್ಲಿ ಅಸಮ್ಮತಿಯನ್ನು ತೋರಿದರೂ, ಕವಳೇ ಮಠವು ಸಕಲ ಗೌರವಗಳೊಂದಿಗೆ ನೂತನ ಗುರುಗಳಿಗೆ ಮನ್ನಣೆ ನೀಡಿತು.

ಸಾರಸ್ವತ ವೈಷ್ಣವರಿಗೆ ತಮ್ಮ ಗುರುಗಳ ಮಾರ್ಗದರ್ಶನದ ಕೊರತೆಯೇ ಇರಲಿಲ್ಲ. ಶ್ರೀ ಮಧ್ವಾಚಾರ್ಯರು (ಕ್ರಿ.ಶ. 1238–1318) ದ್ವೈತ ಸಿದ್ಧಾಂತದ ಪ್ರಚಾರಕ್ಕಾಗಿ ಗೋವಾಕ್ಕೆ ಭೇಟಿ ನೀಡಿದಾಗ ಅನೇಕ ಸಾರಸ್ವತರು ಪಶ್ಚಿಮ ಕರಾವಳಿಯ ಕನ್ನಡ ಜಿಲ್ಲೆಗಳಲ್ಲಿ, ತದನಂತರ ಗೋವಾದಲ್ಲಿ ಅವರ ಅನುಯಾಯಿಗಳಾದರು. ಹೀಗೆ ಗೋವಾಕ್ಕೆ ಪೋರ್ಚುಗೀಸರ ಆಗಮನ ಆಗುವುದಕ್ಕಿಂತಲೂ ಮುನ್ನ, ಮಾಧ್ವ ಸಂಪ್ರದಾಯದ ಅನುಯಾಯಿಗಳು ಇಲ್ಲಿ ಗಣನೀಯ ಪ್ರಮಾಣದಲ್ಲಿದ್ದರು. ಅಂಥ ಅಸಂಖ್ಯ ಶಿಷ್ಯವರ್ಗಕ್ಕೆ ಗೋಕರ್ಣ ಪರ್ತಗಾಳೀ ಜೀವೋತ್ತಮ ಮಠವು ಮಾರ್ಗದರ್ಶನ ಮಾಡುತ್ತಿತ್ತು. ಈ ಮಠವು ಕ್ರಿ.ಶ. 1477ರಷ್ಟು ಹಿಂದೆಯೇ ಪ್ರಥಮ ಗುರು ಶ್ರೀ ನಾರಾಯಣ ತೀರ್ಥರಿಂದ ಸ್ಥಾಪಿಸಲ್ಪಟ್ಟಿತು.

ಈ ಮಠದ ಸ್ಥಾಪನೆಗೇ ಒಂದು ಮಹತ್ವಪೂರ್ಣ ಹಿನ್ನೆಲೆ ಇದೆ. ಒಮ್ಮೆ ಪರಮಾಚಾರ್ಯರು ಸ್ಥಾಪಿಸಿದ ಅಷ್ಟಮಠಗಳಲ್ಲಿ ಒಂದಾದ ಫಲಿಮಾರು ಮಠದ ಶ್ರೀ ಸ್ವಾಮಿ ರಾಮಚಂದ್ರ ತೀರ್ಥರು ಬದರಿಕಾಶ್ರಮಕ್ಕೆ ಹೋದಾಗ, ಅಸ್ವಸ್ಥರಾದರು. ಆಗ ಅವರು ಒಬ್ಬ ಶಿಷ್ಯನನ್ನು ಧರ್ಮಪೀಠಕ್ಕೇರಿಸಲು ಆಶಿಸಿದರು. ಆದರೆ, ತಮ್ಮ ಪರಿವಾರದಲ್ಲಿ ಸಮಾಜಕ್ಕೆ ಸಂಬಂಧಪಟ್ಟ ಸೂಕ್ತ ಸದಸ್ಯರಾರೂ ಸಿಗದಿದ್ದುದರಿಂದ 'ಮಾಧವ' ಎಂಬ ಸಾರಸ್ವತ ಬ್ರಾಹ್ಮಣನನ್ನು ಕರೆದು ಇವನೇ ಶಿಷ್ಯನಾಗಲು ಸೂಕ್ತ ಎಂದು ನಿರ್ಧರಿಸಿ ಅವನನ್ನೇ ಧರ್ಮಪೀಠದ ಅಧಿಕಾರಿ

ಯನ್ನಾಗಿ ಮಾಡಿದರು. ಆದರೆ, ಗುರುಗಳ ಆರೋಗ್ಯ ಸುಧಾರಿಸಿದ್ದರಿಂದ ಅವರು ಉಡುಪಿಗೆ ಹಿಂದಿರುಗಿ ಬಂದರು. ಆದರೆ ಅವರ ಅನುಯಾಯಿಗಳಲ್ಲಿ ಅನೇಕರು ತಮ್ಮ ಸಮಾಜದ ಸದಸ್ಯನನ್ನೇ ಧರ್ಮಪೀಠಕ್ಕೇರಿಸಬೇಕೆಂದು ಬಯಸಿದರು. ಗುರುಗಳು ಅವರ ಸಲಹೆಯನ್ನು ಮನ್ನಿಸಿ ಅವರ ಸಮಾಜಕ್ಕೆ ಸೇರಿದ ಇನ್ನೋರ್ವ ಸದಸ್ಯನನ್ನು ಶಿಷ್ಯನನ್ನಾಗಿ ಸ್ವೀಕರಿಸಿದರು. ಮತ್ತು ಮಾಧವನನ್ನು ನಾರಾಯಣ ತೀರ್ಥ ನಾಮಕರಣ ಮಾಡಿ ಸಾರಸ್ವತ ಸಮಾಜದ ಗುರುವಾಗಿ ದ್ವೈತಮತದ ತತ್ತ್ವವನ್ನು ಬೋಧಿಸಿ ಸಾರಸ್ವತರಿಗೆ ಮಾರ್ಗದರ್ಶನ ಮಾಡುತ್ತಿರಬೇಕೆಂದು ಸಕಲ ಗೌರವಗಳೊಂದಿಗೆ ವಿಧಿವತ್ತಾಗಿ ನೇಮಿಸಿದರು. ಹೀಗೆ, ಕ್ರಿ. ಶ. 1477ರಲ್ಲಿ ಭಟಕಳದಲ್ಲಿ ಸಾರಸ್ವತ ಸಮಾಜದ ಪ್ರಪ್ರಥಮ ಮಠದ ಸ್ಥಾಪನೆಯಾಯಿತು. ಮಠದ ಮೂರನೆಯ ಪೀಠದ ಪೀಠಾಧಿಕಾರಿ ಶ್ರೀ ಜೀವೋತ್ತಮ ತೀರ್ಥ ಸ್ವಾಮೀಜಿಯವರು ಕ್ರಿ. ಶ. 1570ರಲ್ಲಿ ಗೋಕರ್ಣದಲ್ಲಿ ಮಠದ ಇನ್ನೊಂದು ಶಾಖೆಯನ್ನು ಸ್ಥಾಪಿಸಿದರು. ಏಳನೆಯವರಾದ ಶ್ರೀ ರಾಮಚಂದ್ರ ತೀರ್ಥ ಸ್ವಾಮೀಜಿಯವರು ಕ್ರಿ. ಶ. 1616ರಲ್ಲಿ ಗೋಮಂತಕದ ಪರ್ತಗಾಳಿಯಲ್ಲಿ ಮತ್ತೂ ಒಂದು ಶಾಖೆಯಾಗಿ ಮಠದ ಪೀಠವನ್ನು ಸ್ಥಾಪಿಸಿದರು. ಅಂದಿನಿಂದ ಈ ಮಠವು ಗೋಕರ್ಣ ಜೀವೋತ್ತಮ ಪರ್ತಗಾಳೀ ಮಠದ ಪೀಠವೆಂದು ಪ್ರಸಿದ್ಧವಾಯಿತು. ಹೀಗೆ, ಪೋರ್ಚುಗೀಸರು ಗೋವಾದಲ್ಲಿ ತಮ್ಮ ವಸತಿಯನ್ನು ಸ್ಥಿರವಾಗಿ ನೆಲೆಗೊಳಿಸುವುದಕ್ಕಿಂತ ಎಷ್ಟೋ ಕಾಲ ಮುಂಚೆಯೇ, ಕರಾವಳಿಯ ಕನ್ನಡ ಜಿಲ್ಲೆಗಳಲ್ಲಿ ಅನೇಕ ಸಾರಸ್ವತರು ಅಭಿವೃದ್ಧಿ ಪಥದಲ್ಲಿದ್ದರು. ಕನ್ನಡ ಜಿಲ್ಲೆಗಳ ಜನರು ಶ್ರೀ ಮಧ್ವಾಚಾರ್ಯರು ಪ್ರತಿಪಾದಿಸಿದ ವೈಷ್ಣವ ಸಂಪ್ರದಾಯದ ಅನುಯಾಯಿಗಳೇ ಆಗಿದ್ದರು.

ಕನ್ನಡ ಜಿಲ್ಲೆಗಳಿಗೆ ವಲಸೆ ಬಂದು, ನಂತರ ಕೆಳದಿಯಲ್ಲಿ ನೆಲೆಸಿದ ಸ್ಮಾರ್ತ ಸಾರಸ್ವತರಲ್ಲದೆ, ಅನೇಕ ವೈಷ್ಣವ ಸಾರಸ್ವತರೂ ಕೆಳದಿ ಮತ್ತು ಸೋಂದೆಯ ದೊರೆಗಳ ಆಸ್ಥಾನಗಳಲ್ಲಿ ಉನ್ನತ ಅಧಿಕಾರಿಗಳಾಗಿದ್ದರು. ಪೋರ್ಚುಗೀಸರ ಕಿರುಕುಳವನ್ನು ತಡೆಯಲಾರದೆ, ಗೋವೆಯ ಲೋಟಲಿಯಿಂದ ವಲಸೆ ಬಂದ ಪ್ರತಿಷ್ಠಿತ ಕುಟುಂಬಗಳಲ್ಲಿ ಒಂದು ಕುಟುಂಬವು ಗಣೇಶ ಅಥವಾ ವಿನಾಯಕ ಮಹಾಲೆಯದು (ಮಲ್ಯ). ಗೋವೆಯಲ್ಲಿ ಅವನ ಕುಟುಂಬದವರು ವ್ಯಾಪಾರ ಹಾಗೂ ವಾಣಿಜ್ಯದ ಉದ್ಯಮಿಗಳಾಗಿದ್ದಿರಬಹುದು. ಕೆಲವು ಸದಸ್ಯರು ಕರಸಂಗ್ರಹ ಕಾರರಾಗಿದ್ದರು. ವ್ಯಾಪಾರಿಗಳಾಗಿದ್ದುದರಿಂದ ಅವರು ಪಶ್ಚಿಮ ಕರಾವಳಿಯ ಬಂದರ ಪ್ರದೇಶಗಳಿಗೆ ಸುಪರಿಚಿತರಾಗಿದ್ದರು. ಆದ್ದರಿಂದ, ವಲಸೆ ಬಂದಾಗ, ಅವರ ಪ್ರಥಮ ವಸತಿ ನೆಲೆಸಿದ್ದು ಕುಮಟಾ ಬಂದರದ ಬಳಿ. ಅದು ವ್ಯಾಪಾರಕ್ಕೆ

ಹೆಸರಾದ ಮಹತ್ವಪೂರ್ಣ ಹೊರಠಾಣ್ಯವಾಗಿತ್ತು. ಗಣೇಶ ಮಲ್ಯನು ಬರಿಗೈಯಿಂದ ಬಂದರೂ, ಅವನಲ್ಲಿ ಸ್ಥಳೀಯ ಬುದ್ಧಿಮತ್ತೆಯಿತ್ತು. ಸ್ಮಾರ್ತ ಸಾರಸ್ವತರಂತೆ ಅವನು ಕೂಡ ಕೆಳದಿಯಲ್ಲಿಯೇ ತನ್ನ ಅದೃಷ್ಟ ಪರೀಕ್ಷೆಯಾಗಲಿ ಎಂದು ನಿರ್ಧರಿಸಿದ. ಅಲ್ಲಿ ತನ್ನ ಕಠಿಣ ಪರಿಶ್ರಮ ಮತ್ತು ಬುದ್ಧಿವಂತಿಕೆಯ ಬಲದಿಂದ ಅವನು ಕೆಳದಿ ದೊರೆಯ ಆಡಳಿತದಲ್ಲಿ, ಉನ್ನತಮಟ್ಟದ ಅಧಿಕಾರಿಯಾದ. ಅವನ ವರ್ಚಸ್ಸಿನಿಂದ ಅವನ ಮಕ್ಕಳಿಗೂ, ಮೊಮ್ಮಕ್ಕಳಿಗೂ ಅಧಿಕೃತ ಮಾನ್ಯತೆ ಬಳವಳಿಯಾಗಿ ಪ್ರಾಪ್ತವಾಯಿತು. ಕ್ರಿ. ಶ. 1661ರ ತಾಮ್ರ ಫಲಕದ ಪ್ರಕಾರ, ಅವನ ಮೊಮ್ಮಗನಾದ ವಿಠ್ಠಲ ಮಲ್ಯನು ಎರಡನೆಯ ವೆಂಕಟಪ್ಪ ನಾಯಕನ (ಕ್ರಿ. ಶ. 1660–62) ಆತ್ಮೀಯ ಸ್ನೇಹಿತನಾಗಿದ್ದ. ಮತ್ತು ಅವನು ದೊರೆಯ ಅನುಮತಿ ಪಡೆದು ಶಿರಾಲಿಯ ಹತ್ತಿರ ಒಂದು ವಿರಕ್ತಮಠವನ್ನು ನಿರ್ಮಿಸಿದ. ದೊರೆ ಮಠಕ್ಕಾಗಿ ಶಿರಾಲಿಯ ಬಳಿ ಇದ್ದ ಹೊಸೂರಲ್ಲಿ ದತ್ತಿ ಭೂಮಿಯನ್ನು ನೀಡಿದ. ಗೋವೆಯಲ್ಲಿದ್ದಾಗ ಆ ಕುಟುಂಬದವರಿಗೆ ಪೋರ್ಚುಗೀಸ್ ವ್ಯಾಪಾರಿಗಳೊಡನೆ ನಿಕಟ ಸಂಪರ್ಕವಿತ್ತು. ತನ್ನಿಮಿತ್ತ, ಅವನಿಗೆ ಕೆಳದಿ ದೊರೆ ತನ್ನ ರಾಯಭಾರಿಯನ್ನಾಗಿ ಪೋರ್ಚುಗೀಸರ ಬಳಿ ಕಳಿಸಿದ. ವಿಟ್ಠಲ ಮಲ್ಯನ ಎರಡು ಮಕ್ಕಳಾದ ನಾಗಪ್ಪ ಮತ್ತು ನಾರಾಯಣ ಇವರೀರ್ವರಿಗೂ ಮನೆ ಕಟ್ಟಿಸಲಿಕ್ಕೆ ಮತ್ತು ಬಾವಿ ಅಗೆಯಲಿಕ್ಕೆ ಭೂಮಿಯನ್ನು ದತ್ತಿಯಾಗಿ ನೀಡಿದ. (ಪೋರ್ಚುಗೀಸ್ ದಾಖಲೆಯಲ್ಲಿ ಮಲ್ಲಪ್ಪ ಮಾಲೋ ಅಥವಾ ಮೋಲಿಕ್ ಮೊಲ್ಲಾ ಎಂದು ಬರೆಯಲಾಗಿದೆ.) ಮ್ಹಾಳಪ್ಪನಿಗೆ ಕೆಳದಿ ದೊರೆ ಪೋರ್ಚುಗೀಸರ ಬಳಿ ಸಂಧಾನಕ್ಕಾಗಿ ಕಳಿಸಿದ್ದ. ಆದರೆ, ಆ ಕಾಲದಲ್ಲಿ ದೊರೆಗಳೇ ವ್ಯಾಪಾರ–ನಿರ್ವಹಣೆ ಮಾಡುತ್ತಿದ್ದರು. ಮತ್ತು ಮ್ಹಾಳಪ್ಪನು ಅವರ ಅಧಿಕೃತ ಪ್ರತಿನಿಧಿಯಾಗಿದ್ದ.

ನಾರಾಯಣ ಮಲ್ಯನು ಮಂಗಳೂರು ಬಂದರದ ಅಧಿಕಾರಿಯಾಗಿದ್ದ. ಅವನಿಗೆ ಭಟಕಳದ ವ್ಯಾಪಾರದಲ್ಲಿ ಆಸಕ್ತಿಯಿತ್ತು. ಕೆಳದಿಯಲ್ಲಿ ಅವನ ಕ್ಷಿಪ್ರ ಪ್ರಗತಿ ಆಗುತ್ತಿರುವುದನ್ನು ಕಂಡು ಅನೇಕ ಸಾರಸ್ವತ ವ್ಯಾಪಾರಿಗಳಿಗೆ ಅವನ ಮೇಲೆ ಅಸೂಯೆಯಾಯಿತು. ಅವನು ರಾಜ್ಯದ ಆಡಳಿತಕ್ಕಿಂತ ವ್ಯಾಪಾರದ ಮೇಲೆಯೇ ತನ್ನ ಲಕ್ಷ್ಯವನ್ನು ಹೆಚ್ಚು ಕೇಂದ್ರೀಕರಿಸಬೇಕಾಯಿತು. ಕ್ರಿ.ಶ. 1757ರಲ್ಲಿ ಕೆಳದಿ ಸಾಮ್ರಾಜ್ಯದ ಪತನವಾಯಿತು. ಆದ್ದರಿಂದ ಮಲ್ಯ ಕುಟುಂಬದವರು ಹೊನ್ನಾವರಕ್ಕೆ ಹೊರಟು ಹೋದರು. ಅಲ್ಲಿ ತಮ್ಮ ಕುಟುಂಬದವರೇ ಕಟ್ಟಿಸಿದ ವೇಂಕಟರಮಣ ದೇವಾಲಯದ ಸಮೀಪ ವಾಸ್ತವ್ಯ ಮಾಡಿದರು. ಗಣೇಶ ಮಲ್ಯನ ಇನ್ನೊಬ್ಬ ಮೊಮ್ಮಗ ರಾಮಚಂದ್ರ ಮಲ್ಯನು ಮಂತ್ರಿಯಾಗಿದ್ದ. ಮತ್ತು ದೊರೆ ಭದ್ರಪ್ಪ ನಾಯಕನಿಗೆ ಸ್ನೇಹಿತನೂ ಆಗಿದ್ದ. ಕ್ರಿ. ಶ. 1663ರಲ್ಲಿ ಅವನು

ಹೊನ್ನಾವರದ ಪ್ರಸಿದ್ಧ ವೇಂಕಟರಮಣ ದೇವಾಲಯವನ್ನು ಕಟ್ಟಿಸಲು ಕಾರಣನಾದ.

ಲೋಟಲಿಯ ಮಹಾಲೆಯವರ ಆ ಬೃಹತ್ ಸಂಯುಕ್ತ ಕುಟುಂಬದ ಕೆಲವು ಸದಸ್ಯರು ಸೋಂದೆ ರಾಯರ ಆಶ್ರಯದಲ್ಲಿದ್ದರು. ಅವರಿಗೆ ಪೋರ್ಚುಗೀಸ್ ದೊರೆಗಳ ಬಳಿ ಹಾಗೂ ಕೆಳದಿ ದೊರೆಗಳ ಬಳಿಯೂ ಸೌಹಾರ್ದಯುತ ಸಂಬಂಧ ಇತ್ತು. ಸೋಂದಾ ಸಂಸ್ಥಾನವನ್ನು ಸೇರಿದ ಮಹಾಲೆಯವರು, ಕೆಳದಿ ಸಂಸ್ಥಾನಕ್ಕೆ ಹೋದವರಿಗಿಂತ ಭಿನ್ನವಾಗಿದ್ದರು. ದೊರೆಗಳ ಪ್ರತಿನಿಧಿಯಾಗಿ ವ್ಯಾಪಾರ, ವಾಣಿಜ್ಯ-ವ್ಯವಹಾರ ಮತ್ತು ಪೋರ್ಚುಗೀಸರೊಡನೆ ರಾಜಕೀಯ ಸಂಧಾನ ಮಾಡುವುದರ ಜೊತೆಗೆ ರಾಜ್ಯದ ಪರವಾಗಿ ತೆರಿಗೆ, ಲೇವೀ ಮತ್ತು ಕರವನ್ನು ಸೋಂದಾ ಮತ್ತು ಶಿರಸಿಯಲ್ಲೂ ವಸೂಲಿ ಮಾಡುತ್ತಿದ್ದರು. ಪೂರ್ವಜರ ವೃತ್ತಿಗಳಲ್ಲಿ ವ್ಯಾಪಾರಿಗಳಾಗಿ, ಮಧ್ಯವರ್ತಿಗಳಾಗಿಯೂ ಹೆಚ್ಚು ಹೆಚ್ಚು ಆಸಕ್ತಿಯನ್ನು ವಹಿಸುತ್ತಿದ್ದರು. ಅವರಿಗೆ ಇದರಿಂದ ಸೋಂದೆಯ ದೊರೆಗಳ ಆಶ್ರಯದಲ್ಲಿ ಘನತೆ-ಗೌರವಗಳ ಮನ್ನಣೆಯೊಂದಿಗೆ ಸಂಪದಭಿವೃದ್ಧಿಯೂ ಪ್ರಾಪ್ತವಾಯಿತು. ಸುಶಿಕ್ಷಿತ ವ್ಯಾಪಾರೀ ವರ್ಗದವರಾದ ಈ ಮಹಾಲೆ ಕುಟುಂಬದ ಸಕಲ ಸದಸ್ಯರು ಸಾಮಾಜಿಕ ಹಾಗೂ ಆರ್ಥಿಕ ರಂಗದಲ್ಲಿ ಪ್ರಮುಖ ಪಾತ್ರವನ್ನು ನಿರ್ವಹಿಸಿರುವರು. ಕೆಲವು ದೊರೆಗಳು ಯಾವಾಗಲೂ ಲಿಂಗಾಯತ, ಹವ್ಯಕ ಹಾಗೂ ಸಾರಸ್ವತರಂಥ ಬುದ್ಧಿಜೀವಿಗಳಿಗೆ ಆಡಳಿತ ವಿಷಯದಲ್ಲಿ ಪ್ರೋತ್ಸಾಹ ನೀಡುತ್ತಿದ್ದುದರಿಂದ ಅಂಥವರು ರಾಜಪರಿವಾರದವರನ್ನು ಸುಲಭವಾಗಿ ಭೇಟಿ ಮಾಡಬಹುದಿತ್ತು. ಅವರಲ್ಲಿ ಕೆಲವರಂತೂ ಉನ್ನತ ಸ್ಥಾನಾಪನ್ನರಾಗಿದ್ದರು. ಬೆಳವಡಿ ರಾಜ್ಯದ ಬೆಳಗಾವಿ ಜಿಲ್ಲೆಯ ಬೈಲಹೊಂಗಲ ತಾಲೂಕಿನಲ್ಲಿ ಓರ್ವ ಅಧಿಕಾರಿಯಾದ ಶೇಷೂ ಶ್ರೀನಿವಾಸ ಮುತಾಲಿಕರಿಂದ 'ಶಿವಾಜಿ ಮಲ್ಲಮ್ಮಾಜಿ ಸಮರೋತ್ಸವ' ಎಂಬ ಮರಾಠೀ ಭಾಷೆಯ ಪುಸ್ತಕವು ಪ್ರಕಟಿಸಲ್ಪಟ್ಟಿತು. ಮಧುಲಿಂಗ ನಾಯಕನ (ಕ್ರಿ. ಶ. 1638-1674) ಮಗಳಾದ ಮಲ್ಲಮ್ಮಾಜಿಯ ಆತ್ಮೀಯ ಸ್ನೇಹಿತೆ ಕೊಲ್ಲಾಪುರದ ರಾಣಿ ತಾರಾಬಾಯಿಯ ಕೋರಿಕೆಯ ಮೇರೆಗೆ ಈ ಪುಸ್ತಕ ಬರೆಯಲ್ಪಟ್ಟಿತು. ಈ ಪುಸ್ತಕದ ಪ್ರಕಾರ, ರಾಜ ಪರಿವಾರದವರಿಗಷ್ಟೇ ಸ್ಥಾಪಿತವಾದ ಈ ಶಾಲೆಯಲ್ಲಿ ಲಿಂಗಾಯತರೊಡನೆ ಅನೇಕ ಹವ್ಯಕ ಹಾಗೂ ಸಾರಸ್ವತ ವಿದ್ಯಾರ್ಥಿಗಳೂ ಅಭ್ಯಾಸ ಮಾಡಿರುವರು.

ಹೈದರ ಆಲಿಯು ಕ್ರಿ. ಶ. 1763ರಲ್ಲಿ ಕೆಳದಿ ಮತ್ತು ಸೋಂದಾ ದೊರೆಗಳನ್ನು ಸೋಲಿಸಿದ ಬಳಿಕ ಆಗಿನ ಸೋಂದೆಯ ದೊರೆ ಸವಾಯಿ ಇಮ್ಮಡಿ ಸದಾಶಿವ ನಾಯಕನು ಗೋವಾದ ಬಾಂದೀವಾಡೆ ಎಂಬ ಕಡೆ

ಓಡಿಹೋದ. ಪೋರ್ಚುಗೀಸರಿಗೆ ಶರಣಾಗತನಾದ. ಗೋವಾದಲ್ಲಿದ್ದ ತನ್ನ ಸಂಸ್ಥಾನದ ಕೆಲ ಪ್ರದೇಶಗಳನ್ನು ಪೋರ್ಚುಗೀಸರಿಗೆ ಒಪ್ಪಿಸಿ, ಅದರ ಬದಲಿಗೆ ವಾರ್ಷಿಕ ಪಿಂಚಣಿಯನ್ನು ಪಡೆದ. ಆಂಗ್ಲರು ಟಿಪ್ಪು ಸುಲ್ತಾನನನ್ನು ಸೋಲಿಸಿ ಕೊಂದ ಬಳಿಕ, ಕರಾವಳಿ ಕನ್ನಡ ಜಿಲ್ಲೆಯ ಉಳಿದೆಲ್ಲ ಪ್ರದೇಶವೂ ಆಂಗ್ಲರ ಕೈವಶವಾಯಿತು. ವಾಡಿಕೆಯಂತೆ, ಕಂದಾಯದ ದಾಖಲೆ ಇಟ್ಟು ಕರ ಸಂಗ್ರಹದ ನಿರ್ವಹಣೆ ಹಾಗೂ ಆಡಳಿತದ ವಿಷಯದಲ್ಲಿ ಇರುವ ತಮ್ಮ ಅನುಭವವನ್ನು ಬಳಸಿದ ಸಾರಸ್ವತರು ಆಂಗ್ಲರ ಆಡಳಿತ ಕಾಲದಲ್ಲೂ ಮತ್ತೆ ಮುಂಚೂಣಿಯಲ್ಲಿ ಬಂದರು. ಶ್ರೀಮಂತರು ವ್ಯಾಪಾರವನ್ನಾರಂಭಿಸಿದರು. ಹವ್ಯಕ ಕೃಷಿಕರಿಗೆ ಹಣವನ್ನು ಸಾಲವಾಗಿ ಕೊಟ್ಟು, ಅದರಿಂದ ಅನುಪಸ್ಥಿತ ಜಮೀನುದಾರರಾಗಿ, ಕೊಟ್ಟ ಹಣ ತಿರುಗಿ ಬರದಿದ್ದಾಗ, ಅಡವಿಟ್ಟ ಭೂಮಿಯು ಅವರಿಗೇ ಬರುವ ಹಾಗೆ ಆಯಿತು. ಸಾರಸ್ವತರು ಆಂಗ್ಲ ಶಿಕ್ಷಣ ಪಡೆಯುವುದರಲ್ಲೂ ಮೊದಲಿಗರಾಗಿದ್ದರು. ಅದರಿಂದ ಅವರು ನ್ಯಾಯವಾದಿಗಳೂ, ಶಿಕ್ಷಣತಜ್ಞರೂ ಆದರು. ಹೀಗಾಗಿ ಬ್ಯಾಂಕುಗಳಲ್ಲಿ, ವಾಣಿಜ್ಯ ಸಂಸ್ಥೆಗಳಲ್ಲಿ ಮತ್ತು ಮುಂಬಯಿ, ಬೆಂಗಳೂರು, ಮದ್ರಾಸ, ಕಲಕತ್ತಾದಂಥ ದೂರ-ದೂರದ ಸ್ಥಳಗಳಲ್ಲಿರುವ ಸರಕಾರೀ ಆಡಳಿತಗಳಲ್ಲಿ ಮಹತ್ವದ ಸ್ಥಾನಗಳನ್ನು ಅಲಂಕರಿಸಲು ಅವರಿಗೆ ಶಕ್ಯವಾಯಿತು.

ಮೂರನೆಯ ವಲಸೆ

ಪೋರ್ಚುಗೀಸರು ಗೋವಾ ಸ್ವಾಧೀನಪಡಿಸಿಕೊಳ್ಳುವುದಕ್ಕಿಂತ ಹಾಗೂ ಮಾಳ ಪೈ ಕೋಚೀನಿಗೆ ವಲಸೆ ಹೋಗಿ ನೆಲೆಸುವುದಕ್ಕಿಂತ ಎಷ್ಟೋ ಕಾಲ ಮುಂಚೆಯೇ ಗಣನೀಯ ಸಂಖ್ಯೆಯ ಸಾರಸ್ವತರು ಮಲಬಾರ ತೀರದಲ್ಲಿದ್ದರು. ಅಲ್ಲಿ ಅವರು ಅರಬ ಹಾಗೂ ಯಹೂದೀ ವ್ಯಾಪಾರಿಗಳೊನೆ ವ್ಯಾಪಾರ-ವಾಣಿಜ್ಯಗಳಲ್ಲಿ ತೊಡಗಿದ್ದರು. ಗೋವಾದಲ್ಲಿಯೂ ಅರಬರಿದ್ದರು. ಅವರು ಅಶ್ವ ವ್ಯಾಪಾರದಲ್ಲಿ ನಿಪುಣರಾಗಿದ್ದರು. ಕುದುರೆಗಳಿಗೆ ಬದಲಾಗಿ, ಇಲ್ಲಿಂದ ಅಕ್ಕಿ, ಯಾಲಕ್ಕಿ, ಮೆಣಸು ಮುಂತಾದ ಸಂಬಾರ-ಜಿನಸಿ ವಸ್ತುಗಳನ್ನು ವಿನಿಮಯ ಮಾಡಿಕೊಳ್ಳುತ್ತಿದ್ದರು. ವ್ಯಾಪಾರಸ್ಥನಾದ ಮ್ಹಾಳ ಪೈ ಈ ಎಲ್ಲ ಸ್ಥಳಗಳಿಗೆ ಅಪರಿಚಿತನಂತೂ ಆಗಿರಲಿಲ್ಲ. ಗೋವಾದಿಂದ ಅವನು ಬಹಿಷ್ಕೃತನಾದ ಬಳಿಕ, ಮಲಬಾರಕ್ಕೆ ಸ್ಥಳಾಂತರಗೊಂಡ. ಅವನ ವ್ಯಾಪಾರಕ್ಕೇನೂ ಧಕ್ಕೆಯಾಗಲಿಲ್ಲ. ಕೋಚೀನದ ಮುಂದಿನ ದಿವಾನನೊಬ್ಬನು ಕ್ರಿ. ಶ. 1858ರಲ್ಲಿ ತ್ರಾವಣಕೋರ - ಕೋಚೀನ ಸಂಸ್ಥಾನದ ಬ್ರಿಟಿಷ್ ಪ್ರತಿನಿಧಿ ಡಬ್ಲ್ಯು ಕುಲೆನ್‌ನಿಗೆ ಹೀಗೆ ನೆನಪು ಮಾಡಿಕೊಡುತ್ತಾನೆ.

'ಕ್ರಿ. ಶ. 1294ರಲ್ಲಿ ಕೊಂಕಣೀ ಭಾಷಿಕರಾದ ಸಾರಸ್ವತರು ತಮ್ಮ ಜನ್ಮಭೂಮಿ ಕೊಂಕಣ ತೀರದ ಗೋವಾವನ್ನು ಬಿಟ್ಟು, ಮೊಟ್ಟ ಮೊದಲನೆಯ ಸಲ ತಮ್ಮ ಕುಲದೇವತೆಯ ವಿಗ್ರಹಗಳನ್ನು ಹಿಡಿದುಕೊಂಡು ಕೋಚೀನಕ್ಕೆ ಸಾಮೂಹಿಕವಾಗಿ ವಲಸೆ ಬಂದರೆಂಬ ಬಗ್ಗೆ ಪಾರಂಪರಿಕ ನಂಬಿಕೆ ಇದೆ. ಅವರು, ಕೋಚೀನ ಮಹಾರಾಜನಿಂದ ದತ್ತಿ ಭೂಮಿಯನ್ನೂ, ರಕ್ಷಣೆಯ ಅಭಯವನ್ನೂ ಪಡೆದಿದ್ದರು. ಅಂದಿನಿಂದ ಅವರು ಇಲ್ಲಿ ಕೋಚೀನದ 'ಕೊಂಕಣಸ್ಥ ಮಹಾಜನಂ ವಸತಿ'ಯಲ್ಲಿ ನೆಲೆಸತೊಡಗಿದ್ದಾರೆ.'

ಮ್ಹಾಳ ಪೈಯೊಡನೆ ಕುಡುಂಬಿ, ಸೋನಾರ, ವಾಣಿ ಹೀಗೆ ಇತರ ಸಮಾಜದವರೂ ಪ್ರಯಾಣ ಕೈಗೊಂಡರು. ಕಣ್ಣಾನೂರಿನ ದೊರೆ ಪ್ರವೇಶಮಾಡಲು ಅನುಮತಿ ನೀಡದಿದ್ದುದರಿಂದ ಅವರು ದಕ್ಷಿಣ ದಿಕ್ಕಿನತ್ತ ಇರುವ ಕೋಚೀನದ ಕಡೆ ಪ್ರಯಾಣ ಬೆಳೆಸಿದರು. ಅಲ್ಲಿ ಸುಮಾರು 360 ಸಾರಸ್ವತ ಕುಟುಂಬಗಳ ವಸತಿ ವ್ಯವಸ್ಥೆಗೆ ಅನುವು ಮಾಡಿಕೊಡಲಾಯಿತು. ಮ್ಹಾಳ ಪೈ ಕೋಚೀನ ನಗರದಿಂದ ಐದು ಮೈಲಿ ದೂರದಲ್ಲಿರುವ ಬಾರಾಪಲ್ಲಿಯಲ್ಲಿ ತನ್ನ ಮೊದಲನೆಯ ತಂಡವನ್ನು ಸ್ಥಾಪಿಸಿದನು. ಅವರೊಡನೆ ಬಂದ ಕಾಮತ ಕುಟುಂಬದವರು ತಮ್ಮೊಡನೆ ಇನ್ನೂರು ಜನರು ಹೊತ್ತುಕೊಂಡು ಹೋಗುವಷ್ಟು ಚಿನ್ನದ ನಾಣ್ಯಗಳ ಚೀಲಗಳನ್ನು ತಂದಿದ್ದರೆಂಬ ಪ್ರತೀತಿ ಇತ್ತು. ಎರಡನೆಯ ತಂಡವಾದ ಈ ಕಾಮತರ ವಸಾಹತು 'ಅಂದಿಕ್ಕಡವ' ಎಂದು ಹೆಸರು ಪಡೆಯಿತು. ಕಾಮತರು 'ಆನಂದಪುರಟ್ಟಿ ಕಾಮತಿ' ಎಂದು ಹೆಸರು ಪಡೆದರು. ವಾವ ಪ್ರಭುವಿನ ಮೂರನೆಯ ತಂಡ ಕೋಚೀನ ನಗರಕ್ಕೆ ಬಂತು. ಅವರಿರುವ ಪ್ರದೇಶ 'ಕೊಂಕಣಕೇರಿ' ಎಂದು ಖ್ಯಾತವಾಯಿತು. ಅಂದು ಮಲಬಾರ ತೀರದ ಜನರು ಕ್ರಿಯಾತ್ಮಕ ವ್ಯಾಪಾರಿಗಳಾಗಿರಲಿಲ್ಲ. ಇಂಥ ಸಂದರ್ಭದಲ್ಲಿ ಆ ಪರಿಚಿತ ಪ್ರದೇಶದಲ್ಲಿ ಸಾರಸ್ವತರಿಗೆ ನಿಷ್ಕ್ರಿಯರಾಗಿರಲು ಸಾಧ್ಯವಾಗಲಿಲ್ಲ. ವ್ಯಾಪಾರ ಹಾಗೂ ಲೇವಾದೇವಿ ವ್ಯವಹಾರ ಮಾಡುತ್ತ ಅವರು ಶ್ರೀಮಂತಿಕೆಯ ವೈಭವವನ್ನು ಕಾಣುವಂತೆ ಮಾಡಿದ್ದು ಅವರ ಸ್ವಂತ ಪರಿಶ್ರಮ ಹಾಗೂ ಅವಿಶ್ರಾಂತ ಸಾಧನೆ. ಈ ವೃತ್ತಿ ಅಲ್ಲಿಯ ತನಕ ಯಹೂದೀ ಜನಾಂಗದ ಹಿಡಿತದಲ್ಲಿತ್ತು. ಹಿಂದೂ ದೊರೆಗಳು ಸಾರಸ್ವತರೊಡನೆ ವ್ಯವಹರಿಸಲು ತುಂಬ ಇಷ್ಟಪಡುತ್ತಿದ್ದರು.

ಮುಂದಿನ ತಲೆಮಾರುಗಳಲ್ಲಿ, ಮಟ್ಟಂಚೇರಿಯ 'ತಿರುಮಲ ದೇವಸ್ವಂ' ಸಾರಸ್ವತರ ಧಾರ್ಮಿಕ ಹಾಗೂ ಸಾಂಸ್ಕೃತಿಕ ಚಟುವಟಿಕೆಗಳ ಕೇಂದ್ರವಾಯಿತು. ದಾಮೋದರೀ ದೇವಿಗಾಗಿ ಮಂದಿರದ ನಿರ್ಮಾಣವೂ ಆಯಿತು. ದೊರೆಗಳು

ಅವರಲ್ಲಿರುವ ವಾಣಿಜ್ಯ ಪ್ರಜ್ಞೆ, ಆಯುರ್ವೇದ ಔಷಧಿಯ ಪರಿಣತಿ ಹಾಗೂ ಸಹಜವಾಗಿ ಆರ್ಥಿಕ ಸಂಪತ್ತಿಯನ್ನೂ ಕಂಡುಹಿಡಿದರು. ಪ್ರಗತಿಶೀಲ ವ್ಯಾಪಾರವು ಆರ್ಥಿಕ ಸಮೃದ್ಧಿಯನ್ನು ತಂದುಕೊಟ್ಟಿತು. ಕ್ರಿ ಶ. 1627ರೊಳಗೆ, ಸಾರಸ್ವತರು ಸಮಾಜದಲ್ಲಿ ಒಂದು ಮಹತ್ವದ ಸ್ಥಾನವನ್ನು ಸಂಪಾದಿಸಿಕೊಂಡಿದ್ದರು. ರಾಜಾ ವೀರ ಕೇರಳ ವರ್ಮನು ಅವರ ಕಾರ್ಯವನ್ನು ಗುರುತಿಸಿ, ಇತರ ಸಮಾಜದವರು ಇವರ ವ್ಯವಹಾರದಲ್ಲಿ ಹಸ್ತಕ್ಷೇಪವನ್ನು ಮಾಡದಿರುವ ಸಲುವಾಗಿ ಒಂದು ರಾಯಸವನ್ನು (ತಿತ್ತುರಂ) ಹೊರಡಿಸುವ ಭರವಸೆಯನ್ನು ನೀಡಿದ್ದ. ಅವರು ತಮ್ಮ ಪ್ರದೇಶದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಮೊಕದ್ದಮೆಗಳನ್ನು ಚಲಾಯಿಸ ಬಹುದೆಂದು ಅವರಿಗೆ ರಾಜನು ಕ್ರಿ. ಶ. 1648ರಲ್ಲಿ 'ಸಂಕೇತಂ' ಎಂಬ ಅಧಿಕಾರವನ್ನು ನೀಡಿದ್ದ.

ಫ್ರಾನ್ಸಿಸ್ಕೋ ಪೈರಾದಾ ದಿಲಾವಲ್ ಎಂಬ ಓರ್ವ ಫ್ರೆಂಚ್ ಪ್ರವಾಸಿಯು ಅವರನ್ನು ಕುರಿತು ಹೀಗೆ ಹೇಳುತ್ತಾನೆ. "ನಾನು ಕ್ಯಾಲಿಕಟ್‌ನಲ್ಲಿ ಈ ಬ್ರಾಹ್ಮಣರನ್ನು ಭೇಟಿಮಾಡಿದ್ದೆ. ಅವರು ತಮ್ಮೊಳಗೇ ಮಾತನಾಡುತ್ತಿರುವಾಗ ಹೀಗೆ ಹೇಳುತ್ತಿದ್ದರು. 'ನಾವು ಗೋವೆಯಿಂದ ಬಂದವರು. ಗೋವೆಯನ್ನು ಸ್ವಾಧೀನಪಡಿಸಿಕೊಂಡ ಪೋರ್ಚುಗೀಸರನ್ನು ನಮ್ಮ ಘೋರ ಶತ್ರುಗಳೆಂದು ಭಾವಿಸುತ್ತೇವೆ.' ಸ್ವಾಭಿಮಾನೀ ಬ್ರಾಹ್ಮಣರು ಪೋರ್ಚುಗೀಸ್ ಆಡಳಿತದಲ್ಲಿರಲು ಇಷ್ಟಪಡಲಿಲ್ಲ. ಏಕೆಂದರೆ, ಪೋರ್ಚುಗೀಸರು ಅವರೊಡನೆ ನ್ಯಾಯಸಮ್ಮತ ಅಲ್ಲದ ರೀತಿಯಲ್ಲಿ ವ್ಯವಹರಿಸಿ, ಕಸಕ್ಕಿಂತ ಕೀಳಾಗಿ ಕಾಣುತ್ತಾರೆ. ಆದ್ದರಿಂದ ಅವರಲ್ಲಿ ಅನೇಕರು ಕ್ಯಾಲಿಕಟ್ ಕಡೆ ವಲಸೆ ಬಂದಿದ್ದಾರೆ. ಅವರು ಇಲ್ಲಿ ಸ್ವತಂತ್ರ ನಾಗರಿಕರಂತೆ ಸುಖವಾಗಿ ಜೀವಿಸುತ್ತಿದ್ದಾರೆ."

ಅರಬ ಮತ್ತು ಯಹೂದಿಗಳಿಂದ ಸ್ಥಳೀಯ ವ್ಯಾಪಾರವನ್ನು ಕೈವಶ ಮಾಡಿಕೊಂಡ ಸಾರಸ್ವತರು ತಮ್ಮ ನಿಷ್ಕಪಟ ವ್ಯವಹಾರ ಮತ್ತು ರಾಜಾಶ್ರಯದ ನಿಮಿತ್ತ ಸಮೃದ್ಧರಾದರು. ಅವರೊಡನೆ ಪೋರ್ಚುಗೀಸರು ಕೂಡ ವ್ಯಾಪಾರ ಮಾಡುವಂತೆ, ಅವರ ಸಾಮಾಜಿಕ ವರ್ಚಸ್ಸು ಪ್ರೋತ್ಸಾಹಿಸಿತು. ಇಂಥ ಸಂದರ್ಭದಲ್ಲಿ ಅವರಿಗೆ ಪೋರ್ಚುಗೀಸ್ ಭಾಷೆಯ ಜ್ಞಾನವು ಸಹಾಯಕವಾಯಿತು. ಆದರೆ ಗೋವಾದ ಪೋರ್ಚುಗೀಸರ ಆಡಳಿತದ ಮೇಲಿನ ದ್ವೇಷವೇ ಅವರನ್ನು ಡಚ್ಚರ ನಿಕಟವರ್ತಿ ಆಗುವಂತೆ ಮಾಡಿತ್ತು. ಡಚ್ಚರು ಅನೇಕ ಸಾರಸ್ವತರನ್ನು ತಮ್ಮ ಪ್ರತಿನಿಧಿ ಮತ್ತು ದಲಾಲರನ್ನಾಗಿ ನೇಮಿಸಿಕೊಂಡಿತು. 'Malbar and the Dutch' ಎಂಬ ಕೃತಿಯಲ್ಲಿ ಸರದಾರ ಎಂ. ಪಣಿಕ್ಕರ್‌ರು ಹೀಗೆ ಹೇಳುತ್ತಾರೆ.

"ಮೂರ್ ಜನಾಂಗದ ವ್ಯಾಪಾರೀ ಕಂಪನಿಯು ಕೋಚೀನ್‌ದಲ್ಲಿ ಬಹುಮಟ್ಟಿಗೆ ಅಸ್ತಿತ್ವದಲ್ಲಿಯೇ ಇಲ್ಲ. ಅದರ ಬದಲಿಗೆ, ಪೋರ್ಚುಗೀಸರ ಪ್ರತಿನಿಧಿಗಳಾಗಿ ದುಡಿಯುತ್ತಿದ್ದ ಕೊಂಕಣಪಟ್ಟಿಯ ಕನ್ನಡ ಜಿಲ್ಲೆಗಳ ಹಿಂದೂ ಸಮುದಾಯುದ ಕೊಂಕಣೀ ಭಾಷಿಕರಾದ ಕ್ಯಾನರೀಸರು (ಕನ್ನಡಿಗರು) ಯುರೋಪದ ಮಾಲಿಕರನ್ನೇ ಪೂರ್ತಿಯಾಗಿ ಅವಲಂಬಿಸಿದ್ದರು. ಎಷ್ಟರ ಮಟ್ಟಿಗೆ ಅಂದರೆ, ಪೋರ್ಚುಗೀಸರು ಕೋಚೀನ ಬಿಟ್ಟುಹೋದ ಬಳಿಕ ಅವರು ಅದೇರೀತಿ ಡಚ್ಚರಿಗೂ ಉಪಯುಕ್ತ ಉಪಕರಣವಾದರು." ಡಾ. ಟಿ. ಆಯ್. ಪೂಮರ್ಸ್ 'Survey of the rise of Dutch power in Malbar' ಎಂಬ ಕೃತಿಯಲ್ಲಿ ಹೀಗೆ ಹೇಳುತ್ತಾರೆ.

"ವ್ಯಾಪಾರ, ಪಾತ್ರೆ-ಪಡಗ, ವಸತಿಗೃಹ ಮತ್ತು ಆಚಾರ-ವ್ಯವಹಾರದ ಪದ್ಧತಿಯಲ್ಲಿ ಕ್ಯಾನರೀನ್‌ಸರು (Canarins) ಮತ್ತು ಯಹೂದೀ ಜನಾಂಗಗಳ ನಡುವೆ ಅಲ್ಪ-ಸ್ವಲ್ಪ ವ್ಯತ್ಯಾಸ ಕಂಡುಬರುತ್ತದೆ. ಅವರಲ್ಲಿ ಅನೇಕರು ಕೃಷಿ ವ್ಯವಸಾಯದಲ್ಲಿ ನಿರತರು. ಇನ್ನು ಕೆಲವು ಕ್ಯಾನರೀಸ್ (ಕೊಂಕಣೀ) ವ್ಯಾಪಾರಸ್ಥರು ವಿದೇಶೀ ಹಾಗೂ ಸ್ಥಳೀಯ ವ್ಯಾಪಾರಿಗಳೊಡನೆ ವ್ಯವಹರಿಸುತ್ತಿರುವ ಗಣ್ಯ ಸಗಟು ವ್ಯಾಪಾರಿಗಳು. ಉಳಿದವರು ದನ ಕರುಗಳನ್ನು ಹೊರತುಪಡಿಸಿ, ಮನೆ ಬಳಕೆಯ ಎಲ್ಲ ತರಹದ ಸರಕು ಸಾಮಗ್ರಿಗಳನ್ನು ಪೂರೈಸುವ ಚಿಲ್ಲರೆ ವ್ಯಾಪಾರಿಗಳು. ಕೆಲವರು ನಾಣ್ಯ ವಿನಿಮಯಗಾರರು. ಪ್ರತಿಯೊಬ್ಬನಿಗೂ ಯಾವುದಾದರೂ ಒಂದು ವ್ಯಾಪಾರವಿತ್ತು. ಆರೇಳು ವರ್ಷದ ಹುಡುಗರಿಗೂ ವ್ಯಾಪಾರದ ಅನುಭವವನ್ನು ನೀಡಲಾಗುತ್ತಿತ್ತು." ಅರಬ ಮತ್ತು ಪೋರ್ಚುಗೀಸರ ಕಡೆಗೆ ಸಾರಸ್ವತರ ವಿರೋಧ ವೈಷಮ್ಯದ ಪೂರ್ತಿ ಲಾಭವನ್ನು ಡಚ್ಚರು ಪಡೆದುಬಿಟ್ಟರು. ಡಚ್ಚರು ಅಮರಾವತಿ ಬಂದರ ಮತ್ತು ಮಟ್ಟಂಚೇರಿಯಿಂದ ಆಮದು-ರಪ್ತು ಸುಂಕವನ್ನು (Excise Duty) ವಸೂಲಿ ಮಾಡಲು ಅವರನ್ನು ನೇಮಿಸಿದ್ದರು. ಸ್ಥಳೀಯ ದೊರೆಗಳು ಅವರ ಮೇಲೆ ಅನ್ಯಾಯವಾಗಿ ನಿಯಂತ್ರಣವನ್ನು ಹೇರದಂತೆ ಅವರು ದೊರೆಗಳ ಮನವೊಲಿಸಿದ್ದರು. ಪ್ರೊ. ಎ. ದಾಸಗುಪ್ತರು ತಮ್ಮ 'Asian Trade' ಎಂಬ ಕೃತಿಯಲ್ಲಿ ಡಚ್ಚರೊಡನೆ ವ್ಯಾಪಾರೀ ಸರಕುಗಳಲ್ಲಿ ಏಕಸ್ವಾಮ್ಯವನ್ನು ಹೊಂದಿದ ಓರ್ವ ಪ್ರತಿಷ್ಠಿತ ಸಾರಸ್ವತ ವ್ಯಾಪಾರಸ್ಥನಾದ ಬಾಬಣ ಪ್ರಭು ಕುರಿತು ಹೀಗೆ ಹೇಳುತ್ತಾರೆ.

"ಮಲಬಾರದ ನಿಯಂತ್ರಣಾಧಿಕಾರಿಗಳೂ ಅವನ ಸಂದಾಯ ಸಕಾಲಿಕ ಆಗಿರದಿದ್ದರೂ ಅವನೊಡನೆ (ಬಾಬಣ ಪ್ರಭು) ನಯವಾಗಿ ವರ್ತಿಸುತ್ತಿದ್ದರು.

ಝೂಮೊರಿನ್ ದೊರೆ ಮತ್ತು ಡಚ್ಚರ ನಡುವೆ ಯುದ್ಧವಾಗುವಂತೆ ಮಾಡಲು ಅವನು ಶಕ್ತನಾಗಿದ್ದನೆಂದು ಅವನ ರಾಜಕೀಯ ಪ್ರಭಾವದ ಕುರಿತು ಜನಾಭಿಪ್ರಾಯವಿತ್ತು."

ಬಾಬಣ ಪ್ರಭು ಮತ್ತು ಕಾಲ್ಗಾ ಪ್ರಭು ಈರ್ವರೂ ಸಾಕಷ್ಟು ಅಭಿವೃದ್ಧಿಯನ್ನು ಹೊಂದಿದ್ದರು. ಡಚ್ಚರಿಂದ ತಮಗೆ ಸಲ್ಲಬೇಕಾದ ರುಸುಮು (Dues) ಸಿಗದಿದ್ದಾಗ ಅವರು ಕ್ರಿ. ಶ. 1752ರಲ್ಲಿ ಮಲಬಾರ ಪರಿಷತ್ತಿನಲ್ಲಿ ತಮ್ಮ ಪ್ರತಿನಿಧಿಯಾಗಿ ಡೆವಿಡ್ ರಬ್ಬಿಯನ್ನು ನೇಮಿಸಿದ್ದರು. ಬಾಬಣ ಪ್ರಭುವಿನ ಚಾಣಾಕ್ಷತೆಯಿಂದ ಪ್ರಭಾವಿತನಾದ ರಬ್ಬಿಯು ತನ್ನ ಮಗ ಎಜಕೇಲನನ್ನು ವ್ಯಾಪಾರ ಉದ್ಯಮದ ತರಬೇತಿ ಪಡೆಯಲೋಸುಗ ಬಾಬಣ ಪ್ರಭುವಿನ ಸುಪರ್ದಿಯಲ್ಲಿಟ್ಟನು. ಈ ಕ್ರಮವು ಸ್ವಲ್ಪ ಸಮಯದಲ್ಲೇ ಬಾಬಣ ಪ್ರಭುವನ್ನು ಪಶ್ಚಾತ್ತಾಪದ ಕೂಪಕ್ಕೆ ತಳ್ಳಿತು. ಚಾಣಾಕ್ಷ ಸಾರಸ್ವತನಿಗಿಂತ ಯಹೂದಿ ಹೆಚ್ಚು ವಂಚಕನಾಗಿದ್ದ. ಅವನು ಯಹೂದಿಗೆ ಉಗ್ರಾಣವನ್ನು ಒತ್ತೆ ಇಡುವಂತೆ ಆಗ್ರಹ ಪಡಿಸಿದ. ಹೀಗಿದ್ದರೂ ವ್ಯಾಪಾರೀ ವಲಯದಲ್ಲಿ ಬಾಬಣ ಪ್ರಭುವಿನ ಮಹತ್ವ ವನ್ನರಿತ ಡಚ್ಚರು ಬಾಬಣನಿಗೆ ಉಗ್ರಾಣವನ್ನು ಮರಳಿ ಕೊಡುವಂತೆ ಎಜಕೇಲನ ಮೇಲೆ ಒತ್ತಡ ತಂದರು. ಎಜಕೇಲನು ಸತ್ತಬಳಿಕ ಅವನ ವಂಶಜರು ಕಾಲ್ಗಾ ಪ್ರಭುವಿನ ವಿರುದ್ಧ ನ್ಯಾಯಾಲಯದಲ್ಲಿ ದಾವೆ ಹೂಡಿದರು. ಪ್ರಭುವಿನ ಏಳ್ಗೆಯನ್ನು ಸಹಿಸಲಾರದೆ ಅಸೂಯೆಯಿಂದ ಅನೇಕ ಸಾರಸ್ವತರು ಯಹೂದೀ ಪಕ್ಷ ವಹಿಸಿದರು. ಇಂಥ ಕಪಟ ನಾಟಕದಿಂದ ರೋಸಿಹೋದ ಕಾಲ್ಗಾ ಪ್ರಭು ಕ್ರೋಧಾವಿಷ್ಟನಾದ. ಯಹೂದಿಗಳ ಬಗ್ಗೆ ಮೃದುಹೃದಯಿಯಾದ ಕೋಚೀನದ ದೊರೆಯ ವಿರುದ್ಧ ಹೋರಾಡಲು ಹೈದರ ಆಲಿಯನ್ನು ಪ್ರೋತ್ಸಾಹಿಸಿದ. ಆದರೆ ಅವನ ಪ್ರಯತ್ನ ವಿಫಲವಾಯಿತು. ಅವನ ಎಲ್ಲ ಆಸ್ತಿ ಹಾಗೂ ವಾಲುಕೇಶ್ವರ ಮಂದಿರವನ್ನೂ ದೊರೆ ಜಪ್ತಿ ಮಾಡಿದ. ಇದರ ಪರಿಣಾಮವಾಗಿ, ಅವನು ತನ್ನ ಮಕ್ಕಳೊಡನೆ ದಕ್ಷಿಣ ಆಫ್ರಿಕಾಕ್ಕೆ ಗಡೀಪಾರಾದ. ಆದರೂ, ಮಂದಿರವನ್ನು ನಗರೇಶನು ಬಿಡಿಸಿಕೊಂಡು ದೊರೆಗೆ ಒಪ್ಪಿಸಿಕೊಟ್ಟ. ದೊರೆ ಆ ಮಂದಿರವನ್ನು ತಿರುಮಲ ದೇವಸ್ವಂ ಆಡಳಿತ ಮಂಡಳಿಗೆ ವಹಿಸಿಕೊಟ್ಟ.

ರಾಜಕೀಯ ಕ್ಷೇತ್ರದಲ್ಲೂ ಸಾರಸ್ವತರು ಮಹತ್ವಪೂರ್ಣ ಪಾತ್ರವನ್ನು ವಹಿಸಿಕೊಂಡು ಬಂದಿದ್ದರು. ದೊರೆಗಳಿಗೆ ಮೋಜಿಗಾಗಿ ಅಥವಾ ಯುದ್ಧಕ್ಕಾಗಿ ಹಣ ಬೇಕಿರುತ್ತಿತ್ತು. ಸಾರಸ್ವತರ ಬಳಿ ಹೇರಳ ಹಣವಿರುತ್ತಿತ್ತು. ಆದರೆ ಸಾಮಾನ್ಯವಾಗಿ, ದೊರೆಗಳಿಗೆ ನೆನಪಿರುತ್ತಿದ್ದಿಲ್ಲ. ನೆನಪಿಗೆ ತಂದರೂ

ಇಷ್ಟಪಡುತ್ತಿರಲಿಲ್ಲ. ಪೊಯಲಕರ ನಾಯ್ಕ, ಬಾಬಾ ಪಟ್ಟೇರ, ವಾಮನ ನಾಯ್ಕ, ಪರಿಂಬಳ ನಾಯ್ಕ, ದೇವರಸ ನಾಯ್ಕ, ವಿಟ್ಠಲ ನಾಯ್ಕ ಇವರೆಲ್ಲರೂ ದೊರೆ ಸಾಲವನ್ನು ತೀರಿಸಲಿಲ್ಲವೆಂದು ಅವನ ವೈಫಲ್ಯದ ಬಗ್ಗೆ ಹೇಗ್‌ನಲ್ಲಿರುವ ಡಚ್ ಕೋರ್ಟಿನಲ್ಲಿ ದೂರು ಸಲ್ಲಿಸಿದ್ದರು. ಕೋಚೀನದ ದೊರೆ ರಾಜಾರಾಮ ವರ್ಮನು ಸಾರಸ್ವತರ ಈ ಉದ್ಧಟತನಕ್ಕೆ ಕೋಪೋದ್ರಿಕ್ತನಾದ. ಸಾರಸ್ವತರಿಗೆ ಸಾಕಷ್ಟು ಕಿರುಕುಳ ಕೊಟ್ಟ. ಕೆಲವರನ್ನು ಬಂಧಿಸಿ ಕಾರಾಗೃಹದಲ್ಲಿಟ್ಟ.

ಆದರೂ ತ್ರಾವಣಕೋರ್ ದೊರೆ ಮಾತ್ರ ಸಾರಸ್ವತರ ವಿಷಯದಲ್ಲಿ ತಗ್ಗಿ-ಬಗ್ಗಿ ನಡೆಯುತ್ತಿದ್ದ. ದೇವರಸ ಕಿಣಿ ಮತ್ತು ನಾಗೇಂದ್ರ ಪೈ ಇವರೀರ್ವರೂ ಅವನ ಅಚ್ಚುಮೆಚ್ಚಿನ ಬಂಡವಾಳಗಾರರಾಗಿದ್ದರು. ಅವನು ಆಗಾಗ್ಗೆ ಇವರೀರ್ವರ ಪರವಾಗಿ ಕೋಚೀನ ದೊರೆಗಳಿಗೆ ಮಧ್ಯವರ್ತಿಯಾಗಿ ಕೆಲಸ ಮಾಡಿದ. ಕೊನೆಗೂ ತನ್ನ ಪ್ರಯತ್ನದಲ್ಲಿ ಯಶಸ್ಸು ಕಾಣದೆ ಹೋದ. ಕ್ರಿ. ಶ. 1991ರಲ್ಲಿ ಸಾರಸ್ವತರು ಸಾಲದ ಮರುಪಾವತಿ ಮಾಡುವಂತೆ ಪಟ್ಟು ಹಿಡಿದು ಕುಳಿತಾಗ, ಕೋಚೀನ ದೊರೆ, ಅವರೆಲ್ಲರ ನಾಯಕತ್ವ ವಹಿಸಿದ. ದೇವರಸ ಕಿಣಿಯೊಂದಿಗೆ ಅನೇಕರ ಕೊಲೆ ಮಾಡಿ ಸೇಡು ತೀರಿಸಿಕೊಂಡ. ಈ ಘಟನೆ ಸಾರಸ್ವತ ಸಮುದಾಯದ ಮನಸ್ಸಿನಲ್ಲಿ ಭಾರೀ ಆತಂಕವನ್ನು ಹುಟ್ಟಿಸಿದ್ದರಿಂದ ಅವರು ತ್ರಾವಣಕೋರ ಸಂಸ್ಥಾನಕ್ಕೆ ವಲಸೆ ಬಂದರು. ಬರುವಾಗ ತಮ್ಮೊಂದಿಗೆ ಅಲೆಪ್ಪಿಯಲ್ಲಿ ಪ್ರತಿಷ್ಠಾಪನೆಗೊಳ್ಳಬೇಕಾದ ತಿರುಮಲ ದೇವರ ವಿಗ್ರಹವನ್ನೂ ತಂದರು. ದೇವರ ವಿಗ್ರಹದ ಸ್ಥಳಾಂತರದಿಂದ ತ್ರಾವಣಕೋರದ ದೊರೆ ಶಕಟನ್ ತಾಂಪುರನ್ನನು ಆನಂದತುಂದಿಲನಾದ. ತನ್ನ ಪ್ರದೇಶದಲ್ಲಿ ಸಾರಸ್ವತರ ವಾಸ್ತವ್ಯ ವಾಗುವುದರಿಂದ ತನ್ನ ಸಾಮ್ರಾಜ್ಯದ ಆರ್ಥಿಕ ಚಟುವಟಿಕೆಗಳಿಗೂ, ದೇಶದ ಅಭ್ಯುದಯಕ್ಕೂ ಚಾಲನೆ ಸಿಗುವುದೆಂದು ಭಾವಿಸಿದ. ಬಂದರ ಪ್ರದೇಶದಲ್ಲಿ ಉಗ್ರಾಣಗಳ ನಿರ್ಮಾಣ ಆದದ್ದೇ ತಡ, ಅದು ಅಲೆಪ್ಪಿಯನ್ನು ವ್ಯಾಪಾರ ವಾಣಿಜ್ಯೋದ್ಯಮದ ಉತ್ಕೃಷ್ಟ ಕೇಂದ್ರವನ್ನಾಗಿ ಮಾಡಿತು. ಇದಕ್ಕೆಲ್ಲ ತಿರುಮಲ ದೇವರೇ ಕಾರಣ ಎಂಬ ಪ್ರತೀತಿ ಜನಜನಿತವಾಯಿತು. ಆದಕಾರಣ, ದೇವರ ವಿಗ್ರಹದ ಸ್ಥಳಾಂತರವು ಅನೇಕ ವರ್ಷಗಳ ತನಕ ತ್ರಾವಣಕೋರ ಮತ್ತು ಕೋಚೀನದ ದೊರೆಗಳ ನಡುವಿನ ವಿವಾದಗ್ರಸ್ತ ವಿಷಯವಾಗಿ ಪರಿಣಮಿಸಿತ್ತು. ಆದರೆ, ಕೋಚೀನದಲ್ಲಿ ದೇವರ ಪುನಃಸ್ಥಾಪನೆ ಮಾಡುವಂತೆ ಸಾರಸ್ವತ ಸಮುದಾಯದವರ ಮನವೊಲಿಸುವುದರ ಮೂಲಕ ಕ್ರಿ. ಶ. 1859ರಲ್ಲಿ ಈ ವಿವಾದಕ್ಕೆ ಮಂಗಳ ಹಾಡಲಾಯಿತು.

ಭಾರತದ ಇತರ ಪ್ರದೇಶಗಳಲ್ಲಿ ಆಂಗ್ಲರ ವಸತಿ ಹೆಚ್ಚುತ್ತ ಹೋದುದರಿಂದ ಡಚ್ಚರು ತಮ್ಮ ಆಸಕ್ತಿಯನ್ನು ಕಳೆದುಕೊಂಡರು. ಭಾರತದಲ್ಲಿ ಅವರ ರಾಜಕೀಯ ಪ್ರಭಾವವೂ ಕುಂಠಿತವಾಗುತ್ತ ಹೋಗಿತ್ತು. ಇನ್ನು ಪೋರ್ಚುಗೀಸರಿಗೆ ಗೋವಾ ಎಂದರೆ ಬಂಗಾರದ ಮೊಟ್ಟೆ ಇಡುವ ಬಾತುಕೋಳಿ (GOLDEN GOOSE). ಆದ್ದರಿಂದ ಅವರು ಕೂಡ ತಮ್ಮ ಲಕ್ಷ್ಯವನ್ನು ಗೋವಾದ ಮೇಲೆಯೇ ಕೇಂದ್ರೀಕರಿಸುವುದು ಪ್ರಶಸ್ತವೆಂದು ಭಾವಿಸಿ, ಮಲಬಾರ ಬಿಟ್ಟು ಹೋದರು. ಕ್ರಿ.ಶ. 1814ರ ಸಮಯಕ್ಕೆ ಅವರು ಬಿಟ್ಟ ಸ್ಥಳವನ್ನು ತುಂಬುವುದು ಆಂಗ್ಲರಿಗೆ ಸುಲಭವಾಯಿತು. ಕೋಚೀನದ ದೊರೆ ಅವರ ಆಧಿಪತ್ಯವನ್ನು ಮನ್ನಿಸಿದ. ಸಾರಸ್ವತರು ಕೂಡ ಬದಲಾದ ಕಾಲಮಾನಕ್ಕೆ ತಕ್ಕಂತೆ ತಾವಾಗಿ ಹೊಂದಿಕೊಂಡರು. ಕೇರಳದ ಪುರಾತತ್ತ್ವ ಇಲಾಖೆಯ ದಾಖಲೆಯಲ್ಲಿ ಸಾರಸ್ವತರ ಕುರಿತು ಹೀಗೊಂದು ಉಲ್ಲೇಖವಿದೆ.

"..... ತಮ್ಮದೇ ಆದ ಭಾಷೆ, ಸಂಪ್ರದಾಯ, ಸಂಸ್ಕೃತಿಯಲ್ಲಿ ಉತ್ತಮವಾದುದನ್ನು ಸುರಕ್ಷಿತವಾಗಿ ಕಾಪಾಡಿಕೊಂಡು ಬಂದ ಸಾರಸ್ವತರ ಜೀವನ ಮತ್ತು ಸಂಸ್ಕಾರವು ಕೇರಳದ ಸಾಂಸ್ಕೃತಿಕ ಆದರ್ಶದ ವೈವಿಧ್ಯಮಯ ಕೃತಿಗೆ ಅಪರಿಮಿತ ಕೊಡುಗೆಯನ್ನು ನೀಡಿದೆ. ....ಅವರು ಅಂದಿನಿಂದಲೂ ವ್ಯಾಪಾರ – ವಾಣಿಜ್ಯೋದ್ಯಮ ಅಥವಾ ಶಿಕ್ಷಣ, ಸಾಹಿತ್ಯ, ಕಲೆ ಹಾಗೂ ಕೇರಳದ ಸಾಂಸ್ಕೃತಿಕ ರಂಗಕ್ಕೆ ಸಂಬಂಧಿಸಿ ಜೀವನದ ಪ್ರತಿಯೊಂದು ಪಥದಲ್ಲಿ ಮಹತ್ವದ ಪಾತ್ರ ವಹಿಸುತ್ತ ಬಂದಿರುವರು."

ಬ್ರಿಟಿಷರು ಮಲಬಾರ ತೀರಕ್ಕೆ ಬಂದ ಬಳಿಕ, ಸಾರಸ್ವತರು ಆಂಗ್ಲ ಭಾಷೆಯಲ್ಲಿ ಶಿಕ್ಷಣ ಪಡೆಯುವುದರಲ್ಲಿ ಮುಂಚೂಣಿಯಲ್ಲಿದ್ದರು. ಇದರಿಂದ ಅವರಿಗೆ ಮಹತ್ವಪೂರ್ಣ ಸ್ಥಾನ–ಮಾನವನ್ನು ಹೊಂದಲು ಸಾಧ್ಯವಾಯಿತು. ಅನೇಕರು ತಮ್ಮ ವೃತ್ತಿ ವಣಿಕ್ ವೃತ್ತಿಯಾದರೂ ಮಲೆಯಾಳೀ ಸಾಹಿತ್ಯ, ಸಂಗೀತ, ಕಲೆ ಮತ್ತು ಸಂಸ್ಕೃತಿಗೆ ತಮ್ಮ ವಿಶೇಷ ದೇಣಿಗೆಯನ್ನು ಕೊಟ್ಟಿರುವರು. ಹೀಗೆ ಸೇವೆಯನ್ನು ಸಲ್ಲಿಸುತ್ತ ಅವರು ಕೇರಳದ ಬೌದ್ಧಿಕ ಚಿತ್ರಪಟದ ಒಂದು ಪ್ರಮುಖ ಭಾಗವಾಗಿ ತಮ್ಮನ್ನು ತೊಡಗಿಸಿಕೊಂಡರು.

ದಕ್ಷಿಣ ಕನ್ನಡ ಜಿಲ್ಲೆಯ ದಕ್ಷಿಣ ಭಾಗದ ಸಾರಸ್ವತರ ಮಾರ್ಗದರ್ಶನವು ಪ್ರಮುಖವಾಗಿ ಕಾಶೀಮಠದ ಅಧೀನದಲ್ಲಿತ್ತು. ಸಂಪ್ರದಾಯಕ್ಕೆ ಸಂಬಂಧಿಸಿ ಹೇಳುವುದಾದರೆ, ಕಾಶೀಮಠವು ಗೋಕರ್ಣ ಪರ್ತಗಾಳೀ ಮಠಕ್ಕೆ ತೀರ ಭಿನ್ನ ಅಲ್ಲದಿದ್ದರೂ, ಅವರು ಕುಂಭಕೋಣಂ ಮಾಧ್ವ ಸಂಪ್ರದಾಯಕ್ಕೆ ನಿಕಟವಾಗಿದ್ದರು.

ಕಾಶೀಮಠದ ಪ್ರಧಾನಪೀಠವು ಕಾಶೀ ಅಥವಾ ವಾರಣಾಸಿಯಲ್ಲಿದೆ ಎಂಬುದಂತೂ ಸುಸ್ಪಷ್ಟ. ಇಲ್ಲಿ ನಿರ್ಮಾಣವಾದ ಮಂದಿರದಲ್ಲಿ ಬಿಂದುಮಾಧವ, ನರಸಿಂಹ ಮತ್ತು ಗೋಪಾಲಕೃಷ್ಣನ ವಿಗ್ರಹಗಳು ಪ್ರತಿಷ್ಠಾಪಿಸಲ್ಪಟ್ಟವು. ಈ ಮಠದ ಶ್ರೀ ಭುವನೇಂದ್ರತೀರ್ಥ ಸ್ವಾಮೀಜಿ ಮತ್ತು ವರದೇಂದ್ರತೀರ್ಥ ಸ್ವಾಮೀಜಿಯವರು ಪ್ರಖ್ಯಾತರಾಗಿದ್ದರು. ಈ ಮಠದ ಒಂದು ಮಂದಿರವು ಮುಂಬಯಿಯ ವಾಲುಕೇಶ್ವರದಲ್ಲಿದೆ.

ಬ್ರಿಟಿಷರ ಆಡಳಿತದಲ್ಲಿದ್ದ ಮತ್ತು ತದನಂತರದ ಸಾರಸ್ವತರು

ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆದ ಆಂಗ್ಲರ ಪ್ರಭುತ್ವವು ಡಚ್ಚರನ್ನು ಭಾರತದಿಂದ ಸಂಪೂರ್ಣವಾಗಿ ಪ್ರತ್ಯೇಕಗೊಳಿಸಿತು. ಮತ್ತು ಪೋರ್ಚುಗೀಸರ ಪ್ರಭಾವವು ಗೋವಾ ದಮನ್-ದೀವ್‌ಗಳಿಗೆ ಸೀಮಿತವಾಗಿ ಉಳಿಯಿತು. ಎರವಲು ತಂದ ತುರಾಯಿಯನ್ನು ಸಿಕ್ಕಿಸಿಕೊಂಡ ಗೋವಾದ ಕ್ರಿಶ್ಚಿಯನ್ನರು ದೀರ್ಘಕಾಲದ ತನಕ ಹಾಯಾಗಿ ಸುಖಲೋಲುಪ್ತಿಯಲ್ಲಿ ಇದ್ದರು. ಅವರ ಮಕ್ಕಳು ಜೀವನೋಪಾಯಕ್ಕಾಗಿ ಪ್ರಪಂಚದಾದ್ಯಂತ ಪಸರಿಸಿಕೊಂಡರೂ. ಭಾರತದ ಮುಖ್ಯವಾಹಿನಿಯಿಂದ ವಿಚ್ಛೇದಿತರಾಗಿ ಹೆಚ್ಚು ಹೆಚ್ಚು ದೂರ ಸರಿದರು. ಹಿಂದೂಗಳು ತಾತ್ಕಾಲಿಕವಾಗಿ ತಮ್ಮಲ್ಲಿರುವ ಅಂತಃಸತ್ವವನ್ನು ಮರೆತರು. ಅವರು ಇತರ ಪಂಗಡಗಳಲ್ಲಿರುವ ನಿಸ್ತೇಜಗೊಳಿಸುವ ಪ್ರಭಾವಕ್ಕೆ ಮರುಳಾದರು. ಇದರಿಂದ ಅವರ ಸಾಹಿತ್ಯ- ಸಂಗೀತ, ಕಲಾಕ್ಷಿತಿಜವು ದಿಗಂತ ವಿಸ್ತಾರವನ್ನು ಹೊಂದಲು ಅವರಿಗೆ ಮುಕ್ತ ಅವಕಾಶವು ದೊರೆಯಿತು. ಇಂತಹ ಅವಕಾಶದಿಂದ, ತಾವು ಅತ್ಯಂತ ಸಹನಶೀಲರು, ಪುರೋಗಾಮಿಗಳು ಮತ್ತು ವಿಶ್ವಮಾನವರು ಎಂದು ಮೆರೆಯುವಂತೆ ಅವರು ಪ್ರಚೋದಿತರಾದರು. ಅವರಲ್ಲಿ ಅನೇಕರು ಸಾರಸ್ವತರ ಸಾರ ಹಾಗೂ ಸತ್ವ ಎಂದು ಪ್ರತಿನಿಧಿಸುವ ಖ್ಯಾತ ವ್ಯಕ್ತಿಗಳು ದೇಶದಲ್ಲಿ ಜನನಾಯಕರಾಗಿ ಮೆರೆದರೂ, ಅಂತಿಮ ಘಟ್ಟದಲ್ಲಿ ಸಾರಸ್ವತ ಸಮಾಜ ಅನಿರ್ಬಂಧಿತ ಸಮಾಜವಾಯಿತು.

ಸಾರಸ್ವತರು ಬಹ್ವಂಶ ಹಿಬ್ರೂ (ಯಹೂದೀ) ಜನಾಂಗವನ್ನು ನೆನಪಿಸಿಕೊಡುತ್ತಾರೆ. ಪರಮಾತ್ಮನು ಸಾರಸ್ವತರಿಗೆ ಮಂಗಲಕರ ಪವಿತ್ರ ದೇವಭೂಮಿ ಗೋಮಂತಕವನ್ನು ಅನುಗ್ರಹಿಸಿದ. ಸ್ಕಂದ ಪುರಾಣದಲ್ಲಿ ಆ ದೇಶದ ಕುರಿತು ವರ್ಣನೆ ಹೀಗಿದೆ. "ಉತ್ತಮಂ, ವ್ಯವಸ್ಥಿತಂ, ಕ್ಷೇತ್ರಂ ಜವಾಧಿಕಂ (ಧಾನ್ಯ ಸಂಪದ್ಭರಿತ), ಸರ್ವ ತೀರ್ಥಾನ್ವಿತಂ (ಸಕಲ ಪುಣ್ಯ ನದಿಗಳಿಂದ ಕೂಡಿರುವ), ವಿಮಲಂ ನಿರ್ಮಲಂ ತೀರ್ಥಮುತ್ತಮಂ (ಪುಣ್ಯಕ್ಷೇತ್ರ ಸಂಪನ್ನ).

ಪರಮಾತ್ಮನು ಹಿಬ್ರೂ ಜನಾಂಗಕ್ಕೆ ಹಾಲು-ಜೇನಿನ ಹೊಳೆ ಹರಿಯುವ ಇಸ್ರೇಲ್ ಪ್ರದೇಶವನ್ನು ದಯಪಾಲಿಸಿದ. ವಿಲ್ ಡ್ಯೂರಾಂಟನು 'Story of Philosophy' ಎಂಬ ಕೃತಿಯಲ್ಲಿ ಹಿಬ್ರೂ ಜನಾಂಗದ ಕುರಿತು ಹೀಗೆ ಹೇಳುತ್ತಾನೆ.

ಹಿಬ್ರೂ ಜನಾಂಗವು ಮಾತೃಭೂಮಿ ಇಸ್ರೇಲಿನಿಂದ ಓಡಿಸಲ್ಪಟ್ಟಿತು. ಆದರೆ ಅವರಿಗಿಂತ ವಿಭಿನ್ನ ರೀತಿಯಲ್ಲಿ ದೇಶಾಂತರ ಹೊರಟವರು ಸಾರಸ್ವತರು. ಅವರು ಉದ್ಯಮದ ಅನ್ವೇಷಣೆಗಾಗಿ ಇಲ್ಲವೆ ಧಾರ್ಮಿಕ ಅತ್ಯಾಚಾರದ ನಿಮಿತ್ತ ಸ್ವದೇಶದಿಂದ ದೇಶಾಂತರ ಪರ್ಯಟನ ಕೈಗೊಂಡರು. ಯಹೂದಿಗಳು ಚದರಿ ಹೋದಂದಿನಿಂದ ಅವರ ಕಥೆ ಐರೋಪ್ಯ ಇತಿಹಾಸದ ಒಂದು ಪೌರಾಣಿಕ ಮಹಾಕಾವ್ಯದ ಕಥಾವಸ್ತುವಾಗಿದೆ. ಕ್ರಿಸ್ತಶಕ 70ರಲ್ಲಿ, ರೋಮನ್ನರು ಯಹೂದಿಗಳ ಸ್ವದೇಶವಾದ ಇಸ್ರೇಲಿನ ಜೆರುಸಲೇಮನ್ನು ಸ್ವಾಧೀನಪಡಿಸಿಕೊಂಡು ಅಲ್ಲಿಂದ ಯಹೂದಿಗಳನ್ನು ಓಡಿಸಿದರು. ಅವರು ವ್ಯಾಪಾರೋದ್ಯಮದ ಅನ್ವೇಷಣೆಗಾಗಿ ಅಲ್ಲಿಂದ ಪಲಾಯನ ಮಾಡಿ, ದೇಶಾಂತರ ಹೊರಟರು. ಜಗತ್ತಿನ ತುಂಬ ಖಂಡ-ಖಂಡಾಂತರಗಳಲ್ಲಿ ಪಸರಿಸಿಕೊಂಡರು. ಆದರೆ ಯಹೂದಿಗಳು ತಮ್ಮದೇ ಧರ್ಮಗ್ರಂಥ (Old Testament) ದಿಂದ ಹಾಗೂ ತಮ್ಮದೇ ಪುಣ್ಯಸ್ಮೃತಿಯಿಂದ ಹುಟ್ಟಿಕೊಂಡಿರುವ ಕ್ರೈಸ್ತ ಹಾಗೂ ಇಸ್ಲಾಂದಂಥ ಮಹಾನ್ ಧರ್ಮಗಳ ನಿಷ್ಠಾವಂತ ಅನುಯಾಯಿಗಳಿಂದಲೇ ಹಿಂಸೆಗೊಳಗಾದರು; ಸಾಮೂಹಿಕ ಹತ್ಯೆಗೊಳಗಾದರು. ಊಳಿಗಮಾನ್ಯ ಪದ್ಧತಿ ಇರಕೂಡದು, ಸ್ವಂತ ಭೂಮಿಯನ್ನು ಹೊಂದಬಾರದು, ವೃತ್ತಿ - ಸಂಘದಲ್ಲಿ ಯಾವುದೇ ಉದ್ಯಮವನ್ನು ಕೈಗೊಳ್ಳಬಾರದು, ಪಾಲ್ಗೊಳ್ಳಬಾರದು, ಇವೇ ಮುಂತಾದ ನಿಷೇಧಕ್ಕೊಳಗಾದರು. ಅವರನ್ನು ಕಿಕ್ಕಿರಿದ ಕೊಳೆಗೇರಿಯಲ್ಲೇ ಬಂಧಿಸಿಟ್ಟು, ಅವರ ವೈಯಕ್ತಿಕ ವೃತ್ತಿ ಹವ್ಯಾಸಗಳಿಗೆ ತಡೆಯೊಡ್ಡಿದ್ದರು. ಅವರು ಜನರಿಂದ ಹಲ್ಲೆ, ದೊರೆಗಳಿಂದ ಸುಲಿಗೆಗೆ ಒಳಗಾದರು. ತಮ್ಮ ಹಣ ಹಾಗೂ ವ್ಯಾಪಾರದಿಂದಲೇ ನಾಗರಿಕತೆಗೆ ಅನಿವಾರ್ಯವಾದ ನಗರ-ಪಟ್ಟಣಗಳನ್ನು ಕಟ್ಟಿದರೂ ಜಾತಿಯಿಂದ, ಚರ್ಚಿನ ಸಂಪರ್ಕದಿಂದ ಬಹಿಷ್ಕೃತರಾದರು. ಅಪಮಾನ-ಅಪಘಾತಕ್ಕೊಳಗಾದರು. ಯಾವುದೇ ಒಂದು ರಾಜಕೀಯ ವ್ಯವಸ್ಥೆಯಿಲ್ಲ, ಸಾಮಾಜಿಕ ಒಗ್ಗಟ್ಟಿಗೆ ಕಾನೂನಿನ ಪ್ರಚೋದನೆಯಿಲ್ಲ, ಎಲ್ಲರಿಗೂ ಸಾಮಾನ್ಯವಾದ ಒಂದು ಭಾಷೆಯಿಲ್ಲ. ಹೀಗಿದ್ದರೂ ಈ ಅದ್ಭುತ ಜನಾಂಗವು ತಮ್ಮ ದೇಹ ಮತ್ತು ಆತ್ಮವನ್ನು ಕಾಪಾಡಿಕೊಂಡು ಬಂದಿದೆ. ಜನಾಂಗೀಯ ಮತ್ತು ಸಾಂಸ್ಕೃತಿಕ ಸಮಗ್ರತೆಯನ್ನೂ, ತಮ್ಮ ಆಚಾರ-ವಿಚಾರ-

ಸಂಪ್ರದಾಯವನ್ನೂ ಅನನ್ಯ ಪ್ರೇಮಭಾವದಿಂದ ಸಂರಕ್ಷಿಸಿಕೊಂಡು ಬಂದಿದೆ. ಹಿಂದೆಂದೂ ಇಲ್ಲದಷ್ಟು ಬೃಹತ್ ಸಂಖ್ಯೆಯಲ್ಲಿ ಈ ಜನಾಂಗವು ಮತ್ತೆ ತಲೆ ಎತ್ತಿ ನಿಂತುಕೊಂಡಿದೆ. ಅದು ತನ್ನ ಅಸಾಧಾರಣ ಪ್ರತಿಭೆಗಳ ಕೊಡುಗೆಗಳ ಬಗ್ಗೆ ಪ್ರತಿಯೊಂದು ಕ್ಷೇತ್ರದಲ್ಲಿಯೂ ಪ್ರಖ್ಯಾತವಾಗಿದೆ. ಮತ್ತು ಎರಡು ಸಾವಿರ ವರ್ಷಗಳ ಅಲೆದಾಟದ ನಂತರ ಪ್ರಾಚೀನ ಮತ್ತು ಮರೆತುಹೋದ ತಮ್ಮ ಮಾತೃಭೂಮಿಯನ್ನು ವಿಜಯೋತ್ಸಾಹದೊಂದಿಗೆ ಮರಳಿ ಸಂಪಾದಿಸಿ ಕೊಂಡಿದೆ. ಈ ವೇದನೆಗಳ ವೈಭವ, ದೃಶ್ಯಗಳ ವೈವಿಧ್ಯ, ಕೊನೆಯಲ್ಲಿ ಸಂಭವಿಸಿದ ಭವ್ಯ ಹಾಗೂ ನ್ಯಾಯಸಮ್ಮತ ಸಿದ್ಧಿಯ ಎದುರಿನಲ್ಲಿ ಅದಾವ ನಾಟಕ ಸರಿದೂಗಬಲ್ಲದು? ಈ ವಾಸ್ತವಿಕ ವೀರ ಸಾಹಸ ಕಥೆಯನ್ನು ಯಾವ ಕಾದಂಬರಿ ಸರಿಗಟ್ಟಬಲ್ಲದು?

ಯಹೂದೀ ಜನಾಂಗದ ಇತಿಹಾಸ ಮೊಳಗುತ್ತಿದೆ. ಇಲ್ಲವೆ ಅದು ಪ್ರತಿಯೊಬ್ಬ ಸಾರಸ್ವತನ ಹೃದಯದಲ್ಲಿ ಘಂಟಾಘೋಷವಾಗಿ ಸ್ಪಷ್ಟವಾಗಿ ಮೊಳಗುತ್ತಿರಬೇಕಿತ್ತು. ಆದರೆ ಹೀಗೆ ಆಗುತ್ತಿದೆಯೇ? ಆ ಜನಾಂಗವು ತನ್ನ ಪ್ರಾಣವನ್ನೇ ಪಣಕ್ಕೊಡ್ಡಿ ಹೊಗೆಯಾಡುತ್ತಿರುವ ಬೆಂಕಿ ಮತ್ತು ಬೂದಿಯಿಂದ ಸ್ಫಿಂಕ್ಸ್ ಪಕ್ಷಿಯಂತೆ ಎದ್ದುಬಂದು, ತನ್ನ ಕನಸುಗಳನ್ನು ರೂಪಿಸಿಕೊಂಡು, ತನ್ನ ಆಶೆ–ಆಕಾಂಕ್ಷೆಗಳನ್ನು ಪುನಶ್ಚೇತನಗೊಳಿಸುತ್ತ, ಎಲ್ಲ ತರಹದ ಪ್ರತಿಕೂಲ ಪರಿಸ್ಥಿತಿ, ಕಷ್ಟ–ಕಾರ್ಪಣ್ಯ ಹಾಗೂ ವಿರೋಧ–ವೈಷಮ್ಯಗಳನ್ನು ಎದುರಿಸಿ ಅವುಗಳನ್ನು ಪರಿಹರಿಸುತ್ತ ತಮ್ಮ ಕಳೆದುಹೋದ ಪ್ರಜ್ಞೆಯನ್ನು ಮತ್ತೆ ಪಡೆದುಕೊಂಡಿದೆ. ಆದರೆ, ಪರಿಸರ ಮತ್ತು ಅವಕಾಶಗಳಲ್ಲಿ ಅತ್ಯಂತ ಉತ್ತಮ ಸ್ಥಿತಿಯನ್ನು ಪಡೆದ ಸಾರಸ್ವತರು ಯಾವುದೇ ನಿರ್ದೇಶನ ಹಾಗೂ ಉದ್ದೇಶವಿಲ್ಲದೆ ಅಥವಾ ಉದ್ದೇಶಪೂರ್ವಕ ಗುರಿ ಇಲ್ಲದೆ ತಮ್ಮ ಸ್ವಂತಿಕೆಯ ಸಲುವಾಗಿ ತಡಕಾಡುತ್ತಿದ್ದಾರೆ. 'ಬುದ್ಧಿವಂತನಿಗೆ ಒಂದು ಬುದ್ಧಿಯ ಮಾತು ಸಾಕು' ಎಂದು ಹೇಳುತ್ತಾರೆ. ಆದರೆ ತಾನು ಬುದ್ಧಿವಂತ ಎಂದು ಹೇಳಿಕೊಳ್ಳುತ್ತ ತಿರುಗುವವನಿಗೆ ಈ ಉಕ್ತಿ ಅನ್ವಯಿಸುವುದಿಲ್ಲ.

ಗುಲಾಮಗಿರಿಯ ಕರಾಳ ದಿನಗಳು ಕೊನೆಗೊಂಡಿವೆ. ಇದೀಗ ಪ್ರಜಾಪ್ರಭುತ್ವದ ಮೌಲ್ಯಗಳ ರಕ್ಷಣೆಯಾಗಬೇಕು. ಆ ನಿಟ್ಟಿನಲ್ಲಿ ಪ್ರೋತ್ಸಾಹವೂ ಸಿಗಬೇಕಾಗಿದೆ. ಸಾರಸ್ವತರ ಬೌದ್ಧಿಕ ಉನ್ನತಿ, ಭವ್ಯ ಭಾವಪ್ರಚೋದಕ ಇತಿಹಾಸ ಅವರನ್ನು ಕಾರ್ಯಪ್ರವೃತ್ತರನ್ನಾಗಿಸಲು ಇನ್ನೂ ಉತ್ತೇಜಿಸಿದಂತೆ ಕಾಣುತ್ತಿಲ್ಲ. ಸಾರಸ್ವತರಿಗೆ ಗೋವಾ ಹೇಗೋ ಯಹೂದಿಗಳಿಗೆ ಜೆರುಸಲೆಮ್ ಹಾಗೆಯೇ. ಯಹೂದಿಗಳು ಸ್ವದೇಶ ಇಸ್ರೇಲಿಗೆ ಮರಳಿ, ಅದರ ಪುನರುತ್ಥಾನಕ್ಕೆ ತಮ್ಮ

ಕೊಡುಗೆಯನ್ನು ನೀಡಿದ್ದಾರೆ. ಆದರೆ ಅದೇ ರೀತಿ, ಸಾರಸ್ವತರು ಮಾತ್ರ ಸ್ವದೇಶವಾದ ಗೋವಾದ ಪುನರುತ್ಥಾನಕ್ಕೆ ಅಷ್ಟೊಂದು ಆಸಕ್ತಿಯನ್ನು ವಹಿಸುತ್ತಿಲ್ಲ. ಈ ದಿಶೆಯಲ್ಲಿ ಅವರಿಗೆ ಗೋವಾಕ್ಕೆ ಬರಲು ಆಮಂತ್ರಣವೂ ಇಲ್ಲ. ಗೋವೆಯವರೆಂದರೆ ಪ್ರಮುಖವಾಗಿ ಪೋರ್ಚುಗೀಸ್ ಕ್ರಿಶ್ಚಿಯನ್ನರು. ಹಿಂದುಗಳು ಎಂದರೆ ಅನ್ಯರ ಪೋಷಾಕಿನ ಚುಂಗಿಗೆ ಅಂಟಿಕೊಂಡು ಅಭಿಮಾನ ಪಡುವ ಅನುಕರಣಪ್ರಿಯರೆಂದು ಪರಿಗಣಿಸಲ್ಪಟ್ಟಿದ್ದಾರೆ. ಒಂದು ಕಾಲದಲ್ಲಿ ಶಣೈ ಗೊಂಯ್ ಬಾಬರು ಮೊಳಗಿಸಿದ ಕಹಳೆಯ ನಾದದಿಂದ ವಾತಾವರಣದಲ್ಲಿ ಮಿಂಚುಹುಳ ಮಿಂಚಿದ ಅನುಭವವಾಗಿತ್ತು. ಸ್ವಲ್ಪಮಟ್ಟಿಗೆ ಆಶಾವಾದ ಮಿನುಗತೊಡಗಿತ್ತು. ಆದರೆ ವೈಜ್ಞಾನಿಕ ಆರ್ಥಿಕ ಸಂಸ್ಕೃತಿಯ ಅಗಾಧ ಜಾಗತೀಕರಣ ಮತ್ತು ಭೂರಾಜಕೀಯ ಶಕ್ತಿಯ ನಿಮಿತ್ತ, ಈ ಆಶಾವಾದದ ಮಿಣುಕು ಬೆಳಕು ಕೂಡ ಕಾಂತಿಹೀನವಾಗುತ್ತಿದೆ. ಎಲ್ಲೆಡೆಗೂ ನಿರುತ್ಸಾಹದ ವಾತಾವರಣ ಕವಿದಿದೆ. ನ್ಯಾಯಬಾಹಿರ ಧನಲಾಭಕ್ಕೇ ಪ್ರಾಧಾನ್ಯ ಸಿಕ್ಕರೆ, ಆತ್ಮಗೌರವ ಗೌಣವಾಗುತ್ತದೆ. ನಿಜಕ್ಕೂ ಇದು ಬಿಡಿಸಲಾಗದ ಕಗ್ಗಂಟು. ವಿಧಿಯ ವಿಕೃತಿ.

卐

5

ಸಾರಸ್ವತರ ವಾಣಿಜ್ಯೀಕರಣ

ಪ್ರಾರಂಭ ಕಾಲದಲ್ಲಿ, ಪ್ರಕೃತಿಯ ಮೂಲಕ ಮಾನವ ಜನಾಂಗವು ವಿಕಸಿತಗೊಂಡಾಗ, ವರ್ಗ ವ್ಯವಸ್ಥೆ, ಜಾತಿ ಪದ್ಧತಿ ಇರಲಿಲ್ಲ. ಪರಸ್ಪರ ವಿರೋಧವಿರಲಿಲ್ಲ. ಇದ್ದರೂ ವ್ಯಕ್ತಿ-ವ್ಯಕ್ತಿಗಳ ನಡುವೆ ತಾನೊಂದು ಜನಾಂಗ, ಅವನೊಂದು ಜನಾಂಗ ಎಂದೂ, ಆರ್ಥಿಕವಾಗಿ ಮುಂದುವರಿದವರು, ಹಿಂದುಳಿದವರು ಎಂದೂ ಅಥವಾ ತಾವು ಸುಸಂಸ್ಕೃತರು, ಅವರು ಅನಾಗರಿಕರು ಎಂದೂ ವಿರೋಧ-ವೈಷಮ್ಯ ಬಂದಿರಬಹುದು. ಆರ್ಯರು ಭಾರತದ ಉಪಖಂಡವನ್ನು ಪ್ರವೇಶಿಸಿದಾಗ ತಾವೇ ಸುಸಂಸ್ಕೃತರು, ಶ್ರೇಷ್ಠರು ಎಂದು ಭಾವಿಸಿದ್ದರು. ಮತ್ತು ಇತರ ನೆಗ್ರಿಟೋ (ನಿಗ್ರೋ ಮಾದರಿಯ), ಅಸ್ಟ್ರೋಲೈಡ್ (ಆಸ್ಟ್ರೇಲಿಯ ಮೂಲದ) ಮತ್ತು ದ್ರಾವಿಡರಂಥ ಮೊದಲೇ ವಾಸಿಸಿದ ಜನಾಂಗದವರು ಶಕ್ತಿ ಸಂಪನ್ನರು, ಉಚ್ಚ ನಾಗರಿಕತೆಯುಳ್ಳ ನಗರವಾಸಿಗಳಾಗಿದ್ದರೂ ಅವರನ್ನು ಅನಾರ್ಯ, ನಿಕೃಷ್ಟ, ದಾಸ, ದಸ್ಯು, ನೀಚ ಎಂದು ಕಡೆಗಣಿಸುತ್ತಿದ್ದರು. ಗುಣ-ಕರ್ಮಾನುಸಾರವಾಗಿ ಆರ್ಯರಲ್ಲೂ 1) ಜ್ಞಾನ ದ್ರಷ್ಟಾರ ಬ್ರಾಹ್ಮಣರು 2) ಜ್ಞಾನ ರಕ್ಷಕ ಕ್ಷತ್ರಿಯರು ಎಂದು ಎರಡು ವರ್ಗಗಳಿದ್ದವು. ಅವರ ಕಾರ್ಯಗಳು ಆಗಾಗ್ಗೆ ಸ್ವಧರ್ಮದ ವ್ಯಾಪ್ತಿಯನ್ನು ಮೀರಿ ಹೋದರೂ ಅವು ಪ್ರತ್ಯೇಕವಾಗಿರಲಿಲ್ಲ. ಆದ್ದರಿಂದ ಕೆಲವು ರಕ್ಷಕರು ದ್ರಷ್ಟಾರರಾದರು. ಕೆಲವು ದ್ರಷ್ಟಾರರು ರಕ್ಷಕರಾದರು. ಆರ್ಯೇತರರು ಆರ್ಯಕುಲದಲ್ಲಿ ಬಂದು ಸೇರಿದ ಬಳಿಕ, ಅವರು ಕೂಡ ಮಂತ್ರದ್ರಷ್ಟಾರರಾದರು.

ಕಾಲಕ್ರಮೇಣ ಅಥರ್ವವೇದವು ಸಾರುವಂತೆ 'ಜನಂ ಬಿಭ್ರತಿ ಬಹುಧಾ ವಿವಾಚಸಂ ನಾನಾ ಧರ್ಮಾಣಂ ಪೃಥಿವೀ ಯಥೌಕಸಂ' "ಈ ಭೂಮಿಯು ಬಹುವಿಧ ಭಾಷೆಗಳನ್ನು ಮಾತನಾಡುವ ವಿವಿಧ ಧರ್ಮಗಳನ್ನು ಅನುಸರಿಸುವ ಜನರನ್ನು, ಅವರು ವಾಸ ಮಾಡುವ ಸ್ಥಳ ಹಾಗೂ ಮನೆಗಳಲ್ಲೇ ಆಶ್ರಯ ನೀಡಿ ಸಂರಕ್ಷಿಸುತ್ತದೆ." ಎಂದು ಅರಿವಾಯಿತು. ಋಗ್ವೇದವೂ ಇದಕ್ಕೆ ಹೀಗೆ ಸ್ಪಂದಿಸುತ್ತದೆ.

ನಮ್ಮಲ್ಲಿ ವಿಚಾರಗಳು ಅನೇಕ. ಉದ್ಯೋಗಗಳೂ ಅನೇಕ, ಜನರು ಅನುಸರಿಸುವ ಮಾರ್ಗಗಳೂ ಭಿನ್ನವಾಗಿವೆ. ಬ್ರಾಹ್ಮಣನು ಅರ್ಚಕರನ್ನೂ, ಬಡಿಗನು ಸುತ್ತಿಗೆಯನ್ನೂ ಮತ್ತು ವೈದ್ಯನು ರೋಗಿಯನ್ನೂ ಅರಸುತ್ತಾನೆ. ನಾನು ಮಂತ್ರ

ರಚಿಸುತ್ತೇನೆ. ನನ್ನ ತಂದೆ ವೈದ್ಯ, ತಾಯಿ ಧಾನ್ಯ ಬೀಸುತ್ತಾಳೆ.

ಸಾಮಾಜಿಕ ವ್ಯವಸ್ಥೆಯು ಅವರವರ ಗುಣಕರ್ಮಗಳನ್ನು ಆಧರಿಸಿ ವರ್ಗೀಕೃತವಾಯಿತು. ಪುರುಷಸೂಕ್ತವು ಸಮಾಜದ ಈ ವರ್ಗೀಕರಣ ವ್ಯವಸ್ಥೆಯನ್ನು ಜಗದಾದಿಮೂಲವಾದ ಸಹಜ ಸತ್ಯದ ಪ್ರಕಟ ರೂಪ ಎಂದು ಎತ್ತಿ ಹಿಡಿದಿದೆ.

1) ಮಾತಿನ ಮೂಲಕ ಜ್ಞಾನವನ್ನು ವ್ಯಕ್ತಪಡಿಸುವ ಬ್ರಾಹ್ಮಣನು – ಮುಖ.

2) ಭುಜಬಲದಿಂದ ಸಾಮಾಜಿಕ ವ್ಯವಸ್ಥೆಯನ್ನು ಪೋಷಿಸುವ ಕ್ಷತ್ರಿಯನು – ಭುಜ.

3) ತೊಡೆಗಳಂತೆ ಸಮರ್ಥವಾಗಿ ಸಮಾಜದ ಯೋಗಕ್ಷೇಮವನ್ನು ಸುಸ್ಥಿರಗೊಳಿಸುವ ವೈಶ್ಯನು – ತೊಡೆ.

4) ಪಾದಗಳಿಂದ ಕರ್ತವ್ಯ ಕರ್ಮವನ್ನು ನಿರ್ವಹಿಸಿ ಮನುಕುಲದ ಅಭ್ಯುದಯವನ್ನು ಸಾಧಿಸುವ ಶೂದ್ರನು – ಪಾದ.

ಶ್ರೀಕೃಷ್ಣ ಹೇಳಿದ.

ಪ್ರಕೃತೇಃ ಕ್ರಿಯಮಾಣಾನಿ ಗುಣೈಃ ಕರ್ಮಾಣಿ ಸರ್ವಶಃ।
ಅಹಂಕಾರವಿಮೂಢಾತ್ಮಾ ಕರ್ತಾಹಮಿತಿ ಮನ್ಯತೇ॥

– ಗೀತೆ, 03–27

ವಾಸ್ತವವಾಗಿ ಕರ್ಮಗಳು ಪೂರ್ತಿಯಾಗಿ ಪ್ರಕೃತಿ ಸಹಜವಾದ ಗುಣಗಳಿಂದಲೇ ಮಾಡಲ್ಪಡುತ್ತವೆ. ಆದರೂ ಅಹಂಕಾರದ ಮೌಢ್ಯದಿಂದ ಅಜ್ಞಾನಿಯು "ಮಾಡಿದವನು ನಾನು" ಎಂದು ಹೇಳುತ್ತಾನೆ.

ಆದ್ದರಿಂದ ಹಿಂದಿನ ಕಾಲದಲ್ಲೂ, ಬ್ರಾಹ್ಮಣ ಕುಲದಲ್ಲಿ ಹುಟ್ಟಿದವರಿಗೆ ಮಾತ್ರ ಜ್ಞಾನವು ಮೀಸಲಾಗಿರಲಿಲ್ಲವಾದರೂ ಕ್ಷತ್ರಿಯ, ವೈಶ್ಯ ಅಥವಾ ಶೂದ್ರ ವರ್ಣದ ಕುಟುಂಬದಲ್ಲಿ ಹುಟ್ಟಿದ ಯಾವನೇ ಇರಲಿ, ಆವಶ್ಯಕ ಅರ್ಹತೆಯನ್ನು ಪಡೆದು ತಾನು ಬಾಹ್ಮಣ ಆಗಬೇಕೆಂದು ಅಪೇಕ್ಷೆ ಪಡಬಹುದಾಗಿತ್ತು. ಮುಂದಿನ ದಿನಮಾನದಲ್ಲಿ ಧರ್ಮಪ್ರಜ್ಞೆ ಕ್ಷೀಣವಾಗುತ್ತ ಎಲ್ಲರನ್ನೂ ಮೋಹಗೊಳಿಸುವ ಅಧರ್ಮದ ಅಭಿವೃದ್ಧಿಯಾಯಿತು. ಗುಣ–ಕರ್ಮ ಆಧಾರಿತ ಸಾಮಾಜಿಕ ವರ್ಗೀಕರಣದ ವ್ಯವಸ್ಥೆಯೇ ನಾಶವಾಯಿತು. ಜನರಿಗೆ ಗುಣಕ್ಕಿಂತ ಜನ್ಮ ಅಥವಾ ಜಾತಿಯೇ ಪ್ರಧಾನವಾಯಿತು. ವಜ್ರಸೂಚಿಕಾ ಉಪನಿಷತ್ತು ಈ ಅಸಾಂಗತ್ಯವನ್ನು

ಹೀಗೆ ಎತ್ತಿ ತೋರಿಸುತ್ತದೆ.

ಪ್ರಾಣಿವರ್ಗದಲ್ಲಿ ಮಾನವನಲ್ಲದೆ ಅನೇಕ ಬೇರೆ ಜೀವಜಾತಿಗಳಿವೆ. ಅನೇಕ ಋಷಿ-ಮುನಿಗಳು ಜನ್ಮತಃ ವಿಭಿನ್ನ ಮೂಲದವರಾಗಿದ್ದಾರೆ ಎಂದು ನಮ್ಮ ಪುರಾಣ ಶಾಸ್ತ್ರಗಳೇ ಹೇಳುತ್ತವೆ. ಋಷ್ಯಶೃಂಗನು ಚಿಗರೆಯಿಂದ, ಕೌಶಿಕನು ಕುಶ ಹುಲ್ಲಿನಿಂದ, ಜಂಬೂಕನು ನರಿಯಿಂದ, ವಾಲ್ಮೀಕಿ ಹುತ್ತದಿಂದ, ವ್ಯಾಸನು ಬೆಸ್ತಳಿಂದ, ಗೌತಮನು ಮೊಲದ ಬೆನ್ನಿನಿಂದ, ವಸಿಷ್ಠನು ಊರ್ವಶಿಯಿಂದ (ಸ್ವರ್ಗಲೋಕದ ಅಪ್ಸರೆ), ಅಗಸ್ತ್ಯನು ಮಣ್ಣಿನ ಮಡಿಕೆಯಿಂದ ಹುಟ್ಟಿದರು. ಇವರ ಜನ್ಮ ಜಾತಿ ಯಾವುದೇ ಆದರೂ, ಅವರು ತಮ್ಮ ಜ್ಞಾನ ಸಂಪತ್ತಿಯ ರುಜುವಾತು ನೀಡಿ ಅತ್ಯುನ್ನತ ಸ್ಥಾನ-ಮಾನಗಳನ್ನು ಹೊಂದಿದ್ದರು. ಆದ್ದರಿಂದ ಆವಶ್ಯಕ ಅರ್ಹತೆ ಇದ್ದವನು ಮಾತ್ರ ಬ್ರಾಹ್ಮಣನಾಗುತ್ತಾನೆ. ಇದು ವೇದಶಾಸ್ತ್ರ ಪುರಾಣೇತಿಹಾಸಗಳ ಪರಂಪರಾಗತ ಅಭಿಪ್ರಾಯ.

ಅನಂತರ ಆರ್ಥಿಕ ಸಮೃದ್ಧಿಯೇ ನಿರ್ಧಾರಕ ಅಂಶವಾದ ಬಳಿಕ, ಬ್ರಾಹ್ಮಣರು ಸಮಾಜದಲ್ಲಿ ಉನ್ನತ ಅಧಿಕಾರ ಪಡೆದು ಕ್ರಮೇಣ ತಮ್ಮ ಗುಣಗಳಿಗಿಂತ ಮಿಗಿಲಾಗಿ ಅಧಿಕಾರಕ್ಕೆ ಅಂಟಿಕೊಂಡು, ಆಚಾರಕ್ಕಿಂತ ಆಕಾರಕ್ಕೆ, ಅಂತಃಸತ್ವಕ್ಕಿಂತ ಬಾಹ್ಯರೂಪಕ್ಕೇ ಪ್ರಾಶಸ್ತ್ಯ ನೀಡತೊಡಗಿದರು. ಈ ಮೊದಲು, ಒಂದು ವರ್ಣದಿಂದ ಇನ್ನೊಂದು ವರ್ಣಕ್ಕೆ ಬದಲಿಸಿಕೊಳ್ಳುವ ಸ್ವಾತಂತ್ರ್ಯವಿತ್ತು. ಕಾಲಕ್ರಮೇಣ ಈ ಸ್ವಾತಂತ್ರ್ಯ ನಿರ್ದಾಕ್ಷಿಣ್ಯವಾಗಿ ಕಸಿಯಲ್ಪಟ್ಟಿತು. ಆದಕಾರಣ ಮಹಾಭಾರತದಲ್ಲಿ ಯುಧಿಷ್ಠಿರನು,

"ಓರ್ವ ವ್ಯಕ್ತಿ ಯಾವ ವರ್ಣಕ್ಕೆ ಸೇರಿದವನೆಂದು ಅರಿತುಕೊಳ್ಳುವುದೇ ಕಷ್ಟಸಾಧ್ಯವಾಗುತ್ತಿದೆ. ಆದ್ದರಿಂದ ಒಬ್ಬನ ಆಚಾರದ ಮೂಲಕ ಅವನು ಯಾವ ವರ್ಣಕ್ಕೆ ಸೇರಿದವನೆಂದು ನಿರ್ಧಾರವಾಗಬೇಕು" ಎಂದು ಹೇಳುತ್ತಾನೆ.

ಕ್ರಿಸ್ತ ಶಕ ಪೂರ್ವ 1000-900ರ ಸರಿಸುಮಾರಿಗೆ, ಬಿಹಾರ ಪ್ರದೇಶದಲ್ಲಿ, ಕಬ್ಬಿಣ ಹಾಗೂ ಕಲ್ಲಿದ್ದಲಿಯ ಕಚ್ಚಾ ಅದಿರಿನ ಶೋಧವಾಗಿತ್ತು. ಅಂದು, ಆರ್ಯೇತರ ಮಿಶ್ರ ಜನಾಂಗದವರು ನಗರವಾಸಿಗಳಾಗಿ ಲೌಕಿಕ ಚಟುವಟಿಕೆಗಳಲ್ಲಿ ಕಷ್ಟಪಟ್ಟು ದುಡಿದು ತಮ್ಮ ಸಂಪತ್ತು, ಬುದ್ಧಿಮತ್ತೆ ಮತ್ತು ಪರಿಶ್ರಮವನ್ನು ಆರ್ಥಿಕ ಉತ್ಪಾದನೆಗಾಗಿ ತೊಡಗಿಸಿಕೊಂಡಿದ್ದರು. ಸಮಾಜದ ಬಹುಸಂಖ್ಯಾತ ಆರ್ಯೇತರ ಪಂಗಡದವರು ಪೂರ್ವಗ್ರಹೀತ ಬ್ರಾಹ್ಮಣ-ಕ್ಷತ್ರಿಯ ಸಂಬಂಧದ ಶ್ರೇಷ್ಠತೆಯ ಮನೋಭಾವವನ್ನು ಸ್ವೀಕರಿಸಲೇ ಇಲ್ಲ. ಆರ್ಯೇತರರು ಆರ್ಯರ ಆಧಿಪತ್ಯವನ್ನು ಸ್ವೀಕರಿಸಲು ನಿರಾಕರಿಸಿದರು. ಮಧ್ಯಂತರ ಕಾಲದಲ್ಲಿ, ವೇದಶಾಸ್ತ್ರಗಳನ್ನು ಒಪ್ಪದ

ಚಾರ್ವಾಕರಂತೆ ಅನೇಕ ವಿಪರ್ಯಸ್ತ ಸಿದ್ಧಾಂತಗಳು ವಿಚಾರವಾದದ ಕುರಿತು ಉಗ್ರ ಪ್ರತಿಪಾದನೆ ಮಾಡತೊಡಗಿದವು. ಅವುಗಳೊಡನೆ ಶಾಕ್ತರು, ಪಾಶುಪತರು, ಶಕ್ತಿ ಪಂಥಗಳೇ ಮುಂತಾದ ಆರ್ಯೇತರರ ಮತಗಳೂ ತಲೆಯೆತ್ತ ತೊಡಗಿದವು. ಬುದ್ಧ ಮತ್ತು ಮಹಾವೀರರಂಥ ಮತಪ್ರವರ್ತಕರ ಅಲೆಗಳೂ ಏಳತೊಡಗಿದವು. ಇದರ ಪರಿಣಾಮವಾಗಿ ವೈದಿಕ ತತ್ತ್ವಪ್ರತಿಪಾದಕರ ಅಧಿಕಾರ ಮತ್ತು ಪ್ರತಿಷ್ಠೆಯ ಅವನತಿ ಆಗುತ್ತ ಹೋಯಿತು. ಇನ್ನೂ ಅನೇಕರು ಈತನಕ ಬ್ರಾಹ್ಮಣರಿಗಾಗಿ ಮೀಸಲಿಟ್ಟ ವೃತ್ತಿಯನ್ನು ಮಾಡಲು ತಮಗೂ ಸಮಾನ ಹಕ್ಕು ಇದೆಯೆಂದು ಪ್ರತಿಪಾದಿಸತೊಡಗಿದರು.

ಬುದ್ಧ – ಮಹಾವೀರರ ಉಪದೇಶಗಳಿಂದ ಪ್ರಭಾವಿತರಾಗಿ, ವೈಶ್ಯರು ಮತ್ತು ಶೂದ್ರರು ತಮ್ಮ ಧನಬಲದ ಅರಿವಿನೊಂದಿಗೆ ವಿಪರೀತ ಖರ್ಚು–ವೆಚ್ಚದ ಯಜ್ಞ–ಯಾಗಗಳನ್ನು ನೆರವೇರಿಸುವ ಬ್ರಾಹ್ಮಣರ ಸೇವೆಯನ್ನೇ ನಿಲ್ಲಿಸಿಬಿಟ್ಟರು. ಶಕ್ತಿ ಮತ್ತು ಸಂರಕ್ಷಣೆಗಾಗಿ ಮಾತ್ರ ಕ್ಷತ್ರಿಯರನ್ನು ಅವಲಂಬಿಸಿದ್ದರು. ಬ್ರಾಹ್ಮಣರಿಗೆ ಇನ್ನೊಮ್ಮೆ ತಮ್ಮ ಸ್ಥಾನಮಾನದ ಮೌಲ್ಯನಿರ್ಧಾರ ಮಾಡಲು ಖಚಿತವಾಗಿ ತಿಳಿಸುವ ಕ್ಷಣವೂ ಸನ್ನಿಹಿತವಾಯಿತು. ಬ್ರಾಹ್ಮಣರು ತಾವು ಪರಿಭಾವಿಸಿದ ಉನ್ನತ ಸ್ಥಾನಮಾನವನ್ನು ರಕ್ಷಿಸಿಕೊಳ್ಳಲು, ಇದು ನಮ್ಮ ವರ್ಣಸಮಸ್ಯೆಯೇ ಹೊರತು ಸಾಮಾಜಿಕ ಸಮಸ್ಯೆಯಲ್ಲ ಎಂದು ಭಾವಿಸಿ, ಸಂಪೂರ್ಣ ಸಾಮಾಜಿಕ ರಚನೆಯ ಪುನರ್ ಮೌಲ್ಯಮಾಪನವೇ ಆಗಬೇಕಿದೆ ಎಂದರು. ಸದಾಚಾರ ಮತ್ತು ನೈತಿಕ ಮೌಲ್ಯಗಳ ಬದಲಿಗೆ ಆರ್ಥಿಕ ಕಾರಣಕ್ಕೆ ಆದ್ಯತೆ ದೊರೆಯಿತು.

ತಮ್ಮ ಆರ್ಥಿಕ ಅಭಿವೃದ್ಧಿ ಮತ್ತು ಸಮಾಜದಲ್ಲಿ ಬ್ರಾಹ್ಮಣರ ಪ್ರಾಧಾನ್ಯವನ್ನು ಕಾಪಾಡಿಕೊಂಡು ಬರಲು ಅವರು ಇತರ ವರ್ಣಗಳನ್ನು ಕಡೆಗಣಿಸಿ, ಆಪದ್ಧರ್ಮದ ತತ್ತ್ವವನ್ನು ಪೂರೈಸುವ ಧರ್ಮಶಾಸ್ತ್ರವನ್ನು ಕ್ರೋಡೀಕರಿಸಿದರು, ಅದು ಇತರರಿಗೆ ವಿಧಿಸಿದ್ದ ಕಾರ್ಯಗಳನ್ನು ತಾವು ಕೈಗೊಳ್ಳುವಂತೆ ಬ್ರಾಹ್ಮಣರಿಗೆ ಸ್ವಾತಂತ್ರ್ಯಕೊಟ್ಟರೂ ಬ್ರಾಹ್ಮಣರ ಕರ್ತವ್ಯವನ್ನು ಇತರರು ಕೈಗೊಳ್ಳಲು ಸ್ವಾತಂತ್ರ್ಯದ ಅನುಮತಿಯನ್ನು ನೀಡಲಿಲ್ಲ. ಇದರಿಂದ ಇತರ ವರ್ಣಗಳ ದೃಷ್ಟಿಯಲ್ಲಿ ಈ ಧರ್ಮಶಾಸ್ತ್ರವು ದಮನಕಾರಿ ಎಂದು ನಿರ್ಣಯಿಸುವಂತೆ ಆಯಿತು. ಶೇರಿಂಗ್‌ನು 'Hindu Tribes and Castes' ಎಂಬ ಕೃತಿಯಲ್ಲಿ ಹೀಗೆ ಹೇಳುತ್ತಾನೆ.

"ಇದು ಅತ್ಯಂತ ಹಾನಿಕರವೂ, ನಿಷ್ಕರುಣವೂ, ಕ್ರೂರವೂ, ಬಹುಶಃ ಮನುಕುಲಕ್ಕೇ ಶಾಪವೂ ಆಗುವಂತೆ ಶೋಧಿಸಿದ ಸಮಾಜ ಪದ್ಧತಿ".

ಸ್ಟ್ವಾರ್ಟ್ 'Caste in India' ಕೃತಿಯಲ್ಲಿ ಹೀಗೆ ಹೇಳುತ್ತಾನೆ.

"ಬ್ರಾಹ್ಮಣರು ಹೆಚ್ಚು-ಕಡಿಮೆ ಉದ್ದೇಶಪೂರ್ವಕವಾಗಿ, ವೈಯಕ್ತಿಕ ಹಾಗೂ ಸ್ವಾರ್ಥಪರ ಮನೋಭಾವದಿಂದ, ಎಲ್ಲಕ್ಕೂ ಮುಂಚೆ ತಮ್ಮ ಸಂಪೂರ್ಣ ಪರಮಾಧಿಕಾರವನ್ನು ಸ್ಥಾಪಿಸುವ ಉದ್ದೇಶದಿಂದ ಈ ಪದ್ಧತಿಯನ್ನು ರಚಿಸಿದ್ದಾರೆ."

ಇತರ ವರ್ಣಗಳಿಂದ ಪ್ರಬಲ ಪ್ರತಿಭಟನೆ ಆದ ನಂತರ, ಬ್ರಾಹ್ಮಣರು ಬೇರೆ ಪ್ರದೇಶದ ಕಡೆ ವಲಸೆ ಹೋದರು. ಹೋಗುವಾಗ ತಮ್ಮೊಡನೆ ಆಪದ್ಧರ್ಮ ಸೂತ್ರವನ್ನೂ ಒಯ್ದರು. ಆಗ ಪರಂಪರಾಗತ ಗುಣಾಧಾರಿತ ವರ್ಣವ್ಯವಸ್ಥೆಯ ಸ್ಥಾನದಲ್ಲಿ ಜನ್ಮ-ಆಧಾರಿತ ವರ್ಣ ವ್ಯವಸ್ಥೆಯೇ ಘೋಷವಾಕ್ಯವಾಯಿತು. ಶ್ರೀ ಕೃಷ್ಣನು ಮುಂಜಾಗ್ರತೆಗಾಗಿ ನೀಡಿದ್ದ ವಾಣಿಯನ್ನೇ ಬ್ರಾಹ್ಮಣರು ಮರೆತಿದ್ದರು.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥

– ಗೀತೆ 3:35

ಚೆನ್ನಾಗಿ ಆಚರಿಸಲ್ಪಡುವ ಪರಧರ್ಮಕ್ಕಿಂತ ಗುಣರಹಿತವಾದರೂ ಸರಿ, ತನ್ನ ಮನೋಧರ್ಮಕ್ಕೆ ಅನುಗುಣವಾದ ಕರ್ತವ್ಯ ಕರ್ಮವನ್ನು ಮಾಡುವುದೇ ಶ್ರೇಯಸ್ಕರ. ಸ್ವಧರ್ಮದಲ್ಲಿ ಸಾಯುವುದೂ ಶ್ರೇಯಸ್ಕರ. ಪರಧರ್ಮವು ಭಯಂಕರ.

ಆಪದ್ಧರ್ಮ ಸೂತ್ರವು ಗೋಮಂತಕದಲ್ಲಿ ಬೇಗನೆ ಪರಿಚಿತವಾಯಿತು. ಸಾರಸ್ವತರು ಈ ಸೂತ್ರವನ್ನು ಸಂತೋಷಪೂರ್ವಕ ಸ್ವೀಕರಿಸಿದರು. ತಮ್ಮ ವೈಶ್ಯ ದೇಶಬಾಂಧವರ ನೆರವಿನಿಂದ ಅವರು ಮೊಟ್ಟ ಮೊದಲು ಉತ್ತರದ ಶಿಲಾಹಾರ ದೊರೆಗಳ ಆಡಳಿತ ಕಾಲದಲ್ಲಿ ಇದನ್ನು ಅನುಷ್ಠಾನಕ್ಕೆ ತಂದಂತೆ ತೋರುತ್ತದೆ. ಬಲುಬೇಗ ಬ್ರಾಹ್ಮಣರ ಸೂಕ್ಷ್ಮ ಬುದ್ಧಿಯೊಂದಿಗೆ ವೈಶ್ಯರ ವ್ಯಾಪಾರೀ ಚಾಣಾಕ್ಷತೆ ಸೇರಿಕೊಂಡಾಗ ಅವರ ಕೌಶಲ್ಯ ಹಾಗೂ ಪರಿಣತಿಗೆ ಹೊಸ ದಿಕ್ಕನ್ನು ಒದಗಿಸಿ, ವ್ಯಾಪಾರ-ವಾಣಿಜ್ಯೋದ್ಯಮದಲ್ಲಿ ಇತರ ವರ್ಣಗಳ ಜನರಿಗಿಂತ ಮುನ್ನಡೆಯನ್ನು ಒದಗಿಸಿತು. ದ್ರವ್ಯ ಸಂಪಾದನೆಯ ಆಮಿಷ ಪ್ರಬಲವಾದ ಬಳಿಕ ಅವರು ತಮ್ಮ ಪರಂಪರಾಗತ ಪೌರೋಹಿತ್ಯ ಹಾಗೂ ದೊರೆಗಳ ಸಲಹೆಗಾರ ವೃತ್ತಿಗೂ ತಿಲಾಂಜಲಿ ಕೊಡುವಷ್ಟು ಪರಿವರ್ತಿತರಾಗಿ ದಕ್ಷ ವ್ಯಾಪಾರಿಗಳೂ, ಚಾಣಾಕ್ಷ ಸಂಧಾನಕಾರರೂ, ದಲಾಲರೂ ಆದರು. ಅರಬ್, ಡಚ್, ಪೋರ್ಚುಗೀಸ್ ಮತ್ತು ಆಂಗ್ಲ ವ್ಯಾಪಾರಿಗಳೊಡನೆ ದೊರೆಗಳ ರಾಯಭಾರಿ ಪಾತ್ರವನ್ನೂ ನಿರ್ವಹಿಸಿದರು.

ಗೋಮಂತಕದಲ್ಲಿ ಒಂದು ಸರ್ವಋತು ಬಂದರವಿತ್ತು. ವಿಜಯನಗರ,

ಆದಿಲಶಾಹೀ ಮತ್ತು ಮರಾಠಾ ದೊರೆಗಳ ಆಡಳಿತ ಕಾಲದಲ್ಲಿ ಆ ಬಂದರ ಪ್ರದೇಶದಲ್ಲಿ ಅರಬಿಗಳ ಬಳಿಯಿದ್ದ ವ್ಯಾಪಾರೀ ಸೂತ್ರವನ್ನು ಸಾರಸ್ವತರು ವಹಿಸಿಕೊಂಡರು. ಕೇರಳದಲ್ಲಿ ಯಹೂದೀ ವ್ಯಾಪಾರಿಗಳಿಗೂ ಗಾಬರಿಗೊಳಿಸಿದರು. ದೊರೆಗಳ ರಾಜ್ಯಾಡಳಿತದಲ್ಲಿ ಸಲಹೆಗಾರರೂ, ಮಂತ್ರಿಗಳೂ ಆಗಿ ನಾಯಕತ್ವದಲ್ಲಿ ಮೆರೆದವರಿಗೆ ಮಾರುಕಟ್ಟೆಯಲ್ಲಿ ಅಕ್ಕಿ ಮತ್ತು ಮಸಾಲೆ ಪದಾರ್ಥಗಳ ವ್ಯಾಪಾರಿಗಳಾಗುವುದು ನಿರಾತಂಕವಾದ ಹೆಜ್ಜೆಯಾಗಿತ್ತು. ಇಂಥ ಆಕರ್ಷಕವಾದ ಆರ್ಥಿಕ ಮತ್ತು ಭೌತಿಕ ಅಭಿವೃದ್ಧಿಯ ಸಮ್ಮುಖದಲ್ಲಿ ಬುದ್ಧಿಜೀವಿಗಳಾದ ಸಾರಸ್ವತರು ತಾವಾಗಿ ಹಿಂಜರಿದು ಸ್ವಧರ್ಮವನ್ನು ಮರೆತು ತಮ್ಮ ನಾಯಕತ್ವವನ್ನು ಬಿಟ್ಟುಕೊಟ್ಟರು. ಜ್ಞಾನ ಸಂಪತ್ತಿನ ದೂತರಾಗುವುದಕ್ಕಿಂತ ಧನ ಸಂಪತ್ತಿನ ಉತ್ಪಾದಕರ ಬಳಿ ದೂತರಾಗಿ ಉಳಿದರು. ಅವರು ಒಂದಾನೊಂದು ಕಾಲದಲ್ಲಿ ಸರಸ್ವತೀ ಪುತ್ರರು, ಖ್ಯಾತ ಸಾರಸ್ವತ ಮುನಿಯ ವಾರಸುದಾರರು ಎಂದು ಬೀಗಿ ಮೆರೆದವರು. ಒಂದು ಕೈಯಲ್ಲಿ ಮಂತ್ರಪಠಣ ಮಾಡಲು ವೇದಶಾಸ್ತ್ರದ ಅಧ್ಯಾಯವನ್ನೂ, ಇನ್ನೊಂದು ಕೈಯಲ್ಲಿ ಯಜ್ಞಕುಂಡದಲ್ಲಿ ಆಹುತಿ ನೀಡುವ ತುಪ್ಪದ ಸೌಟನ್ನೂ ಹಿಡಿದವರು. ಅವರೀಗ ವ್ಯಾಪಾರಿಗಳಾಗಿ ತಮ್ಮ ಒಂದು ಕೈಯಲ್ಲಿರುವ ತಕ್ಕಡಿಯ ಪರಡಿಯಲ್ಲಿ ಸ್ವಧರ್ಮವು ಯಾವ ಕಡೆ ತೂಗುತ್ತಿದೆ ಎಂಬುದನ್ನು ಪರೀಕ್ಷಿಸಿ ನೋಡಬೇಕು. ಇಲ್ಲದೆ ಹೋದರೆ ಭೋಜನ ಗೃಹದ ಯಜಮಾನನಾಗಿ ಒಂದು ಕೈಯಲ್ಲಿ ಪಾಕಶಾಸ್ತ್ರದ ಪುಸ್ತಕವನ್ನು ಹಿಡಿದು, ಇನ್ನೊಂದು ಕೈಯಲ್ಲಿ ಕರಿಯುವ ಬಾಣಲೆಯಲ್ಲಿ ಎಣ್ಣೆಯನ್ನು ಸುರಿಯುವ ಚಮಚವನ್ನು ಹಿಡಿದು ಸ್ವಧರ್ಮವನ್ನು ಸರಿಯಾಗಿ ಪರೀಕ್ಷಿಸಿಕೊಳ್ಳಲೇಬೇಕು. ಇದು ನಿಜಕ್ಕೂ ಐತಿಹಾಸಿಕ ವಿಕಾಸದ ವಿಡಂಬನೆಯೇ ಆಗಿರಬೇಕು.

ಜನ್ಮತಃ ಬ್ರಾಹ್ಮಣರಾಗಿ, ವೃತ್ತಿಯಿಂದ ವೈಶ್ಯರಾಗಿ, ವರ್ತಮಾನ ಸಮಾಜದಲ್ಲಿ ಆದ ಈ ಪರಿವರ್ತನೆಯು ಅವರಿಗೆ ಒಂದು ಹೊಸದಾದ ಗೌರವಪೂರ್ಣ ಗುರುತು ನೀಡಿದೆಯೇನೋ ಸರಿ; ಆದರೆ, ಆಧ್ಯಾತ್ಮಿಕ ಕ್ಷೇತ್ರಕ್ಕಿಂತ ಮಿಗಿಲಾಗಿ ವಾಣಿಜ್ಯ ಕ್ಷೇತ್ರದಲ್ಲಿ ಅವರು ಹೊಂದಿರುವ ಯಶಸ್ಸೇ ಅವರಿಗೆ ಭಾವಶೂನ್ಯರನ್ನಾಗಿ ಮಾಡಿತೇ! ತಮ್ಮ ಮೂಲ ಯಾವುದು? ತಮ್ಮ ಉಚ್ಚ ಸಂಪ್ರದಾಯ ಹೇಗಿತ್ತು? ಎಂಬುದನ್ನು ಅವರು ಕೊಂಚ ಹೆಚ್ಚು ಅರಿತು ಕೊಳ್ಳಬಾರದೇ? ಅರಿತುಕೊಳ್ಳದೆ ಹೋದರೂ ಸರಿ, ಚೆನ್ನಾಗಿದೆ ಎಂದು ಪ್ರಶಂಸೆಯನ್ನಾದರೂ ವ್ಯಕ್ತಪಡಿಸಬಹುದಿತ್ತು. ತಮ್ಮ ಭೌತಿಕ ಬಳುವಳಿಯಿಂದ, ಬೌದ್ಧಿಕ ಪ್ರತಿಭೆಯಿಂದ ಪ್ರಾಪ್ತವಾದ ಈ ಯಶಸ್ಸು ಸಾರಭೂತವಾದ ಅವರ ಪಾರಮಾರ್ಥಿಕ ಗುಣವನ್ನೇ ಮರೆಮಾಚಿಸಿ ಕರಾಳ ಛಾಯೆಯಾಗಿ ಕವಿಯುವಂತೆ

ಮಾಡಿದೆ. ಅವರನ್ನು ಪಾರಮಾರ್ಥಿಕ, ಸಾಮಾಜಿಕ ಮತ್ತು ಸಾಂಸ್ಕೃತಿಕ ಗುಣವಿಶೇಷದಿಂದ ದೂರ ಸರಿಸಿದೆ. ಸಂಪತ್ತು ಮತ್ತು ಐಹಿಕ ಹಿತರಕ್ಷಣೆಯೇ ಮಾನವ ಜೀವನವನ್ನು ಅನುಕೂಲಕರ ಮತ್ತು ಸುಖಕರವನ್ನಾಗಿ ಮಾಡುತ್ತದೆಂಬ ಸಂಗತಿ ಮಹತ್ವಪೂರ್ಣ ಅಲ್ಲ. ಇದು ಸಾರ್ವತ್ರಿಕ ಸತ್ಯ. ವೇದಕಾಲದ ದ್ರಷ್ಟಾರರು ವರ್ತಮಾನ ಕಾಲದ ವ್ಯಾಪಾರಸ್ಥರಿಗಿಂತ ಆರ್ಥಿಕವಾಗಿ ಹೆಚ್ಚು ಸಮೃದ್ಧರಾಗಿದ್ದರು. ಆದರೆ ಆ ಪ್ರಕ್ರಿಯೆಯಲ್ಲಿ ಅವರು ಸಮಾಜಕ್ಕಿರುವ ತಮ್ಮ ಧಾರ್ಮಿಕ, ಪಾರಮಾರ್ಥಿಕ ಆಚಾರ-ವ್ಯವಹಾರಗಳ ಮತ್ತು ನೈತಿಕ ಬಾಧ್ಯತೆಗಳಿಂದ ವಿಚ್ಛೇದನ ಪಡೆದಿರಲಿಲ್ಲ.

ಪ್ರತಿಯೊಂದು ಪೀಳಿಗೆಗೆ ವಿಶ್ವಸೃಷ್ಟಿಯ ಅದ್ಭುತ ರಹಸ್ಯ, ತಮ್ಮ ಅಸ್ತಿತ್ವದ ಅರ್ಥ, ಮಾನವನಾಗಿ ಮಾಡಬೇಕಾದ ಸಾಧನೆ ಮತ್ತು ಜೀವನದ ಅಂತಿಮ ಗುರಿ ಇವುಗಳ ಕುರಿತು ಚಿಂತನ ಮಾಡಲು ಸಾಕಷ್ಟು ಸಮಯ ಸಿಗುತ್ತಿತ್ತು. ಏಕೆಂದರೆ ಹೀಗೆ ತಾನು ಸಾಧನೆ ಮಾಡಬೇಕೇ, ಮುಂದಿನ ಪೀಳಿಗೆಗೂ ತಾನು ಇದೇ ರೀತಿ ಮಾರ್ಗದರ್ಶನ ಮಾಡಬೇಕೇ ಎಂಬ ಕುರಿತು ಚಿಂತನ-ಮಂಥನ ಮಾಡುವ ಗುಣವಿಶೇಷವು ಮಾನವನಿಗೆ ಮಾತ್ರ ದೈವದತ್ತವಾಗಿ ಲಭಿಸಿದೆ. ಮುಂದಿನ ಜನಾಂಗದವರು ಅಪಾಯಕಾರೀ ಮತ್ತು ಅನಿಯಂತ್ರಿತ ಧನಲೋಭಕ್ಕೆ ತುತ್ತಾಗಿ ಸಂಕಟಗ್ರಸ್ತರಾಗದಿರಲೆಂದು ಆಪದ್ಧರ್ಮ ತತ್ತ್ವವು ಅಪ್ರಜ್ಞಾಪೂರ್ವಕವಾಗಿ ನಿರ್ಬಂಧ ತೆಗೆದು ಸ್ವೇಚ್ಛೆಗೆ ಅನುವು ಮಾಡಿಕೊಟ್ಟಿದೆ. ಮಾಹಿತಿ ಮತ್ತು ಮಾನವ ಜ್ಞಾನದ ಸೀಮಾ ರೇಖೆ ವಿಸ್ತಾರವಾಗುತ್ತ ಹೋದಂತೆ, ಸಾರಸ್ವತ ಸಂಸ್ಥೆಗಳ, ಸಾರಸ್ವತ ವ್ಯಕ್ತಿಗಳ, ಹಾಗೂ ಸಾರಸ್ವತ ಸಮಾಜದ ಬುದ್ಧಿಮತ್ತೆ ಮತ್ತು ಉದ್ಯಮಗಳು ಸಂಧಿಕಾಲದಲ್ಲಿ ನಿಂತು, ಅಗಾಧ ಹಾಗೂ ಅಜಾಗೃತ ವಿಷಾದಕ್ಕೀಡಾಗಿವೆ.

ಇಂದು ಸಾರಸ್ವತರು ಎದುರಿಸುತ್ತಿರುವ ಸಮಸ್ಯೆ ಯಾವುದು? ತಮ್ಮ ಗುರುತನ್ನು ತಾವೇ ಕಳೆದುಕೊಂಡಿದ್ದು. ಇದಕ್ಕೆ ಮೂಲಭೂತವಾದ ಕಾರಣ ಸನಾತನ ಮೌಲ್ಯಗಳು ಮತ್ತು ಜೀವನದ ಸುಖ ಸೌಕರ್ಯಗಳ ಕುರಿತು ಮಾನವನು ಇರಿಸಿಕೊಂಡ ಮನೋಭಾವ. ಹೀಗಿರುವುದರಿಂದಲೇ ಚರಿತ್ರೆಯು ಒಂದು ಸಮಾಜದ ಮುಂದೆ ಈ ವಿಷಯವನ್ನು ಹೀಗೆ ಪ್ರಸ್ತುತಪಡಿಸುತ್ತದೆ. "ವಿರೋಧಾತ್ಮಕ ಒತ್ತಡ ಬಂದಾಗ, ನಾವು ಅರ್ಥಪೂರ್ಣ ಹಾಗೂ ನಿಷ್ಕಳಂಕ ಮಾನಸಿಕ ಸಮತೋಲನವನ್ನು ಕಾಪಾಡಿಕೊಂಡು ಬರುವ ಅಗತ್ಯವಿದೆ. ಮೊಟ್ಟಮೊದಲು, ನವೀಕರಣಗೊಂಡ ನಮ್ಮ ಶಕ್ತಿ ಮತ್ತು ಸ್ಫೂರ್ತಿಯ ಮುಂದೆ ನಮ್ಮ ಆಧ್ಯಾತ್ಮಿಕತೆಯು ತನ್ನ ಅಂತಃಸಾಕ್ಷಿಯನ್ನೂ, ಬಾಧ್ಯತೆಯನ್ನೂ ಅತ್ಯಗತ್ಯವಾಗಿ ರಕ್ಷಿಸಿಕೊಳ್ಳಬೇಕು. ಇದರ ಸಲುವಾಗಿ ನಾವು ಆತ್ಮಾವಲೋಕನ ಮಾಡಿಕೊಳ್ಳಬೇಕು. ಓರ್ವ ವ್ಯಕ್ತಿಯ

ಪ್ರಭಾವ ಎಷ್ಟೇ ಕ್ಷುಲ್ಲಕ ಎಂದು ಅನಿಸಿದರೂ ಸರಿ, ಅವನಿಂದ ಸಾರಸ್ವತ ಸಮಾಜಕ್ಕೆ, ಸಮಗ್ರತೆಗೆ, ಆತ್ಮಗೌರವಕ್ಕೆ ಪ್ರಕಟ ಹಾಗೂ ಪ್ರಚ್ಛನ್ನ ಅಪಾಯದ ಸೂಚನೆ ಬಂದಾಗ, ಅದನ್ನು ಸತತ ಸಾಧನೆಯ ಮೂಲಕ ಪಟ್ಟುಹಿಡಿದು ಎದುರಿಸಲು ಪ್ರಯತ್ನಿಸಬೇಕು. ಪರಶುರಾಮನು ನಮ್ಮ ಪೂರ್ವಜರ ವಸಾಹತುಗಳನ್ನು ಸ್ಥಾಪಿಸುವಾಗ ಹಾಗೂ ವಿಶೇಷತಃ ನಮಗಾಗಿಯೇ ಪ್ರಯತ್ನಪೂರ್ವಕ ಸಂಪಾದಿಸಿದ ಈ ದೇವಭೂಮಿ ಗೋಮಂತಕದಲ್ಲಿ ನಮಗೆ ಅನುಗ್ರಹಿಸಿದ್ದು ಇದೇ ಸನಾತನ ಸಂದೇಶ."

6

ಸಾರಸ್ವತ ಮೌಲ್ಯಗಳ ಪುನರ್ವ್ಯಾಖ್ಯಾನ

ವರ್ಣಾಶ್ರಮ ವ್ಯವಸ್ಥೆಗೆ ಅನುಸಾರವಾಗಿ ಓರ್ವ ಸಾರಸ್ವತನು ಬ್ರಹ್ಮವೇತ್ತಾ, ಬ್ರಹ್ಮವಾದಿ, ಬ್ರಾಹ್ಮಣನಾಗುತ್ತಾನೆ. 'ವರ್ಣಯತಿ ಇತಿ ವರ್ಣಃ' ಯಾವುದು ವರ್ಣಿಸುತ್ತದೆಯೋ ಅದು ವರ್ಣ. ಓರ್ವ ವ್ಯಕ್ತಿ ತನ್ನ ಗುಣಕ್ಕೆ ಅನುಸಾರವಾಗಿ ಮಾಡುವ ಕರ್ಮವೇ 'ವರ್ಣ' ಎಂದು ಗೀತೆಯಲ್ಲಿ ಪದಪ್ರಯೋಗವಾಗಿದೆ. ಅದೇ ಗೀತೆ ಹೀಗೆ ಎಚ್ಚರಿಸುತ್ತದೆ. ಇತರರಿಗೆ ವಿಧಿಸಿದ ಕರ್ಮವನ್ನು ಆಚರಿಸುವುದಕ್ಕಿಂತ ತನ್ನ ಗುಣಕ್ಕೆ ತಕ್ಕಂತೆ ಕರ್ಮವನ್ನು ಆಚರಿಸುವುದೇ ಶ್ರೇಯಸ್ಕರ. ಬ್ರಾಹ್ಮಣ ವರ್ಣದ ವಿವರಣೆಯ ಪ್ರಕಾರ,

ಬ್ರಾಹ್ಮಣನು ವೇದರತಃ– ವೇದವಿದ್ಯೆಯ ಅಧ್ಯಯನದಲ್ಲಿ ನಿರಂತರ ಆಸಕ್ತಿಯುಳ್ಳವನು, ಸದ್ವಿಚಾರೀ – ಜಗದಾದಿಮೂಲವಾದ ಸತ್ಯದ ಚಿಂತನೆಯಲ್ಲಿ ಮಗ್ನನು, ವೇದವೇತ್ತಾ – ವೇದಶಾಸ್ತ್ರ ಪಂಡಿತನು, ಸದಾಚಾರೀ – ನಿರಂತರ ಸತ್ಯದ ಕುರಿತು ಅನುಸಂಧಾನ ಮಾಡುತ್ತಿರುವವನು. ಬ್ರಾಹ್ಮಣನಲ್ಲಿ ಇರಬೇಕಾದ ಗುಣಗಳು ಯಾವವೆಂದರೆ, ದೇವದ್ವಿಜಗುರುಪ್ರಾಜ್ಞಪೂಜನಮ್ – ದೇವರಲ್ಲಿ, ದ್ವಿಜರಲ್ಲಿ, ಗುರುಹಿರಿಯರಲ್ಲಿ ಹಾಗೂ ಜ್ಞಾನಿಗಳಲ್ಲಿ ಪೂಜ್ಯಭಾವನೆ, ಶೌಚಮ್ – ಶುಚಿತ್ವದ ಪಾಲನೆ, ಆರ್ಜವಂ– ಪ್ರಾಮಾಣಿಕತೆ, ಬ್ರಹ್ಮಚರ್ಯಂ– ಬ್ರಹ್ಮಮಾರ್ಗದ ಆಚರಣೆಯಲ್ಲೇ ದೃಢನಿಷ್ಠೆ, ಅಹಿಂಸಾ– ಪರಪೀಡನೆಯಲ್ಲಿ ನಿರಾಸಕ್ತಿ, ಅನುದ್ವೇಗಕರಂ ವಾಕ್ಯಂ– ಉದ್ವೇಗ, ಆವೇಶದಿಂದ ಕೂಡಿದ ಮಾತುಗಳನ್ನು ಆಡದಿರುವುದು, ಸತ್ಯಂ ಪ್ರಿಯ ಹಿತಂ – ಪ್ರಿಯವೂ ಹಿತಕರವೂ ಆದ ಸತ್ಯವಚನ, ಸ್ವಾಧ್ಯಾಯಾಭ್ಯಸನಂ – ಆತ್ಮವಿದ್ಯೆಯ ಅಧ್ಯಯನದಲ್ಲೇ ತೊಡಗಿರುವುದು, ಮನಃ ಪ್ರಸಾದ– ಪ್ರಸನ್ನಚಿತ್ತ, ಸೌಮ್ಯತ್ವಂ– ಸೌಮ್ಯಸ್ವಭಾವ, ಮೌನಂ ಆತ್ಮನಿಗ್ರಹಃ – ಮೌನ, ಆತ್ಮಸಂಯಮ ಹಾಗೂ ಭಾವಸಂಶುದ್ಧಿ – ಚಿತ್ತ ಶುದ್ಧಿ.

ಆದ ಕಾರಣ ತಾವು ಸಾರಸ್ವತರು ಎಂದು ತಮ್ಮ ಹಕ್ಕನ್ನು ಸಾಧಿಸುವವರು ಇಂದು ತಮ್ಮಲ್ಲೇ ಈ ಪ್ರಶ್ನೆಗಳನ್ನು ಕೇಳಿಕೊಂಡು ಆತ್ಮಾವಲೋಕನ ಮಾಡಿಕೊಳ್ಳಬೇಕು.

1) ನಾವು ನಿಜವಾಗಿಯೂ ಈ ಬ್ರಾಹ್ಮಣ ಗುಣಗಳನ್ನು ಹೊಂದಿರುವೆವೇ?
2) ಇವುಗಳಲ್ಲಿ ಕೆಲವಾದರೂ ಗುಣಗಳು ನಮ್ಮಲ್ಲಿವೆಯೇ?
3) ನಾವೀಗ ಬ್ರಾಹ್ಮಣ ವೇಷದಲ್ಲಿರುವ ವೈಶ್ಯರಾಗಿದ್ದೇವೆ, ಎಂದು

ನಿರ್ದಿಷ್ಟವಾಗಿ ಹೇಳುವ ಹಂತಕ್ಕೆ ತಲಪಿದ್ದೇವೆಯೇ?

ಒಂದು ವೇಳೆ, ತಾವು ಬ್ರಾಹ್ಮಣರು ಎಂದು ನಂಬಿಕೊಂಡಿದ್ದರೆ, ಅವರು ವ್ಯಾಪಾರ ಮತ್ತು ವಾಣಿಜ್ಯೋದ್ಯಮಗಳಿಗಷ್ಟೇ ತಮ್ಮನ್ನು ಸೀಮಿತಗೊಳಿಸುವ ಅಗತ್ಯವೇನಿಲ್ಲ. ಆದರೆ ಅವರು ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪ್ರತಿಗ್ರಹ ಎಂಬ ಬ್ರಾಹ್ಮಣರ ಷಟ್ಕರ್ಮಗಳಿಗೆ ಅಕ್ಷರಶಃ ಅಲ್ಲದಿದ್ದರೂ ತಾತ್ತ್ವಿಕ ನೆಲೆಯಲ್ಲಾದರೂ ಆದ್ಯತೆ ನೀಡಲಿ. ಯಾಕೆಂದರೆ, ಅವರು ಹಾಗೆ ಪ್ರವೃತ್ತರಾದರೆ ಮಾತ್ರ ದಿವ್ಯಶಕ್ತಿಯು ಅವರನ್ನು ಯಾವುದೇ ಪಕ್ಷಪಾತ ಅಥವಾ ಇಷ್ಟಾನಿಷ್ಟಗಳಿಲ್ಲದ ಉತ್ತಮ ಪುರುಷ ಅಥವಾ ಪುರುಷೋತ್ತಮರನ್ನಾಗಿ ಪರಿವರ್ತಿಸಿ, ಅವರನ್ನು ಅಜ್ಞೇಯವೂ, ಅಗ್ರಾಹ್ಯವೂ ಆದ ದಿವ್ಯ ಕರ್ಮಗಳಲ್ಲಿ ತೊಡಗಿಸಬಹುದು.

ಮಾನವನು ವ್ಯಾಪಕ ಅಸ್ತಿತ್ವವುಳ್ಳ ಜೀವಿ. ಪ್ರತ್ಯೇಕತಾ ಮನೋಭಾವದಿಂದ ದೂರವಾಗದೆ, ಪೂರಕ ಗುಣವುಳ್ಳವನು. ಗುಣಗಳು ಪರಸ್ಪರ ಅತಿಕ್ರಮಿಸುತ್ತವೆ. ಕೆಲವು ಸ್ವಲ್ಪಕಾಲ ಇಲ್ಲವೆ ದೀರ್ಘಕಾಲ ಇತರ ಗುಣಗಳ ಮೇಲೆ ಪ್ರಭಾವ ಬೀರುತ್ತವೆ. ಪ್ರಭಾವ ಬೀರುವ ಸಹಜ ಗುಣವು ಅವನ ಕರ್ಮಾನುಷ್ಠಾನವನ್ನು ನಿರ್ಧರಿಸುತ್ತದೆ. ಆದ್ದರಿಂದ ವಸಿಷ್ಠ, ಕಣ್ವ, ಭಾರ್ಗವ, ವಿಶ್ವಾಮಿತ್ರರಂಥ ಋಷಿಗಳು ಮಂತ್ರದ್ರಷ್ಟಾರರಾಗಿದ್ದರೂ ಸಾಂಸ್ಕೃತಿಕ ಪರಂಪರೆಯಾಗಿ ಗುಣಗಳನ್ನು ರಕ್ಷಿಸುವ ಅಗತ್ಯವಿದ್ದಾಗ, ಅಪವಾದಾತ್ಮಕ ಪರಿಸ್ಥಿತಿಗಳಲ್ಲಿ ಶಸ್ತ್ರಧಾರಿಗಳಾಗುವ ಪ್ರಸಂಗ ಒದಗಿಬಂತು. ತಾತ್ಕಾಲಿಕವಾಗಿ ಇಲ್ಲವೆ ಪೂರಕವಾಗಿ, ಇತರ ಯಾವುದೇ ಕರ್ಮವನ್ನು ಕೈಗೆತ್ತಿಕೊಳ್ಳುವುದರಿಂದ ಸಾರಸ್ವತನು ಬ್ರಾಹ್ಮಣನಾಗುವುದನ್ನು ತಪ್ಪಿಸಲು ಸಾಧ್ಯವಿಲ್ಲ. ಆದ್ದರಿಂದ ಹಿಂದಿನ ಕಾಲದಲ್ಲಿ ಯಾರಾದರೂ ಸ್ವಭಾವ ಪ್ರೇರಿತರಾಗಿ ಕರ್ಮವನ್ನೆಸಗಿದರೆ ಅದನ್ನು ನಿಷೇಧಿಸುತ್ತಿರಲಿಲ್ಲ. ಮತ್ತು ಒಂದು ವರ್ಣದಿಂದ ಇನ್ನೊಂದು ವರ್ಣಕ್ಕೆ ಹೋಗಲು ಸ್ವಾತಂತ್ರ್ಯವಿರುತ್ತಿತ್ತು. ವಿಶ್ವಾಮಿತ್ರನು ಜನ್ಮತಃ ಕ್ಷತ್ರಿಯನು. ವ್ಯಾಸ - ವಾಲ್ಮೀಕಿಯರು ಜನ್ಮತಃ ಶೂದ್ರರು. ಆದರೂ ಅವರು ತಮ್ಮ ಗುಣಬಲದ ನಿಮಿತ್ತ ಬ್ರಾಹ್ಮಣರಾದರು. ಜನ್ಮತಃ ದ್ರೋಣ, ಕೃಪ, ಅಶ್ವತ್ಥಾಮರು ಬ್ರಾಹ್ಮಣರಾಗಿದ್ದರೂ ಕ್ಷತ್ರಿಯರ ಕರ್ಮವನ್ನೆಸಗಿದರು. ಆದರೆ, ಮಾನವನು ಸ್ವಭಾವವಿರೋಧೀ ಕರ್ಮವನ್ನು ಎಸಗಿದಾಗ, ಅದು ಸ್ವಭಾವಕ್ಕೆ ಅಸಂಗತ ವಾದುದರಿಂದ ಅಪಾಯಕಾರಿಯಾಗಿರುತ್ತದೆ. ಕರ್ಮವು ಪ್ರಚೋದನೆಗೊಳಗಾದ ನನ್ನಿಂದ ಆಗುತ್ತಿದೆ; ಸ್ವಭಾವತಃ ನಾನು ಮಾಡುತ್ತಿಲ್ಲ, ಎಂದು ಯೋಚಿಸುವ ಕಿಂಕರ್ತವ್ಯ ವಿಮೂಢನಾದ ವ್ಯಕ್ತಿಯಿಂದ ಮಾತ್ರ ಇಂಥ ಕರ್ಮಗಳು ಘಟಿಸುತ್ತವೆ.

ಆದ್ಯತೆಯನ್ನು ಸಾಂಪ್ರದಾಯಿಕ ಆಧ್ಯಾತ್ಮಿಕ ಮೌಲ್ಯಗಳಿಗಾಗಿ

ನೀಡಬೇಕೋ ಇಲ್ಲವೆ ತತ್ಕಾಲೀನ ಲೌಕಿಕ ಪ್ರಾಪ್ತಿಗಾಗಿ ನೀಡಬೇಕೋ? ಎಂಬುದರ ಕುರಿತು ಸಾರಸ್ವತರು ಚಿಂತನೆ ಮಾಡಬೇಕು. ಸಾರಸ್ವತರು ಬೌದ್ಧಿಕ ಹಾಗೂ ಆಧ್ಯಾತ್ಮಿಕ ಸಾಧನೆಗಳ ಕಡೆಗೆ ಕೇಂದ್ರೀಕರಿಸಿದ ತಮ್ಮ ಲಕ್ಷ್ಯವನ್ನು ಬದಲಿಸುವ ಸಮಯ ಸನ್ನಿಹಿತವಾದರೂ ಲೌಕಿಕ ಸಾಧನೆಗಳನ್ನು ಕಡೆಗಣಿಸಬೇಕೆಂದು ಯಾರೂ ಸೂಚಿಸಲಾರರು. ಸಾರಸ್ವತನು ಈ ರೀತಿ, ತನ್ನ ಉತ್ತರದಾಯಿತ್ವ ಮತ್ತು ಪರಂಪರೆಯ ಪ್ರಜ್ಞೆಯಿಂದ ಜಾಗೃತನಾಗಿ, ಆಸ್ತಿಯ ಸಂಪತ್ತು ಮತ್ತು ಐಶ್ವರ್ಯದ ವೈಭವಕ್ಕಿಂತ ಜ್ಞಾನಸಂಪತ್ತು ಮತ್ತು ಆತ್ಮದ ವೈಭವವೇ ಶ್ರೇಯಸ್ಕರ ಎಂದು ಭಾವಿಸಿದಾಗ, ತಾನು ಸಾರಸ್ವತ ಬ್ರಾಹ್ಮಣನೆಂದು ಹೆಮ್ಮೆಪಡುತ್ತಾನೆ.

'ಸತ್ಯವು' ಸನಾತನ, ನಿರ್ವಿಕಾರ, ಜಗದಾದಿ ಮೂಲ ಅಸ್ತಿತ್ವ ಹಾಗೂ 'ಸತ್ವ'ವಾಗಿ ವಿಭಿನ್ನ ವ್ಯಕ್ತ ರೂಪಗಳಲ್ಲಿ ಪ್ರವೇಶಿಸುತ್ತದೆ. 'ಋತ'ವು ಈ ವ್ಯಕ್ತ ರೂಪಗಳ ಪರಿವರ್ತನೆ ಮತ್ತು ಪೋಷಣೆಗಳನ್ನು ನಿಯಂತ್ರಿಸುವ ಕಠೋರನಿಯಮ. ಅದು ಅಂತಃಸತ್ವಕ್ಕೆ ಸಮಾನವಾಗಿರುವ ತನಕ ವ್ಯಕ್ತರೂಪಗಳನ್ನು ನಿಯಂತ್ರಿಸುತ್ತದೆ. ಆದರೆ ಅವು ತಮ್ಮ ಕರ್ಮವನ್ನು ಮಾಡಲು ಅಸಮರ್ಥವಾದಾಗ ಅವುಗಳನ್ನು ಲಯಗೊಳಿಸುತ್ತದೆ. 'ಧರ್ಮ' ಎಂಬ ನ್ಯಾಯನಿಷ್ಠ ತತ್ತ್ವವು ಯುಗಧರ್ಮಾನುಸಾರವಾಗಿ ಕಾಲಕಾಲಕ್ಕೆ ವ್ಯಕ್ತರೂಪಗಳ ಆಧ್ಯಾತ್ಮಿಕ ಮತ್ತು ಲೌಕಿಕ ಉದ್ದೇಶಗಳಿಗೆ ಮಾರ್ಗದರ್ಶನವನ್ನು ನೀಡುತ್ತದೆ. ಬಹುಕಾಲದಿಂದ ನೆಲೆಸಿರುವ ಪ್ರಾಣಿವರ್ಗಗಳಲ್ಲಿ ಮಾನವನೊಬ್ಬನೇ ಮೂಲ ಸತ್ಯದ ಕುರಿತು ಜ್ಞಾನ ಇರುವ ಮತ್ತು ಅದರ ಧ್ಯೇಯ ಸಾಧನೆಯಲ್ಲಿ ಪಾಲ್ಗೊಳ್ಳುವ ಸಾಮರ್ಥ್ಯವುಳ್ಳವನು. ಹಾಗಾದಾಗ, ಅವನ ವ್ಯಕ್ತರೂಪವು ದಿವ್ಯಸತ್ವಕ್ಕೆ ಶ್ರುತಿಗೂಡಿದೆ. ಹಾಗೂ ಋತದ ಸಿದ್ಧಿಯಾಗಿದೆ ಎಂದು ಹೇಳಬಹುದು. ಜಗದಾದಿಮೂಲದ ಸತ್ಯದ ಸತ್ವವನ್ನು ಪ್ರತಿನಿಧಿಸುವ ಸತ್ಯ ಮತ್ತು ಋತಗಳಿಗಿಂತ ಭಿನ್ನವಾಗಿ 'ಧರ್ಮ'ದ ಪರಿವರ್ತನಶೀಲ ರೂಪವು ದೇಶ, ಕಾಲ ಮತ್ತು ಜನಾಂಗದೊಂದಿಗೆ ಬದಲಾಗುತ್ತಿರಬೇಕಾಗುತ್ತದೆ. ಯುಗ ಅಥವಾ ಇತಿಹಾಸವು ಅಸಂಖ್ಯ ಘಟನೆಗಳ ನೈಜ ದಾಖಲೆಯಾಗಿರುವುದಿಲ್ಲ. ಆದರೆ ಅದು ಸ್ಥೂಲದಿಂದ ಸೂಕ್ಷ್ಮಕ್ಕೆ, ಅನಾಗರಿಕ ಸ್ಥಿತಿಯಿಂದ ಸುಸಂಸ್ಕೃತ ಸ್ಥಿತಿಯ ಕಡೆಗೆ ಮಾನವನ ವಿಕಾಸ ಆಗುತ್ತ ಹೋಗುವುದರ ನಾಟಕೀಯ ಘಟನಾವಳಿ.

ವಿವೇಕ – ಚೂಡಾಮಣಿಯಲ್ಲಿ ಶ್ರೀ ಶಂಕರಾಚಾರ್ಯರು ಹೀಗೆ ಹೇಳುತ್ತಾರೆ,

"ಜಂತೂನಾಂ ನರಜನ್ಮ ದುರ್ಲಭಮತಃ ಪುಂಸ್ತ್ವಂ ತತೋ ವಿಪ್ರತಾ
ತಸ್ಮಾತ್ ವೈದಿಕಧರ್ಮಮಾರ್ಗಪರತಾ ವಿದ್ವತ್ತಸ್ಮಾತ್ಪರಂ ।
ಆತ್ಮಾನಾತ್ಮ ವಿವೇಚನಂ ಸ್ವಾನುಭವೋ ಬ್ರಹ್ಮಾತ್ಮನಾ ಸಂಸ್ಥಿತೀ
ಮುಕ್ತಿರ್ನೋರ್ ಶತಕೋಟಿ ಜನ್ಮಸುಕೃತೈಃ ಪುಣ್ಯಂ ವಿನಾ ನ ಲಭ್ಯತೇ॥"

ಪ್ರಾಣಿಗಳಲ್ಲಿ ಮಾನವಜನ್ಮವು ದುರ್ಲಭವಾದುದು. ಮಾನವರಲ್ಲಿ ಪುರುಷತ್ವ ಉಳ್ಳವರು, ಪುರುಷರಲ್ಲಿ ಬುದ್ಧಿವಂತರು, ಅವರಲ್ಲಿ ವೈದಿಕ ಧರ್ಮಮಾರ್ಗದಲ್ಲಿ ಆಸಕ್ತಿ ಉಳ್ಳವರು, ಅವರಲ್ಲಿ ವಿದ್ವಾಂಸರು ಶ್ರೇಷ್ಠರು. ಆತ್ಮಾನಾತ್ಮವಿಚೇಚನಾಶಕ್ತಿ, ಆತ್ಮ ಸಾಕ್ಷಾತ್ಕಾರ, ಆತ್ಮಾನುಸಂಧಾನ ಮತ್ತು ಮೋಕ್ಷಾಪೇಕ್ಷೆ ಇವೇ ಮುಂತಾದವು ಅಸಾಧಾರಣ ಗುಣಗಳು. ಇವು ಶತಕೋಟಿ ಜನ್ಮಗಳ ಪುಣ್ಯಬಲದಿಂದ ಮಾತ್ರ ಪ್ರಾಪ್ತವಾಗುತ್ತವೆ. ಇಲ್ಲದಿದ್ದರೆ ಸಾಧ್ಯವಿಲ್ಲ. ಆದ್ದರಿಂದ

"ದುರ್ಲಭಂ ತ್ರಯಮೇವೈತದ್ದೈವಾನುಗ್ರಹ ಹೇತುಕಂ।
ಮನುಷ್ಯತ್ವಂ ಮುಮುಕ್ಷುತ್ವಂ ಮಹಾಪುರುಷ ಸಂಶ್ರಯಃ॥"

ಮಾನವ ಜನ್ಮ, ಮೋಕ್ಷಾಪೇಕ್ಷೆ ಮತ್ತು ಸಜ್ಜನರ ಸಂಗ ಇವು ಮೂರೂ ದೈವಾನುಗ್ರಹ ನಿಮಿತ್ತ ಲಭಿಸುತ್ತವೆ.

ಜ್ಞಾನವಂತ ದೇವರಾಗಬೇಕೋ, ಅಜ್ಞಾನೀ ಅಸುರರಾಗಬೇಕೋ ಎಂಬ ಮೀಮಾಂಸೆಯನ್ನು ಜನರು ತಮ್ಮಲ್ಲಿಯೇ ನಿರ್ಧರಿಸಿಕೊಳ್ಳಬೇಕು. ಕೆಲವರು ಮಾತ್ರ ಜ್ಞಾನಿಗಳಾಗಲು ಅಪೇಕ್ಷೆ ಪಡುತ್ತಾರೆ. ಹಲವರು ಚಿತ್ತಾಪಕರ್ಷಕವಾದ ಸುಖಾಪೇಕ್ಷೆಯಿಂದ ಆಕರ್ಷಿತರಾಗಿ ಅಜ್ಞಾನಿಗಳಾಗಿಯೇ ಇರಲು ಅಪೇಕ್ಷಿಸುತ್ತಾರೆ. ಇದು ನಿಜಕ್ಕೂ ಜೀವನದ ವಿಡಂಬನೆಯಾಗಿದೆ. ಶ್ರೀ ಕೃಷ್ಣನು ಗೀತೆಯಲ್ಲಿ ಹೀಗೆ ಹೇಳುತ್ತಾನೆ.

"ಆವೃತಂ ಜ್ಞಾನಮೇತೇನ ಜ್ಞಾನಿನೋ ನಿತ್ಯ ವೈರಿಣಾ।
ಕಾಮರೂಪೇಣ ಕೌಂತೇಯ ದುಷ್ಪೂರೇಣಾನಲೇನ ಚ ॥"

– ಗೀತೆ 3:39

"ಎಲೈ ಅರ್ಜುನ, ಜ್ಞಾನಿಗಳ ನಿತ್ಯವೈರಿಯಾದ ಕಾಮ ಎಂಬ ಅಗ್ನಿಯಿಂದ ಜ್ಞಾನವು ಆವರಿಸಲ್ಪಟ್ಟಿದೆ. ಕಾಮವು ಎಂದೂ ಪೂರ್ಣವಾಗದ, ಎಂದಿಗೂ ತೃಪ್ತಿಗೊಳ್ಳದ ಭಗಭಗನೆ ಉರಿಯುತ್ತಿರುವ ಬೆಂಕಿಯಂತಿರುತ್ತದೆ."

ಆದ್ದರಿಂದ, ಜ್ಞಾನಿಯ ಮುಂದೆ ಶ್ರೇಯಸ್ಸು ಮತ್ತು ಪ್ರೇಯಸ್ಸು ಬಂದಾಗ ಅವನು ಪ್ರೇಯಸ್ಸನ್ನು ಆರಿಸಿಕೊಳ್ಳದೆ ಶ್ರೇಯಸ್ಸನ್ನು ಆರಿಸಿಕೊಳ್ಳುತ್ತಾನೆ.

"ಶ್ರೇಯಶ್ಚ ಪ್ರೇಯಶ್ಚ ಮನುಷ್ಯಾಣಾಂ ಸಂಪರೀತ್ಯ ವಿವಿನಕ್ತಿ ಧೀರಃ।
ಶ್ರೇಯೋ ಹಿ ಧೀರೋಽಭಿ ಪ್ರೇಯಸೋ ವೃಣೀತೇ ಪ್ರೇಯೋ ಮಂದೋ
ಯೋಗಕ್ಷೇಮಾತ್ ವೃಣೀತೇ ।" – ಕಠೋಪನಿಷತ್.

ಆದಕಾರಣ ಶ್ರೀ ಶಂಕರಾಚಾರ್ಯರು ಹೀಗೆ ಸೂಚಿಸುತ್ತಾರೆ.

ಶ್ರೀ ಹರಿಯ ಆರಾಧನೆ, ನಿರ್ಮೋಹತ್ವ, ಸತ್‌ಪ್ರವೃತ್ತಿ, ನಿತ್ಯಾನಿತ್ಯವಸ್ತು ವಿವೇಕ, ಇಂದ್ರಿಯ ವ್ಯಾಮೋಹದಿಂದ ವಿರಕ್ತಿ, ಕರ್ಮೇಂದ್ರಿಯ ಜ್ಞಾನೇಂದ್ರಿಯಗಳ ನಿಗ್ರಹ, ವೈರಾಗ್ಯ, ಶಾಸ್ತ್ರಾಧ್ಯಯನದಲ್ಲಿ ಆಸಕ್ತಿ, ಗುರು–ಹಿರಿಯರಲ್ಲಿ ಸ್ನೇಹ–ಸೌಹಾರ್ದ ಇವೇ ಮೊದಲಾದ ಗುಣಗಳನ್ನು ಆಧರಿಸಿ, ಮಾನವನು ತನ್ನ ಆಶ್ರಮ ಧರ್ಮಕ್ಕೆ ಅನುಗುಣವಾಗಿ, ಕರ್ಮದ ಪಾವಿತ್ರ್ಯವನ್ನು ಕಾಪಾಡಿಕೊಂಡು, ತನ್ನ ಸಾಧನ ಪರಿಕರಗಳಲ್ಲಿ ಶಕ್ತಿಯನ್ನು ತುಂಬಿಕೊಳ್ಳಬೇಕು.

"ಸ್ವವರ್ಣ ಆಶ್ರಮಧರ್ಮೇಣ ತಪಸಾ ಹಾರಿತೋಷಣಾತ್ ಸಾಧನಂ
ಪ್ರಭಾವೇತ್ ಪುಂಸಾಂ ವೈರಾಗ್ಯದಿಶಿಶ್ಯತಾಂ॥"

ಇಲ್ಲಿ 'ಸ್ವವರ್ಣ' ಒಬ್ಬನ ಜಾತಿ ಅಲ್ಲ. 'ವರ್ಣ' ಅಂದರೆ ಗುಣವರ್ಣನೆ, ಸತ್ವ. 'ಆಶ್ರಮ' – ಒಬ್ಬನ ಜೀವನದ ಹಂತ. 'ಬಾಲ್ಯ' – ದೈಹಿಕ ಬೆಳವಣಿಗೆಯ ಪ್ರಾರಂಭಾವಸ್ಥೆ. 'ಬ್ರಹ್ಮಚರ್ಯ' – ಆಶ್ರಮದಲ್ಲಿ ಬ್ರಹ್ಮಾನು ಸಂಧಾನದಲ್ಲಿ ಇರುವುದು. 'ಗೃಹಸ್ಥ' – ಆಶ್ರಮದಲ್ಲಿ ಗೃಹಿಣಿಯ ಪಾಣಿಗ್ರಹಣಮಾಡಿ, ಮನೆಯಲ್ಲಿ ದಾಂಪತ್ಯ ಜೀವನವನ್ನು ನಡೆಸುವ ಸ್ಥಿತಿ. 'ಗೃಹಿಣಿ'– ಶಕ್ತಿಯ ಪ್ರತಿನಿಧಿ, ಸಹಧರ್ಮಿಣಿ, ಸಹಚಾರಿಣಿ. 'ವಾನಪ್ರಸ್ಥ' – ಆಶ್ರಮದಲ್ಲಿ ವನಕ್ಕೆ ಪ್ರಸ್ಥಾನ ಅಥವಾ ಕಾಡಿಗೆ ಹೋಗುವುದಲ್ಲ. ತನ್ನ ಆತ್ಮವನ್ನು ದೇಹಭಾವದಿಂದ ದೂರವಿಡುವ ಸ್ಥಿತಿ. ಇಲ್ಲಿ 'ವನ' ಎಂದರೆ ದೇಹ. 'ಸಂನ್ಯಾಸ ಆಶ್ರಮ' – ಸಮಾಜವನ್ನು ನಿರಾಕರಿಸುವುದಲ್ಲ. ಸಾಮಾಜಿಕ ಆಕರ್ಷಣೆಯ ವ್ಯಾಮೋಹದ ನಿರಾಕರಣೆ ಮಾಡುವ ಸ್ಥಿತಿ. ಜ್ಞಾನಿಯು ಹೀಗೆ ತ್ರ್ಯಂಬಕನ (ಮುಕ್ಕಣ್ಣ) ಉಪಾಸನೆಯನ್ನು ಮಾಡುತ್ತಾನೆ.

"ತ್ರ್ಯಂಬಕಂ ಯಜಾಮಹೇ ಸುಗಂಧಿಂ ಪುಷ್ಟಿವರ್ಧನಂ ।
ಉರ್ವಾರುಕಮಿವ ಬಂಧನಾತ್ ಮೃತ್ಯೋರ್ಮುಕ್ಷೀಯ ಮಾಽಮೃತಾತ್॥"

"ದೇವಾ, ನೀನು ಸುಗಂಧಯುಕ್ತನೂ, ಪುಷ್ಟಿವರ್ಧಕನೂ ಆದ ರುದ್ರ, ಮೃತ್ಯುಂಜಯ. ಆದ್ದರಿಂದ ನಿನ್ನ ಬಳಿ ಹೀಗೆ ಮೋಕ್ಷಾಪೇಕ್ಷೆಯಿಂದ ಬೇಡುತ್ತಿದ್ದೇನೆ. ಕುಂಬಳಕಾಯಿ ಇಲ್ಲವೆ ಸವುತೆಕಾಯಿಯು ಪಕ್ವವಾದಾಗ ತನ್ನ ಬಳ್ಳಿಯಿಂದ ತಾನಾಗಿ ಕಳಚಿಕೊಳ್ಳುತ್ತದೆ. ಅದೇ ರೀತಿ, ನಾನು ಕೂಡ ಮೃತ್ಯು ಬಂಧನದಿಂದ ಅನಾಯಾಸವಾಗಿ ಪಾರಾಗುವಂತೆ ಅನುಗ್ರಹಿಸು. ಅಮೃತತ್ವದಿಂದ ಬೇರೆ ಮಾಡಬೇಡ.

ಸಾರಸ್ವತರು ವೇದ-ವೇದಾಂಗ ಪಾರಂಗತರೂ, ಮಂತ್ರ, ಔಷಧಿ, ತಪ ಹಾಗೂ ಯೋಗಬಲದಿಂದ ಜಿತೇಂದ್ರಿಯರೂ ಆಗಿದ್ದರು. ತಾವು ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ ಮತ್ತು ಪ್ರತಿಗ್ರಹ ಎಂಬ ಷಟ್ಕರ್ಮಗಳನ್ನು ನಿರ್ವಹಿಸುತ್ತಿರುವ ಸಾರಸ್ವತರು ಎಂಬ ಸಾತ್ವಿಕ ಪ್ರಜ್ಞೆಯಿಂದಿದ್ದರೆ ಮಾತ್ರ ಅವರು ಬೌದ್ಧಿಕವಾಗಿಯೂ ಆಧ್ಯಾತ್ಮಿಕವಾಗಿಯೂ ಸ್ಪಂದಿಸಬಲ್ಲರು. "ಅಧ್ಯಯನ" ಎಂದರೆ ವ್ಯಾಸಪ್ರಣೀತ ವೇದ ಶಾಸ್ತ್ರಗಳಲ್ಲಿರುವ ಸಾರ್ವಲೌಕಿಕ ನೈತಿಕ ಮೌಲ್ಯಗಳಲ್ಲಿ ದೀಕ್ಷಾ-ಸಂಸ್ಕಾರವನ್ನು ಪಡೆಯುವುದು. ಶ್ರೀ ಶಂಕರಾಚಾರ್ಯರು ತಮ್ಮ 'ಸಾಧನಾ ಪಂಚಕ'ದಲ್ಲಿ 'ವೇದೋ ನಿತ್ಯಮಧೀಯತಾಂ' (ಪ್ರತಿನಿತ್ಯ ವೇದಾಧ್ಯಯನ ಮಾಡಬೇಕು.) ಎಂಬ ಸೂಚನೆ ನೀಡುವಾಗ, ವೇದವನ್ನು ಕಂಠೋದ್ಗತ ಮಾಡಿ, ನಿತ್ಯ ಪಠಣ ಮಾಡುವ ವಿಚಾರಕ್ಕಷ್ಟೇ ಸಮ್ಮತಿ ನೀಡಿರಲಿಲ್ಲ. ಅದರ ತತ್ತ್ವವನ್ನು ಜಾಗರೂಕ ಬುದ್ಧಿ ಮತ್ತು ಜಾಗೃತ ಪ್ರಜ್ಞೆಯಿಂದ ಆಚಾರ ರೂಪದಲ್ಲಿ ಇಳಿಸಬೇಕು. ಎಂದು ವಿಧಿಸಿದ್ದರು. ಋಗ್ವೇದವೂ ಹೀಗೆ ನಿರ್ದೇಶನ ನೀಡುತ್ತದೆ. "ಒಬ್ಬನು ವೇದಗಳ ಅಧ್ಯಯನವನ್ನು ಮಾಡದೇ ಹೋದರೆ, ವೇದವು ಅವನಿಗಾಗಿ ಏನು ಮಾಡಬಲ್ಲದು? 'ತತ್' ವಸ್ತುವನ್ನು ಯಾರು ಅರಿತಿರುವರೋ ಅವರೇ ಎಲ್ಲವನ್ನೂ ಅರಿತವರು. ಯಾಸ್ಕ ಮುನಿಗಳು ಹೀಗೆ ಹೇಳಿದ್ದಾರೆ. ಶಬ್ದವನ್ನರಿತು, ಅರ್ಥವನ್ನು ಅರಿಯದೆ ಕೇವಲ ವೇದಾಧ್ಯಯನವನ್ನು ಮಾಡಿದವನು ಹೊರೆಯನ್ನು ಹೊತ್ತವನ ಸಮಾನ.

'ಯೋಗ' ಎಂದರೆ ನಿರ್ವಿಕಲ್ಪ ಸತ್ಯದ ಅನುರಣನದೊಂದಿಗೆ ಚಿತ್ತವನ್ನು ಶ್ರುತಿಗೂಡಿಸುವ ಪ್ರಕ್ರಿಯೆ. 'ಅಧ್ಯಯನ'ವು ವ್ಯಕ್ತಿಯ ಬುದ್ಧಿಮತ್ತೆಯನ್ನು ಬೆಳಗಿಸಿ ದೃಷ್ಟಿಯನ್ನು ವಿಶಾಲಗೊಳಿಸುತ್ತದೆ. ಗಾಯತ್ರೀ ಮಂತ್ರದ ಪ್ರಾರ್ಥನೆಯು ಓಂಕಾರದೊಂದಿಗೆ ಪ್ರಾರಂಭವಾಗುತ್ತದೆ. ಪ್ರಣವ ಸ್ವರೂಪೀ ಪರಮಾತ್ಮನು (ಓಂ) ಭೂಲೋಕ (ಭೂಃ), ಭುವರ್ಲೋಕ ಅಂದರೆ ಆಕಾಶ (ಭುವಃ), ಆಕಾಶದ ಆಚೆಯಿರುವ ಸ್ವರ್ಲೋಕ(ಸ್ವಃ)ಗಳಲ್ಲೂ ವ್ಯಾಪಿಸಿಕೊಂಡಿರುವವನು. ಆ (ತತ್)

ಶ್ರೇಷ್ಠ (ವರೇಣ್ಯಂ) ಪವಿತ್ರ ಶಕ್ತಿಯಾದ ಪರಂಜ್ಯೋತಿಯ (ಸವಿತುಃ) ದೇದೀಪ್ಯಮಾನವಾದ (ದೇವಸ್ಯ) ತೇಜಸ್ಸನ್ನು ಕುರಿತು (ಭರ್ಗಃ) ನಾವು ಧ್ಯಾನವನ್ನು ಮಾಡುತ್ತೇವೆ. (ಧೀಮಹಿ) ಅಂಥ ತೇಜಸ್ವಿಯು (ಯಃ) ನಮ್ಮ (ನಃ) ಧೀಶಕ್ತಿಯನ್ನು (ಧಿಯಃ) ಪ್ರಚೋದಿಸಲಿ.(ಪ್ರಚೋದಯಾತ್)

"ಓಂ ಭೂರ್ಭುವಃ ಸ್ವಃ
ತತ್ ಸವಿತುರ್ವರೇಣ್ಯಂ
ಭರ್ಗೋ ದೇವಸ್ಯ ಧೀಮಹಿ
ಧಿಯೋ ಯೋ ನಃ ಪ್ರಚೋದಯಾತ್ ॥"

ಭಗವದ್ಗೀತೆಯು ಹೀಗೆ ಆಜ್ಞಾಪಿಸುತ್ತದೆ. ತತ್ತ್ವದರ್ಶಿಗಳಾದ ಜ್ಞಾನಿಗಳ ಬಳಿ ಹೋಗಿ, ಆ ಜ್ಞಾನವನ್ನು (ತತ್) ತಿಳಿದುಕೋ (ವಿದ್ಧಿ). ಅವರಿಗೆ ಶ್ರದ್ಧಾಪೂರ್ವಕ ದಂಡವತ್ ಪ್ರಣಾಮ ಮಾಡುವುದರಿಂದ (ಪ್ರಣಿಪಾತೇನ), ಅವರ ಬಳಿ ನಿಷ್ಕಪಟವಾದ ಪ್ರಶ್ನೆ, ವಿಚಾರ ವಿಮರ್ಶೆ ಮಾಡುವುದರಿಂದ (ಪರಿಪ್ರಶ್ನೇನ), ಅವರ ಸೇವೆ ಮಾಡುವುದರಿಂದ (ಸೇವಯಾ), ಪರಮಾತ್ಮ ತತ್ತ್ವವನ್ನು ಚೆನ್ನಾಗಿ ತಿಳಿದಿರುವ ಆ ಜ್ಞಾನಿಗಳೂ, ಮಹಾತ್ಮರೂ (ತತ್ತ್ವದರ್ಶಿನಃ ಜ್ಞಾನಿನಃ) ನಿನಗೆ (ತೇ) ತತ್ತ್ವಜ್ಞಾನದ ಉಪದೇಶವನ್ನು (ಜ್ಞಾನಂ) ಉಪದೇಶಿಸುತ್ತಾರೆ. (ಉಪದೇಕ್ಷ್ಯಂತಿ.)

"ತದ್ವಿದ್ಧಿ ಪ್ರಣಿಪಾತೇನ ಪರಿಪ್ರಶ್ನೇನ ಸೇವಯಾ ।
ಉಪದೇಕ್ಷ್ಯಂತಿ ತೇ ಜ್ಞಾನಂ ಜ್ಞಾನಿನನಸ್ತತ್ತ್ವದರ್ಶಿನಃ॥"

– ಗೀತೆ 04:34

ಆದ್ದರಿಂದ ಶ್ರವಣ, ಮನನ ಮತ್ತು ನಿದಿಧ್ಯಾಸನದ ಮೂಲಕ ಬ್ರಹ್ಮಜ್ಞಾನಕ್ಕೆ ನಿಷ್ಠನಾಗಿರುವುದೇ 'ಅಧ್ಯಯನ'. ತೈತ್ತಿರೀಯ ಉಪನಿಷತ್ತು ಸಾಧಕನಲ್ಲಿ ಚಿತ್ತಶುದ್ಧಿ, ಪ್ರಾಮಾಣಿಕವಾದ ಮಾತು ಮತ್ತು ದೋಷರಹಿತ ಕರ್ಮಾನುಷ್ಠಾನ ಇರಬೇಕೆಂದು ಹೇಳುತ್ತದೆ.

ಆಚಾರ್ಯನು 'ಸತ್ಯ'ದ ಕುರಿತು ತಿಳಿವಳಿಕೆಯನ್ನು ನೀಡುವ ಪ್ರಕ್ರಿಯೆಗೆ 'ಅಧ್ಯಾಪನ' ಎನ್ನುತ್ತಾರೆ. ತಾನು ಪಡೆದ ಜ್ಞಾನವನ್ನು ಆಚರಣೆಯಲ್ಲಿ ತಂದು ಅದನ್ನೇ ನೀಡಲು ಸಮರ್ಥನಾದ ಆಚಾರವಂತನೇ ನಿಜವಾದ ಆಚಾರ್ಯನು. ತನ್ನ ಅಧ್ಯಾಪನ ಕಾರ್ಯ ಮುಗಿದ ಬಳಿಕ ಮನೆಗೆ ಮರಳುವ ವಿದ್ಯಾರ್ಥಿಗಳಿಗೆ ಆಚಾರ್ಯನು ದೀಕ್ಷಾಂತ ಸಮಾರಂಭದ ಸಂದರ್ಭದಲ್ಲಿ ತುಂಬ ಜಾಗ್ರತೆ ವಹಿಸಿ ಹೀಗೆ ಹೇಳುತ್ತಾನೆ. 'ನೀವು ನಮ್ಮಲ್ಲಿರುವ ಸದ್ಗುಣ – ಸದಾಚಾರಗಳನ್ನಷ್ಟೇ

ಅಳವಡಿಸಿಕೊಳ್ಳಬೇಕು. ಮಿಕ್ಕವುಗಳನ್ನು ಬಿಟ್ಟುಬಿಡಿ.'

"ಯಾನಿ ಅಸ್ಮಾಕಂ ಸುಚರಿತಾನಿ ತಾನಿ ತ್ವಯೋಪಾಸ್ಯಾನಿ ನೋ ಇತರಾಣಿ।"

ಪವಿತ್ರ ವಿಚಾರಗಳು ಮನಸ್ಸನ್ನು ಉನ್ನತ ಸ್ಥಿತಿಗೆ ತಂದರೆ, ಅಪವಿತ್ರ ವಿಚಾರಗಳು ಅಧೋಗತಿಗೆ ತಳ್ಳುತ್ತವೆ. ಅಧ್ಯಾಪನ ಕಾರ್ಯವನ್ನು ಮಾಡುವಾಗ ಆಚಾರ್ಯನು ಸಾಧಕನನ್ನು ತಂದೆ ತನ್ನ ಮಗನ ಕೈ ಹಿಡಿದು ನಡೆಸುವಂತೆ ಪೂರ್ಣತ್ವದ ಪಥದಲ್ಲಿ 'ಅಸತ್'ದಿಂದ 'ಸತ್'ದ ಕಡೆಗೆ, 'ತಮಸ್'ನಿಂದ 'ಜ್ಯೋತಿ'ಯ ಕಡೆಗೆ, 'ಮೃತ್ಯು'ವಿನಿಂದ 'ಅಮೃತತ್ವ'ದ ಕಡೆಗೆ ಮುನ್ನಡೆಸುತ್ತಾನೆ. ಸಾಧಕನನ್ನು ಬ್ರಹ್ಮನಿಷ್ಠನನ್ನಾಗಿ ಮಾಡಿ, ಅವನಲ್ಲಿ ತನ್ನನ್ನೇ ಕಾಣುತ್ತಾನೆ. ತನ್ನ ಮಗನಂತೆ ಸಲಹುತ್ತಾನೆ. ಈ ಪ್ರಕ್ರಿಯೆಯಲ್ಲಿ ಆಚಾರ್ಯನು 'ಪೂರ್ವರೂಪ'ವಾದರೆ, ಶಿಷ್ಯನು 'ಉತ್ತರರೂಪ' ಆಗುತ್ತಾನೆ. ಆಗ 'ಜ್ಞಾನ'ವು ಮಧ್ಯವರ್ತಿಯಾಗಿ, ಈರ್ವರ ಸಂಯೋಗ-ಸಂಧಾನ ಮಾಡುವ 'ಸಂಧಿ' ಆಗುತ್ತದೆ. ಆದ್ಯತೆಯ ಮೇರೆಗೆ ಜನನಿಯೇ ಮೊದಲ ಗುರು, ಜನಕ ಎರಡನೆಯ ಗುರು ಮತ್ತು ಆಚಾರ್ಯನು ಅಂತಿಮ ಗುರು. ಆಚಾರ್ಯನು ಆಚರಿಸುತ್ತಿರುವ ನಿಷ್ಕಲಂಕವಾದ ಸದಾಚಾರ ವೊಂದನ್ನು ಬಿಟ್ಟು, ಅವನು ಬೋಧಿಸಿದ ಇತರ ಯಾವ ವಿಚಾರವನ್ನಾದರೂ ಸರಿ, ಅದನ್ನು ಶಿಷ್ಯನು ಒರೆಗೆ ಹಚ್ಚದೆ, ವಿಚಾರಣೆಗೆ ಒಳಪಡಿಸದೆ ಒಪ್ಪಿಕೊಂಡು ಮನ್ನಿಸಬೇಕಾಗಿಲ್ಲ.

ಜ್ಞಾನಾರ್ಥಿಯಾಗಿ ಬಂದವನಿಗೆ ಜ್ಞಾನ-ಸಂವಹನ ಮಾಡುತ್ತಿರುವಾಗ, ಅವನ ಗುಣಗಳನ್ನು ಭಗವತ್ ಸಂಕಲ್ಪಕ್ಕೆ ಮತ್ತು ಭಗವತ್ ಕಾರ್ಯಕ್ಕೆ ಅಣಿಗೊಳಿಸುವಂತೆ ವಿಧಿಸುವ ಪ್ರಕ್ರಿಯೆಯೇ 'ಯಜ್ಞ' ಅಥವಾ 'ಯಜನಕಾರ್ಯ'. ಯಜ್, ಯಮ್, ಯಚ್ಚ ಮತ್ತು ಯತ್ ಎಂದರೆ ತಲಪಿಸುವುದು, ಪಸರಿಸುವುದು, ಇತರರೊಡನೆ ಸಂಪರ್ಕಿಸುವುದು ಎಂದರ್ಥ. ಛಾಂದೋಗ್ಯ ಉಪನಿಷತ್ತು ಹೀಗೆ ಹೇಳುತ್ತದೆ.

'ಜನರು ಇಲ್ಲಿ ಪ್ರಸ್ತಾಪಿಸುವ ಯಜ್ಞವೂ, ಬ್ರಹ್ಮಚರ್ಯವೂ ಒಂದೇ. 'ಬ್ರಹ್ಮಚರ್ಯ' ಎಂದರೆ ಬ್ರಹ್ಮಭಾವದಲ್ಲಿ ಸಂಚರಿಸುವುದು. ನಿರಂತರವಾಗಿ ಪರಮಾತ್ಮನ ಜಾಗೃತ ಪ್ರಜ್ಞೆಯಲ್ಲಿಯೇ ತಾದಾತ್ಮ್ಯವನ್ನು ಹೊಂದಿರುವುದು. 'ಯಜ್ಞ' ಎಂದರೆ ಕರ್ಮದ ಅನುಷ್ಠಾನದ ಮೂಲಕ ದೇವತೆಗಳನ್ನು ಪೋಷಿಸುವುದು. ಇಂಥ ಯಜ್ಞಕಾರ್ಯದಿಂದ ಸಂಪ್ರೀತರಾದ ದೇವತೆಗಳು ತಮ್ಮ ದಿವ್ಯಶಕ್ತಿಯ ಮೂಲಕ ಯಜ್ಞಪೋಷಕರನ್ನು ನಿರ್ವಿಕಲ್ಪ ಪರಮ ಶ್ರೇಯಸ್ಸಿನ ಪ್ರಾಪ್ತಿಗಾಗಿ ಪೋಷಿಸಬಹುದು.

"ದೇವಾನ್ ಭಾವಯತಾನೇನ ತೇ ದೇವಾ ಭಾವಯಂತು ವಃ।
ಪರಸ್ಪರಂ ಭಾವಯಂತಃ ಶ್ರೇಯಃ ಪರಮವಾಪ್ಸ್ಯಥ॥" – ಗೀತೆ 3:11

"ನೀವು ಈ ಯಜ್ಞದ ಮೂಲಕ ದೇವತೆಗಳನ್ನು ತೃಪ್ತಿಪಡಿಸಿರಿ. ಮತ್ತು ಆ ದೇವತೆಗಳು ನಿಮ್ಮ ಉನ್ನತಿ ಮಾಡಲಿ. ಈ ಪ್ರಕಾರವಾಗಿ ನಿಃಸ್ವಾರ್ಥಭಾವದಿಂದ ಒಬ್ಬರು ಇನ್ನೊಬ್ಬರನ್ನು ತೃಪ್ತಿಪಡಿಸುತ್ತ ನೀವು ಪರಮ ಶ್ರೇಯಸ್ಸನ್ನು ಪಡೆಯುವಿರಿ."

ಅನೇಕ ರೂಪದ ಯೋಗಗಳಿವೆ ಎಂದು ಶ್ರೀ ಕೃಷ್ಣನು ಹೇಳಿದ್ದಾನೆ. ಯೋಗಿಗಳು ದಿವ್ಯಶಕ್ತಿ ರೂಪವಾದ ಅಗ್ನಿಯಲ್ಲಿ ತಮ್ಮ ಯಜ್ಞಕರ್ಮದ ಅನುಷ್ಠಾನದೊಂದಿಗೆ ಸಮಸ್ತ ಇಂದ್ರಿಯಗಳನ್ನು ಕಠಿಣ ವ್ರತೋಪಾಸನಾದಿ ತಪಸ್ಸನ್ನೂ, ಪ್ರದೀಪ್ತ ಚಿತ್ತವನ್ನೂ, ಸಕಲ ವಿದ್ಯೆ ಹಾಗೂ ಜ್ಞಾನವನ್ನೂ, ಭೌತಿಕ ಸಂಪತ್ತನ್ನೂ ದೇವತೆಗಳಿಗೆ ಅರ್ಪಿಸುತ್ತಾರೆ.

'ಯಜ್ಞ' ಎಂದರೆ ಯಜ್ಞಕುಂಡದಲ್ಲಿ ಅರ್ಪಿಸುವ ವಸ್ತುಗಳ ನಿರಾಕರಣೆ ಅಲ್ಲ. ಸಮಾಜದ ವ್ಯವಸ್ಥೆಯನ್ನು ಸುಸ್ಥಿರವಾಗಿ ಕಾಪಾಡಿಕೊಂಡು ಬರುವುದಕ್ಕೋಸ್ಕರ, ತನ್ನ ಸಮಸ್ತ ಕರ್ಮಗಳ ಫಲಾಸಕ್ತಿಯನ್ನು ಅರ್ಪಿಸುವ ಹಾಗೂ ಸಂಪೂರ್ಣ ಶರಣಾಗತಿಯ ಮೂಲಕ ಕರ್ಮಾನುಷ್ಠಾನದ ಕೌಶಲ್ಯವನ್ನು ಯಜ್ಞೇಶ್ವರನಿಗೆ ಅರ್ಪಿಸುವ ಪ್ರಕ್ರಿಯೆಯೇ 'ಯಜ್ಞ' ಹೀಗೆ, ಕೇವಲ ಕರ್ಮದ ಅನುಷ್ಠಾನದಿಂದ ಸಾಧ್ಯವಾಗುವ ನಿರಂತರ ಬದ್ಧತೆಯೇ 'ಯಜ್ಞ'. 'ಯಜ್ಞಃ ಕರ್ಮಸಂಭವಃ' ನಿರ್ವಿಕಲ್ಪ ಹಾಗೂ ಸರ್ವವ್ಯಾಪಿಯ ಧ್ಯಾನದಿಂದಲೇ ಸಾಧ್ಯವಾಗುವಂಥ ಕರ್ಮದ ಅನುಷ್ಠಾನದಲ್ಲಿಯೇ ಬ್ರಹ್ಮನು ಪ್ರತಿಷ್ಠಿತನಾಗುವನು.

"ಕರ್ಮ ಬ್ರಹ್ಮೋದ್ಭವಂ ವಿದ್ಧಿ ಬ್ರಹ್ಮಾಕ್ಷರಸಮುದ್ಭವಂ।
ತಸ್ಮಾತ್ ಸರ್ವಗತಂ ಬ್ರಹ್ಮ ನಿತ್ಯ ಯಜ್ಞೇ ಪ್ರತಿಷ್ಠಿತಂ ॥"

– ಗೀತೆ 3:15

"ಕರ್ಮಗಳ ಸಮುದಾಯವು ವೇದದಿಂದ ಉತ್ಪನ್ನವಾದುದೆಂದೂ ವೇದವು ಅವಿನಾಶಿಯಾದ ಪರಮಾತ್ಮನಿಂದ ಉತ್ಪನ್ನವಾದುದೆಂದೂ ನೀನು ತಿಳಿ, ಇದರಿಂದ ಸರ್ವವ್ಯಾಪಿಯೂ, ಪರಮ ಅಕ್ಷರನೂ ಆದ ಪರಮಾತ್ಮನು ಸದಾ ಯಜ್ಞದಲ್ಲಿ ಪ್ರತಿಷ್ಠಿತನಾಗಿದ್ದಾನೆಂದು ಸಿದ್ಧವಾಗುತ್ತದೆ."

ಕರ್ಮದ ಅನುಷ್ಠಾನ, ಜಪ-ತಪ ಮತ್ತು ಧಾನ-ಧರ್ಮದ ಆಚರಣೆ ಇವು ಮೂರೂ ಧರ್ಮದ ಆಧಾರ ಶಿಲೆಗಳೆಂದು ಛಾಂದೋಗ್ಯ ಉಪನಿಷತ್ತು ಭಾವಿಸುತ್ತದೆ. ಅಷ್ಟೇ ಅಲ್ಲ; ಜೀವನದ ಮೊದಲಿನ ಇಪ್ಪತ್ನಾಲ್ಕು ವರ್ಷ

ಪ್ರಾತಃಕಾಲೀನ ತರ್ಪಣ, ನಂತರದ ಇಪ್ಪತ್ನಾಲ್ಕು ವರ್ಷ ಮಧ್ಯಾಹ್ನದ ತರ್ಪಣ ಮತ್ತು ಉಳಿದ ನಲವತ್ತೆಂಟು ವರ್ಷ ಆ ದಿನದ ಅಂತಿಮ ತರ್ಪಣ ಆಗಿರುವುದರಿಂದ ಮಾನವ ಜೀವನವೇ ಒಂದು ಮಹಾಯಜ್ಞ ಎಂದು ಅದು ಸಾರುತ್ತದೆ. ಇದನ್ನರಿತ ಮಹೀದಾಸ ಐತರೇಯನು ಹೀಗೆ ಪ್ರಶ್ನೆ ಮಾಡುತ್ತಾನೆ. "ನನ್ನನ್ನೇಕೆ ಸಾಯದೆ ಇರುವಂತೆ ಮಾಡಿ, ರೋಗ ಪೀಡಿತನನ್ನಾಗಿ ಮಾಡುತ್ತೀರಿ?" . ಹೀಗೆ ಹೇಳಿದರೂ, ಅವನು ನೂರಾ ಹದಿನಾರು ವರ್ಷ ಜೀವಿಸಿದ್ದ.

'ಯಾಜನ' ಎಂದರೆ ಯಜ್ಞವನ್ನು ಮಾಡಿಸುವುದು. ಯಜ್ಞಕರ್ಮವನ್ನು ಮಾಡಿ ಶಕ್ತಿ ಸಂಪನ್ನನಾದವನು ಜ್ಞಾನೋಪದೇಶ ಹಾಗೂ ಮಾರ್ಗದರ್ಶನದ ಮೂಲಕ ಇತರರಿಗೆ ಅಂಥ ಯಜ್ಞವನ್ನು ಮಾಡುವಂತೆ ದೀಕ್ಷೆ ನೀಡುವುದು. ಜಗದ್ಗುರುವಾದ ಶಿವನು ಮಾನವ ಜನಾಂಗಕ್ಕೆ ಉತ್ತೇಜನ ನೀಡಲು, ಮೊದಲು ತಾನು ಅಂಥ ಯಜ್ಞವನ್ನು ಮಾಡಿ ತೋರಿಸಿ, ಮೇಲ್ಪಂಕ್ತಿ ಹಾಕಿಕೊಟ್ಟ. ಅದೇ ರೀತಿ ಇತರರೂ ತನ್ನನ್ನು ಅನುಸರಿಸುವಂತೆ ಮಾಡಿದ. ಅಂಥ ಕರ್ಮವನ್ನು ತಾನು ಮಾಡಬೇಕಾಗಿಲ್ಲ. ಮಾಡಿ ಪಡೆಯಬೇಕಾದದ್ದು ಯಾವುದೂ ಇಲ್ಲ. ಆದರೂ ತಾನು ಕರ್ಮನಿರತನಾಗಿರುತ್ತೇನೆ, ಎಂದು ಭಗವದ್ಗೀತೆಯಲ್ಲಿ ಪರಮಾತ್ಮನೇ ಹೇಳಿದ್ದಾನೆ.

"ನ ಮೇ ಪಾರ್ಥಾಸ್ತಿ ಕರ್ತವ್ಯಂ ತ್ರಿಷು ಲೋಕೇಷು ಕಿಂಚನ।
ನಾನವಾಪ್ತವ್ಯಮವಾಪ್ತವ್ಯಂ ವರ್ತ ಏವ ಚ ಕರ್ಮಣಿ॥"

–ಗೀತೆ 3:22

"ಹೇ ಅರ್ಜುನ ! ನನಗೆ ಈ ಮೂರೂ ಲೋಕಗಳಲ್ಲಿ ಯಾವುದೇ ಕರ್ತವ್ಯವೂ ಇಲ್ಲ. ಮತ್ತು ಪಡೆಯಲು ಯೋಗ್ಯವಾದ ಯಾವುದೇ ವಸ್ತು ದೊರೆಯದು ಎಂಬುದಿಲ್ಲ. ಆದರೂ ನಾನು ಕರ್ಮದಲ್ಲಿಯೇ ವರ್ತಿಸುತ್ತೇನೆ"

ಶ್ರೀಕೃಷ್ಣ ಹೇಳಿರುವಂತೆ, 'ಯಾಜನ' ಎಂದರೆ, ಕರ್ಮಚಕ್ರ ನಿರಂತರ ಸುತ್ತುತ್ತ ಇರುವಂತೆ ಪ್ರವರ್ತಿಸುವ ಪ್ರಕ್ರಿಯೆ. ಜ್ಞಾನಿಗಳು ಇತರರಿಗೆ ಯಜ್ಞದೀಕ್ಷೆ ನೀಡದೆ ಹೋದರೆ ಅವರ ಕರ್ಮವು ಅಸಮಂಜಸತೆಗೆ ತಳ್ಳಿ, ಅವನತಿಯತ್ತ ಸಾಗುವಂತೆ ಮಾಡುತ್ತದೆ. ಏಕೆಂದರೆ, ಹಿರಿಯರು ತುಳಿದ ಹಾದಿಯನ್ನೇ ಕಿರಿಯರೂ ತುಳಿಯುತ್ತಾರೆ. ಅವರು ಹಾಕಿಕೊಟ್ಟ ಮೇಲ್ಪಂಕ್ತಿಯನ್ನು ಎಲ್ಲರೂ ಅನುಸರಿಸುತ್ತಾರೆ.

"ಯದ್ಯದಾಚರತಿ ಶ್ರೇಷ್ಠಸ್ತತ್ತದೇವೇತರೋ ಜನಃ ।
ಸ ಯತ್ಪ್ರಮಾಣಂ ಕುರುತೇ ಲೋಕಸ್ತದನುವರ್ತತೇ॥" – ಗೀತೆ 3:21

"ಶ್ರೇಷ್ಠ ಪುರುಷರು ಯಾವ-ಯಾವ ಆಚರಣೆಗಳನ್ನು ಮಾಡುತ್ತಾರೋ, ಇತರ ಪುರುಷರೂ ಹಾಗೆ ಹಾಗೆಯೇ ಆಚರಣಗಳನ್ನು ಮಾಡುತ್ತಾರೆ. ಅವರು ಯಾವುದನ್ನು ಪ್ರಮಾಣ ಮಾಡಿ ತೋರಿಸುತ್ತಾರೋ ಸಮಸ್ತ ಮನುಷ್ಯ ಸಮುದಾಯವು ಅದಕ್ಕನುಸಾರವಾಗಿಯೇ ವರ್ತಿಸಲು ತೊಡಗುತ್ತದೆ."

'ದಾನ' ಎಂದರೆ, ಸ್ವಪ್ರೇರಣೆಯಿಂದ, ಯಾವುದೇ ತರದ ಪ್ರತಿಫಲಾಪೇಕ್ಷೆ ಇಲ್ಲದೆ, ಕೊಟ್ಟವಸ್ತು. 'ದಕ್ಷಿಣೆ' ಎಂದರೆ ಆಚಾರ್ಯರು ಸಲ್ಲಿಸಿದ ಸೇವೆಗೆ ಪ್ರತಿಯಾಗಿ ಕೊಡುವ ಪರಿಹಾರ - ಧನ. ಬೃಹದಾರಣ್ಯಕ ಉಪನಿಷತ್ತು ಪರಿಹಾರ - ಧನ ಎಂಬ ನಿಜವಾದ ಅರ್ಥದಲ್ಲಿ 'ದಕ್ಷಿಣಾ' ಎಂಬ ಪದವನ್ನು ಬಳಸುತ್ತದೆ. ಉದಾಹರಣೆಗೆ, 'ಜನಕೋ ಹ ವೈದೇಹೋ ಬಹುದಕ್ಷಿಣೇನ ಯಜ್ಞೇನೇಜೇ'. ಆದರೆ, ದಾನ ಮತ್ತು ದಕ್ಷಿಣಾ ಪದವನ್ನು ಬಳಸುವಾಗ ಪರಸ್ಪರ ಅದಲು - ಬದಲಾಗಿ ಬಳಸುತ್ತಾರೆ. ಋಗ್ವೇದದ 'ದಕ್ಷಿಣಾ ಸೂಕ್ತ'ದಲ್ಲಿ ದಕ್ಷಿಣಾ ಎಂದರೆ ದಾನ ಎಂಬ ಆಶಯ ಬರುವಂತೆ ಪ್ರಾರಂಭದಲ್ಲೇ ತಿಳಿಸಲಾಗಿದೆ.

'ಹಸಿವೆಯೇ ನಮ್ಮ ಮೃತ್ಯು ಎಂದು ದೇವರು ನಮ್ಮ ಹಣೆಯಲ್ಲಿ ಬರೆದಿಲ್ಲ. ಹೊಟ್ಟೆ ತುಂಬಿದವನಿಗೂ ಮೃತ್ಯು ವಿವಿಧ ರೂಪದಲ್ಲಿ ಕಾಡುತ್ತದೆ. ಆದ್ದರಿಂದ, ಕೊಡುಗೈ ದಾನಿಯ ಸಂಪತ್ತು ಎಂದೂ ವ್ಯರ್ಥವಾಗುವುದಿಲ್ಲ. ಜಿಪುಣನನ್ನು ಸಂತೈಸಲು ಯಾರೂ ಬರುವುದಿಲ್ಲ. ಶ್ರೀಮಂತನು ಬೀದಿಯುದ್ದಕ್ಕೂ ತನ್ನ ದೃಷ್ಟಿಯನ್ನು ಹಾಯಿಸಿ, ಕೈಯೊಡ್ಡಿ ಬೇಡುವವನ ಹಸಿವೆಯನ್ನು ಹಿಂಗಿಸಲಿ. ಈಗ ಒಬ್ಬನ ಬಳಿ ಬಂದ ಸಂಪತ್ತು ಇನ್ನೊಂದು ಕ್ಷಣದಲ್ಲಿ ಇನ್ನೊಬ್ಬನ ಬಳಿ ಹೋಗುತ್ತದೆ. ಅದು ಉರುಳುತ್ತಿರುವ ಚಕ್ರದಂತೆ ನಿರಂತರ ಪರಿವರ್ತನಶೀಲ. ಋಗ್ವೇದಕ್ಕಿಂತ ಭಿನ್ನವಾಗಿ ಉಪನಿಷತ್ತು 'ದಾನ' ಎಂಬ ಪದವನ್ನು ವಿಶೇಷತಃ ಉದಾರ-ದಾನ ಎಂಬ ಅರ್ಥದಲ್ಲೇ ಬಳಸುತ್ತದೆ. ಒಮ್ಮೆ, ದೇವತೆಗಳು, ದಾನವರು ಮತ್ತು ಮಾನವರು ಪ್ರಜಾಪತಿಯ ಬಳಿ ನಿರ್ದೇಶನವನ್ನು ಪಡೆಯಲು ಭೇಟಿಯಾದರು. ಪ್ರಜಾಪತಿ ಆ ಮೂರೂ ವರ್ಗದವರಿಗೆ ಆಜ್ಞೆ ವಿಧಿಸುವಂತೆ, 'ದ' ಎಂಬ ಒಂದು ಅಕ್ಷರವನ್ನು ಉಚ್ಚರಿಸಿದ. ಆಗ,

ಸ್ವಭಾವತಃ ಸಂಯಮಹೀನರಾದ ದೇವತೆಗಳು 'ದಮ್ಯತ'-ಸಂಯಮ ದಿಂದಿರಿ, ಎಂದೂ

ಘಾತಕ ಸ್ವಭಾವದ ದಾನವರು 'ದಯಧ್ವ' - ದಯೆದೋರಿರಿ ಎಂದೂ,

ಸ್ವಭಾವತಃ ಲೋಭಗುಣ ತುಂಬಿದ ಮಾನವರು 'ದತ್ತ' - ದಾನ

ಮಾಡಿರಿ ಎಂದೂ ಅರ್ಥೈಸಿಕೊಂಡರು. ಇಲ್ಲಿ ದಾನ ಎಂದರೆ ಉದಾರ–ದಾನ ಎಂದರ್ಥ.

ಬ್ರಾಹ್ಮಣರನ್ನು ಉದ್ದೇಶಿಸಿ ಹೇಳುವುದಾದರೆ, 'ದಾನ' ಎಂದರೆ ಪ್ರಪಂಚದ ವ್ಯವಸ್ಥೆಯನ್ನು ಕಾಪಾಡಲೋಸುಗ, ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ, ತಮ್ಮ ಸ್ವಾಭಾವಿಕ ಹೊಣೆ ಎಂದರಿತುಕೊಂಡು, ಜ್ಞಾನವನ್ನು ಇತರರಿಗೆ ನೀಡುತ್ತಿರುವುದು. ಆದ್ದರಿಂದ ಆಚಾರ್ಯನು ಹೀಗೆ ಘೋಷಿಸುತ್ತಾನೆ.

'ಅಹಂ ವೃಕ್ಷಸ್ಯ ರೇರಿವಾ' – ನಾನು ಚೈತನ್ಯವನ್ನು ತುಂಬುವ ವೃಕ್ಷದಂತೆ.
'ಕೀರ್ತಿಃ ಪೃಷ್ಠಂ ಗಿರೇರಿವಾ'
– ನನ್ನ ಕೀರ್ತಿಯು ಪರ್ವತ ಶಿಖರದಂತೆ ಉನ್ನತವಾಗಿದೆ.
'ಊರ್ಧ್ವ ಪವಿತ್ರೋ ವಾಜಿನೀವ ಸ್ವಮೃತಮಸ್ಮಿ'
– ನಾನು ಪವಿತ್ರ, ವಿಸ್ತರಣಶೀಲ ಹಾಗೂ ಅಮೃತಸ್ವರೂಪೀ ಸೂರ್ಯನಂತೆ.
'ದ್ರವಿಣಂ ಸವರ್ಚಸಂ'
– ನಾನು ಹೊಳೆಯುತ್ತಿರುವ ದ್ರವ್ಯದಂತೆ.
'ಸುಮೇಧಾ ಅಮೃತೋಕ್ಷಿತಃ'
– ನಾನು ಆನಂದಾಮೃತಮಯ ಅವಿನಾಶೀ ಅಂತರ್ದೃಷ್ಟಿ ಉಳ್ಳವನು.

"ನಾನು ಎಲ್ಲೆಡೆಯಿಂದ, ವಿಭಿನ್ನ ಪರಿಸರದಿಂದ ಬ್ರಹ್ಮಚಾರಿಗಳು ಬರುತ್ತಿರುವುದನ್ನು ಕಾಯುತ್ತಿದ್ದೇನೆ. ಅವರು ಯೋಗ್ಯ ವಿಧಾನದಿಂದ, ಸನ್ಮಾರ್ಗದಿಂದ, ಇಂದ್ರಿಯ–ನಿಗ್ರಹದೊಂದಿಗೆ ಹಾಗೂ ಮನೋನಿಯಂತ್ರಣ ದೊಂದಿಗೆ ಬರಲಿ." ಆಗ ಜನರ ನಡುವೆ ಆಚಾರ್ಯನು ದಿವ್ಯ ಪ್ರಭೆ ಹಾಗೂ ಪ್ರತಿಭೆಯಿಂದ ಶೋಭಿಸುತ್ತಾನೆ. ಅಂಥ ಆದರ್ಶ ವ್ಯಕ್ತಿಯನ್ನು ಕಂಡು, ಪರ್ವತ ಪ್ರದೇಶದಿಂದ ಸಮುದ್ರದ ಕಡೆಗೆ ಸರಾಗವಾಗಿ ಹರಿದು ಬರುತ್ತಿರುವ ನದಿಗಳಂತೆ ಶಿಷ್ಯರು, ಸಾಧಕರು ಅವನೆಡೆಗೆ ಧಾವಿಸಿ ಬರುತ್ತಾರೆ. ವಿದ್ಯಾಧ್ಯಯನದ ಅವಧಿ ಮುಗಿದ ಬಳಿಕ ಅಂತಿಮ ವಿದಾಯ– ಸಮಾರಂಭದಲ್ಲಿ ಶಿಷ್ಯರಿಗೆ ಆಚಾರ್ಯನು ಹೀಗೆ ಉಪದೇಶ ಮಾಡುತ್ತಾನೆ. ಸತ್ಯವನ್ನು ನುಡಿ. ಧರ್ಮವನ್ನು ಆಚರಿಸು. ಆತ್ಮಜ್ಞಾನದ ಅಧ್ಯಯನ ಮತ್ತು ಅಧ್ಯಾಪನ – ಕಾರ್ಯವನ್ನು ಮರೆಯಬೇಡ.

ಸತ್ಯಂ ವದ, ಧರ್ಮಂ ಚರ, ಸ್ವಾಧ್ಯಾಯ ಪ್ರವಚನಾಭ್ಯಾಂ ಮಾ ಪ್ರಮದಿತವ್ಯಂ।

ಪ್ರತಿಗ್ರಹ = ಪ್ರತಿ+ಗ್ರಹ

ಪ್ರತಿ– ಬದಲಿಗೆ, ಆ ಕಡೆ, ಆ ದಿಸೆಯಲ್ಲಿ.

ಗ್ರಹ – ಸೆಳೆದುಕೊ, ಮೂಲವನ್ನು ಹುಡುಕು, ಸ್ವೀಕರಿಸು.

ಆದ್ದರಿಂದ ಇಲ್ಲಿ 'ಪ್ರತಿಗ್ರಹ' ಎಂದರೆ ಆಚಾರ್ಯನು ತನ್ನ ಅಧ್ಯಾಪನ-ಕಾರ್ಯವನ್ನು ಪೂರೈಸಿದ ಬಳಿಕ, ಬೋಧನ ಶುಲ್ಕ ಇಲ್ಲದೆ ವೇತನದ ಅಪೇಕ್ಷೆಯನ್ನು ಮಾಡದೆ ಪಡೆದ ಗುರುದಕ್ಷಿಣೆ, ಅಥವಾ ಕುಲಪುರೋಹಿತನು ತನ್ನ ಯಾಜಮಾನ್ಯದಲ್ಲಿ, ಯಜ್ಞ-ಯಾಗಾದಿ ಧಾರ್ಮಿಕ ಕಾರ್ಯಗಳನ್ನು ನೆರವೇರಿಸಿದ ಬಳಿಕ, ಪೌರೋಹಿತ್ಯ ವೃತ್ತಿ-ವೇತನದ ಅತ್ಯಾಸೆ ಮಾಡದೆ ಪಡೆದ ಗೌರವಧನ. ಆದರೆ, ಆಚಾರ್ಯನು ಬ್ರಹ್ಮಚಾರಿಗಳಿಗೆ ದಾನ ನೀಡುವ ಕ್ರಮದ ಕುರಿತು ಹೀಗೊಂದು ನಿರ್ದೇಶನ ನೀಡಲು ಜಾಗರೂಕನಾಗುತ್ತಾನೆ.

1. ಶ್ರದ್ಧಯಾ ದೇಯಂ – ದಾನದ ಮಹತ್ವವನ್ನು ಚೆನ್ನಾಗಿ ಅರಿತು, ಕೊಡಬೇಕಾದುದನ್ನು ಸಂಪೂರ್ಣ ಶ್ರದ್ಧೆಯಿಂದ ಕೊಡಬೇಕು.
2. ಅಶ್ರದ್ಧಯಾ ಅದೇಯಂ – ದಾನದ ಮಹತ್ವವನ್ನು ಸರಿಯಾಗಿ ಅರಿಯದೆ ಅಶ್ರದ್ಧೆಯಿಂದ ದಾನ ಮಾಡಬಾರದು.
3. ಶ್ರಿಯಾ ದೇಯಂ – ತನ್ನ ಆರ್ಥಿಕ ಸ್ಥಿತಿಗೆ ತಕ್ಕಂತೆ ಕೊಡಬೇಕು.
4. ಹ್ರಿಯಾ ದೇಯಂ – ಕೊಡುವವನು ನಾನಲ್ಲ ಎಂದು ಲಜ್ಜೆಯಿಂದ ವಿನಯಪೂರ್ವಕ ಕೊಡಬೇಕು.
5. ಭಿಯಾ ದೇಯಂ – ದಾನವೆಂಬ ಸತ್ಕರ್ಮ ಮಾಡದಿದ್ದರೆ ಸದ್ಗತಿ ದೊರೆಯಲಾರದೆಂದು ಭಯ-ಭಕ್ತಿಯಿಂದ ಕೊಡಬೇಕು.
6. ಸಂವಿದಾ ದೇಯಂ – ವಿವೇಕಪೂರ್ವಕ ಹಾಗೂ ತಾದಾತ್ಮ್ಯಭಾವದಿಂದ ಕೊಡಬೇಕು.

ಮುಂದಿನ ದಿನಗಳಲ್ಲಿ, ಧಾರ್ಮಿಕ ಸಂಸ್ಕಾರಕ್ಕೆ ಸಂಬಂಧಿಸಿದ ಜಟಿಲ ವಿಧಿ-ವಿಧಾನಗಳ ನಿಮಿತ್ತವಾಗಿ, ಯಜ್ಞ-ಯಾಗಾದಿಗಳು ಅತಿ ಹೆಚ್ಚು ಖರ್ಚಿನ ವಿಷಯಗಳಾಗಿ ಪರಿಣಮಿಸಿದ್ದರಿಂದ 'ಪ್ರತಿಗ್ರಹ'ದ ಕಲ್ಪನೆ ಹೊಸ ಲಕ್ಷ್ಯಾರ್ಥವನ್ನು ಪಡೆಯತೊಡಗಿತು. ಇದರ ಪರಿಣಾಮವಾಗಿ, ಬ್ರಾಹ್ಮಣರು ಅತ್ಯಾಶೆಯ ಆಮಿಷಕ್ಕೆ ಒಳಗಾದರು. ಆಗ 'ದಕ್ಷಿಣೆ' ಸ್ವಪ್ರೇರಿತವಾಗಿ, ಸಂತೋಷಪೂರ್ವಕ ಕೊಡುವ ಗೌರವಧನ ಆಗುವ ಬದಲಿಗೆ, ಬ್ರಾಹ್ಮಣರು ಸಲ್ಲಿಸಿದ ಸೇವೆಗೆ ಸಿಗಬೇಕಾದ ವೇತನಧನವಾಗಿ ಪರಿವರ್ತಿತವಾಯಿತು. ಚಿಂತೆಗೀಡಾಗಿ, ಜುಗುಪ್ಸೆಗೊಂಡು ವಿಪರೀತ ದುಬಾರಿಯಾದ ಯಜ್ಞ-ಯಾಗಾದಿಗಳನ್ನು ಮಾಡಿಸುವವರಿಗೆ ನೂತನ ಧರ್ಮಗಳೂ, ಧರ್ಮಬೋಧೆಯೂ ದಕ್ಷಿಣೆಯನ್ನು ತ್ಯಾಜ್ಯವನ್ನಾಗಿಸಿ, ಧಾರ್ಮಿಕ ಕಾರ್ಯಗಳನ್ನು ನೆರವೇರಿಸಲು ಉತ್ತೇಜನ ನೀಡಿದ್ದವು. ಆಗ ಕೂಡ, ಬ್ರಾಹ್ಮಣರು

ತಮ್ಮ ಬೇಡಿಕೆಗಳ ಕುರಿತು ಪುನಃ ಮೌಲ್ಯೀಕರಣ ಮಾಡಲು ಪ್ರಯತ್ನಪಡಲಿಲ್ಲ. ಸಮಾಜಕ್ಕೆ ಸಂಬಂಧಪಟ್ಟ ಈ ಸಮಸ್ಯೆಯನ್ನು ಬಗೆಹರಿಸುವ ಬದಲಿಗೆ, ಅಂದು ಅವರು ಅದನ್ನು ಸಮಾಜದಲ್ಲಿ ಬ್ರಾಹ್ಮಣ್ಯದ ಘನತೆಗೇ ಒಡ್ಡಿದ ಸವಾಲು ಎಂದು ಪರಿಗಣಿಸಿದರು.

ಯಾವುದು ಸರಿ, ಯಾವುದು ಸರಿಯಲ್ಲ ಎಂದು ತಿಳಿಯುವುದು ಸುಲಭ. ಆದರೆ, ಸರಿಯಾದುದನ್ನು ಸ್ವೀಕರಿಸಿ, ಸರಿ ಅಲ್ಲದುದನ್ನು ನಿರಾಕರಿಸುವುದಕ್ಕೆ ವ್ಯಕ್ತಿಯ ಅಹಂಕಾರವು ಅವನನ್ನು ತಡೆಹಿಡಿಯುತ್ತದೆ. ನಾಲ್ಕು ವರ್ಣಗಳಲ್ಲಿ ಬ್ರಾಹ್ಮಣನು ಶ್ರೇಷ್ಠ ಎಂದು ಒಪ್ಪಿಕೊಂಡರೂ, ವಜ್ರಸೂಚಿಕಾ ಉಪನಿಷತ್ತು ಹೀಗೆ ಪ್ರಶ್ನೆಯನ್ನು ಕೇಳಿದೆ. 'ಯಾರು ಬ್ರಾಹ್ಮಣ?' 'ವ್ಯಕ್ತಿಯ ಆತ್ಮವೋ ಅಥವಾ ದೇಹ?' 'ಬ್ರಾಹ್ಮಣತ್ವ ಅವಲಂಬಿಸಿರುವುದು ಜಾತಿಯ ಮೇಲೆಯೋ ಅಥವಾ ಕರ್ಮದ ಮೇಲೆ?' ಇವು ಯಾವವೂ ಬ್ರಾಹ್ಮಣನನ್ನಾಗಿ ಮಾಡಲಾರವು ಎಂದು ಅಂತಿಮ ನಿರ್ಧಾರಕ್ಕೆ ಬರಲಾಯಿತು. ಆದರೆ, 'ಸತ್'ವಸ್ತುವನ್ನು ತನ್ನ ಆತ್ಮದ ಅಭಿವ್ಯಕ್ತಿಯಂತೆ, ಅಂಗೈಯಲ್ಲಿರುವ ನೆಲ್ಲಿಕಾಯಿಯನ್ನು ಕಾಣುವಂತೆ ಪ್ರತ್ಯಕ್ಷ ಅನುಭವಿಸಿ, ಸ್ವಾನುಭವದ ಮೂಲಕ ಸರಿಯಾಗಿ ಅರಿತು ತನ್ನ ಕಾರ್ಯವನ್ನು ಪೂರೈಸಿ ಕಾಮ, ಲೋಭ, ಮೋಹ, ನಿರೀಕ್ಷೆ, ಹಾಗೂ ದಿಗ್ಭ್ರಾಂತಿಯನ್ನು ತ್ಯಜಿಸಿದವನೇ ಬ್ರಾಹ್ಮಣನೆಂದು ಕರೆಸಿಕೊಳ್ಳಲು ಅರ್ಹನು. ಇದರ ಕುರಿತು ಯುಧಿಷ್ಠಿರನು ಯಕ್ಷನಿಗೆ ಹೀಗೆ ಸ್ಪಷ್ಟೀಕರಣ ನೀಡುತ್ತಾನೆ.

'ದ್ವಿಜತ್ವಕ್ಕೆ ಜನ್ಮ (ಜಾತಿ), ವೇದಾಧ್ಯಯನ, ಪಾಂಡಿತ್ಯ ಇವಾವವೂ ನಿರ್ಧಾರಕ ಅಂಶಗಳಾಗಲಾರವು. ಸದಾಚಾರ-ಸದ್ವರ್ತನೆಯೇ ದ್ವಿಜತ್ವಕ್ಕೆ ಕಾರಣ. ಇದರಲ್ಲೇನೂ ಸಂಶಯವಿಲ್ಲ.

"ಶೃಣು ಯಕ್ಷ ಕುಲಂ ತಾತ ನ ಸ್ವಾಧ್ಯಾಯೋ ನ ಚ ಶ್ರುತಂ ।
ಕಾರಣಂ ವಾ ದ್ವಿಜತ್ವೇ ಚ ವ್ರತಂ ಏವ ನ ಸಂಶಯಃ ॥"

ಇದರ ಯೋಗ್ಯ ಪರಿಹಾರಕ್ಕಾಗಿ, ಸಮಾಜದ ನೂತನ ರಚನಾ-ವಿನ್ಯಾಸದಲ್ಲಿ ಸಹಜವಾದ ಉಪಸಿದ್ಧಾಂತ ಬೇಕಿತ್ತು. ಇದಕ್ಕಾಗಿ, ಧರ್ಮಶಾಸ್ತ್ರಗಳು 'ಆಪದ್ಧರ್ಮ' ಎಂಬ ಪ್ರಕರಣವನ್ನು ಸೇರಿದವು. ಈ ಸಿದ್ಧಾಂತದನ್ವಯ, ಬ್ರಾಹ್ಮಣರು ಸಮಾಜದಲ್ಲಿ ಕ್ಷೀಣವಾಗುತ್ತಿರುವ ತಮ್ಮ ಆರ್ಥಿಕ ಸ್ಥಿತಿಯನ್ನು ಸುದೃಢಗೊಳಿಸುವ ಸಲುವಾಗಿ, ಇತರ ವರ್ಣಗಳ ಕರ್ಮವನ್ನು ಕೈಕೊಳ್ಳಲು ಶಕ್ತರಾದರು. ಈ ನೂತನ ರಚನಾ-ವಿನ್ಯಾಸವು ಬ್ರಾಹ್ಮಣರಿಗಿದ್ದ ಪ್ರಕೃತಿದತ್ತ ಗುಣಗಳ ಅಪಹಾಸ್ಯ ಮಾಡುವಂತೆ ಹಾಗೂ ಹಿಂದಿನ ವರ್ಣಾಶ್ರಮ-ವ್ಯವಸ್ಥೆಯ ವಿಡಂಬನೆ ಮಾಡುವಂತೆ

ತೋರುತ್ತಿತ್ತು.

ಆದರ್ಶಗಳನ್ನು ಆಚರಿಸಲು ಕಷ್ಟಸಾಧ್ಯವಾದರೂ ಅವುಗಳನ್ನು ಮೈಗೂಡಿಸಿಕೊಂಡು ಅನುಸರಿಸಬೇಕು. ತತ್ತ್ವಚಿಂತನೆಯನ್ನು ಏಕಾಂತದ ಮೌನದಲ್ಲಿ ಮಾತ್ರ ಮಾಡಬಹುದೇ ಹೊರತು, ಇಂದ್ರಿಯ ಲೋಲುಪತೆಯಲ್ಲಿ ಸಾಧ್ಯವಿಲ್ಲ, ಮನಸ್ಸು ಶಾಂತವಾಗಿರುವುದು ಮತ್ತು ತನ್ನೊಳಗೆ ತಾನೊಬ್ಬನೇ ಇರುವುದು, ಇವೆರಡರ ಸ್ಥಿತಿಯಲ್ಲಿ ವ್ಯತ್ಯಾಸ ಏನೂ ಇಲ್ಲ. ಆದರೆ, ಮನಸ್ಸು ಶಾಂತವಾಗಿರುವುದಕ್ಕೂ, ಮನಸ್ಸಿನಲ್ಲಿ ಒಬ್ಬಂಟಿಗನಾಗಿರುವುದಕ್ಕೂ ವ್ಯತ್ಯಾಸವಿದೆ. ಮನಸ್ಸಿನಲ್ಲಿ ಶಾಂತತೆ ನೆಲೆಸಿರುವಾಗ ಅಥವಾ ತನ್ನಲ್ಲಿ ತಾನೇ ತಾದಾತ್ಮ್ಯ ಭಾವದಲ್ಲಿದ್ದಾಗ ಯಾವುದೇ ಕರ್ತವ್ಯಕರ್ಮ ಇರುವುದಿಲ್ಲ; ಮತ್ತು ಪರಿಹಾರಗಳು ತಾವಾಗಿ ಗೋಚರಿಸುತ್ತವೆ. ಇದಕ್ಕೆ ಯಾವುದರ ಮಧ್ಯಸ್ಥಿಕೆಯೂ ಬೇಕಿಲ್ಲ. ಸಮಯ ಬದಲಾಗಬಹುದು, ಸಂದರ್ಭವೂ ಬದಲಾಗಬಹುದು, ಆಕಾರವೂ ಬದಲಾಗ ಬಹುದು. ಆದರೆ ಮನಸ್ಸಿನಲ್ಲಿ ಶಾಂತಿಯ ಅನುಭವವಾಗಿರುವಾಗ, ಸಮಯವೂ ನಿಲ್ಲುತ್ತದೆ. ಚಲನೆಯಿಲ್ಲದ ಅನುಭವ ಆಗುತ್ತದೆ. ಕ್ಷಣ-ಕ್ಷಣಕ್ಕೂ ಈ ಅನುಭವ ಆಗುತ್ತದೆ. ಒಂಟಿ ಮನಸ್ಸಿನಲ್ಲಿ, ಮನಸ್ಸು ಸಂಗತಿ ಸಹವಾಸದ ಅಪೇಕ್ಷೆ ಮಾಡುತ್ತದೆ. ಆದರೆ ಶಾಂತವಾಗಿರುವ ಮನಸ್ಸಿನಲ್ಲಿ ಅಂಥ ಯಾವುದೇ ಅಪೇಕ್ಷೆ ಇರುವುದಿಲ್ಲ.

ಸಾರಸ್ವತರು ಇದೀಗ, ತಮ್ಮ ಪ್ರಶಾಂತ ಮನಸ್ಸಿನ ಅಂತರಾಳದಲ್ಲಿ ಹೀಗೆ ಯುಕ್ತಾಯುಕ್ತ ವಿವೇಚನೆ ಮಾಡಲೇಬೇಕು.

'ನಾವು ಸಾರಸ್ವತರು. ಸಾರಸ್ವತ ಮುನಿಗಳ ವಂಶಜರು. ಸರಸ್ವತೀ ಪುತ್ರರು ಎಂದು ಸಮರ್ಥಿಸಿಕೊಳ್ಳಲು ಅರ್ಹರಾಗಿರುವೆವೇ?' ಎಂದು ಅನುಸಂಧಾನ ಮಾಡಬೇಕು. ಸರಸ್ವತೀ ದೇವಿ ದಿವ್ಯಮಾತೆಯರಿಗೂ ಮಾತೃಸ್ವರೂಪಳು, ಎಂದು ಪ್ರಾಚೀನ ದ್ರಷ್ಟಾರರೂ ಭಾರೀ ಪ್ರಶಂಸೆಯನ್ನು ಮಾಡಿದ್ದಾರೆ.

"ಅಂಬಿತಮೇ ನದೀತಮೇ ದೇವಿತಮೇ ಸರಸ್ವತೀ"

"ತಾಯೇ, ನೀನು ಸದಾ-ಸರ್ವದಾ ನಮ್ಮೆಲ್ಲರ ತುಷ್ಟಿ-ಪುಷ್ಟಿ ಮಾಡುತ್ತಿರು. ನಿನ್ನ ಪೋಷಣೆಯಿಂದ ನಮ್ಮನ್ನು ದೂರ ಮಾಡದಿರು. ನಿನ್ನ ಪೋಷಣೆ ಇಲ್ಲದಿದ್ದರೆ, ನಿಃಶಕ್ತರಾಗುತ್ತೇವೆ, ನಿನ್ನಿಂದ ದೂರವಾಗುತ್ತೇವೆ" ಎಂದು ಬೇಡಿಕೊಂಡಿದ್ದಾರೆ.

"ಸರಸ್ವತಿ ಅಭಿ ನಃ ನೇಷಿ ವಸ್ಯಃ ಮಾ
ಆಪ ಸ್ಫರೀಃ ಪಯಸಾ ಮಾ ನಃ ಆ ಧಕ್ ।"

ಇತಿಹಾಸ ನಮ್ಮನ್ನು ಅತ್ಯಂತ ದೂರ ಇರುವ ಪವಿತ್ರ ಪ್ರದೇಶದಿಂದ ಇಲ್ಲಿ ನೆಲೆಸುವಂತೆ ಮಾಡಿದೆ. ಆದರೆ ನೀನು ನಮ್ಮನ್ನು ತ್ಯಜಿಸಿದರೆ, ದುರ್ಬಲರಾಗುತ್ತೇವೆ.

ಏಕೆಂದರೆ, ಬ್ರಾಹ್ಮಣರಿಗೆ ಜ್ಞಾನಕ್ಕಿಂತ ಶ್ರೇಷ್ಠ ಇನ್ನಾವುದೂ ಇಲ್ಲ. 'ನ ಹಿ ಜ್ಞಾನೇನ ಸದೃಶಂ ಪವಿತ್ರಮಿಹ ವಿದ್ಯತೇ'. ಇದಕ್ಕೋಸ್ಕರವೇ ಚಿಂತೆ-ಭ್ರಾಂತಿ-ಕ್ಲೇಶಯುಕ್ತ ಮನಸ್ಸನ್ನು ಸ್ಥಿರವಾಗಿ ಶಾಂತವಾಗಿಡಿರಿ. ಸಾರಸ್ವತ ಶಬ್ದದ ವ್ಯಾಖ್ಯೆಗೆ ಅನ್ವರ್ಥಕವಾಗಿ, ಸಾರಸ್ವತನು ಬ್ರಹ್ಮಜ್ಞಾನಿ, ತೇಜಸ್ವಿ(ಸವಿತೃ), ಶಕ್ತಿಸಂಪನ್ನ (ಅಗ್ನಿ), ಎಲ್ಲರನ್ನೂ ಪೂರ್ಣತ್ವದ ಪಥದತ್ತ ಕರೆದುಕೊಂಡು ಒಯ್ಯುವವನು (ಪುರೋಹಿತ), ಚಲನಶೀಲ (ವಾಯು), ನೀರಿನಂತೆ ನಮನಶೀಲ (ಆಪ), ವಿಸ್ತರಣಶೀಲ (ಆಕಾಶ) ಆಗಿರಬೇಕು. ಅವನು ಬ್ರಹ್ಮೋಪದೇಶದ ದೀಕ್ಷೆಯ ಮೂಲಕ ಪೂರ್ಣತ್ವದ ಪಥವನ್ನು ಅನುಸರಿಸಬೇಕು. (ದೀಕ್ಷಾ). ಆಸನಸ್ಥನಾಗಬೇಕು (ಆಸನಾ). ಮುದ್ರಾ, ಮಂಡಲ, ಪೂಜಾದಿಗಳಲ್ಲಿ ನಿರತನಾಗಿರಬೇಕು. (ಮುದ್ರಾ, ಮಂಡಲ, ಪೂಜಾ). ಈ ಎಲ್ಲ ಕ್ರಿಯೆಗಳ ಮುಖಾಂತರ (ಕ್ರಿಯಾ), ಆಚರಣೆಯ ಮೂಲಕ (ಚರ್ಯಾ), ದೈವೀ ಸಂಕಲ್ಪಕ್ಕೆ ಬದ್ಧನಾಗಿರಬೇಕು. (ದೈವೀ ಸಂಕಲ್ಪ). ಆಗ ಅವನ ಸಾಧನೆಯು (ಸಾಧನಾ) ತಾತ್ತ್ವಿಕ, ನೈತಿಕ, ಪರಿಪೂರ್ಣತೆಗಷ್ಟೇ ಸೀಮಿತವಾಗಿರುವುದಿಲ್ಲ. ಆದರೆ ಅದು ಇಂದ್ರಿಯನಿಗ್ರಹದ ಮೂಲಕ ಚಿತ್ತಸ್ವಾಸ್ಥ್ಯದೊಂದಿಗೆ ಆಧ್ಯಾತ್ಮಿಕ ಪುನಶ್ಚೇತನವನ್ನು ಪಡೆಯುತ್ತದೆ. ವ್ಯಕ್ತಿಯು ಎತ್ತರ-ಎತ್ತರ ಏರುತ್ತಿದ್ದರೆ, ಪುರಾಣಕಾಲದ ಗರುಡಪಕ್ಷಿಯಂತೆ (ಶ್ಯೇನ) ಆಗುತ್ತಾನೆ. ಅದು ಸ್ವರ್ಗಲೋಕದ ವಿಸ್ತಾರವನ್ನೇರಿ, ಹಾರಾಡುವ ಪಕ್ಷಿ. ಅಲ್ಲೇ ತತ್ತಿಯನ್ನಿಟ್ಟು, ಆಕಾಶದಲ್ಲೇ ಮರಿಯಾಗಿ ಹಾರಾಡುವಂತೆ, ಸಾಧಕನು ಅನಂತದಲ್ಲಿ ವಿಹರಿಸುತ್ತಾನೆ.

ನಾವು ಶಾಂತಚಿತ್ತರಾಗಿ, ಮನಸ್ಸಿನ ಏಕಾಂತದಲ್ಲಿದ್ದು, ಮೇಲೆ ವಿವರಿಸಿರುವಂತೆ ತತ್ತ್ವಚಿಂತನೆಯನ್ನು ಮಾಡಬೇಕು. ಆಗ, ಈ ಜಿಜ್ಞಾಸೆ 'ನಾನು ಸಾರಸ್ವತ' ಎಂಬ ಅರಿವನ್ನು ಮೂಡಿಸುತ್ತದೆ. ನಮ್ಮಲ್ಲಿ ಪ್ರಜ್ಞೆ ಜಾಗೃತವಾಗುವಂತೆ ಮಾಡುತ್ತದೆ. ಆಗ ನಮ್ಮಲ್ಲಿ ನೈಜವಾದ ಸಾರಸ್ವತರ ಸತ್ವದ ಅನುಭವವೂ ಆಗುತ್ತದೆ. ಇದರಲ್ಲೇ ಸಾರಸ್ವತತ್ವದ ಭವಿಷ್ಯ ನೆಲೆಸಿದೆ.

卐

7

ಸಾರಸ್ವತರ ಭಾಷೆ

ಇದು ಅಸಫಲತೆಯಲ್ಲೂ ಕೈಕೊಂಡ ಸಾಹಸದ ಅಧ್ಯಾಯ.

ಅಲ್ಬುಕರ್ಕನು ಮಲಬಾರ ಸಮುದ್ರತೀರದಲ್ಲಿ ಬಂದಿಳಿದ. ಆಗ ಅಲ್ಲಿರುವ ಜನರು ತನಗೆ ಪರಿಚಯವಿಲ್ಲದ ಭಾಷೆಗಳಲ್ಲಿ ಮಾತನಾಡುತ್ತಿರುವುದನ್ನು ಕಂಡು ಅವನು ದಿಗ್ಭ್ರಾಂತನಾದ. ಆದರೆ ಒಬ್ಬ ಅರಬ ವ್ಯಾಪಾರಿ ತನ್ನೊಡನೆ ಮಾತೃಭಾಷೆಯಾದ ಪೋರ್ಚುಗೀಸ್ ಭಾಷೆಯಲ್ಲಿ ಸಂಭೋಧಿಸಿ ಸ್ವಾಗತಿಸಿದಾಗ ಅವನಿಗೆ ಅತ್ಯಾನಂದವಾಯಿತು. 'ಪೋರ್ಚುಗೀಸ್ ನಾವಿಕನು ಅರಬ ವ್ಯಾಪಾರಿಯನ್ನು ತಬ್ಬಿಕೊಂಡನು.' ಎಂದು ಜನರು ಆಡಿಕೊಳ್ಳುತ್ತಿದ್ದರು. ಇಂಥ ಸಂಗತಿಗಳು ರಂಜನೀಯವಾಗಿರುವುದರಿಂದ ಭಾವಜೀವಿಗಳು ಭಾವಪರವಶರಾಗುತ್ತಾರೆ. ಆದರೆ ಲೆಕ್ಕಾಚಾರ ಬುದ್ಧಿಯವರು ಮಾತ್ರ ತಮ್ಮ ಐಹಿಕ ಜೀವನದಲ್ಲಿ ಈ ಭಾಷೆ ಆರ್ಥಿಕ ಲಾಭವನ್ನು ತಂದು ಕೊಡಲಾರದೆಂದು ಅನಿಸಿದರೆ ಅಂಥ ಭಾಷೆಯ ಸಂಪರ್ಕದಿಂದ ಅವರು ದೂರ ಸರಿದುಬಿಡುತ್ತಾರೆ. ಒಂದು ಭಾಷೆಯಿಂದ ನಮಗೆ ಪ್ರಯೋಜನ ಇದೆಯೋ ಇಲ್ಲವೋ ಎಂಬ ವ್ಯಾವಹಾರಿಕ ಬುದ್ಧಿ ಭಾವುಕತೆಯ ಮೇಲೆ ಅಧಿಕಾರವನ್ನು ಸ್ಥಾಪಿಸಿಕೊಳ್ಳುವುದರಿಂದ ಭಾವುಕತೆ ಸಂಪೂರ್ಣ ಸತ್ಯವಲ್ಲ ಎಂದು ಜನರು ಭಾವಿಸುತ್ತಾರೆ.

ಧರ್ಮಗ್ರಂಥಗಳ ಪ್ರಕಾರ, ಪರಮಾತ್ಮನು ಸೃಷ್ಟಿಕಾರ್ಯವನ್ನು ಪೂರೈಸಿದ ಬಳಿಕ, ಮನಸ್ಸು, ಮಾತು ಮತ್ತು ಕೃತಿಗಳನ್ನು ತನ್ನ ತೇಜಸ್ಸಿನ ಉಪಕರಣಗಳನ್ನಾಗಿ ಬಳಸಿಕೊಂಡ. ಮನಸ್ಸಿನಲ್ಲಿರುವ ಭಾವನೆಯನ್ನು ಭಾಷೆ ಅಥವಾ ಮಾತಿನ ಮೂಲಕ ಕ್ರಿಯಾರೂಪದಲ್ಲಿ ಪರಿವರ್ತನೆ ಆಗುವಂತೆ ನೋಡಿದ. ಆದಿಕಾಲದಿಂದಲೂ ಮನಸ್ಸು, ಮಾತು ಮತ್ತು ಕೃತಿಗಳೇ ಮಾನವ ಜೀವನದ ಮೇಲೆ ಅಧಿಕಾರವನ್ನು ನಡೆಸುತ್ತಿವೆ. ಮೂಲಭೂತವಾಗಿ ಭಾಷೆಯು ಮಧ್ಯಸ್ಥಿಕೆ ವಹಿಸುವ ಒಂದು ಆವಶ್ಯಕ ಉಪಕರಣ. ದೈನಂದಿನ ಜೀವನದಲ್ಲಿ ಅದು ಅತ್ಯಗತ್ಯ ಮಹತ್ವಪೂರ್ಣ ಘಟಕವಾಗಿರುವುದಿಲ್ಲ.

"ವಸ್ತುಗಳಿಗೆ ನಾಮನಿರ್ದೇಶನ ಮಾಡಲು ಬಯಸಿದಾಗ ಮೊಟ್ಟಮೊದಲಿಗೆ ಸಕಲ ಉಕ್ತಿಗಳಿಗೆ ಆದಿಮೂಲವಾದ ವಾಕ್ ಶಕ್ತಿಯನ್ನು ಬೃಹಸ್ಪತಿಯ ಮೂಲಕ ಕಳಿಸಲಾಯಿತು. ಆಗ ದಿವ್ಯ ಗುಹ್ಯ ಶಕ್ತಿಯೊಂದಿಗೆ

ಅತ್ಯುತ್ತಮ ಹಾಗೂ ನಿಷ್ಕಲಂಕವಾದ ಮಾತು ಪರಾ, ಪಶ್ಯಂತೀ, ಮಧ್ಯಮಾ ಮತ್ತು ವೈಖರೀ ಎಂದು ನಾಲ್ಕು ವರ್ಗಗಳಾಗಿ ಪ್ರಕಟವಾಯಿತು, ಎಂಬುದನ್ನು ಜ್ಞಾನಿಗಳು ಅರಿತಿರುವರು. ಮೊದಲಿನ ಮೂರು ವರ್ಗಗಳಲ್ಲಿ ಆಧ್ಯಾತ್ಮಿಕ ರಹಸ್ಯ ಅಡಗಿದೆ. ಮಾನವನು ಸಾಮಾನ್ಯವಾಗಿ ನಾಲ್ಕನೆಯ ವರ್ಗವಾದ ವೈಖರಿಯಲ್ಲಿ ಮಾತನಾಡುತ್ತಾನೆ."

ಹೇಮಚಂದ್ರ ಸೂರಿಯ ಪ್ರಕಾರ, ಸಾಮಾನ್ಯ ಜನರಲ್ಲಿ ಪ್ರಚಲಿತವಿದ್ದ ಭಾಷೆಯೇ 'ವೈಖರೀ.' ಇದು ಮಾತಿನ ನಾಲ್ಕನೆಯ ವರ್ಗವಾದ ಪ್ರಾಕೃತ ಅಥವಾ ಪ್ರಕೃತಿ ಸಹಜವಾದ ರೂಪ. 'ಲೋಕಾತ್ ಇತಿ ವರ್ತತೇಲ್ರೋಕಾತ್ ಅವಗಂತವ್ಯಮ್.'

ಭಾರತದಲ್ಲಿ ಸಿಂಧು ಮತ್ತು ಸರಸ್ವತೀ ನಾಗರಿಕತೆಗಳ ಜನರು ಪ್ರಾದೇಶಿಕ ವ್ಯತ್ಯಾಸವಿರುವ ದ್ರಾವಿಡ ಭಾಷೆಯ ಪ್ರಾರಂಭಿಕ ರೂಪದಲ್ಲೇ ಮಾತನಾಡುತ್ತಿದ್ದರು. ಆರ್ಯರು ದ್ರಾವಿಡರ ಭಾಷೆಯನ್ನು 'ಮೃಧ್ರವಾಚ:' ಅಂದರೆ ಅಸ್ಪಷ್ಟ ಮಾತುಗಳು ಎಂದು ಕರೆದರು. ಆರ್ಯರ ಸಂಪರ್ಕದಿಂದ ಸುದೂರ ಪಾಂಡ್ಯ, ಕೇಕಯ, ಬಾಹ್ಲೀಕ, ಸಹ್ಯ, ನೇಪಾಳ, ಕುಂತಳ, ಕಂಬೋಜ, ಗಂಧಾರ, ಹೈಹಯ ಮತ್ತು ಕನ್ನೋಜ ಎಂಬ ಸಾಗುವಳಿ ಇಲ್ಲದ ಗುಡ್ಡಗಾಡು ಪ್ರದೇಶಗಳಲ್ಲಿರುವ ಜನರು ಆಡುವ ಮಾತನ್ನು ಅನಂತರದ ವೈಯಾಕರಣರು ಒಟ್ಟಾಗಿ 'ಪೈಶಾಚೀ' ಎಂದು ಗುರುತಿಸಿದರು. ಎ.ಇ. ಹೋರ್ನ್‌ಲ್‌ರ ಪ್ರಕಾರ, ಆರ್ಯರು ಪ್ರಮುಖವಾಗಿ ತಮ್ಮದೇ ಭಾಷಾಪ್ರಭೇದಗಳಾದ ಮಾಗಧೀ ಮತ್ತು ಶೌರಸೇನೀ ಭಾಷೆಗಳಲ್ಲಿ ಮಾತನಾಡುತ್ತಿದ್ದರು. ಈ ವಾದವನ್ನು ಅವರು ಹೀಗೆ ದೃಢೀಕರಿಸುತ್ತಾರೆ.

"ಭಾರತೀಯ ಭಾಷಾಶಾಸ್ತ್ರದ ಇತಿಹಾಸವು ಸೂಚಿಸುವ ಪ್ರಕಾರ, ಪ್ರಾಚೀನ ಕಾಲದಲ್ಲಿ ಉತ್ತರ ಭಾರತವನ್ನು ಅಸಮಕೋನದ ವಿಭಾಗಗಳಲ್ಲಿ ವಾಯವ್ಯ ಭಾಗ ಹಾಗೂ ಆಗ್ನೇಯದ ಅರ್ಧಭಾಗದಲ್ಲಿ ಮಾಗಧೀ ಪ್ರಾಕೃತ ಮತ್ತು ಶೌರಸೇನೀ ಪ್ರಾಕೃತ ಎಂಬ ಎರಡು ಪ್ರಮುಖ ಭಾಷಾಪ್ರಭೇದಗಳು ಚಲಾವಣೆಯಲ್ಲಿದ್ದವು. ಇದಕ್ಕೂ ಪೂರ್ವದಲ್ಲಿ ಶೌರಸೇನಿಯು ಉತ್ಕರ್ಷ ಸ್ಥಿತಿಯನ್ನು ತಲಪುವುದಕ್ಕಿಂತ ಮುಂಚೆ, ಮಾಗಧೀ ಮಾತ್ರ ಉತ್ತರ ಭಾರತದಲ್ಲಿ ವಿಶೇಷವಾಗಿ, ಸಿಂಧ, ಪಂಜಾಬ ಮತ್ತು ಪಶ್ಚಿಮ ರಾಜಸ್ಥಾನದಲ್ಲಿ ತನ್ನ ಸಂಪೂರ್ಣ ಪ್ರಭಾವವನ್ನು ಬೀರಿತ್ತು. ಆದರೆ ಪೂರ್ವ ಭಾಗದಲ್ಲಿ ಸಾಗುತ್ತಿದ್ದಂತೆ ಅದರ ಪ್ರಭಾವವು ತೀರ ದುರ್ಬಲತರ ಹಾಗೂ ಕ್ಷೀಣತರ ಆಗುತ್ತ ಹೋಯಿತು. ಪ್ರಮುಖವಾಗಿ, ಗಂಗಾನದಿಯ ವಿಶಾಲ ಕಣಿವೆಯ ಪ್ರವಾಹವನ್ನನುಸರಿಸಿ ಸಾಗುತ್ತ ಹೋದಂತೆ,

ಶೌರಸೇನಿಯ ಪ್ರಭಾವವು ಕ್ಷೀಣವಾಯಿತು. ಪೂರ್ವ ರಾಜಸ್ಥಾನ, ಗುಜರಾತ, ನೇಪಾಳದಲ್ಲಿ ನದೀತೀರದ ದಕ್ಷಿಣ ಮತ್ತು ಉತ್ತರ ಭಾಗದ ಮಾಗಧೀ ಪ್ರದೇಶದಲ್ಲಿ ಅದು ಗಡಿಪ್ರದೇಶದ ಗೂಟದಂತೆ ವರ್ತಿಸಿತು. ಈ ಭಾಗದಲ್ಲಿ ದೊರಕುವ ಮಾಗಧಿಯ ಅವಶೇಷಗಳು ಅತ್ಯಂತ ಗಮನಾರ್ಹವಾಗಿವೆ." ಸಾಮಾನ್ಯವಾಗಿ, ಸರ್ ಜಾನ್ ಮಾರ್ಶಲ್, ಜೇಮ್ಸ್ ಬೀನ್ಸ್, ಎಸ್. ಕೆ. ಚಟರ್ಜೀ ಮುಂತಾದವರು ಇವರ ವಾದವನ್ನು ಸ್ವೀಕರಿಸುತ್ತಾರೆ.

ಹೀಗೆ, ಆರಂಭಕಾಲದ ಆರ್ಯ ಜನಾಂಗದವರ ಭಾಷೆ ಮಾಗಧಿಯಾಗಿತ್ತು ಎಂಬ ವಾದವನ್ನು ನಾವು ಒಪ್ಪಿಕೊಳ್ಳಬಹುದು. ಆರ್ಯರು ಭಾರತದ ವಾಯವ್ಯ ಸರಹದ್ದಿನ ಪರ್ವತ ಪ್ರದೇಶದ ಖೈಬರ್ ಕಣಿವೆಯ ಮೂಲಕ ಪ್ರವೇಶಿಸಿ, ಪಂಜಾಬದ ಬಯಲು ಪ್ರದೇಶದಲ್ಲಿ ಬಂದು ನೆಲೆಸಿದರು. ಈ ಪ್ರದೇಶವೇ 'ಸಪ್ತಸಿಂಧವ:' ಎಂದು ಪ್ರಖ್ಯಾತವಾಗಿದೆ. ಲಡಾಖ ಮತ್ತು ಕಾಶ್ಮೀರದ ಹಿಮಾವೃತ ಪ್ರದೇಶವನ್ನು ದಾಟಿದ ಆರ್ಯರು ಈಗಿನ ಹಿಮಾಚಲಪ್ರದೇಶದಲ್ಲಿ ಹಾಗೂ ಸರಸ್ವತೀ, ದೃಷದ್ವತೀ ಮತ್ತು ಆಪಯಾ ಈ ಮೂರು ನದಿಗಳಿಂದ ಆವೃತವಾದ ಪ್ರದೇಶದಲ್ಲಿ ಬಂದು ನೆಲೆಸಿದರು. ಅವರು ಶೌರಸೇನೀ ಭಾಷೆಯನ್ನು ಮಾತನಾಡುತ್ತಿದ್ದರು. ಒಂದೇ ಮೂಲದಿಂದ ಬಂದ ಈ ಎರಡೂ ಉಪಭಾಷೆಗಳಲ್ಲಿ ಅಂಥ ವ್ಯತ್ಯಾಸವೇನೂ ಇರಲಿಲ್ಲ. ಭಾರತದ ಮಂತ್ರದ್ರಷ್ಟಾರರು ಮೊದಲು ಅಥವಾ ಅನಂತರ ದಿವ್ಯ ದೃಷ್ಟಿಯಿಂದ ಕಂಡ ಅಥವಾ ರಚಿಸಿದ ಸ್ತುತಿಗಳು ಬುದ್ಧಿಗ್ರಾಹ್ಯವಾಗಿರಲಿಲ್ಲ. ಆರ್ಯರು ಉಪಖಂಡದ ನಾಲ್ದೆಸೆಯಲ್ಲೂ ಹರಡಿ ಹೋಗಿ, ತಮ್ಮ ತೆಕ್ಕೆಯಲ್ಲಿ ಅನಾರ್ಯ ಅಂಶಗಳನ್ನು ಮೈಗೂಡಿಸಿಕೊಂಡರು. ಆಗ ಕೃಷ್ಣದ್ವೈಪಾಯನರು ವಿಭಿನ್ನ ಋಷಿಕುಲಗಳಿಗೆ ಸಂಬಂಧಿಸಿದ ಅಸಂಖ್ಯ ಸೂಕ್ತ ಹಾಗೂ ಸ್ತುತಿಗಳ ಸಂಕಲನದೊಂದಿಗೆ ಪರಿಷ್ಕರಣವನ್ನೂ ಮಾಡಿದರು. ಅವು ವಿವಿಧ ಪ್ರಾಕೃತ ರೂಪಗಳಲ್ಲಿದ್ದವು. ಅವುಗಳಿಗೆ ಸುರೂಪ ಹಾಗೂ ಸುಸಂಸ್ಕಾರ ನೀಡಿದ್ದರಿಂದ ಪ್ರಾಕೃತರೂಪವು ಸಂಸ್ಕೃತ ಹಾಗೂ ಉದಾತ್ತ ರೂಪವನ್ನು ತಳೆಯಿತು. ಆಗ ಅದು ಬ್ರಾಹ್ಮೀ, ದೇವಭಾಷೆ ಅಥವಾ ಛಂದಸ್ ಆಗಿ ಪರಿವರ್ತಿತವಾಯಿತು. 'ಛಂದಯತಿ ಇತಿ ಛಂದ:' ಛಂದಯತಿ ಎಂದರೆ ಅಡಗಿಸಿಕೊಂಡಿರುವುದು. ಋಷಿಗಳ ದಿವ್ಯದೃಷ್ಟಿಗೆ ಗೋಚರವಾದ ಆಧ್ಯಾತ್ಮಿಕ ತತ್ತ್ವರಹಸ್ಯವನ್ನು ಅಡಗಿಸಿಕೊಂಡಿರುವುದರಿಂದ ಛಂದಸ್ಸು. ಛಂದಸ್ ಎಂದರೆ ವೇದ. ವೇದವು ಅನರ್ಹ ಹಾಗೂ ಸಾಮಾನ್ಯರ ಕೈವಶವಾಗದಂತೆ ತನ್ನ ನಿಗೂಢ ಸತ್ಯವನ್ನು ಅಡಗಿಸಿಕೊಂಡಿದೆ. ಯುಗಾಂತರದಿಂದ ಚದರಿ ಹೋದ ಅಗಾಧ ಶ್ಲೋಕರೂಪೀ ಸಾಹಿತ್ಯದಿಂದ ಮಹತ್ವಪೂರ್ಣ ಸ್ತುತಿಗಳನ್ನು ಏಕತ್ರ ಮಾಡಿ ಚತುರ್ವೇದಗಳ

ವಿಭಾಗ ಮಾಡಿರುವುದರಿಂದ 'ವ್ಯಾಸ'ರು ಮಹರ್ಷಿ ಎಂದು ಪ್ರಖ್ಯಾತರಾದರು. ವಿಂಗಡನಕಾರ್ಯದ ಮೂಲಕ ಅವರು 'ವಿವ್ಯಾಸರು'.

ವೇದ ಶಾಸ್ತ್ರಗಳ ಭಾಷೆ ಕ್ಲಿಷ್ಟ ಅನರ್ಹರೂ, ದೀಕ್ಷಾಸಂಸ್ಕಾರ ಇಲ್ಲದವರೂ ಆದ ಸಾಮಾನ್ಯರ ಬುದ್ಧಿಗೆ ಅದು ನಿಲುಕುತ್ತಿರಲಿಲ್ಲವೆಂದು ವೇದಗಳಿಗೆ ಪೂರಕವಾದ ದಾಖಲೆಗಳಾಗಿ ಶಿಕ್ಷಾ, ಕಲ್ಪ, ವ್ಯಾಕರಣ, ಛಂದ, ನಿರುಕ್ತ, ಜ್ಯೋತಿಷ ಈ ಆರು ವೇದಾಂಗಗಳನ್ನು ಒದಗಿಸಲಾಯಿತು. ಯಾಸ್ಕ ಮುನಿಗಳು 'ನಿರುಕ್ತ'ವನ್ನು ರಚಿಸಿ ವೇದಮಂತ್ರಗಳಲ್ಲಿರುವ ಕಠಿಣ ಪದಗಳ ನಿರ್ವಚನಪೂರ್ವಕ ಅರ್ಥನಿರ್ಧಾರವನ್ನು ಮಾಡಿದರು. ಪಾಣಿನಿ 'ಅಷ್ಟಾಧ್ಯಾಯೀ' ಎಂಬ ಗ್ರಂಥದಲ್ಲಿ ಅದನ್ನು ನಿಯಮ ಬದ್ಧಗೊಳಿಸಿದರೆ, ಪತಂಜಲಿ ತಮ್ಮ ಮಹಾಭಾಷ್ಯದಲ್ಲಿ ಅಷ್ಟಾಧ್ಯಾಯಿಯ ವ್ಯಾಖ್ಯೆಯನ್ನು ಬರೆದರು. ಪಾಣಿನಿ ಗಮನಿಸಿರುವ ಪ್ರಕಾರ, ಆಡುಮಾತಿನಲ್ಲಿ ಶುದ್ಧ ಪದಗಳು ಕಡಿಮೆ ಇದ್ದು ಅಶುದ್ಧ ಪದಗಳ ಪ್ರಾಬಲ್ಯವಿರುತ್ತದೆ. ಏಕೆಂದರೆ, ಒಂದೊಂದು ಶುದ್ಧ ಪದಕ್ಕೂ ಅನೇಕ ಅಪಭ್ರಂಶ ರೂಪಗಳಿರುತ್ತವೆ.

"ಭೂಯಾಂಸೋಽಪಶಬ್ದಾ: ಅಲ್ಪೀಯಾಂಸಶ್ಶಬ್ದಾಃ। ಏಕೈಕಸ್ಯ ಶಬ್ದಸ್ಯ ಬಹವೋಽಪಭ್ರಂಶಾಃ।" ಆದಕಾರಣ, ವ್ಯಾಕರಣದ ಪ್ರಧಾನ ಉದ್ದೇಶ ವೇದಮಂತ್ರಗಳ ಸಾರರಕ್ಷಣೆ. "ರಕ್ಷಣಾರ್ಥಂ ವೇದಾನಾಂ ಅಧ್ಯೇಯಂ ವ್ಯಾಕರಣಂ।" ಅಥವಾ ಶಬ್ದಗಳ ನಿಯಮನ, 'ಶಬ್ದಾನುಶಾಸನ.' ಹೀಗೆ ಸಂಸ್ಕರಣಗೊಂಡ ಭಾಷೆಯೇ 'ಸಂಸ್ಕೃತ.'

ಭಾರತೀಯ ಪ್ರಾಕೃತ ಭಾಷೆಗಳ ಪ್ರಾಚೀನ ವೈಯಾಕರಣನಾದ ವರರುಚಿಯು ಮಾಗಧೀ, ಶೌರಸೇನೀ ಮತ್ತು ಪೈಶಾಚೀ ಈ ಮೂರು ಭಾಷೆಗಳು ಪ್ರಧಾನ ಅಪಭ್ರಂಶಗಳೆಂದೂ ಮಹಾರಾಷ್ಟ್ರಿಯು ಶೌರಸೇನೀ ಪ್ರಾಕೃತದ ಒಂದು ಕಾವ್ಯಪ್ರಕಾರವೆಂದೂ ಮನ್ನಿಸಿರುವನು. ಹೋರ್ನಲ್ ಕೂಡ ಈ ವಾದವನ್ನು ಹೀಗೆ ಪ್ರತಿಪಾದಿಸಿದ್ದಾರೆ.

"ಮಹಾರಾಷ್ಟ್ರಿಯು ಈ ಪ್ರಾಕೃತಪಟ್ಟಿಯಲ್ಲಿಲ್ಲ. ಅದು ಅಪಭ್ರಂಶ ಅಥವಾ ದೇಶೀ ಭಾಷೆಯಲ್ಲೂ ಇಲ್ಲ."

ಇದರಿಂದ ಸ್ಪಷ್ಟವಾಗಿ ತಿಳಿದುಬರುವುದೇನೆಂದರೆ ಮಹಾರಾಷ್ಟ್ರಿಯು ಯಾವುದೇ ಒಂದು ಜನವರ್ಗದ ದೇಶೀಭಾಷೆಯೆಂದು ಪರಿಗಣಿಸಲ್ಪಟ್ಟಿಲ್ಲ. ಮಹಾರಾಷ್ಟ್ರ (ಮರಾಠಾ) ಪ್ರದೇಶದಿಂದಲೂ ಅದರ ನಾಮಕರಣವಾಗಿಲ್ಲ. ವರರುಚಿ ಹೇಳುವಂತೆ, ಮಹಾರಾಷ್ಟ್ರೀ ಪದವು ಒಂದು ಅಂಕಿತನಾಮವಲ್ಲ.

(ನಾಮಪದವಲ್ಲ, ವಿಶೇಷಣ ಪದ. ದೋಆಬ ಮತ್ತು ರಾಜಸ್ಥಾನ ಎಂಬ ಪ್ರಸಿದ್ಧ ಪ್ರದೇಶವೇ ಒಂದು ಮಹಾನ್ ರಾಷ್ಟ್ರ.) ಇದೊಂದು ಪ್ರಶಂಸಾತ್ಮಕ ಅಥವಾ ವರ್ಣನಾತ್ಮಕ ಪದವಾಗಿರಬಹುದು. ಈ ಅಭಿಪ್ರಾಯವನ್ನೇ ಜೆ. ಬೀಮ್ಸ್‌ರು ತಮ್ಮ `Comparative Grammar of Modern Indo-Aryan Languages' ಗ್ರಂಥದಲ್ಲಿ ಹೀಗೆ ಸಮರ್ಥಿಸಿದ್ದಾರೆ. "ಭಾರತದ ಯಾವುದೇ ಒಂದು ಆಧುನಿಕ ಭಾಷೆ ಸಮಗ್ರವಾಗಿ ಮಹಾರಾಷ್ಟ್ರೀ ಅಥವಾ ಮರಾಠೀ ಪ್ರಾಕೃತಕ್ಕೆ ಸಂಬಂಧಪಟ್ಟದ್ದು ಎಂದು ವರ್ಗೀಕರಣ ಮಾಡುವ ಪ್ರಯತ್ನವೇ ನಿರರ್ಥಕವಾದುದು. ಮಹಾರಾಷ್ಟ್ರೀ ಅಥವಾ ಮರಾಠೀ ಇದೊಂದು ಭಾಷೆಯ ಹೆಸರೇ ಹೊರತು ಇದರಲ್ಲಿ ಪ್ರಾಕೃತ ಭಾಷಾವರ್ಗಕ್ಕೆ ಸೇರುವ ಸಾಮಾನ್ಯಾಂಶವಿಲ್ಲ."

ಇಷ್ಟೆಲ್ಲ ಸ್ಪಷ್ಟ ತೀರ್ಮಾನಗಳಿದ್ದರೂ ಮರಾಠಿಯ ಮೂಲ ಮಹಾರಾಷ್ಟ್ರೀ ಪ್ರಾಕೃತವೆಂದು ಮಹಾರಾಷ್ಟ್ರದವರು ಪ್ರತಿಪಾದಿಸುತ್ತ ಬಂದಿರುವುದರಿಂದ ಸ್ಟೀನ್ ಕೊನೋವ್ ನಿರ್ದಿಷ್ಟವಾಗಿ ಹೀಗೆ ಹೇಳುತ್ತಾರೆ.

"ಭಾರತದಾದ್ಯಂತ, ವಾಗ್ಗೇಯಕಾರರು ಬಳಸುವ ಮಹಾರಾಷ್ಟ್ರಿಯಂಥ ಭಾಷೆಯು ಕಾಲಕ್ರಮೇಣ ತನ್ನ ಭಾಷಾಮೂಲದ ತಳಹದಿಗಿಂತ ಅನ್ಯ ದೇಶೀ ಭಾಷೆಗಳಲ್ಲಿರುವ ಪದಗಳನ್ನೂ, ಪ್ರಾಯಶಃ ರೂಪನಿಷ್ಪತ್ತಿಯನ್ನೂ ಅಳವಡಿಸಿಕೊಳ್ಳುತ್ತ ಬಂದಿದೆ ಎಂಬುದು ಸರ್ವವಿದಿತ ಸಂಗತಿಯಾಗಿದೆ. ಇನ್ನೊಂದು ದೃಷ್ಟಿಯಿಂದ ನೋಡಿದರೆ, ಸ್ವಾಭಾವಿಕವಾಗಿ ಅದು ಆಡುಮಾತಿನ ಮೇಲೂ ಪ್ರಭಾವ ಬೀರುತ್ತದೆ. ಇನ್ನಾವುದೇ ಸಾಹಿತ್ಯಪ್ರಕಾರಗಳಿಗಿಂತ ಹಾಡುಗಬ್ಬದ ಭಾಷೆಯೇ ಅಂಥ ಪ್ರಭಾವ ಬೀರಲು ಹೆಚ್ಚು ಸಕ್ಷಮವಾಗಿರುತ್ತದೆ. ಆದಕಾರಣ, ಪ್ರತಿಯೊಂದು ಪ್ರಾಕೃತವು ವಿಶೇಷವಾಗಿ ಮಹಾರಾಷ್ಟ್ರೀ ಪ್ರಾಕೃತವು ಹೆಚ್ಚು-ಕಡಿಮೆ ಮಿಶ್ರಗುಣದ್ದಾಗಿದೆಯೆಂದು ನಿರೀಕ್ಷಿಸಬಹುದು. ಮತ್ತು ಅದು ಗ್ರಾಹ್ಯವೂ ಆಗಿದೆ."

ವರರುಚಿಯು ಈ ಮೂರು ಅಪಭ್ರಂಶ ಉಪಭಾಷೆಗಳಲ್ಲಿ ಪ್ರತಿಯೊಂದರ ಆದಿಮೂಲದ ಕುರಿತು ಹೀಗೆ ನಿರ್ದೇಶಿಸುತ್ತಾನೆ.

"ಪೈಶಾಚೀ ಪ್ರಕೃತೀಃ ಶೌರಸೇನೀ। ಮಾಗಧೀ ಪ್ರಕೃತೀಃ ಶೌರಸೇನೀ। ಶೌರಸೇನೀ ಪ್ರಕೃತೀಃ ಸಂಸ್ಕೃತಮ್ ।"

ಪ್ರಾಯಶಃ ವ್ಯಾಸಮುನಿಗಳು ಮಾಗಧಿಗಿಂತ ಶೌರಸೇನೀ ಪ್ರಾಬಲ್ಯವುಳ್ಳ ಪ್ರದೇಶದಲ್ಲಿದ್ದು ವೇದಗ್ರಂಥಗಳ ಸಂಕಲನ, ವಿಂಗಡನ ಕಾರ್ಯವನ್ನು ಮಾಡಿರಬಹುದೆಂದು ತೋರುತ್ತದೆ. ಮಾಗಧಿಯೂ ದೂರದ ಪೂರ್ವವರ್ತೀ

ಪ್ರದೇಶಗಳನ್ನು ತಲಪಿ, ಆ ಭಾಗದ ಉದ್ದಗಲಕ್ಕೂ ಹರಡಿತ್ತು. ಅಲ್ಲೆಲ್ಲ ಶೌರಸೇನಿಗಿಂತ ಹೆಚ್ಚುಪಾಲು ಅನಾರ್ಯ ಪದಗಳಿದ್ದವು. ಆದ ಕಾರಣ, ಬಹುಶಃ ಸಂಪ್ರದಾಯನಿಷ್ಠ ವ್ಯಾಸಮುನಿಗಳು ವೈದಿಕ ಗ್ರಂಥಗಳ ಪರಿಷ್ಕರಣ ಕಾರ್ಯದಲ್ಲಿ ತೊಡಗಿದಾಗ ಲಿಪ್ಯಂತರದ ಸಲುವಾಗಿ ಪರಿಷ್ಕೃತ ರೂಪವುಳ್ಳ ಮಾಧ್ಯಮವಾಗಿ ಸಂಸ್ಕೃತವನ್ನು ಆಶ್ರಯಿಸಿದ್ದರು. ಅಲ್ಲಿ ಮಾಗಧಿಗಿಂತ ಶೌರಸೇನಿಯ ಪ್ರಾಬಲ್ಯವಿತ್ತು. ಕಾಲಕ್ರಮೇಣ, ಅದು ಪಾಲೀ ಭಾಷೆಯ ಉದ್ಭವಕ್ಕೆ ಅವಕಾಶವನ್ನು ಒದಗಿಸಿತು. ಬುದ್ಧನ ಕಾಲದಲ್ಲಿ ಪಾಲೀ ಭಾಷೆಯು ಜನಸಾಮಾನ್ಯರ ಪ್ರಭಾವೀ ಭಾಷೆಯಾದುದರಿಂದ ಅದು ಪ್ರಾದೇಶಿಕ ಉಪಭಾಷೆಗಳಿಗೆ ಧರ್ಮಸ್ವೀಕಾರ ಮಾಡುವ ವಿಷಯದಲ್ಲಿ ಅನುವು ಮಾಡಿಕೊಟ್ಟಿತು.

ಶೌರಸೇನೀ ಪ್ರದೇಶದಲ್ಲಿದ್ದ ಬ್ರಹ್ಮಾವರ್ತದಿಂದ ಪರಶುರಾಮನು ಬ್ರಾಹ್ಮಣ ಕುಟುಂಬಗಳನ್ನು ಕರೆದುಕೊಂಡು ಬಂದಿದ್ದನೆಂದು ನೆನಪಿಸಿಕೊಳ್ಳುವುದೇ ಒಂದು ರೋಚಕ ಸಂಗತಿಯಾಗಿದೆ. ಇಷ್ಟೇ ಅಲ್ಲ; ಶೌರಸೇನೀ ಉಪಭಾಷೆ ಯನ್ನಾಡುತ್ತಿದ್ದ ಪೌರವ ವಂಶಜರು ಕೂಡ ರಾಜಸ್ಥಾನ, ಸೌರಾಷ್ಟ್ರ, ಗುಜರಾತ ಮತ್ತು ಕೊಂಕಣ ಮಾರ್ಗವಾಗಿ ಹಾದು ಹೋಗುವಾಗ ಅಲ್ಲಲ್ಲಿ ತಮ್ಮ ಆಡಳಿತವನ್ನು ಸ್ಥಾಪಿಸುತ್ತ ಹೋದರು. ಬ್ರಾಹ್ಮಣ ವಲಸೆಗಾರರನ್ನು ಕರೆದುಕೊಂಡು ಬಂದ ಮಾರ್ಗವೂ ಇದೇ ಆಗಿತ್ತು. ಭಾರತದ ಪೂರ್ವಭಾಗದಲ್ಲಿ ಗಂಗಾನದಿಯ ಎಡ–ಬಲ ದಂಡೆಗುಂಟ ಪ್ರಚಲಿತವಿದ್ದ ಉಪಭಾಷೆಗಳ ಮೇಲೆ ಪ್ರಭಾವ ಬೀರಿದ ಮಾಗಧಿಗಿಂತ ಅನಂತರ ಬಂದ ಉಪಭಾಷೆಗಳಲ್ಲಿ ಶೌರಸೇನೀ ರೂಪ ನಿಷ್ಪತ್ತಿಯನ್ನು ಹೋರ್ನಲ್ ಕಂಡು ಹಿಡಿದಿರುವುದಂತೂ ಸ್ವಾಭಾವಿಕವಾಗಿದೆ. ಅನಂತರ ಬಂದ ಕೊಂಕಣೀ ಭಾಷೆಯ ಮೂಲವೂ ಶೌರಸೇನೀ. ಅದು ಮಾಗಧೀ ಪ್ರಾಕೃತದ ಮೂಲಕ್ಕೆ ಋಣಿಯಾಗಿರುವ ಮರಾಠಿಯಂತಿಲ್ಲ. ಇದನ್ನು ಪ್ರಸ್ತುತ ಲೇಖಕರು ತಮ್ಮ 'ಕೊಂಕಣೀ ಭಾಷೇಚೋ ಇತಿಹಾಸ' ಎಂಬ ಗ್ರಂಥದಲ್ಲಿ ತೋರಿಸಿಕೊಟ್ಟಿದ್ದಾರೆ. ಒಂದು ಭಾಷೆ ಇನ್ನೊಂದರ ಉಪಭಾಷೆ ಆಗಿರುವುದೇ ಹೇಗೆ ಎಂಬುದನ್ನು ಕಂಡು ಹಿಡಿಯುವುದಕ್ಕೋಸ್ಕರ ಪಶ್ಚಿಮೀ ಹಿಂದೀ ಮತ್ತು ಬಿಹಾರೀ ಭಾಷೆಗಳನ್ನು ಪರಿಶೀಲಿಸುತ್ತ ಗ್ರಿಯರ್ಸನ್‌ರು ಕೂಡ ತಮ್ಮ Linguistic Survey of India ಎಂಬ ಗ್ರಂಥದಲ್ಲಿ ಒಂದು ಸಿದ್ಧಾಂತವನ್ನು ಹೀಗೆ ಪ್ರತಿಪಾದಿಸಿದ್ದಾರೆ.

"ಇನ್ನೊಂದು ಶಬ್ದರೂಪದೊಡನೆ ಪರಸ್ಪರ ವಿನಿಮಯ ಸಾಧ್ಯವಿಲ್ಲವೆಂದು ಭಾಷಾವಿಂಗಡನೆ ಮಾಡಲೇಬೇಕೆಂಬ ನಿರ್ಧಾರ ಮಾಡಬಾರದು. ನಾವು ಈ

ವಿಷಯವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಪರಿಶೀಲಿಸಬೇಕೆಂದಿದ್ದರೆ, ಬೇರೆ ಪ್ರಬಲ ಅಂಶಗಳನ್ನೂ ಪರಿಗಣಿಸಬೇಕು. ಮೊಟ್ಟ ಮೊದಲನೆಯದಾಗಿ, ನಾನು ಈಗಾಗಲೇ ಸೂಚಿಸಿರುವ ವ್ಯಾಕರಣ ವಿನ್ಯಾಸ. ಎರಡೂ ಭಾಷೆಗಳಲ್ಲಿರುವ ಶಬ್ದರೂಪಗಳ ಭಂಡಾರದಲ್ಲಿ ಸಮಾನ ಅಂಶಗಳಿರಬಹುದು. ಆದರೆ ಬಿಹಾರೀ ಭಾಷೆಯ ಸಮಗ್ರ ವ್ಯಾಕರಣ ವಿನ್ಯಾಸವು ಪಶ್ಚಿಮೀ ಹಿಂದೀ ಭಾಷೆಯ ವ್ಯಾಕರಣ ವಿನ್ಯಾಸಕ್ಕಿಂತ ಆಮೂಲಾಗ್ರವಾಗಿ ಭಿನ್ನವಾಗಿದೆ." ಕೊಂಕಣೀ ಮತ್ತು ಮರಾಠಿಯಲ್ಲಿ ಅನೇಕ ಸಾಮಾನ್ಯ ಶಬ್ದಗಳಿವೆ. ಅದೇ ರೀತಿ ಸ್ವಲ್ಪಮಟ್ಟಿಗೆ ಬಂಗಲಿಯಲ್ಲೂ ಇವೆ ಎಂದ ಮಾತ್ರಕ್ಕೆ ಮರಾಠಿಯ ಉಪಭಾಷೆ ಕೊಂಕಣಿ ಎಂದೂ, ಕೊಂಕಣೀ ಭಾಷಿಕ ಸಾರಸ್ವತರು ಬಂಗಾಲದಿಂದ ಗೋಮಂತಕದ ಕಡೆ ವಲಸೆ ಬಂದರೆಂದೂ ಪ್ರತಿಪಾದಿಸುವುದು ವಿವೇಚನಾರಹಿತ ಅಸಂಬದ್ಧ ಪ್ರಲಾಪವಾದೀತು.

ಪೋರ್ಚುಗೀಸರ ಆಡಳಿತಕಾಲದಲ್ಲಿ ಅನೇಕರು ಕ್ರೈಸ್ತರಾಗಿ ಮತಾಂತರ ಗೊಂಡು ಅವರ ಭಾಷೆ, ರೀತಿ-ರಿವಾಜು ಮತ್ತು ಸಂಪ್ರದಾಯಗಳನ್ನು ಸ್ವೀಕರಿಸಿದರು. ಅಮೇರಿಕೆಯಲ್ಲಿ ಅಥವಾ ಯಾವುದೋ ಒಂದು ಪಾಶ್ಚಿಮಾತ್ಯ ರಾಷ್ಟ್ರದಲ್ಲಿ ನೆಲೆಸಿದ ಕೆಲ ಸಾರಸ್ವತರು ಆ ದೇಶದ ಭಾಷೆ, ರೀತಿ- ರಿವಾಜು ಮತ್ತು ಸಂಪ್ರದಾಯಗಳನ್ನು ಅಳವಡಿಸಿಕೊಂಡರು. ಅನೇಕ ಭಾರತೀಯರು ತಾವು ಬ್ರಿಟಿಷರಿಗಿಂತ ಉಚ್ಚಮಟ್ಟದ ಆಂಗ್ಲರೆಂದು ಸಮರ್ಥಿಸಿಕೊಂಡು ಇಂಗ್ಲಿಷ್ ಭಾಷೆ, ರೀತಿ-ರಿವಾಜು ಮತ್ತು ಸಂಪ್ರದಾಯಗಳನ್ನು ತಮ್ಮ ನಿತ್ಯ ಜೀವನದಲ್ಲಿ ಅಳವಡಿಸಿಕೊಂಡರು. ಅದೇ ವಿಧವಾಗಿ, ಶಿಲಾಹಾರರು, ದೇವಗಿರಿ ಯಾದವರು ಮತ್ತು ಮರಾಠಾ ದೊರೆಗಳ ಆಸ್ಥಾನದಲ್ಲಿ ನೌಕರಿ ಪಡೆದ ಸಾರಸ್ವತರು ಮರಾಠೀ ಭಾಷೆ, ರೀತಿ-ರಿವಾಜು ಮತ್ತು ಆಳುವ ವರ್ಗದವರ ಸಂಪ್ರದಾಯಗಳನ್ನು ತಮ್ಮ ನಿತ್ಯಜೀವನದಲ್ಲಿ ಅಳವಡಿಸಿಕೊಂಡರು. ಇಷ್ಟೇ ಏಕೆ? ಅವರು ತಮ್ಮ ಸಾರ್ವಜನಿಕ ಜೀವನದಲ್ಲಿ, ತಮ್ಮ ಕುಟುಂಬ ಹಾಗೂ ಸಮಾಜಬಾಂಧವರೊಡನೆ ವ್ಯವಹಾರ ಸಂಪರ್ಕ ದಲ್ಲಿದ್ದಾಗಲೂ ಸ್ವಧರ್ಮವನ್ನು ಮರೆತು ಪರಧರ್ಮಕ್ಕೆ ಅಡಿಯಾಳಾದರು. ಇಂಥ ಅನೇಕ ಮಹಾರಾಷ್ಟ್ರದ ಸಾರಸ್ವತರ ತಿಳಿಗೇಡಿ ಧೋರಣೆಯು ಎಷ್ಟರ ಮಟ್ಟಿಗೆ ಮಿತಿ ಮೀರಿತ್ತೆಂದರೆ ಅವರು ಚಿತ್ಪಾವನರನ್ನು ಬ್ರಾಹ್ಮಣರೆಂದೂ ತಾವು ಅಬ್ರಾಹ್ಮಣರು ಇಲ್ಲವೆ ಬ್ರಾಹ್ಮಣರಿಗಿಂತ ಕಡಿಮೆ ದರ್ಜೆಯವರು ಎಂದೂ ತಮ್ಮ ಕುರಿತು ತಾವೇ ಸಹಜವಾಗಿ ಹೇಳಿಕೊಳ್ಳುತ್ತಿದ್ದರು. ಈ ವಿಚಾರದಾರಿದ್ರ್ಯ ಅವರಲ್ಲಿ ಇಪ್ಪತ್ತನೆಯ ಶತಮಾನದ ಬಹುತೇಕ ಆರಂಭಕಾಲದವರೆಗೂ ಇತ್ತು. ಆಗ ತಮ್ಮನ್ನು ಅವರು ಶೇಣವಿಗಳೆಂದು ಕರೆಸಿಕೊಳ್ಳುತ್ತಿದ್ದರು. ಆದರೆ, ಕರ್ನಾಟಕ ಮತ್ತು ಕೇರಳದಲ್ಲಿ ಮಾತ್ರ ಪರಿಸ್ಥಿತಿ ಕೊಂಚ ಭಿನ್ನವಾಗಿತ್ತು. ಅಲ್ಲಿ ಸಾರಸ್ವತರು

ಅಮಿತ ಉತ್ಸಾಹ ಮತ್ತು ಸತತ ಸಾಧನೆಯ ಮೂಲಕ ತಾವು ನೆಲೆಸಿದ ಪ್ರದೇಶದ ಭಾಷೆ ಮತ್ತು ಸಂಸ್ಕೃತಿಗೆ ತಮ್ಮ ಕೊಡುಗೆಯನ್ನು ಸಲ್ಲಿಸುತ್ತ ಆ ಪ್ರದೇಶದ ಧಾರ್ಮಿಕ ಸಾಹಿತ್ಯದಿಂದ ಪ್ರಭಾವಿತರಾಗಿದ್ದರು. ಅವರ ನಾಲಗೆಯ ಮೇಲೆ ಬಸವಣ್ಣನವರ ವಚನಗಳು, ಪುರಂದರ– ಕನಕರ ಭಜನೆಗಳು ನಲಿಯುತ್ತಿರುವುದನ್ನು ಕಂಡರೆ ಯಾರೂ ಆಶ್ಚರ್ಯ ಪಡಬೇಕಿಲ್ಲ. ಸುದೈವವಶಾತ್, ಅವರು ತಮ್ಮ ಮಾತೃಭಾಷೆಯಾದ ಕೊಂಕಣಿಯನ್ನು ತಮ್ಮ ಕುಟುಂಬ ಹಾಗೂ ಸಮಾಜ ಬಾಂಧವರ ಸಂಪರ್ಕಮಾಧ್ಯಮವನ್ನಾಗಿ ಉಳಿಸಿಕೊಂಡಿರುವರು.

ಪೋರ್ಚುಗೀಸರು ಗೋವಾದಲ್ಲಿ ಆಡಳಿತ ನಡೆಸುತ್ತಿದ್ದಾಗ ಮತ್ತು ಮರಾಠಾ ದೊರೆಗಳು ಅಲ್ಲಿ ಅಧಿಕಾರ ನಡೆಸಲು ಪ್ರಯತ್ನಿಸುತ್ತಿದ್ದಾಗ ಕ್ರೈಸ್ತರಾಗಿ ಮತಾಂತರಗೊಂಡ ಸಾರಸ್ವತರು ಪೋರ್ಚುಗೀಸ್ ಭಾಷೆ, ರೀತಿ– ರಿವಾಜು ಮತ್ತು ಸಂಪ್ರದಾಯಗಳನ್ನು ಸ್ವೀಕರಿಸಿದರು. ಆದರೆ ಬಡವರ್ಗದ ಮತಾಂತರಿಗಳು ಮಾತ್ರ ಕೊಂಕಣಿಯನ್ನೇ ಅವಲಂಬಿಸಿಕೊಂಡಿರಲು ಬಯಸಿದರು. ಆದರೆ ಅನೇಕ ಸಾರಸ್ವತರು ವಿದೇಶೀ ದೊರೆಗಳನ್ನು ವಿರೋಧಿಸುವ ಸಲುವಾಗಿ ಅಪಾತ್ರರ ಮೇಲಿನ ಶ್ರದ್ಧೆಯಿಂದ ಮರಾಠೀ ಭಾಷೆಯ ಪ್ರಭಾವಕ್ಕೆ ಬಲಿಯಾದರು. ಇದರ ಪರಿಣಾಮವಾಗಿ, ಮಹಾರಾಷ್ಟ್ರದಲ್ಲಿ ಕೊಂಕಣಿ ನಶಿಸಿ ಹೋಯಿತು. ಆಗ ಅದು ಗೋವಾದ ಹಿಂದೂಗಳ ಸಾಹಿತ್ಯಿಕ ಭಾಷೆಯಾಯಿತು. ಆಗ ಮಹಾರಾಷ್ಟ್ರವಾದೀ ಗೋಮಂತಕ ಪಕ್ಷದ ಪ್ರಭಾವೀ ತಂಡದವರು ಆಗ್ರಹಪೂರ್ವಕ ತಮ್ಮ ಆಯ್ಕೆಯನ್ನು ಹೀಗೆ ಮಂಡಿಸಿದರು.

'ಗೋವಾವನ್ನು ಮಹಾರಾಷ್ಟ್ರದಲ್ಲಿ ವಿಲೀನಗೊಳಿಸಬೇಕು. ಮರಾಠಿಯನ್ನು ಗೋವಾದ ರಾಜ್ಯಭಾಷೆ ಮಾಡಬೇಕು.'

ಮರಾಠರ ಆಡಳಿತವು ಗೋವಾದ ತನಕ ವಿಸ್ತರಿಸಲ್ಪಟ್ಟಾಗ ಮರಾಠರ ಭಾಷೆ, ರೀತಿ–ರಿವಾಜು ಮತ್ತು ಸಂಪ್ರದಾಯಗಳೂ ಅನುಸರಿಸಿ ಬಂದವು. ಇದರ ಪ್ರಭಾವ ಎಷ್ಟರ ಮಟ್ಟಿಗೆ ಗಾಢವಾಗಿತ್ತೆಂದರೆ, ಕ್ರೈಸ್ತರಾಗಿ ಮತಾಂತರಗೊಂಡ ಸಾರಸ್ವತರು ಕೊಂಕಣಿಯಲ್ಲಿ ಬರೆದ ಕ್ರಿಶ್ಚಿಯನ್ ಸಾಹಿತ್ಯದಿಂದ ತೃಪ್ತರಾಗಲಿಲ್ಲ. ಕೊಂಕಣಿಯ ಬದಲು ಅದನ್ನು ಮರಾಠಿಯಲ್ಲಿ ಬರೆಯಬೇಕೆಂದು ಬಯಸಿದರು. ಫಾದರ್ ಥಾಮಸ್ ಸ್ಟೀಫನ್ಸ್‌ರು ಪಥಭ್ರಷ್ಟ ವಿಧರ್ಮೀಯರ ಆತ್ಮೋದ್ಧಾರಕ್ಕಾಗಿಯೇ ಗೋವಾಕ್ಕೆ ಬಂದಿಳಿದಿದ್ದರು. ಕೊಂಕಣೀ ಭಾಷೆಯ ಪ್ರಚಾರಕ್ಕಲ್ಲ ಎಂಬುದರಲ್ಲೇನೂ ಸಂಶಯವಿರಲಿಲ್ಲ. ಆದರೂ ಕ್ರಿಸ್ತಪುರಾಣವನ್ನು ಮರಾಠೀ ಭಾಷೆಯಲ್ಲಿ ಬರೆಯಬೇಕೆಂಬ ಆಗ್ರಹವನ್ನು ಅವರು ಒಪ್ಪಿಕೊಂಡರು. ಕೊಂಕಣೀ ಗೋವಾದ

ಜನಭಾಷೆ ಎಂದು ಅವರು ಅರಿತುಕೊಂಡಿದ್ದರು. ವಾಸ್ತವಿಕವಾಗಿ ಹೇಳುವುದಾದರೆ, ಅವರು ಕೊಂಕಣಿಯಲ್ಲಿ 'ದೌತ್ರಿನ್ ಕ್ರೈಸ್ತ,' ಮತ್ತು ಇತರ ಧಾರ್ಮಿಕ ಗ್ರಂಥಗಳನ್ನು ಅದಾಗಲೇ ಬರೆದಿದ್ದರು. ಮತಾಂತರೀ ಸಾರಸ್ವತರ ವಿನಂತಿಯನ್ನು ತನ್ನ ಕ್ರಿಸ್ತಪುರಾಣದಲ್ಲಿ ಅವರು ಹೀಗೆ ಉಲ್ಲೇಖಿಸಿದ್ದಾರೆ.

ಪಣ ದೌತ್ರಿನೀ ವಾಂಚೋನಿ ಅನ ।
ಕಾಹೀ ಯೇಕ ಆಗಳೇ ಶಾಸ್ತ್ರ ಪುರಾಣ ।
ಜರೀ ಆಮಾಂ ಕರವಿತೇ ಪಠಣ ।
ತರೀ ಹೋತೇ ಚಾಂಗ ।
ಜೈಸೀ ತೇಲಆಂ ತೇಲಆಂ ದಿಪಾವತಿ ।
ದೇಸಾಪರಿಚೀಂ ಪುರಾಣೇಂ ಹೋತಿ ।
ತೈಸೀ ಪುಸ್ತಕೇಂ ಕಾಂ ನ ಮೇಳತಿ ।
ಆಮಚ್ಯಾ ದೇಸೀ ।
ಹಾ ಮೋಠಾ ಅಭಿಪ್ರಾವೋ ಜಿ ಮ್ಹಣೇ ।
ತುಮಿ ತರಿ ವಾರಿಲೀ ಮಾಗಿಲೀ ಪುರಾಣೇಂ ।
ತರಿ ಪ್ರತಿಪುಸ್ತಕೇ ಅನಾಕಾರಣೇಂ ।
ಕೈಸೇ ನ ಕರಿತೀ ತುಮೀಂ ।
ಯಾ ಪಾಸೋನಯಾ ಜಿ ಆತಾಂ ।
ಜೈತಿಯಾಂಚ್ಯಾ ಪುರಾಣಕಥಾ ।
ನವೇಲಆ ಕಿರಸ್ತಾಂವಾಂಚ್ಯಾ ಚಿತಾಂ ।
ಆಠವಿತಿ ದೇಖಾ
ಜರೀ ಮರಾಠೀಯೇ ಭಾಸೇಚೀಂ ಕಾಹೀಂ ।
ಶಾಸ್ತ್ರಪುರಾಣೇಂ ಹೋತಿ ಆಮಾಂ ಠಾಂಯೀ ।
ತರೀ ಲೋಕಾಂಚಾ ಮನೋರಥು ಪೈಂ ।
ಪೂರ್ಣ ಹೋತಾ ।

ಬ್ರಾಹ್ಮಣ ಮತಾಂತರಿಗಳ ತುಷ್ಟೀಕರಣಕ್ಕಾಗಿ ಇಷ್ಟೆಲ್ಲ ಪ್ರಯಾಸಪಟ್ಟರೂ, ಫಾದರ್ ಥಾಮಸ್ ಸ್ಟೀಫನ್ಸ್‌ರಿಗೆ ಪುರಾಣವು ಸುಲಭವಾಗಿ ಅರಿಯುವಂತೆ ಮಾಡಲು ಕೊಂಕಣೀ ಪದಗಳನ್ನು ಅಲ್ಲಲ್ಲಿ ಸೇರಿಸುವುದೇ ಸೂಕ್ತವೆಂದು ಅನಿಸಿತು.

"ಹೇ ಆ ಪುರಾಣಾಚಾ ಫಳು ಬಹುತಾಂ ಜನಾಂಸೀ ಹೋಉಂಸೀ ಕಾಏ ಕೇಲೇ ಮಾಗಿಲೇಯೇ ಕವೇಸ್ವರಾಂಚಿ ಬಹುತೇಕೇಂ ಸೋಪೀ ಬ್ರಾಹ್ಮಣಾಂಚೇ

ಭಾಸೇಚಿ ಹ್ಯಕೊಂಕಣೀಹ್ಯ ಉತರೇಂ ಠಾಈ ಮಿಸರಿತ ಕರುನೂ ಕವಿತ್ವ ಸೋಪೇ ಕೇಲೇಂ ।”

ಹೀಗೆ, ಗೋವಾ ಮತ್ತು ಮಂಗಳೂರಿನ ಕ್ರಿಶ್ಚಿಯನ್ನರು ಯಥಾಶಕ್ತಿ ಕೊಂಕಣೀ ಭಾಷೆಯನ್ನು ಆಧ್ಯಾತ್ಮಿಕ ಮತ್ತು ಲೌಕಿಕ ಜೀವನದಲ್ಲಿ ತಮ್ಮ ಮಾಧ್ಯಮವನ್ನಾಗಿ ಜೀವಂತವಾಗಿಟ್ಟರು. ಆದರೆ ಸಾರಸ್ವತರು ಮಾತ್ರ ತಮ್ಮ ಸಾಹಿತ್ಯಿಕ ಪ್ರತಿಭೆಯನ್ನು ವ್ಯಕ್ತಪಡಿಸಲು ಹಾಗೂ ಆಯಾ ಪ್ರದೇಶದ ಕಲೆ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಪ್ರದರ್ಶಿಸಲು ತಾವು ನೆಲೆಸಿದ ಪ್ರದೇಶಗಳ ಭಾಷೆಯನ್ನು ಸ್ವೀಕರಿಸಿ ತಮ್ಮ ಮಾತೃಭಾಷೆಯನ್ನು ಕೊನೆಗಾಣಿಸಲು ಅದನ್ನು ಹೊರದಬ್ಬಿದರು. ತಮ್ಮಲ್ಲಿ ರಕ್ತಗತವಾದ ಭಾಷೆ ಮತ್ತು ಸಂಸ್ಕೃತಿಯನ್ನು ಬಳಸಲು ಮನಸ್ಸನ್ನೇ ಮಾಡಿಲ್ಲ. ಸತ್ಯಾಂಶವೇನೆಂದರೆ, ಅವರು ತಮ್ಮ ವಶದಲ್ಲಿರುವ ಭಾಷೆಯ ಅವಶೇಷಗಳು ರಕ್ಷಣಾರ್ಹವಾಗಿವೆ ಎಂಬುದನ್ನು ಯೋಚಿಸಲೂ ಇಲ್ಲ. ಈ ಸಂಗತಿ ಅದೆಂಥ ಗಂಭೀರಸ್ಥಿತಿಗೆ ತಲಪಿತ್ತೆಂದರೆ, ಕರ್ನಾಟಕ ಮತ್ತು ಕೇರಳದಲ್ಲಿ ಕನಿಷ್ಠ ಪಕ್ಷ ತಾವು ನೆಲೆಸಿರುವ ಪ್ರದೇಶದಲ್ಲಿ ತಮ್ಮ ಗುರುತನ್ನು ಇಟ್ಟುಕೊಳ್ಳಲು ತಾವು ಆ ಪ್ರದೇಶದಲ್ಲಿ ಅಲ್ಪಸಂಖ್ಯಾತ ಸಮುದಾಯದವರು ಎಂದು ತಮ್ಮ ಗುರುತನ್ನು ಸಾಬೀತು ಪಡಿಸಲು ಸತತ ಶ್ರಮಪಟ್ಟರು. ಆದರೆ ಮಹಾರಾಷ್ಟ್ರದ ಸಾರಸ್ವತರು ತಮ್ಮ ಅನನ್ಯ ಅಸ್ಮಿತೆ, ಭಾಷೆ ಮತ್ತು ಸಂಸ್ಕೃತಿಯನ್ನು ಹೇಳಹೆಸರಿಲ್ಲದಂತೆ ಮಾಡಲು ಭಗೀರಥ ಪ್ರಯತ್ನದೊಂದಿಗೆ ಸಾಕಷ್ಟು ಪರಿಶ್ರಮವನ್ನೂ ವಹಿಸಿದರು. ಅಷ್ಟೇ ಅಲ್ಲ; 'ಆಮೀ ಮರಾಠೀ ಮಾಣೂಸ' ಎಂದು ಎದೆ ತಟ್ಟಿ ಹೇಳಲೂ ಹಿಂಜರಿದಿಲ್ಲ. ಈ ತನಕ ಕೊಂಕಣೀ ಭಾಷೆ ಮತ್ತು ಸಂಸ್ಕೃತಿಯನ್ನು ಕಾಪಾಡಿಕೊಂಡು ಬಂದವರೆಲ್ಲರೂ ಏನೂ ಸಂಸ್ಕಾರವಿಲ್ಲದ ಹುಂಬರು, ಹೊಣೆಗೇಡಿ ಕಾರವಾರಿಗಳು ಎಂದು ಅವರನ್ನು ಹೀಗಳೆದರು. ತಾವು ಯಾವ ಮೂಲದಿಂದ ಬಂದರೋ, ಅವರೆಲ್ಲರೂ ಅನಾಗರಿಕರು ಎಂದೇ ಕರೆಯುತೊಡಗಿದರು. ಗೋವಾದಲ್ಲಿರುವ ಸಾರಸ್ವತರ ಸ್ಥಿತಿಯಂತೂ ವಿಲಕ್ಷಣವಾಗಿತ್ತು. ಅವರಿಗೆ ಪೋರ್ಚುಗೀಸ್ ಸಂಸ್ಕೃತಿಯೊಡನೆ ಹೊಂದಿಕೊಳ್ಳುವ ಸಾಮರ್ಥ್ಯವಿರಲಿಲ್ಲ. ತಮ್ಮ ಪುರಾತನ ಪರಂಪರೆ, ಸಂಪ್ರದಾಯ ಮತ್ತು ಸಂಸ್ಕೃತಿಯನ್ನು ರಕ್ಷಿಸಿಕೊಂಡು ಬರುವ ಅಂತಃಶಕ್ತಿಯೂ ಇರಲಿಲ್ಲ. ಕೆಲವರು ಮಹಾರಾಷ್ಟ್ರದ ಗೆದ್ದೆತ್ತಿನ ಬಾಲ ಹಿಡಿದರು. ಅವರು ತಾವು ಭಾವಿಸಿದ ವಿಶ್ವವ್ಯಾಪೀ ದೃಷ್ಟಿಕೋನ, "ಸನಾತನ ಧರ್ಮ, ವಿಶ್ವ ತೇ ಮಾಝೇ ಘರ" ಎಂಬ ವಿಸ್ಮಯಕರ ಹಾಗೂ ವಿಲಕ್ಷಣ ನಂಬಿಗೆಗೆ ಗುಲಾಮರಾದರು. ಹೀಗಿರುವುದೇ ತಮಗೊಂದು ಹೆಮ್ಮೆಯೆಂದು ಮೆರೆದರು. ಅವರು ನಿರಾಶೆಯ ಕೂಪದೊಳಗಿರುವ ಕಪ್ಪೆಯಂತೆ

ತಮ್ಮನ್ನು ಸೀಮಿತಗೊಳಿಸಿಕೊಂಡಿದ್ದರು.

ಸಾರಸ್ವತರ ಸ್ವಾಭಿಮಾನಶೂನ್ಯತೆ ತನ್ನ ಅಂತಿಮ ಹಂತ ತಲಪಿ ತಾರಕಕ್ಕೇರಿದಂತೆ ತೋರಿತು. ಮಾತೃಭಾಷೆಯ ಮೆಲುದನಿಯ ಜೋಗುಳದ ಹಾಡು ಸಂತೆಯ ಗಲಾಟೆಯಲ್ಲೇ ಲೀನವಾಯಿತು. 'ಕೊಂಕಣಿಯನ್ನು ಒಂದು ಸ್ವತಂತ್ರ ಭಾಷೆಯೆಂದು ಮನ್ನಿಸಕೂಡದು. ಏಕೆಂದರೆ ಅದರ ಲಿಪಿ ಮರಾಠೀ,' ಎಂದು ಒಮ್ಮೆ ಮರಾಠಿಯ ಓರ್ವ ಶ್ರೇಷ್ಠ ಸಾರಸ್ವತ ಸಾಹಿತಿ ಪ್ರತಿಪಾದಿಸಿದ್ದರು. ಮರಾಠಿಯಂತೆ ಸಂಸ್ಕೃತ ಮತ್ತು ಹಿಂದೀ ಭಾಷೆಗಳನ್ನು ಅದೇ ಲಿಪಿಯಲ್ಲಿ ಬರೆಯುತ್ತಿದ್ದರೂ, ಅವರೆಲ್ಲರೂ ತಮ್ಮದು ಸ್ವತಂತ್ರ ಭಾಷೆಯೆಂದು ಪ್ರತಿಪಾದಿಸುತ್ತ ಬಂದಿದ್ದಾರೆಯೆಂಬುದನ್ನು ಅವರು ಮನಗಂಡಿರಲಿಲ್ಲ. ಜ್ಞಾನಪೀಠ ಪ್ರಶಸ್ತಿ ಪುರಸ್ಕೃತರಾದ ಓರ್ವ ಸಾರಸ್ವತ ಕನ್ನಡ ಸಾಹಿತಿ ಕೂಡ ಮರಾಠೀ ಸಾಹಿತ್ಯ ಸಮ್ಮೇಳನದಲ್ಲಿ ನಿಃಸಂಕೋಚವಾಗಿ ಹೀಗೆ ಪ್ರತಿಪಾದಿಸಿದ್ದರು.

"ನನ್ನ ಬಾಲ್ಯಕಾಲದಲ್ಲಿ ನಾನು ಮರಾಠೀ ಭಾಷೆಯಿಂದ ಪ್ರಭಾವಿತ ನಾದೆ. ಮರಾಠೀ ಶಿಕ್ಷಣ ಮಾಧ್ಯಮ ಆಗಿರದಿದ್ದ ಶಾಲೆಯಲ್ಲಿ ಕಲಿಯುತ್ತಿರುವಾಗ ಕನ್ನಡದ ಪ್ರಭಾವವಾಯಿತು."

ಅಂದು ಅಲ್ಲಿ ಉಪಸ್ಥಿತರಿದ್ದ ಪ್ರಧಾನಿಗಳು 'ಇವರು ಕೋಕಮ್ ಹಣ್ಣಿನಂತೆ ಪೂರ್ಣಫಲ' ಎಂದು ಅವರ ಶ್ಲಾಘನೆಯನ್ನೂ ಮಾಡಿದ್ದರು. (ಕೊ–ಕೊಂಕಣೀ, ಕ–ಕನ್ನಡ, ಮ–ಮರಾಠೀ = ಕೋಕಮ). ನಮ್ಮ ನಡುವಿರುವ ಇನ್ನೂ ಓರ್ವ ಸಾಹಿತ್ಯ ಅಕಾಡೆಮೀ ಪ್ರಶಸ್ತಿ ಪುರಸ್ಕೃತರಾದ ಸಾರಸ್ವತ ಸಾಹಿತಿ ಕೊಂಕಣೀ ಸಮಾವೇಶದಲ್ಲಿ ಸೇರಿದ ತನ್ನ ಮಿತ್ರರ ಬಳಿ ಹೀಗೆ ಪ್ರಸ್ತಾಪ ಮಾಡುವ ಅವಕಾಶವನ್ನು ಎಂದೂ ಕಳೆದುಕೊಳ್ಳುತ್ತಿರಲಿಲ್ಲ.

"ಮಾಲವಣೀ ಕೊಂಕಣೀ, ಗೋವಾ ಕೊಂಕಣೀ, ಕ್ರಿಶ್ಚಿಯನ್ ಕೊಂಕಣೀ, ಕಾರವಾರೀ ಕೊಂಕಣೀ, ನವಾಯತ ಕೊಂಕಣೀ, ಮಂಗಳೂರ ಕೊಂಕಣೀ, ಕೇರಳ ಕೊಂಕಣೀ ಹೀಗೆ ಯಾವ ಪ್ರದೇಶದ ಕೊಂಕಣಿಯಲ್ಲಿ ಬರೆಯಬೇಕೆಂದು ತೋಚದೆ ಇರುವುದರಿಂದ ನಾನು ಕೊಂಕಣಿಯಲ್ಲಿ ಬರೆಯುತ್ತಿಲ್ಲ."

ಗುಜರಾತಿಗಳು ಇಂಥ ಸಮಸ್ಯೆಯನ್ನೇ ಎದುರಿಸುತ್ತಿದ್ದರು. ಆಗ ಮಹಾತ್ಮಾ ಗಾಂಧೀಜಿಯವರು ಅಂಥ ಭ್ರಮಾಧೀನ ಸಾಹಿತಿಗಳಿಗೆ ತಮ್ಮ ಸಲಹೆಯನ್ನು ಹೀಗೆ ನೀಡಿದ್ದರು.

"ನೀವು ಉತ್ತಮ ಹಾಗೂ ಉದಾತ್ತ ಚಿಂತನೆಗಳನ್ನು ವ್ಯಕ್ತಪಡಿಸಬೇಕೆಂದು ಬಯಸಿದ್ದರೆ ಅದಕ್ಕೆ ಭಾಷೆಯೊಂದೇ ಸಮರ್ಥಸಾಧನ. ಅಂಥ ಉದಾತ್ತ ಚಿಂತನೆಗಳನ್ನು ವ್ಯಕ್ತಪಡಿಸುತ್ತ ಹೋದ ಹಾಗೆ ಭಾಷೆ ತಂತಾನೇ ಸಮೃದ್ಧವಾಗುತ್ತದೆ. ಜ್ಞಾನೇಶ್ವರಿಯನ್ನು ಬರೆಯುತ್ತಿರುವಾಗ ಜ್ಞಾನೇಶ್ವರರು ತಾನು ಬರೆಯುತ್ತಿರುವ ಭಾಷೆ ಉತ್ತಮ ಆಗಿತ್ತೇ ಹೇಗೆಂದು ಯೋಚನೆಯನ್ನೇ ಮಾಡಿರಲಿಲ್ಲ. ನಾಮದೇವರು ತನ್ನ ಮಧುರ ಭಜನೆಗಳಲ್ಲಿ ಬಳಸಿದ ಭಾಷೆ ಪರಿಷ್ಕೃತವಾಗಿತ್ತು. ಸರಿಸುಮಾರು ಆಧುನಿಕ ಮರಾಠಿಯಂತಿತ್ತು. ಆ ಭಾಷೆಯನ್ನೇ ಜ್ಞಾನೇಶ್ವರರು ಬಳಸಬಹುದಿತ್ತು."

ಮಾನವನು ಮಾತನಾಡುವ ಭಾಷೆಯು ಜನರಿಂದ ಜನರಿಗೆ, ಸ್ಥಳದಿಂದ ಸ್ಥಳಕ್ಕೆ, ಕಾಲದಿಂದ ಕಾಲಕ್ಕೆ ವ್ಯತ್ಯಾಸವಾಗುತ್ತ ಹೋಗುವುದರಿಂದ ಈ ಅಂಶಗಳನ್ನು ಗಮನದಲ್ಲಿರಿಸಿ ಆ ಭಾಷೆಯ ಮೂಲವನ್ನು ಕಂಡು ಹಿಡಿಯಬೇಕು.

ಪರಶುರಾಮನು ಬ್ರಹ್ಮಾವರ್ತದಿಂದ ಗೋಮಂತಕದಲ್ಲಿ ನೆಲೆಸುವುದಕ್ಕೋಸ್ಕರ ಬ್ರಾಹ್ಮಣರನ್ನು ಕರೆದುಕೊಂಡು ಬಂದದ್ದು ಶೌರಸೇನೀ ವಲಯದಿಂದ. ಬಳಿಕ, ಯಯಾತಿ ಪೌರವನು ತನ್ನ ಮಗ ಯದುವಿಗೆ ಆರ್ಯಾವರ್ತದ ನೈಋತ್ಯ ಭಾಗದಲ್ಲಿರುವ ಪ್ರದೇಶವನ್ನು ವಹಿಸಿಕೊಟ್ಟನು. ಮತ್ತು ಯದುವಿನ ಜ್ಯೇಷ್ಠ ಪುತ್ರ ಸಹಸ್ರಜಿತನು ನರ್ಮದಾ ನದೀತೀರದಲ್ಲಿ ತನ್ನ ಸಾಮ್ರಾಜ್ಯವನ್ನು ಸ್ಥಾಪಿಸಿ, ಅದನ್ನು ಪಶ್ಚಿಮ ಸಮುದ್ರದ ಕರಾವಳಿಗುಂಟ ವಿಸ್ತರಿಸುತ್ತ ಹೋದನು. ಕೃಷ್ಣನಿಂದ ಹತನಾದ ಕಂಸನ ಮಾವನೂ, ಮಗಧರಾಜನೂ ಆದ ಜರಾಸಂಧನು ಮಥುರೆಯ ಮೇಲೆ ಪುನಃಪುನಃ ಆಕ್ರಮಣ ಮಾಡುತ್ತಿದ್ದನು. ಈ ಕಿರುಕುಳದಿಂದ ತಪ್ಪಿಸಿಕೊಳ್ಳಲು ಯದುವಿನ ದ್ವಿತೀಯ ಪುತ್ರ ಕ್ರೋಷ್ಟ್ರಿಯ ವಂಶಸ್ಥರಾದ ಕೃಷ್ಣ ಬಲರಾಮರು ತಮ್ಮ ಸಂಬಂಧಿಕರೊಡನೆ ಸುದೂರ ದೇಶಾಂತರ ಪ್ರಯಾಣ ಮಾಡಿ ಸೌರಾಷ್ಟ್ರದ ಪಶ್ಚಿಮ ಕರಾವಳಿಯಲ್ಲಿ ವಲಸೆ ಹೋಗಿ ದ್ವಾರಕೆಯನ್ನು ತಮ್ಮ ರಾಜಧಾನಿಯನ್ನಾಗಿ ಸ್ಥಾಪಿಸಿಕೊಂಡರು. ಯದುಕುಲದವರಾದ ಪದ್ಮವರ್ಣ, ಸಾರಸ ಮತ್ತು ಹರೀತರೂ ಕೊಲ್ಲಾಪುರ, ಬನವಾಸಿ ಮತ್ತು ಕಾರವಾರದ ಸಮುದ್ರತೀರದ ಬಳಿಯಿರುವ ಒಂದು ನಡುಗಡ್ಡೆಯಲ್ಲಿ ತಮ್ಮ ಚಿಕ್ಕ-ಪುಟ್ಟ ಸಾಮ್ರಾಜ್ಯಗಳನ್ನು ಸ್ಥಾಪಿಸಿಕೊಂಡರು. ಈ ಎಲ್ಲ ವಲಸೆಗಳು ಶೌರಸೇನೀ ವಲಯದಿಂದಲೇ ಬಂದಿವೆ. ಸೌರಾಷ್ಟ್ರ, ಗುಜರಾತ ಮತ್ತು ಕೊಂಕಣದ ಆರ್ಯ ವಲಸೆಗಾರರ ಭಾಷೆಗಳೆಲ್ಲವೂ ಹೆಚ್ಚುಪಾಲು ಶೌರಸೇನೀ ಮೂಲದವೇ. ಹೀಗೆ ಶೌರಸೇನೀ ಮೂಲದ ನೇರ ಉಪಶಾಖೆಗಳಲ್ಲಿ ಒಂದು ಭಾಷೆ ಕೊಂಕಣೀ.

ಭಾಷೆಯು ನಿರಂತರ ಹರಿಯುತ್ತಿರುವ ನದಿಯಂತೆ. ಅದು ವಿಶಾಲ ಸಾಗರವನ್ನು ಸೇರುವ ಮುನ್ನ, ದಾರಿಯಲ್ಲಿ ಸಿಗುವ ಅನೇಕ ಹೊಳೆ-ಹಳ್ಳಗಳ ನೀರನ್ನು ತನ್ನದನ್ನಾಗಿ ಸೇರಿಸಿಕೊಳ್ಳುತ್ತದೆ. ಮರಾಠೀ ಮತ್ತು ಕೊಂಕಣಿಯ ನಡುವೆ ಇರುವ ಸಾದೃಶ್ಯಕ್ಕಿಂತ ಗುಜರಾತೀ ಮತ್ತು ಕೊಂಕಣಿಯ ನಡುವೆ ಹೆಚ್ಚು ಸಾದೃಶ್ಯವಿದೆಯೆಂದು ಎ. ಪಿ. ಚೌಹಾಣರು ಭಾವಿಸಿದ್ದರು. ಹೀಗಿದ್ದರೂ, ಕೊಂಕಣಿಯು ಮರಾಠಿಯ ಉಪಭಾಷೆಯೇ ಹೊರತು, ಅದು ಸ್ವತಂತ್ರ ಪ್ರಾದೇಶಿಕ ಭಾಷೆಯಲ್ಲವೆಂದು ಸಾಧಿಸುತ್ತಿದ್ದಾರೆ. ವಾಸ್ತವಿಕವಾಗಿ, ಡಾ॥ ಗ್ರಿಯರ್ಸನ್‌ರು ತಮ್ಮ 'Linguistic Survey of India' ಎಂಬ ಮೌಲಿಕ ಗ್ರಂಥದಲ್ಲಿ ಒಂದು ಭಾಷೆ ಸ್ವತಂತ್ರವೋ ಅಥವಾ ಇನ್ನೊಂದರ ಉಪಭಾಷೆಯೋ ಎಂದು ನಿರ್ಧರಿಸಲು ಬಿಹಾರೀ ಮತ್ತು ಪಶ್ಚಿಮೀ ಹಿಂದೀ ಭಾಷೆಗಳ ತುಲನಾತ್ಮಕ ಅಧ್ಯಯನ ಮಾಡಿ ಕೆಲವೊಂದು ಮಾರ್ಗದರ್ಶೀ ಸೂತ್ರಗಳನ್ನು ಈ ರೀತಿ ಮಂಡಿಸಿರುವರು.

"ಇನ್ನೊಂದು ಶಬ್ದರೂಪದೊಡನೆ ಪರಸ್ಪರ ವಿನಿಮಯ ಸಾಧ್ಯವಿಲ್ಲವೆಂದು ಭಾಷಾವಿಂಗಡನೆ ಮಾಡಬೇಕು ಎಂಬ ನಿರ್ಧಾರವನ್ನು ಮಾಡಬಾರದು. ನಾವು ಈ ವಿಷಯವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಪರಶೀಲಿಸಬೇಕೆಂದಿದ್ದರೆ, ಬೇರೆ ಪ್ರಬಲ ಅಂಶಗಳನ್ನೂ ಪರಿಗಣಿಸಬೇಕು. ಮೊಟ್ಟ ಮೊದಲನೆಯದಾಗಿ, ನಾನು ಈಗಾಗಲೇ ಸೂಚಿಸಿರುವ ವ್ಯಾಕರಣ-ವಿನ್ಯಾಸ. ಎರಡೂ ಭಾಷೆಗಳಲ್ಲಿರುವ ಶಬ್ದರೂಪಗಳ ಭಂಡಾರದಲ್ಲಿ ಸಮಾನ ಅಂಶಗಳಿರಬಹುದು. ಆದರೆ ಬಿಹಾರೀ ಭಾಷೆಯ ಸಮಗ್ರ ವ್ಯಾಕರಣ-ವಿನ್ಯಾಸವು ಪಶ್ಚಿಮೀ ಹಿಂದೀ ಭಾಷೆಯ ವ್ಯಾಕರಣ-ವಿನ್ಯಾಸಕ್ಕಿಂತ ಆಮೂಲಾಗ್ರವಾಗಿ ಭಿನ್ನವಾಗಿದೆ."

ಭಾಷೆಯು ಜನಸಮುದಾಯದ ನಡುವೆ ಅರಳುತ್ತದೆಯೇ ಹೊರತು ಏಕಾಂತದಲ್ಲಲ್ಲ. ತಾನು ನಡೆದು ಬಂದ ದಾರಿಯಲ್ಲಿ ಕೊಂಕಣಿಗೆ ಮರಾಠೀ ಮತ್ತು ಕನ್ನಡದೊಡನೆ ಹೆಚ್ಚು ಕಾಲ ಸಂಪರ್ಕ ಒದಗಿ ಬಂದುದರಿಂದ ಅವುಗಳ ಪ್ರಭಾವವೇ ಹೆಚ್ಚಾಗಿದೆ. ಹೀಗಿದ್ದರೂ, ಇಂದಿನ ಕಾಲದಲ್ಲಿ, ಜನರು ತಮ್ಮ ದೈನಂದಿನ ವ್ಯವಹಾರದಲ್ಲಿ ಅನ್ಯ ಯಾವುದೇ ಭಾರತೀಯ ಭಾಷೆಗಳಿಗಿಂತ ಆಂಗ್ಲ ಭಾಷೆಯ ಪದಗಳನ್ನೇ ಬಳಸುತ್ತಾರೆ. ಆದರೆ, ಕೊಂಕಣಿಯ ತಲಸ್ಪರ್ಶೀ ಅಧ್ಯಯನ ಮಾಡಿ ನೋಡಿದರೆ, ಅದರಲ್ಲಿ ಸಂಸ್ಕೃತದ ತತ್ಸಮ ಪದಕ್ಕಿಂತ ತದ್ಭವ ಪದಗಳೇ ವಿಪುಲ ಪ್ರಮಾಣದಲ್ಲಿವೆ. ಆದ್ದರಿಂದ ಕೊಂಕಣೀ ಭಾಷೆಯ ಕ್ರಮಾಗತ ಅಭಿವೃದ್ಧಿ ಮತ್ತು ವಿಕಾಸವಾಗಿರುವುದು ಶೌರಸೇನೀ ಮೂಲದಿಂದಲೇ ಎಂಬ ಸಂಗತಿ ದೃಢೀಕೃತವಾಗುತ್ತದೆ. ಐತಿಹಾಸಿಕ, ಭೌಗೋಳಿಕ ಮತ್ತು ಸಾಂಸ್ಕೃತಿಕ

ಸಂಪರ್ಕದಿಂದ ಅನೇಕ ಶಬ್ದಗಳು ನುಸುಳಿ ಬಂದು ಈ ಭಾಷೆಯ ಸೌಂದರ್ಯವನ್ನು ಹೆಚ್ಚಿಸಿವೆ. ಆದರೆ, ಅನ್ಯ ಭಾಷಾಸಮುದಾಯದ ಶಬ್ದಗಳ ಪ್ರವೇಶವು ಒಂದು ಭಾಷೆಯ ಸತ್ವವನ್ನು ಕುಗ್ಗಿಸುವುದಿಲ್ಲ. ಜಗತ್ತಿನ ಬಹುತೇಕ ಎಲ್ಲ ಭಾಷೆಗಳಿಂದ ಶಬ್ದಗಳ ಸೇರ್ಪಡೆ ಮಾಡಿದ್ದರಿಂದ ಇಂಗ್ಲಿಷ್ ಭಾಷೆ ಬಡವಾಗಿಲ್ಲ. ಇದಕ್ಕೆ ವಿಪರ್ಯಾಸವಾಗಿ, ಅನೇಕ ಶಬ್ದಗಳು ನುಸುಳಿ ಬಂದರೂ ಅದು ಭಾಷೆಯ ಶ್ರೀಮಂತಿಕೆಯನ್ನು ಪ್ರದರ್ಶಿಸುತ್ತಿದೆ.

ಭಾರತೀಯ ಭಾಷೆಗಳ ಸಮಗ್ರ ಅಧ್ಯಯನ ನಡೆಯುತ್ತಿರುವಾಗ ಕೊಂಕಣೀ ಭಾಷೆಯನ್ನು ಭಾಷಾಶಾಸ್ತ್ರಜ್ಞರ ಗಮನಕ್ಕೆ ತಂದಿರಲಿಲ್ಲವೆಂಬುದು ಕೊಂಕಣಿಯ ದುರದೃಷ್ಟ ಎನ್ನಬೇಕು. ಏಕೆಂದರೆ, ಅವರ ಬಳಿ ಈ ಭಾಷೆಯ ಸಾಹಿತ್ಯಿಕ ಕೃತಿಗಳು ಲಭ್ಯವಿರಲಿಲ್ಲ. ಕೊಂಕಣೀ ಭಾಷಿಕರು ಅಂಥ ಕೃತಿಗಳ ಸಂರಕ್ಷಣೆ ಮಾಡುವಲ್ಲಿ ಬಹುಮಟ್ಟಿಗೆ ಅಲಕ್ಷ್ಯವನ್ನೇ ತೋರಿಸಿದ್ದರು. ಪೋರ್ಚುಗೀಸ್ ಮತಪ್ರಚಾರಕರು ಮತಾಂತರ ಕಾರ್ಯದಲ್ಲಿ ತೊಡಗಿದ್ದಾಗ, ಅವರಿಗೆ ಅಂದಿನ ಸಾಹಿತ್ಯಕೃತಿಗಳು ಲಭ್ಯವಿದ್ದವು. ಅನ್ಯಭಾಷಿಕರು ವೈಜ್ಞಾನಿಕವಾಗಿ ವ್ಯಾಕರಣಗಳನ್ನು ಬರೆಯುವ ಮೊದಲೇ ಅವರು ಕೊಂಕಣೀ ವ್ಯಾಕರಣಗಳನ್ನು ಬರೆದರು. ಶಬ್ದಕೋಶಗಳ ಸಂಕಲನವನ್ನು ಮಾಡಿದರು. ಹೋರ್ನಲ್‌ರು ಕೊಂಕಣಿಯ ಪ್ರಸ್ತಾಪ ಮಾಡದಿದ್ದರೂ, ಗ್ರಿಯರ್ಸನ್‌ರು ನಾಶ ಮಾಡಲ್ಪಟ್ಟ ಕೊಂಕಣೀ ಸಾಹಿತ್ಯದ ಪ್ರಸ್ತಾಪವನ್ನು ಮಾತ್ರ ಮಾಡಿದ್ದರೂ ಅಂತಿಮ ಹಂತದಲ್ಲಿ, ಸಾಹಿತ್ಯ ಅಕಾಡೆಮಿ ಹಾಗೂ ಭಾರತೀಯ ಸಂವಿಧಾನಗಳು ಕೊಂಕಣೀ ಒಂದು ಸ್ವತಂತ್ರ ಭಾಷೆ ಎಂದು ಮನ್ನಿಸಿದವು.

ಹಲವು ಸಲ ಬುದ್ಧಿವಂತ ಇತಿಹಾಸಕಾರರು ಭಾವಿಸಿದ ಊಹೆಯಲ್ಲಿ ಐತಿಹಾಸಿಕ ಮಾಹಿತಿಯು ಇಕ್ಕಟ್ಟಿನಲ್ಲಿ ಸಿಲುಕಿಸುವಂತೆ ನುಸುಳಿ ಬರುತ್ತದೆ. ಕೊಂಕಣ ಪ್ರದೇಶವನ್ನು ಮಹಾರಾಷ್ಟ್ರದ ಒಂದು ಭಾಗವನ್ನಾಗಿಸಲು ಇತಿಹಾಸಕಾರರು ಉತ್ಕಟ ಪ್ರಯತ್ನ ಮಾಡುವ ಭರದಲ್ಲಿ, ಏಳನೆಯ ಶತಮಾನದ ತನಕ ಕೊಂಕಣವು ಮಹಾರಾಷ್ಟ್ರದ ಭಾಗವೆಂದು ಪರಿಗಣಿಸಲ್ಪಟ್ಟಿಲ್ಲ ಎಂಬ ಸತ್ಯಾಂಶವನ್ನು ಮರೆಮಾಚಲು ಪ್ರಯತ್ನಿಸಿ ಅದಕ್ಕೆ ಮೆಲ್ಲನೆ ದೂರ ತಳ್ಳಿಬಿಡುತ್ತಾರೆ. ಕ್ರಿ. ಶ. 634ನೆಯ ಇಸ್ವಿಯ ಒಂದು ಪ್ರಾಚೀನ ಐಹೊಳೆ ಶಿಲಾಶಾಸನವು ವಿದರ್ಭ, ಉತ್ತರದ ಖಾನದೇಶದಿಂದ ದಕ್ಷಿಣದ ಸಾತಾರಾದ ತನಕ ಮತ್ತು ಈಗಿನ ಕರ್ನಾಟಕದ ಒಂದು ಭಾಗ ಸೇರಿರುವ ದಕ್ಷಿಣ ಮಹಾರಾಷ್ಟ್ರ ಹೀಗೆ ಗಡಿಪ್ರದೇಶವನ್ನು ಒಳಗೊಂಡಿರುವ ಭಾಗವೇ ಮಹಾರಾಷ್ಟ್ರ ಎಂಬ ವಿವರಣೆಯನ್ನು

ನೀಡುತ್ತದೆ. (Journal of Bombay Branch of Royal Asiatic Society Vol. XXIV) ಇಲ್ಲಿ ಕೊಂಕಣ ಪ್ರದೇಶವನ್ನು ನಮೂದಿಸಿಲ್ಲ. ಅದನ್ನು ಮಹಾರಾಷ್ಟ್ರದ ಭಾಗವೆಂದೂ ಹೇಳಿಲ್ಲ.

ಕೊಂಕಣದ ಒಂದು ವಿಶಿಷ್ಟ ಭಾಷೆ ಕೊಂಕಣೀ ಎಂಬ ಸರ್ವಪ್ರಥಮ ಸಾಕ್ಷಿ ಅಲೀಬಾಗದ ಶಿಲಾಲೇಖದಲ್ಲಿದೆ. ಶಿಲಾಹಾರದ ದೊರೆ ಅಪರಾಜಿತನ ಮಂತ್ರಿ ಭಯಿರ್ಜು ಶೇಣವಿಯ ಕ್ರಿ. ಶ. 1012ರ ಪ್ರಸಿದ್ಧ ಶಿಲಾಶಾಸನದ ಅಡಿಯಲ್ಲಿರುವ ಅನೇಕ ಕೊಂಕಣೀ ಶಬ್ದಗಳು ಈಗಲೂ ಕೊಂಕಣೀ ಭಾಷೆಯಲ್ಲಿ ಕಂಡುಬರುತ್ತವೆ. ಹಾಸನ ಜಿಲ್ಲೆಯ ಶ್ರವಣಬೆಳಗೊಳದ ಪ್ರಸಿದ್ಧ ಗೋಮಟೇಶ್ವರನ ಪ್ರತಿಮೆಯ ಪಾದದಡಿಯಲ್ಲಿ ಹನ್ನೊಂದನೆಯ ಶತಮಾನದ ಶಿಲಾಲೇಖವಿದೆ. 'ಶ್ರೀ ಚಾಮುಂಡರಾಯನ ಸೂಚನೆಯಂತೆ ಈ ಪ್ರತಿಮೆಯು ಕೆತ್ತಲ್ಪಟ್ಟಿತು.' – 'ಶ್ರೀ ಚಾಮುಂಡರಾಯೇ ಕರವಿಯಲೇಂ' ಎಂದಿದೆ. ಗೋವಾ ಮತ್ತು ಕರ್ನಾಟಕದ ಜೈನ ಯಾತ್ರಿಕರಿಗೆ ಇದೊಂದು ಪ್ರಸಿದ್ಧ ಯಾತ್ರಾ ಕೇಂದ್ರವಾಗಿದೆ ಎಂಬುದನ್ನು ಸಾಬೀತು ಪಡಿಸಲು ಈ ಶಿಲಾಲೇಖವೇ ಒಂದು ಸಾಕ್ಷಿಯಾಗಿದೆ. ಮುಂಬಯಿಯ ಪರೇಲದಲ್ಲಿ ದೊರಕಿದ ಕ್ರಿ. ಶ. 1109ರ ಒಂದು ಶಿಲಾಶಾಸನವು ಉತ್ತರ ಕೊಂಕಣದ ಯಾದವ ರಾಜ್ಯಪಾಲರಾದ ಅನಂತ ಪೈ, ಪ್ರಭುವನ್ನು ಕುರಿತು ಹೇಳುತ್ತದೆ. ಪೈ, ಪ್ರಭು ಅವರು ಅಥವಾ ಶಿಲೆಯನ್ನು ಕೆತ್ತಿದವರು ವ್ಯಕ್ತಪಡಿಸಿದ ಶಾಪವಚನದ ಪೂರ್ತಿಪಾಠ ದೇವನಾಗರೀ ಲಿಪಿಯಲ್ಲಿದೆ. ಆ ವ್ಯಕ್ತಿಯ ಮಾತೃಭಾಷೆ ಕೊಂಕಣಿಯಾಗಿರಬೇಕು.

'ಅಥ ಕೋಣಿಯೀ ಏ ಶಾಸನ ಲೋಪೀ ತೇಚ್ಯಾ ವೈದ್ಯನಾಥಾಚೀ ಭಾಲ ಸಕುಟುಂಬೀ ಆಫಡೇ. ತೇಹಾಚೀ ಮಾಯ ಗಾಢವೇ ಝುವಿಜೇ.'

ಹೀಗೆ, ಕೊಂಕಣಿಯು ತನ್ನ ವಿಕಾಸದ ಪ್ರಾರಂಭಿಕ ಹಂತದಲ್ಲಿ ಅಪರಾಂತದ ಭಾಷೆಯಾಗಿ ದಕ್ಷಿಣದ ಗೋಮಂತಕದ ತನಕ ವ್ಯಾಪಿಸಿತು. ಕ್ರಿ. ಶ. 1189 ರಲ್ಲಿ ಮುಕುಂದರಾಜನ ಕೇಕಾವಲಿ ಮತ್ತು ಕ್ರಿ. ಶ. 1190 ರಲ್ಲಿ ಚಕ್ರಧರನ ಲೀಲಾಚರಿತ್ರ ಎಂಬ ಸಾಹಿತ್ಯರಚನೆ ಮರಾಠಿಯಲ್ಲಿ ಆಯಿತು. ಜನಸಾಮಾನ್ಯರ ದೇಶೀ ಭಾಷೆಯಲ್ಲಿ ರಚಿತವಾದ ಜ್ಞಾನೇಶ್ವರಿಯಲ್ಲಿ ಬಹುಶಃ ಕೊಂಕಣಪ್ರದೇಶದ ತನ್ನ ಭಕ್ತರ ಅನುಕೂಲತೆಗಾಗಿ ಜ್ಞಾನೇಶ್ವರರು ಈಗಲೂ ಪ್ರಚಲಿತವಿರುವ ಅನೇಕ ಕೊಂಕಣೀ ಶಬ್ದಗಳನ್ನು ಬಳಸಿದ್ದರಿಂದ ಮರಾಠಿಗರಿಗೆ ಜ್ಞಾನೇಶ್ವರಿಗೊಂದು ಜ್ಞಾನಕೋಶದ ಅಗತ್ಯ ಕಂಡುಬಂತು. ತಮ್ಮ ಕೃತಿಯಲ್ಲಿ ವ್ಯಾಪಕವಾಗಿ ಕೊಂಕಣೀ ಶಬ್ದಗಳ ಬಳಕೆಯಾಗಿದೆಯೆಂದು ಅವರು

ಕೊಂಕಣೀಭಾಷಿಕ ಭಕ್ತರಿಗೂ ಸುಲಭಗ್ರಾಹ್ಯವಾಗುವಂತೆ ಮಾಡಲು 'ಭಾವಾರ್ಥ ದೀಪಿಕೆ' ಎಂಬ ಭಾಷ್ಯವನ್ನು ಬರೆದರು. ಅವರು ಜ್ಞಾನೇಶ್ವರಿಯನ್ನು ಸಾಹಿತ್ಯಿಕ ಮರಾಠಿಯಲ್ಲೇ ಬರೆಯಬಹುದಿತ್ತು. ಏಕೆಂದರೆ ಅವರು ತಮ್ಮ ಸಮಕಾಲೀನ ನಾಮದೇವರು ರಚಿಸಿದಂತೆ 'ಅಮೃತಾನುಭವ' ಎಂಬ ಮರಾಠೀ ಕೃತಿಯನ್ನೂ ರಚಿಸಿದ್ದರು. ಜ್ಞಾನೇಶ್ವರರಂತೆ ನಾಮದೇವರು ತಮ್ಮ ಭಜನೆಗಳಲ್ಲಿ ಅಥವಾ ಗಾಥಾಗಳಲ್ಲಿ ಕೊಂಕಣೀ ಪದಗಳನ್ನು ಸೇರಿಸಿರಲಿಲ್ಲ. ಆದರೆ, ಕೊಂಕಣೀ ಭಾಷೆಯು ಮರಾಠಿಗಿಂತ ವಿಶಿಷ್ಟ ಹಾಗೂ ವಿಭಿನ್ನವಾಗಿದೆ ಎಂದೂ ಗುಜರಾಥೀ, ಕನ್ನಡ ಹಾಗೂ ಉರ್ದೂ ಭಾಷೆಗಳಂತಿದೆಯೆಂದೂ ತೋರಿಸಿದರು. ಅವರು ಗಾಥಾಗಳಲ್ಲಿ ತನ್ನ ಕಾಲದಲ್ಲಿ ಪ್ರಚಲಿತವಿದ್ದ ಕೊಂಕಣಿಯ ಮಾದರಿಯನ್ನೂ ಹೀಗೆ ನೀಡಿದ್ದಾರೆ.

'ಗವಳಿನೀ ಠಕವಿಲ್ಯಾ ಏಕ ಏಕ ಸಂಗತೀನಿ ಮರಾಠೀ ಕಾನಡೀ ಯಾ ಏಕ ಮುಸಲಮಾನೀ ಕೊಂಕಣೀ ಗುಜರಾಥೀ ಅಸಾ ಪಾಂಚ ಜಣೀಂ ಗೌಳಣೀ ಠಕವಿಲ್ಯಾ'

ಕೊಂಕಣೀ ಮಾತಿನ ಒಂದು ನಮೂನೆಯನ್ನು ಈ ರೀತಿ ನೀಡಿದ್ದಾರೆ.

'ಪಾವಗಾ ದಾತಾರಾ ಪಾವಗಾ ದಾತಾರಾ, ತು ನಂದಾಚೋ ಝಿಲೋ, ಮಾಕ್ಕಾ ಫಡಕೋ ದೀ. ಮೀಂ ಹಿಂವಾನ ಮೆಲೋ. ಫೇ ಮಜೋ ಕೊಯತೋ. ದೆವಾ ಪಾಯ ಪಡಲೋ.

ಮಹಾರಾಷ್ಟ್ರದ ಸಂತರ ಧಾರ್ಮಿಕ ಸಾಹಿತ್ಯದ ರಚನೆ ಹೆಚ್ಚುಪಾಲು ಮರಾಠಿಯಲ್ಲೇ ಆಗಬೇಕಾದುದರಿಂದ ಮಹಾರಾಷ್ಟ್ರದ ಸಾರಸ್ವತರು ಬಹುಮಟ್ಟಿಗೆ ಮರಾಠೀ ಭಾಷೆಯ ಪ್ರಭಾವದಲ್ಲಿರಬೇಕಾಯಿತು. ಕರ್ನಾಟಕದ ಸಾರಸ್ವತರೂ ಪುರಂದರದಾಸ, ಕನಕದಾಸ, ಬಸವೇಶ್ವರ ಹಾಗೂ ಇತರ ಸಂತರ ಧಾರ್ಮಿಕ ಸಾಹಿತ್ಯದಿಂದ ಪ್ರಭಾವಿತರಾದರು. ಮಹಾರಾಷ್ಟ್ರದ ಸಾರಸ್ವತರಿಗೆ ಜ್ಞಾನೇಶ್ವರ, ನಾಮದೇವ, ತುಕಾರಾಮ ಅಥವಾ ಏಕನಾಥರ ಕೃತಿಯನ್ನು ಆಗಾಗ ಉದ್ಧರಿಸುವ ಸಂಗತಿ ಸಾಮಾನ್ಯವಾಗಿರುವಂತೆ ಕರ್ನಾಟಕದ ಸಾರಸ್ವತರಿಗೂ ತಮ್ಮ ನಾಡಿನ ಸಂತರ ಕೃತಿಗಳನ್ನು ಆಗಾಗ್ಗೆ ಉದ್ಧರಿಸುವುದು ಅತ್ಯಂತ ಆಪ್ತ ಸಂಗತಿಯಾಯಿತು.

ಕ್ರಿ. ಶ. 1678ರಲ್ಲಿ ಆಮ್ಸ್ಟರ್ಡಮ್‌ನಲ್ಲಿ ಪ್ರಕಟವಾದ Hortus Indicus Malbaricus ಎಂಬ ಕೃತಿಯ ಲೇಖಕನಿಗೆ ಮೂವರು ಸಾರಸ್ವತ ಆಯುರ್ವೇದ ವೈದ್ಯರು ಕೊಟ್ಟ ಪ್ರಮಾಣಪತ್ರದಿಂದ ಹದಿನೇಳನೆಯ ಶತಮಾನದ ಸರಿಸುಮಾರಿಗೆ ಕೇರಳದಲ್ಲಿ ಮಾತನಾಡುತ್ತಿದ್ದ ಕೊಂಕಣಿಯ ಮಾದರಿಯೂ ನಮ್ಮ ಬಳಿಯಿದೆ.

ಜಾನ್ ಲೇಡನ್ ಎಂಬ ಆಂಗ್ಲ ಪ್ರವಾಸಿ ಕೇರಳಕ್ಕೆ ಭೇಟಿಯಿತ್ತಾಗ ಗೋವಾದಿಂದ ತರಿಸಿದ ಅನೇಕ ಕೊಂಕಣೀ ಗ್ರಂಥಗಳನ್ನು ತಾನು ಕಂಡಿದ್ದೇನೆಂದು ಹೇಳುತ್ತಾರೆ. ಆದರೆ ಅನಂತರ ಬಂದು ಕೇರಳದಲ್ಲಿ ನೆಲೆಸಿದ ಸಾರಸ್ವತ ಪೀಳಿಗೆಯವರು ಅವುಗಳಲ್ಲಿ ಒಂದು ಕೃತಿಯನ್ನೂ ಉಳಿಸಿಕೊಂಡಿಲ್ಲ.

ಬಹು ದೀರ್ಘಕಾಲ ಕಳೆದುಹೋಯಿತು. ಪೋರ್ಚುಗೀಸರ ಅಧೀನದಲ್ಲಿದ್ದ ಗೋವಾ ದೀರ್ಘ ನಿದ್ರೆಯ ಮೋಡಿಗೊಳಗಾಗಿತ್ತು. ಸಾರಸ್ವತರು ಗೋವಾದಲ್ಲಿರುವ ತಮ್ಮ ಕುಲದೇವರ ಸಂದರ್ಶನದ ಹೊರತು ಬೇರಾವ ಸಂಪರ್ಕವನ್ನೂ ಉಳಿಸಿಕೊಂಡಿರಲಿಲ್ಲ. ನೆರೆಯ ಪ್ರದೇಶಗಳ ಸಾಂಸ್ಕೃತಿಕ ಪ್ರಭಾವದಿಂದ ಅನಾಥರಾಗಿದ್ದರು. ಸಮಾಜವು ಗೋಂಯಕಾರ, ಕಾರವಾರೀ, ಮಂಗಳೂರೀ, ಕೊಚ್ಚೀಕಾರ, ಪೆಡನೇಕರ, ಕುಡಾಲಕರ, ಬಾರದೇಸಕಾರ ಮತ್ತು ಮುಂಬಯಿಕರ ಶೇಣವೀಗಳೆಂದು ವಿಭಜಿಸಲ್ಪಟ್ಟಿತು. ಧಾರ್ಮಿಕ ಮಠಗಳು ಮತ್ತು ಮತಾಚಾರಗಳಲ್ಲಿ ಹರಿದು ಹಂಚಿ ಹೋದ ದಾಕ್ಷಿಣಾತ್ಯ ಸಾರಸ್ವತರ ಕೊಂಕಣೀ ಭಾಷೆ ಮತ್ತು ಐಕಮತ್ಯಕ್ಕೇ ವಜ್ರಾಘಾತವಾದಂತಿತ್ತು.

ಏನೇ ಆದರೂ, ಕೊಂಕಣೀ ಭಾಷೆಯನ್ನು ಜೀವಂತವಾಗಿಟ್ಟ ಗೋವಾ ಮತ್ತು ಮಂಗಳೂರಿನ ಕ್ರಿಶ್ಚಿಯನ್ನರಲ್ಲಿ ಒಂದು ಚಿಕ್ಕ ಆಶಾಕಿರಣವು ಪ್ರಕಾಶಿಸುತ್ತಿತ್ತು. ಕಾರವಾರ ಮತ್ತು ಮುಂಬಯಿಯಲ್ಲಿ ಕಹಳೆಯ ಧ್ವನಿ ಮೊಳಗಿದಾಗ ಹಿಂದುಗಳು ತಮ್ಮ ಪರಂಪರೆಯ ಕಡೆ ಜಾಗೃತರಾದರು. ಶಣೈ ಗೋಂಯಬಾಬ್ ಎಂದೇ ಖ್ಯಾತರಾದ ವರ್ದೇ ವಾಮನ ವಾಲಾವಲೀಕರರು ತೀವ್ರ ಹಾಗೂ ರಾಜೀರಹಿತ ಸಮರ್ಪಣ ಭಾವದಿಂದ ಕೊಂಕಣೀ ಪುನರುತ್ಥಾನದ ಬೀಜಾರೋಪಣ ಮಾಡಿದರು. ಕಾರವಾರದ ಮಾಧವ ಮಂಜುನಾಥ ಶಾನಭಾಗರು ಆ ಪ್ರಯತ್ನಕ್ಕೆ ಅಗತ್ಯವಿರುವ ಭಾವನಾತ್ಮಕ ಆರ್ದ್ರತೆಯನ್ನೂ, ಸಂಘಶಕ್ತಿಯ ಕಾವನ್ನೂ ನೀಡಿ ಸಹಕರಿಸಿದರು. ಸಾರಸ್ವತ ಸಮೂಹದ ತೆಕ್ಕೆಯೊಳಗೆ ಅನೇಕ ವಿಶ್ವಾಸಘಾತಕರಿದ್ದರೂ ಕೊಂಕಣಿಯು ಸ್ಫಿಂಕ್ಸ್ ಪಕ್ಷಿ ಬೂದಿಯಿಂದ ಎದ್ದು ಬಂದಂತೆ ಎದ್ದು ನಿಂತಿತು. ಎಲ್ಲ ಊರುಗಳಲ್ಲಿ ಕೊಂಕಣೀ ಭಾಷಾ ಮಂಡಳಿಗಳ ಸ್ಥಾಪನೆಯಾಯಿತು. ವಾರ್ಷಿಕ ಸಾಹಿತ್ಯ ಸಮ್ಮೇಳನಗಳನ್ನೂ ಏರ್ಪಡಿಸಿ ನಾಟಕ ಮತ್ತು ಸಂಗೀತ ಕಲೆಯ ಪ್ರದರ್ಶನಗಳಿಗೂ ಪ್ರೋತ್ಸಾಹ ನೀಡಲಾಯಿತು. ದೀರ್ಘಕಾಲದಿಂದ ಮರೆತು ಹೋದ ಜಾನಪದ ಶೈಲಿಯ ಗೀತೆ ಹಾಗೂ ನೃತ್ಯಗಳೊಂದಿಗೆ ಪಡೆನುಡಿ, ಜಾಣ್ನುಡಿ ಹಾಗೂ ಗಾದೆ ಮಾತುಗಳ ಸಂಕಲನದ ಮೂಲಕ ಪುನರುಜ್ಜೀವನ ಕಾರ್ಯಕ್ರಮಗಳೂ ನೆರವೇರಿದವು. ಕೆಲವೊಂದು ಸಾಹಿತ್ಯವನ್ನು ಸಂರಕ್ಷಿಸಿದ ಕ್ರಿಶ್ಚಿಯನ್ನರು ಹಾಗೂ

ತಮ್ಮ ಸೃಜನಾತ್ಮಕ ಅಭಿವ್ಯಕ್ತಿಗೆ ಕೊಂಕಣಿಯನ್ನು ಬಳಸಲು ಜಾಗೃತರಾಗುತ್ತಿರುವ ಹಿಂದೂಗಳು ದೇಶ–ವಿದೇಶಗಳಲ್ಲಿ ಪುನರುತ್ಥಾನ ಹೊಂದುತ್ತಿರುವ ಕೊಂಕಣಿಗರ ಒಂದು ವರ್ಣಮಯ ಚಿತ್ರಕವನ್ನು (ಕಾಲಿಡೋಸ್ಕೋಪ್) ರೂಪಿಸಿದರು. ವಿಭಿನ್ನ ಪ್ರಾದೇಶಿಕ ಹಾಗೂ ಧಾರ್ಮಿಕ ವಲಯಗಳನ್ನು ಒಗ್ಗೂಡಿಸಲು ಇನ್ನು ಏನಾದರೂ ಒಂದಿಷ್ಟು ಕೊರತೆ ಇದ್ದರೆ ಅದು ಸಾಮಾನ್ಯ ಲಿಪಿಯ ಕೊರತೆ. ಎಷ್ಟೇ ಪ್ರಾದೇಶಿಕ ಭಾಷಾವ್ಯತ್ಯಾಸ ಕಂಡುಬಂದರೂ ಸಾಮಾನ್ಯ ಲಿಪಿಯೊಂದೇ ಕೊಂಕಣಿಗರನ್ನು ಒಗ್ಗೂಡಿಸಿ ಅವರ ಭಾಷೆಯನ್ನು ಪರಸ್ಪರ ಅರಿತುಕೊಳ್ಳುವಲ್ಲಿ ಸಾಕಷ್ಟು ನೆರವಾಗುವುದು. ಈ ಭಾಷೆಗೊಂದು ಸಾಮಾನ್ಯ ಲಿಪಿಯ ಜೊತೆ ಒಂದು ಪ್ರಮಾಣೀಕೃತ ರೂಪವೂ ದೊರಕುವ ಸಮಯ ಆದಷ್ಟು ಬೇಗ ಸನ್ನಿಹಿತವಾಗಲಿದೆ.

ಈ ಗ್ರಂಥವು ಪ್ರಮುಖವಾಗಿ ದಾಕ್ಷಿಣಾತ್ಯ ಸಾರಸ್ವತರ ಕುರಿತು ಬರೆದದ್ದು. ಅಂಥ ಸಾರಸ್ವತರಲ್ಲಿ ಅಥವಾ ಇತರ ಕೊಂಕಣೀ ಸಮುದಾಯದವರಲ್ಲಿ ಸಾಂಪ್ರದಾಯಿಕ ಆಚಾರ–ವಿಚಾರಗಳ ಕುರಿತು ಶ್ರದ್ಧೆಯ ಕೊರತೆಯೂ ಎದ್ದು ಕಾಣುತ್ತಿದೆ. ಆಧುನಿಕ ಸಂದರ್ಭದಲ್ಲಿ ಅರ್ಥೈಸಿ ಹೇಳುವುದಾದರೆ, ಸಾರಸ್ವತರು ತಮ್ಮ ಸಾಂಪ್ರದಾಯಿಕ ಬೌದ್ಧಿಕ ಕಾರ್ಯಗಳನ್ನು ಬದಲಾಯಿಸಿಕೊಂಡರು. ಅವರು ಬದಲಾದ ದೇಶ, ಕಾಲ, ಸನ್ನಿವೇಶದೊಡನೆ, ತಮ್ಮ ಜೀವನವನ್ನು ಹೊಂದಿಸಿ ಕೊಂಡು ಹೋಗಬೇಕೆಂಬ ಪ್ರಜ್ಞೆಯಿಂದ ತಮ್ಮ ಸೃಜನಶೀಲತೆಗೆ ಅರ್ಥವನ್ನು ಕಲ್ಪಿಸಬೇಕೆಂದು ಅರಿತರು. ಅದೇ ರೀತಿ, ಆಚರಣೆಯಲ್ಲೂ ತಂದರು. ಸಾಂಪ್ರದಾಯಿಕ ಮೌಲ್ಯ, ಭಾಷೆ ಮತ್ತು ಸಂಸ್ಕೃತಿಗಳ ಮೇಲೆ ಅಷ್ಟೇನೂ ನಿರಾಸಕ್ತಿಯಿರುವ ಅವರ ಲಕ್ಷ್ಯವು ಮೌಲ್ಯಾಧಾರಿತ ಜೀವನದಿಂದ ಲಾಭದ ಲೆಕ್ಕಾಚಾರದ ಉದ್ಯಮಗಳಿಗೆ ಬದಲಾಯಿಸುವ ಅನಿವಾರ್ಯ ಪರಿಣಾಮಗಳಿಗೆ ಆಸ್ಪದ ಮಾಡಿ ಕೊಟ್ಟಿತು. ಒಂದು ವಸ್ತುವಿನ ಬೆಲೆ ಎಷ್ಟಿದೆ ಎನ್ನುವುದಕ್ಕಿಂತ, ಒಬ್ಬನ ಜೀವನದಲ್ಲಿ ಆ ವಸ್ತುವಿನ ಉಪಯುಕ್ತತೆ (ಮೌಲ್ಯ) ಎಷ್ಟಿದೆ ಎಂಬುದು ಮಾನವನ ವಿಕಾಸದಲ್ಲಿ ನಿರ್ಣಾಯಕ ಅಂಶವಾಗಿರುತ್ತದೆ. ಜೀವನದಲ್ಲಿ ತಾನೇನೋ ಆಗಿದ್ದೇನೆಂಬ ಅಭಿಮಾನಕ್ಕಿಂತ ತನ್ನಲ್ಲಿರುವ ವಸ್ತುಗಳ ಬಗ್ಗೆ ಇರುವ ಅಭಿಮಾನವು ಮಾನವನ ಸಂಕಲ್ಪ ಶಕ್ತಿ, ದೃಢನಿರ್ಧಾರ ಮತ್ತು ಉದ್ಯಮಶೀಲತೆಯನ್ನೇ ಧ್ವಂಸ ಮಾಡಿಬಿಡುತ್ತದೆ. ಆಗ ದೃಢನಿಷ್ಠೆ, ಸತತ ಪ್ರಯತ್ನ ಮತ್ತು ಕಾರ್ಯನಿರ್ವಹಣ ಶಕ್ತಿಗಳೂ ಸದಾಚಾರ, ನೈತಿಕತೆ ಮತ್ತು ಆಧ್ಯಾತ್ಮಿಕತೆಯಿಂದ ಅನಾಚಾರ, ಅನೀತಿ ಮತ್ತು ಅನುತ್ಪಾದಕತೆ ಯಲ್ಲೇ ಮುಳುಗಿದ ಪ್ರಾಪಂಚಿಕ ಗುರಿಯ ಕಡೆಗೇ ಹೊರಳುತ್ತವೆ. ಹಿಮಬಂಡೆಯ ಅಡಿಯಲ್ಲಿ ಮುಳುಗಿ ಭೂಮಿ ಆಕಸ್ಮಿಕ ಆಘಾತಕ್ಕೆ ಒಳಗಾದಂತೆ, ನಿರರ್ಥಕ ವಾಗಾಡಂಬರದ ಅಡಿಯಲ್ಲಿ ಮುಳುಗಿದ ವಿವೇಚನಾಶಕ್ತಿಯೂ ಕುಸಿದುಹೋಗುತ್ತದೆ.

ಸಾರಸ್ವತರು ತಮ್ಮ ಮೊದಲಿನ ಎರಡು ಪ್ರಮುಖ ಕರ್ತವ್ಯಕರ್ಮಗಳಾದ ವೇದ ಶಾಸ್ತ್ರಾಧ್ಯಯನ ಮತ್ತು ಅಧ್ಯಾಪನಗಳಿಂದ ಹೆಚ್ಚಾಗಿ ವಿಮುಖರಾಗಿರುವರೆಂದು ತೋರುತ್ತಿದೆ. ಯಜನ, ಯಾಜನ, ದಾನ ಮತ್ತು ಪ್ರತಿಗ್ರಹಗಳೇ ಮೊದಲಿನ ಎರಡು ಕರ್ಮಗಳ ಫಲಿತರೂಪದ ಕರ್ಮಗಳು. 'ಋತ' ಎಂದರೆ ವಿಶ್ವನಿಯಾಮಕ ವ್ಯವಸ್ಥೆ. ಋತದ ರಕ್ಷಣೆ ಮತ್ತು ಪೋಷಣೆಗಾಗಿ ಹಾಗೂ ಸಾಮಾಜಿಕ ಮತ್ತು ನೈತಿಕ ಮಾನದಂಡಗಳಿಗೆ ಸಾಮೂಹಿಕ ಬದ್ಧತೆಯಾಗಿ ಈ ಷಟ್ಕರ್ಮಗಳಿವೆ. ಸಾರಸ್ವತರು ತಮ್ಮ ಪಳಗಿದ ಬುದ್ಧಿಯನ್ನು ಮಾರಿಕೊಂಡು, ತಮ್ಮ ಅರ್ಹತೆ ಹಾಗೂ ವೈಯಕ್ತಿಕ ಸಾಧನೆಯನ್ನು ಅತ್ಯಾಶೆಯಿಂದ ದೈಹಿಕ ತೃಪ್ತಿಗಾಗಿ ವ್ಯಾಪಾರೀಕರಣಗೊಳಿಸುತ್ತ ತಮ್ಮ ಶಕ್ತಿ-ಸಾಮರ್ಥ್ಯವನ್ನು ಹೆಚ್ಚುಪಾಲು ವಾಣಿಜ್ಯ-ವ್ಯವಹಾರಗಳಿಗೇ ಗಂಟು ಹಾಕಿಕೊಳ್ಳುತ್ತಿರುವಂತಿದೆ.

ಸಾರಸ್ವತರ ಬುದ್ಧಿಮತ್ತೆಯು ಅದಮ್ಯವಾದುದು. ಆದಕಾರಣ, ಅವರು ಆಧ್ಯಾತ್ಮಿಕ, ಸಾಹಿತ್ಯಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಆರ್ಥಿಕ ರಂಗದಲ್ಲೂ ಅನುಪಮ ಯಶಸ್ಸನ್ನು ಸಾಧಿಸುತ್ತಾರೆ. ಅವರು ಆಡಳಿತ, ಶಿಕ್ಷಣ, ನ್ಯಾಯ, ವೈದ್ಯಕೀಯ, ಆರ್ಥಿಕ ಹಾಗೂ ತಾಂತ್ರಿಕ ಉದ್ಯಮ ರಂಗದಲ್ಲಿ ನೀಡಿರುವ ಕೊಡುಗೆಗಳು ಅಪಾರವಾಗಿವೆ. ಸುದೀರ್ಘ ಕಾಲದಿಂದ ಇವು ಬ್ರಾಹ್ಮಣರ ಪಾರಂಪರಿಕ ವೃತ್ತಿಗಳಾಗಿದ್ದರೂ ಇವುಗಳನ್ನು ಗುರುತಿಸಿ ಪ್ರಶಂಸೆ ಮಾಡಿದ್ದೇ ಕ್ವಚಿತ್ತಾಗಿದೆ. ಒಬ್ಬರು ಆರ್ಥಿಕವಾಗಿ ಅಭಿವೃದ್ಧಿ ಹೊಂದಿದರೆ, ಅದನ್ನು ಬೇರಾರೂ ವಿರೋಧಿಸುವಂತಿಲ್ಲ. ಪ್ರಾಚೀನ ಕಾಲದಲ್ಲೂ ವಸಿಷ್ಠ, ವಿಶ್ವಾಮಿತ್ರ, ಭಾರ್ಗವ, ಭರದ್ವಾಜ, ಅಂಗಿರಸ, ಗೌತಮರು ಕೂಡ ಜ್ಞಾನಸಂಪತ್ತಿಯೊಂದಿಗೆ ಆರ್ಥಿಕ ಸಂಪತ್ತಿಯನ್ನು ಹೊಂದಿದ್ದರು. ಅವರು ಭೌತಿಕ ಸಂಪತ್ತಿಯನ್ನು (ಅರ್ಥ) ನಂಬಿದ್ದರೂ ತಮಗೆ ವಿಧಿಸಿದ ಕರ್ತವ್ಯಕರ್ಮವನ್ನು (ಧರ್ಮ) ನಿರ್ವಹಿಸಿ, ಸಾಂಸಾರಿಕ ತಾಪತ್ರಯಗಳಿಂದ ಮುಕ್ತಿಯನ್ನು ಪಡೆಯಲೋಸುಗ (ಮೋಕ್ಷ) ನಿತ್ಯಸತ್ಯದ ಅನುಸಂಧಾನವನ್ನೂ ಮಾಡುತ್ತಿದ್ದರು. ನಮ್ಮ ಸಮಾಜದ ಸದಸ್ಯರಲ್ಲಿ ಇಂಥ ಉತ್ತಮ ಚಿಂತನಕ್ರಮವು ಇನ್ನೊಮ್ಮೆ ರೂಢಿಯಲ್ಲಿ ಬರಲಿ. ಅದೇ ಪ್ರಕಾರ, ಅವರು ತಮ್ಮ-ತಮ್ಮ ಕರ್ತವ್ಯಕರ್ಮಗಳನ್ನು ನಿರ್ವಹಿಸಲೆಂದು ಆಶಿಸೋಣ. ಏಕೆಂದರೆ, ಗೀತೆಯೂ ಇದನ್ನೇ ಆಶಿಸುತ್ತದೆ.

ಶ್ರೇಯಾನ್ ಸ್ವಧರ್ಮೋ ವಿಗುಣಃ ಪರಧರ್ಮಾತ್ ಸ್ವನುಷ್ಠಿತಾತ್ ।
ಸ್ವಧರ್ಮೇ ನಿಧನಂ ಶ್ರೇಯಃ ಪರಧರ್ಮೋ ಭಯಾವಹಃ ॥

(ಗೀತೆ 03-35)

ಸ್ವಭಾವನಿಯತಂ ಕರ್ಮ ಕುರ್ವನ್ನಾಪ್ನೋತಿ ಕಿಲ್ಬಿಷಮ್ ॥

(ಗೀತೆ 18–47)

ಸಹಜಂ ಕರ್ಮ ಕೌಂತೇಯ ಸದೋಷಮಪಿ ನ ತ್ಯಜೇತ್ ।
ಸರ್ವಾರಂಭಾ ಹಿ ದೋಷೇಣ ಧೂಮೇನಾಗ್ನಿರಿವಾವೃತಾಃ ॥

(ಗೀತೆ 18–48)

ಒಳ್ಳೆಯ ರೀತಿಯಲ್ಲಿ ಆಚರಿಸಲಾದ ಬೇರೆಯವರ ಧರ್ಮಕ್ಕಿಂತ ಗುಣರಹಿತವಾದರೂ ತನ್ನ ಧರ್ಮವು ಶ್ರೇಷ್ಠವಾಗಿದೆ. ತನ್ನ ಧರ್ಮದಲ್ಲಿ ಸಾಯುವುದೂ ಶ್ರೇಯಸ್ಕರ. ಬೇರೆಯವರ ಧರ್ಮವು ಭಯವನ್ನುಂಟು ಮಾಡುವುದು, (ಗೀತೆ 03–35). ಏಕೆಂದರೆ ಸ್ವಭಾವದಿಂದ ನಿಯಮಿಸಲ್ಪಟ್ಟಿರುವ ಸ್ವಧರ್ಮರೂಪೀ ಕರ್ಮವನ್ನು ಮಾಡುತ್ತ ಇರುವ ಮನುಷ್ಯನು ಪಾಪವನ್ನು ಪಡೆಯುವುದಿಲ್ಲ. (ಗೀತೆ 18–47). ದೋಷಯುಕ್ತವಾದರೂ ಸಹಜವಾದ ಕರ್ಮವನ್ನು ತ್ಯಜಿಸಬಾರದು. ಏಕೆಂದರೆ, ಅಗ್ನಿಯು ಹೊಗೆಯಿಂದ ಯುಕ್ತವಾಗಿರುವಂತೆ ಎಲ್ಲ ಕರ್ಮಗಳೂ ಒಂದಲ್ಲ ಒಂದು ದೋಷದಿಂದ ಕೂಡಿರುತ್ತವೆ. (ಗೀತೆ 18–48).

卐

ನಾಗೇಶ ಸೋಂದೆ ರಚಿತ ಇತರ ಗ್ರಂಥಗಳ ಸ್ಥೂಲ ಸಮೀಕ್ಷೆ

1. **Sri Madhva's Commentary on Isha & Kena Upanishad Translated from Sanskrit with explanatory notes.**

"ಈಶ ಮತ್ತು ಕೇನ ಉಪನಿಷತ್ತುಗಳ ಮೇಲಿರುವ ಶ್ರೀ ಮಧ್ವಾಚಾರ್ಯರ ಭಾಷ್ಯಗಳ ಈ ಆವೃತ್ತಿಯನ್ನು ಶ್ರೀ ಸೋಂದೆಯವರು ಅತ್ಯಂತ ಶ್ರದ್ಧಾ–ಭಕ್ತಿಯಿಂದ ಪ್ರಕಟಪಡಿಸಿರುವರು. ಇವು ವೇದಾಂತದ ಮೂರೂ ಸಿದ್ಧಾಂತಗಳ ಮೂಲಾಧಾರ ಗ್ರಂಥಗಳಾಗಿ ಗೌರವವನ್ನು ಪಡೆದಿವೆ. ಶ್ರೀಯುತರು ಆತ್ಮವಿದ್ಯೆಯ ಮಾರ್ಗದರ್ಶನ ಪಡೆಯಲು ಆತ್ಮಸಂತೋಷಕ್ಕಾಗಿಯಾದರೂ ಓರ್ವ ಪ್ರತ್ಯಕ್ಷ ಗುರುವನ್ನು ಹೊಂದಿರಬೇಕಾಗಿತ್ತು. ಆದರೆ ಯಾರೂ ದೊರಕದೇ ಹೋದಾಗ ಅವರು ಶ್ರೀ ಕೃಷ್ಣ ಪರಮಾತ್ಮನಲ್ಲಿಯೇ ತನ್ನನ್ನು ಸಮರ್ಪಿಸಿಕೊಂಡರು.

- **Prof. S. Ramaswami,** 'Mountain Path' - December 1992

"ತಾವು ರಚಿಸಿರುವ

'Sri Madhva's Commentary on Isha & Kena Upanishad' ಈ ಗ್ರಂಥದ ಪ್ರತಿ ತಲಪಿ ತುಂಬ ಸಂತೋಷವಾಯಿತು. ಈ ಕೃತಿಯನ್ನು ತರ್ಜುಮೆಮಾಡಿ ಪ್ರಶಂಸನೀಯ ಹಾಗೂ ವಿದ್ವತ್‌ಪೂರ್ಣ ಕಾರ್ಯವನ್ನು ನಿರ್ವಹಿಸಿರುವ ತಮಗೆ ಅಭಿನಂದನೆಗಳು."

– **ಡಾ. ಟಿ. ಎಸ್. ದೇವದಾಸ,**

ನಿರ್ದೇಶಕರು, ಡಾ. ರಾಧಾಕೃಷ್ಣನ್, ತತ್ತ್ವಶಾಸ್ತ್ರದ ಉನ್ನತ ವ್ಯಾಸಂಗ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ.

2. **Sri Madhva's Commentary on Mandukya Upanishad**

" ಆಚಾರ್ಯ ಮಧ್ವರ ತತ್ತ್ವ ನಿರೂಪಣೆಯ ಘನಕಾರ್ಯವನ್ನು ವಿವರಿಸಿ ಶ್ರೀ ಸೊಂದೆಯವರು ತಮ್ಮ ಈ ಕೃತಿಯಲ್ಲಿ ಆಚಾರ್ಯರ ವ್ಯಾಖ್ಯಾನದ ವಿಶೇಷ ಲಕ್ಷಣಗಳ ಮೇಲೆ ಬೆಳಕು ಚೆಲ್ಲುತ್ತಾರೆ. .... ಉಪನಿಷತ್ತಿನ ಮೂಲಪಾಠ ಹಾಗೂ ಆಚಾರ್ಯರ ಭಾಷ್ಯದ ಬಳಿಕ ಲೇಖಕರು ತಮ್ಮ ನೈಷ್ಠಿಕ ಸಂಪ್ರದಾಯದ ಸ್ಪಷ್ಟೀಕರಣದ ಟಿಪ್ಪಣಿಗಳನ್ನೂ ಸೇರಿಸಿ ಈ ಕೃತಿಯನ್ನು ಮಾಂಡೂಕ್ಯದ ಮೇಲಿನ ಸಾಹಿತ್ಯಕ್ಕೆ ಗಮನಾರ್ಹ ಸೇರ್ಪಡೆ ಆಗುವಂತೆ ಅಣಿಗೊಳಿಸಿದ್ದಾರೆ."

- **Late Sri Madhav P. Pandit**

Sri Aurobindo Ashram, November 1991.

"ವಿದ್ವಾಂಸರೂ, ಆತ್ಮಜ್ಞಾನದ ಜಾಗೃತಿಯಾದವರೂ ಆದ ಶ್ರೀ ಸೋಂದೆಯವರು ಇಲ್ಲಿ ತಮ್ಮ ಅಸಾಧಾರಣ ಮನೋವೈಶಾಲ್ಯವನ್ನೂ, ಆಂಗ್ಲಭಾಷಾ ಪ್ರಭುತ್ವವನ್ನೂ ಪ್ರದರ್ಶಿಸಿರುವರು. ಇಲ್ಲಿ ಪ್ರತಿಯೊಂದು ಪಂಕ್ತಿಯಲ್ಲಿ ಮೋಕ್ಷದ ಅಪೇಕ್ಷೆಯ ಸ್ಪಂದನವಾಗುತ್ತದೆ."

– ಸ್ವಾಮಿ ಶ್ರೀಕಂಠಾನಂದಜೀ,

ರಾಮಕೃಷ್ಣ ಯೋಗಪೀಠ, ಮಲ್ಲೂರ, ಕರ್ನಾಟಕ.

"ವಿಮರ್ಶೆಗೆ ಸಿದ್ಧವಾಗಿರುವ ಮೂರೂ ಸಂಪುಟಗಳಲ್ಲಿ (ಈಶ/ಕೇನ, ಕಠ, ಮಾಂಡೂಕ್ಯ) ಶ್ರೀ ಸೋಂದೆಯವರು ಉಪನಿಷತ್ತುಗಳ ಭಾಷಾಂತರವನ್ನು ಸರಾಗವಾಗಿ ಓದಬಹುದಾದ ಹಾಗೂ ಸೊಗಸಾದ ಶೈಲಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ..... ಅವರು ಆದಿಶಂಕರರ ಅರ್ಥವಿವರಣೆಯು ತರ್ಕಸಂಗತ ಆಗುವುದಿಲ್ಲವೆಂದು ತೋರಿಸುತ್ತ, ಮಧ್ವಾಚಾರ್ಯರ ತೀಕ್ಷ್ಣಮತಿಯ ವಾದಸರಣಿಯನ್ನು ಪ್ರಕಟಪಡಿಸಿದ್ದಾರೆ. .... ಆಚಾರ್ಯರು ಅರ್ಥವಿವರಣೆಯ ತತ್ತ್ವಗಳಿಗೆ ಸಂಪೂರ್ಣ ನಿಷ್ಠರಾಗಿದ್ದಾರೆ. ಅವರ ಶೈಲಿ ಸಂಕ್ಷಿಪ್ತ. ಆದರೆ ವ್ಯಾಖ್ಯೆಗಳ ನೆರವಿಲ್ಲದೆ ಅರ್ಥೈಸುವುದು ಕಷ್ಟಸಾಧ್ಯವಾಗಿರುತ್ತದೆ............"

- **Late Dr. P. Nagaraj Rao,**

Retd. Tagore & Vivekananda Professor, Madras University.

"ಮಾಧ್ವ ಸಂಪ್ರದಾಯದ ಪ್ರಗಲ್ಭ ವಿದ್ವಾಂಸರಾದ ನಾಗೇಶ ಡಿ. ಸೋಂದೆಯವರು ಮಾಂಡೂಕ್ಯ ಉಪನಿಷತ್ತು ಮತ್ತು ಮಾಧ್ವಭಾಷ್ಯವನ್ನು ಆಂಗ್ಲಭಾಷೆಯಲ್ಲಿ ತರ್ಜುಮೆ ಮಾಡಿ ಕೆಲವಾರು ಜಟಿಲ ಅಂಶಗಳನ್ನು ವಿವರಿಸುವಾಗ ಭಾಷ್ಯದ ಮೇಲೆ ತಮ್ಮದೇ ಆದ ಅರ್ಥನಿರೂಪಣೆಯನ್ನೂ ಸೇರಿಸಿದ್ದಾರೆ. ಸುಧೀರ್ಘ ಭೂಮಿಕೆಯನ್ನೊಳಗೊಂಡ ಈ ಕೃತಿಯು ಮಾಂಡೂಕ್ಯ ಉಪನಿಷತ್ತಿನ ಪ್ರಧಾನ ಭಾವವನ್ನು ಸಾಮಾನ್ಯ ಓದುಗನಿಗೂ ಪರಿಚಯ ಮಾಡಿಕೊಡುವುದು. ಸಂಪಾದಕರ ಮಾಧ್ವದರ್ಶನದ ಈ ತಳಹದಿಯು ಮೂಲವ್ಯಾಖ್ಯೆಯ ಭಾಷಾಂತರ ವಿಶ್ವಾಸಾರ್ಹವಾಗಿದೆಯೆಂದು ನಿರೂಪಿಸುತ್ತದೆ."

- N. B. Patil,

Journal of the Asiatic Society of Bombay,
1998 Volume 73.

3. Sri Madhva's Commentary on Katha Upanishad Translated from Sanskrit with explanatory notes.

"ಶ್ರೀ ಸೋಂದೆಯವರ ಈ ಕೃತಿಯು ಕಠೋಪನಿಷತ್ತಿನ ಮೇಲೆ ಮಾಧ್ವಭಾಷ್ಯವನ್ನೊಳಗೊಂಡ ದ್ವಿತೀಯ ಪ್ರಕಟಣೆ. ಇಪ್ಪತ್ತೆರಡು ಪುಟಗಳಲ್ಲಿರುವ

ವಿಸ್ತೃತ ಭೂಮಿಕೆಯು ಉಪನಿಷತ್ತಿನಲ್ಲಿ ಅಂತರ್ಗತವಾದ ವಿಷಯದ ಮಹತ್ವವನ್ನು ತಿಳಿಸುವ ಸುಸ್ಪಷ್ಟ ವಿವರಣೆಯಾಗಿದೆ." ಉಳಿದ ಎಂಟು ಉಪನಿಷತ್ತುಗಳಿಗಾಗಿ ಇನ್ನೂ ಹೆಚ್ಚಿನ ಪ್ರಕಟಣೆಗಳು ಹೊರಬರುವುದನ್ನು ವಿಮರ್ಶಕವೃಂದವೂ, ವಿದ್ವತ್‌ಪ್ರಪಂಚವೂ ಉತ್ಸುಕತೆಯಿಂದ ನಿರೀಕ್ಷಿಸುತ್ತಿದೆ."

- Hindu News Magazine - 14th July 1992.

4. Sri Madhva's Commentary and Summation on Bhagavad Gita Translated from Sanskrit with explanatory notes.

"ಈ ಕೃತಿಯು ಭಗವದ್ಗೀತೆಯ ಮಾಧ್ವಭಾಷ್ಯ ಹಾಗೂ ತಾತ್ಪರ್ಯ ನಿರ್ಣಯದ ಆಂಗ್ಲಭಾಷೆಯ ಅನುವಾದ. ಲೇಖಕರ ವಿವರಣಾತ್ಮಕ ಟಿಪ್ಪಣಿಯ ಪುರವಣಿಯನ್ನೂ ಒಳಗೊಂಡಿದೆ. .... ಇದು ಅಕ್ಷಯ ಅಧ್ಯಯನದ ಕ್ಷೇತ್ರವಾಗಿರುವ ಗೀತೆಯ ಮೇಲೆ ಬರೆದ ವ್ಯಾಖ್ಯಾನ-ಸಂಪತ್ತಿಗೆ ಅತ್ಯಂತ ಸ್ವಾಗತಾರ್ಹ ಸೇರ್ಪಡೆಯಾಗಿದೆ. ವೇದಾಂತದ ಗಹನವಾದ ಅಧ್ಯಯನದ ಆಕಾಂಕ್ಷೆಯುಳ್ಳವರಿಗೆ ಇದು ಬಹುಮುಖ್ಯ ಕೃತಿಯಾಗುವುದರಲ್ಲಿ ಏನೂ ಸಂಶಯವಿಲ್ಲ."

- Hindu News Magazine - 27-08-1996.

"ಈ ಕೃತಿಯನ್ನು ಸಮಗ್ರವಾಗಿ ಓದಿ ಮುಗಿಸಲು ನನಗೆ ಹೆಚ್ಚು-ಕಡಿಮೆ ಎರಡು ವರ್ಷ ಬೇಕಾಯಿತು. ನಾನು ಇದೀಗ ಓದಿ ಮುಗಿಸಿದ್ದೇನೆ. ಇದೊಂದು ಅದ್ಭುತ ಕೃತಿ. ಮತ್ತು ತಾವು ಸಮಗ್ರ ಗೀತಾಭಾಷ್ಯವನ್ನು ಶ್ಲೋಕ, ವ್ಯಾಖ್ಯೆ, ತಾತ್ಪರ್ಯ ಮತ್ತು ವಿವರಣೆಯೊಂದಿಗೆ ಸುಸ್ಪಷ್ಟ ಹಾಗೂ ಬುದ್ಧಿಗ್ರಾಹ್ಯವಾಗುವಂತೆ ಅನುವಾದ ಮಾಡಿರುವಿರಿ. ಇದರ ಅಧ್ಯಯನ ಮಾಡುತ್ತ ಹೋದಂತೆ, ನನ್ನಲ್ಲಿ ಒಂದು ತರದ ವಿಲಕ್ಷಣ ಮನೋಭಾವ ಮೂಡಿ ನನ್ನ ಉಪಜಾಗೃತ ಪ್ರಜ್ಞೆಯಲ್ಲಿ ಸಂತೃಪ್ತ ಸಂವೇದನೆಯ ಅನುಭವವಾಯಿತು. ಈ ಕೃತಿಯನ್ನು ಪುನಃಪುನಃ ಓದುತ್ತಿರಬೇಕೆಂದು ಅನಿಸುತ್ತದೆ. ತಾವು ಶ್ರೀ ಮಧ್ವಾಚಾರ್ಯರ ಗೀತಾತಾತ್ಪರ್ಯವನ್ನು ಸಾಕಷ್ಟು ಸುಲಭವಾಗಿ ಅರ್ಥವಾಗುವಂತೆ ಬರೆದಿರುವಿರಿ. ಆದಕಾರಣ, ದಯವಿಟ್ಟು ನನ್ನ ಅಭಿನಂದನೆಗಳನ್ನು ಸ್ವೀಕರಿಸಿರಿ. .... ಸಂಸ್ಕೃತ ಅಭ್ಯಾಸವನ್ನೇ ಮಾಡಿರದ ನನ್ನಂಥ ಬಡಪಾಯಿಗೆ ಅರ್ಥವಾಗುವಂತೆ ಬರೆದಿರುವಿರಿ. ಶ್ರೀ ಮಧ್ವಾಚಾರ್ಯರ ಇಂಥ ಕೃತಿಗಳನ್ನು ರಚಿಸಲು ಶ್ರೀ ಹರಿವಾಯುಗಳು ತಮಗೆ ಹೆಚ್ಚು-ಹೆಚ್ಚು ಶಕ್ತಿ-ಸಾಮರ್ಥ್ಯಗಳನ್ನು ನೀಡಿ ಕೃಪೆದೋರಲೆಂದು ಆಶಿಸುತ್ತೇನೆ."

- Dr. P. Raghavendra Rao,

Vishakhapattanam, Andhrapradesh. Letter Dated 30-04-1998

"ಶ್ರೀ ಸೋಂದೆಯವರು ವಿಶೇಷವಾಗಿ, ಶ್ರೀ ಮಧ್ವಾಚಾರ್ಯರ ತತ್ತ್ವಚಿಂತನೆಯ ವಿಷಯದಲ್ಲಿ, ಸಾಮಾನ್ಯವಾಗಿ ಭಾರತೀಯ ತತ್ತ್ವಶಾಸ್ತ್ರದ ವಿಷಯದಲ್ಲೂ ಪೂರ್ಣ ಪರಿಣತರಾಗಿರುವರೆಂದು ತಿಳಿದುಬರುತ್ತದೆ. ಅಲ್ಲದೆ, ಅವರು ಸಂಸ್ಕೃತ ಭಾಷೆಯಲ್ಲಿ ಅಷ್ಟೇ ಅಲ್ಲ, ಆಂಗ್ಲಭಾಷೆಯಲ್ಲೂ ಸಾಕಷ್ಟು ತಜ್ಞರಿರುವರೆಂದು ತೋರುತ್ತದೆ. ವಿಮರ್ಶೆಗೆ ಬಂದ ಅವರ ಗ್ರಂಥದ ಪೀಠಿಕೆ ಹಾಗೂ ಉಪಸಂಹಾರಗಳು ಹೆಚ್ಚುಪಾಲು ಭಾವಪೂರ್ಣ ಗದ್ಯಶೈಲಿಯಲ್ಲಿರುವ ಉತ್ತಮ ಲೇಖನಗಳಾಗಿವೆ. ವಿಶೇಷವಾಗಿ ಅವರ ಉಪಸಂಹಾರ ಭಾಗವಂತೂ ಮೋಕ್ಷದ ಅಪೇಕ್ಷೆಯುಳ್ಳ ಅನುಭಾವಿಯ ಒಲವನ್ನು ಸೂಚಿಸುತ್ತದೆ. ನಿಃಸಂಶಯವಾಗಿ, ಲೇಖಕರು ಶ್ರೀ ಮಧ್ವಾಚಾರ್ಯರ ಮೇಲೆ ಅಪಾರ ಗೌರವವನ್ನಿರಿಸಿ ಗೀತೆಯ ಮೂಲಪಾಠ, ಭಾಷ್ಯ ಹಾಗೂ ತಾತ್ಪರ್ಯಗಳನ್ನು ಭಾಷಾಂತರ ಮಾಡುವಾಗ ಅತ್ಯಂತ ಪ್ರಾಮಾಣಿಕ ಹಾಗೂ ಗಂಭೀರ ಪ್ರಯತ್ನವನ್ನೂ ಮಾಡಿರುವರು. ...." (ಆದಾಗ್ಯೂ, ಲೇಖಕರು ತರ್ಜುಮೆ ಮಾಡಿರುವ ಭಾಷ್ಯ ಹಾಗೂ ತಾತ್ಪರ್ಯವನ್ನು ನಿರ್ವಹಿಸಿರುವ ವಿಧಾನದ ಕುರಿತು ಗುಣಾವಗುಣ ವಿವೇಚನೆ ಮಾಡುತ್ತ ಹೀಗೆ ವಿಮರ್ಶಿಸಿರುವರು.)

"ಲೇಖಕರು ಶ್ಲೋಕಗಳನ್ನು ತರ್ಜುಮೆ ಮಾಡುವಾಗ ಭಾಷ್ಯ ಹಾಗೂ ತಾತ್ಪರ್ಯಗಳ ಅಂತರಾರ್ಥವನ್ನು ಪ್ರಕಟಪಡಿಸಿಲ್ಲ. ಭಾಷ್ಯ ಹಾಗೂ ತಾತ್ಪರ್ಯಗಳಲ್ಲಿ ಶ್ಲೋಕಗಳ ಪರಿಣಾಮ ತದ್ವತ್ತಾಗಿ ಮೂಡಿಬಂದಿಲ್ಲ....... 'ತಮ್ಮ ಮನೋಭಾವವನ್ನು ಆಚಾರ್ಯರೇ ವ್ಯಕ್ತಪಡಿಸಲೆಂದು ನಾವು ಮೂಲಪಾಠದಲ್ಲಿದ್ದ ಹಾಗೆಯೇ ಸಾಮಾನ್ಯವಾಗಿ ಸ್ವೀಕೃತ ಶಬ್ದಗಳನ್ನೇ ಬಳಸಿದ್ದೇವೆ.' ಎಂದು ಲೇಖಕರೇ ಒಪ್ಪಿಕೊಳ್ಳುತ್ತಾರೆ. .... ಮಾಧ್ವ ಪರಂಪರೆಗೆ ಅನುಗುಣವಾಗಿ ಭಾಷಾಂತರವನ್ನು ಪ್ರಾಮಾಣಿಕವಾಗಿ ತಾನು ಮಾಡಿಲ್ಲ ಎಂದು ಲೇಖಕರೇ ತನ್ನ ತಪ್ಪನ್ನು ಒಪ್ಪಿಕೊಂಡಿದ್ದಾರೆ. ಮತ್ತು ಇಲ್ಲಿ ಆಚಾರ್ಯರಿಗೆ ಎಸಗಿದ ಅನ್ಯಾಯಕ್ಕಿಂತ ದ್ವೈತ ಸಿದ್ಧಾಂತಕ್ಕೇ ಹೆಚ್ಚು ಅನ್ಯಾಯವಾಗಿದೆ. ಒಂದು ದೃಷ್ಟಿಯಿಂದ ನೋಡಿದರೆ, ಶ್ಲೋಕಗಳಿಗೆ ಲೇಖಕರು ನೀಡಿದ ಅರ್ಥವೇ ಮಧ್ವಾಚಾರ್ಯರ ಅರ್ಥ ಎಂದು ಭ್ರಮಿಸಿ ಈ ಕೃತಿಯನ್ನು ಓದಿದರೆ, ಲೇಖಕರು ಓದುಗರನ್ನು ತಮಾಷೆಗಾಗಿ ದಂಡಿಸಿ ವಂಚಿಸಿದಂತೆ ಆಗುತ್ತದೆ. .... ಲೇಖಕರು, ಸರಿಯಾದ ತಿಳಿವಳಿಕೆ ಇಲ್ಲದೆ ತಪ್ಪು ಕೆಲಸ ಮಾಡಿ, ಮಾಧ್ವರ ವಿಚಾರ ಪ್ರಣಾಲಿಕೆಯನ್ನೇ ಗೊಂದಲಕ್ಕೀಡು ಮಾಡಿದ್ದಾರೆ. ...."

" .... ಇನ್ನು ಪರಿಭಾಷೆಯ ಕುರಿತು ಹೇಳುವುದಾದರೆ ಅವು ನಿಖರವಲ್ಲದ, ಅವಾಸ್ತವಿಕ ಹಾಗೂ ಸತ್ಯಕ್ಕೆ ದೂರವಾದವು. ...."

"ನಾನು ಹೇಳುವುದಿಷ್ಟೇ, ಲೇಖಕರು ಸಾಧಿಸಬೇಕಾಗಿದ ಯಶಸ್ಸಿನ ಗುರಿ ಬಲು ದೂರದಲ್ಲಿದೆ. ಆದರೂ ಈ ಕಷ್ಟಸಾಧ್ಯವಾದ ಗುರುತರ ಕಾರ್ಯವನ್ನು ಸಾಧಿಸಲು

ಅವರು ಪಟ್ಟ ಪರಿಶ್ರಮದ ಕುರಿತು ನಾನು ಚೆನ್ನಾಗಿ ಅರಿತುಕೊಂಡಿದ್ದೇನೆ. ಆದಕಾರಣ, ಈ ಕೃತಿಯು ಆಮೂಲಾಗ್ರ ಪರಿಷ್ಕರಣ ಆಗಬೇಕಿದೆ. ಮುದ್ರಣದೋಷ, ವ್ಯಾಕರಣದೋಷಗಳಂತೂ ಸಾಕಷ್ಟು ಇವೆ. ಲೇಖಕರು ಮುದ್ರಣ ಕಾರ್ಯಕ್ಕಿಂತ ಮೊದಲು ಕರಡು–ತಿದ್ದುಪಡಿ ಅಥವಾ ಮುದ್ರಣ ಸುಸ್ಥಿತಿಯಲ್ಲಿರುವಂತೆ ಅಂತಿಮ ಪರಿಶೀಲನೆ ಮಾಡಿರಲಿಕ್ಕಿಲ್ಲ. ಪುಟ 12 ಮತ್ತು 21 ಪೂರ್ತಿ ಖಾಲಿ ಇವೆ. ...."

"ನಾನು ಲೇಖಕರ ಪ್ರಾಮಾಣಿಕತೆಯನ್ನು ಮೆಚ್ಚುತ್ತೇನೆ. ಅವರ ಆಧ್ಯಾತ್ಮಿಕತೆಯ ಒಲವೂ ಸುಸ್ಪಷ್ಟವಾಗಿದೆ. ಅವರು ಸಂವೇದನಶೀಲರು. ಅವರ ಶ್ರದ್ಧೆಯೂ ಪ್ರಶ್ನಾತೀತ. ಅವರು ದ್ವೈತ ಸಿದ್ಧಾಂತದ ಭಾಷೆಯ ಮೂಲಕ ತಮ್ಮ ಅಂತರ್ದೃಷ್ಟಿಯನ್ನು ವ್ಯಕ್ತಪಡಿಸಲು ಪ್ರಯತ್ನ ಪಡುವ (ಆದರೆ, ನನಗೆ ಭರವಸೆಯಿಲ್ಲ.) ಸಾಧ್ಯತೆಯಿದೆ. ಆಗಲಾದರೂ ಅವರು ಇದರ ಸಲುವಾಗಿಯೇ, ದ್ವೈತ ವೇದಾಂತದ ಪರಿಭಾಷೆಗೆ ಕರಾರುವಾಕ್ಕಾಗಿ ನಿಷ್ಠರಾಗಿರಬೇಕು. ಇಲ್ಲವಾದರೆ, ಅವರು ಮಾಡುವ ಶ್ಲೋಕಗಳ ತರ್ಜುಮೆಯು ಶ್ರೀ ಮಧ್ವಾಚಾರ್ಯರ ಭಾಷ್ಯ ಮತ್ತು ತಾತ್ಪರ್ಯನಿರ್ಣಯದ ಅಂತರಾರ್ಥದೊಂದಿಗೆ ಸಾಂಗವಾಗಿ ಹೊಂದಿಕೊಂಡು ಹೋಗಲಾರದು. ಅದೂ ಅಲ್ಲದೆ, ಆ ತರ್ಜುಮೆಯು ಮೂಲ ಪಾಠಕ್ಕೆ ಚ್ಯುತಿ ಬರದಂತೆ ನಿಷ್ಠವಾಗಿರಬೇಕು. ಪಾರಿಭಾಷಿಕ ಖಚಿತತೆ ಅತ್ಯಂತ ಮಹತ್ವಪೂರ್ಣವಾದುದರಿಂದ ಅದು ಲೇಖಕರ ದೃಷ್ಟಿಯಲ್ಲಿ ಅಪಾರ ಗೌರವಾನ್ವಿತರಾದ ಮಹಾನ್ ದಾರ್ಶನಿಕರಿಗೂ ಪೂರ್ಣನ್ಯಾಯವನ್ನು ಒದಗಿಸುತ್ತದೆ."

- Dr. S. G. Mudgal,
The Journal of the Asiatic Society of Bombay ,
1998 Vol. 73.

5. Narada's Aphorism in Bhakti

"ಪ್ರತಿಯೊಂದು ಶ್ಲೋಕದ ಅನುವಾದದ ಬಳಿಕ ವೇದ, ಉಪನಿಷತ್ತು, ಗೀತೆ ಮತ್ತು ಭಾಗವತ ಮುಂತಾದ ಆಕರ ಗ್ರಂಥಗಳಿಂದ ಸಮರ್ಥನೀಯ ಉದ್ಧೃತ ಭಾಗಗಳನ್ನು ಪ್ರತ್ಯೇಕವಾಗಿ ನೀಡಿರುವುದು ಈ ಪ್ರಕಾಶನದ ವಿಶೇಷತೆ. ನಾಮ, ಜಪ, ವೇದಮಂತ್ರಗಳ ಸ್ವರಾಘಾತ ಹಾಗೂ ಇನ್ನಿತರ ವಿಷಯಗಳಿಗೆ ಸಂಬಂಧಪಟ್ಟ ವಿಷಯಗಳೂ ತೃಪ್ತಿಕರವಾಗಿವೆ. .... ಉಪಲಬ್ಧ ಭಕ್ತಿಸಾಹಿತ್ಯಕ್ಕೆ ಇದೊಂದು ಸ್ವಾಗತಾರ್ಹ ಸೇರ್ಪಡೆಯಾಗಿದೆ."

– ದಿ. ಮಾಧವ ಪಿ. ಪಂಡಿತ,
Sri Aurobindo Ashram 'Mountain Path'
December 1990.

"ಶ್ರೀ ಸೋಂದೆಯವರು 'ಭಕ್ತಿ' ಶಬ್ದಕ್ಕೆ Devotion ಎನ್ನುವ ಬದಲು Communion (ಮೈತ್ರಿ, ಸೌಹಾರ್ದ) ಎಂಬ ಶಬ್ದವನ್ನು ಬಳಸುತ್ತಾರೆ. ನಾರದ ಮುನಿಗಳು ಪರಮಭಾಗವತರೆಂದು ಖ್ಯಾತರಾಗಿರುವುದರಿಂದ ಅವರ ಭಕ್ತಿ-ಸೂತ್ರಗಳ ಅನುವಾದವನ್ನು ಎಲ್ಲರೂ ಅರ್ಥೈಸಿ ಅನುಭವಿಸಲೋಸುಗ ಅವರು ಆಂಗ್ಲ ಭಾಷೆಯಲ್ಲಿ ವಿವರಣೆ ನೀಡಿದ್ದಾರೆ. .... ಸಂಸ್ಕೃತದಲ್ಲಿರುವ ಮೂಲಸೂತ್ರವನ್ನೂ, ಅದರ ಅನುವಾದವನ್ನೂ ನೀಡಿದ ಬಳಿಕ, ವಿಭಿನ್ನ ಆಕರಗ್ರಂಥಗಳಿಂದ ವಿವಿಧ ಉಲ್ಲೇಖಗಳನ್ನು ದೃಷ್ಟಾಂತವಾಗಿ ನೀಡುತ್ತ, ವಿಸ್ತೃತ ಚರ್ಚೆಯನ್ನು ಮಾಡಿದ್ದಾರೆ. ....

- **Hindu News Magazine, Madras,** 15-10-1991.

6. A study on three vedic Suktas (Nasadiya, Hiranyagarbha, Purusha) With explanatory notes.

"ಇದು ಪುನಃಪುನಃ ಪಠನ ಮತ್ತು ಚಿಂತನ ಮಾಡಬೇಕಾದ ಕೃತಿ.ಅನುವಾದವು ಸಾಂಪ್ರದಾಯಿಕವಾಗಿ ಸ್ವೀಕೃತವಾದ ಅರ್ಥವಿವರಣೆಗಿಂತ ಭಿನ್ನವಾಗಿ ವ್ಯತ್ಯಾಸಗೊಳ್ಳುತ್ತದೆ. ನಿಮ್ಮ ಸೂಕ್ಷ್ಮದೃಷ್ಟಿಯು ದಿವ್ಯ ಜ್ಞಾನವನ್ನು ನೀಡುತ್ತದೆ. ಬಹುಮಟ್ಟಿಗೆ ಋಷಿಯ ಅಂತರ್ದೃಷ್ಟಿಯನ್ನು ಪ್ರಕಟಿಸುತ್ತದೆಯೆಂದು ನನಗೆ ಗೊತ್ತಿದೆ. ಸಾಮಾನ್ಯವಾಗಿ, ತಾವು ವಿಷಯ ಪ್ರಸ್ತಾಪ ಮಾಡುವ ವಿಧಾನವೂ ಆಧುನಿಕ ಮನಸ್ಸಿಗೆ ಸಲ್ಲುವಂತಿದೆ. ತಮ್ಮ ಪುರುಷಸೂಕ್ತದ ವ್ಯಾಖ್ಯಾನ ಶ್ಲಾಘನೀಯವಾದುದು."

- Swamy Muni Narayan Prasad,
Sri Nrayana Gurukul, Varkala, Kerala.

"ಶ್ರೀ ಸೋಂದೆಯವರದು ವಿಶಿಷ್ಟ ಶೈಲಿ, ಸೃಜನಶೀಲ ಸೂಕ್ಷ್ಮದೃಷ್ಟಿ. ವಿಶೇಷವಾಗಿ ತಮಸ್ ಶಬ್ದಕ್ಕೆ ಅಂಧಕಾರಕ್ಕಿಂತ ಅಜ್ಞಾನ ಎಂದೇ ನಾನು ಅರ್ಥೈಸುತ್ತೇನೆ."

– ಸ್ವಾಮಿ ಶ್ರೀಕಂಠಾನಂದಜೀ,
ಶ್ರೀ ರಾಮಕೃಷ್ಣ ಯೋಗಾಶ್ರಮ ಪೀಠ, ಮಲ್ಲೂರ.

"ಈ ಕೃತಿ ವಿಚಾರಪ್ರಚೋದಕವಾಗಿದೆ. ವೈದಿಕ ಸೂಕ್ತಗಳನ್ನು ಗ್ರಹಿಸಲು ಜಾಗರೂಕ ಅಧ್ಯಯನದ ಅಗತ್ಯವಿದೆ. ಅಲ್ಲದೆ, ಉಪನಿಷತ್ತುಗಳ ಅಧ್ಯಯನವನ್ನು ಮೊದಲೇ ಮಾಡಿಕೊಂಡಿರಬೇಕು."

- Dr. D. Rama Rao
'Tapovan Prasad' Chinmayananda Ashram November 1994.

"ಭಾರತೀಯ ಸಂಸ್ಕೃತಿಯ ಹಿರಿಮೆಯು ಅದರ ಪರಿವರ್ತನೆಗೆ ಹೊಂದಿಕೊಳ್ಳುವ ನಮ್ಯತೆ ಹಾಗೂ ವೈದಿಕ ಸಂಪ್ರದಾಯದ ಸ್ಥಿತಿಸ್ಥಾಪಕತ್ವದ ಗುಣದಲ್ಲಿದೆ. ಸಂಪ್ರದಾಯನಿಷ್ಠ ಹಾಗೂ ಸಂಪ್ರದಾಯವಿರುದ್ಧ ಪಂಥಗಳ ಎಲ್ಲ ಧಾರ್ಮಿಕ ನಂಬಿಕೆಗಳನ್ನು ವೈದಿಕ ಸಂಪ್ರದಾಯದೊಂದಿಗೆ ಓದಿದಾಗ ಮಾತ್ರ ಸರಿಯಾಗಿ ಅರಿತುಕೊಳ್ಳಬಹುದು. ಸಂಪ್ರದಾಯವನ್ನು ಮುಂದುವರಿಸುವಾಗ ದ್ರಷ್ಟಾರರು ಹಾಗೂ ಸಂತರು ತಮ್ಮ ಶ್ರೋತೃವೃಂದಕ್ಕೆ ಪರಿಚಿತವಾದ ಭಾಷೆಯಲ್ಲಿ ಸಾಂಪ್ರದಾಯಿಕ ವಿಚಾರಧಾರೆಯೇ ಪ್ರತಿಧ್ವನಿಸುವಂತೆ ಹೇಳುತ್ತಾರೆ. ಹೀಗೆ ವೈದಿಕ ಗ್ರಂಥಗಳ ಹಾಗೂ ಸಂತರ ಸುವಾರ್ತೆಗಳ ಅಧ್ಯಯನವು ಅವಿಚ್ಛಿನ್ನ ಸಂಪ್ರದಾಯವನ್ನು ಪ್ರಕಟಪಡಿಸುವ ಸಲುವಾಗಿಯೇ ಒಂದಕ್ಕೊಂದು ಹೆಚ್ಚು ಹೊಂದಿಕೊಳ್ಳುತ್ತಿವೆ. ನಾಗೇಶ ಸೋಂದೆಯವರ ಪುಸ್ತಿಕೆ ಈ ಸಂದೇಶವನ್ನು ದೃಢೀಕರಿಸುತ್ತಿದೆ. .... ಗ್ರಂಥಗಳು ಭಾರತೀಯ ಸಂಸ್ಕೃತಿಯ ಹಾಗೂ ಧರ್ಮದ ಒಂದು ವಿಹಂಗಾವಲೋಕನವನ್ನು ಪಡೆಯಲು ಅತ್ಯಂತ ಪ್ರಯೋಜನಕಾರಿಯಾಗಿವೆ.

- M. Shrimannarayan Murthi
Sri Venkataeshwara University Oriental Journal,
January - December 1992.

7. Sri Ramana Maharshi's Updesha Saram - Translation with notes.

"ನಾಗೇಶ ಸೋಂದೆಯವರು ಶ್ರೀ ರಮಣ ಮಹರ್ಷಿಗಳ ಈ ಸುವಿಖ್ಯಾತ ಕೃತಿಯನ್ನು ಆಂಗ್ಲಭಾಷೆಯಲ್ಲಿ ಅನುವಾದಿಸಿ ವಿವರಣಾತ್ಮಕ ಟಿಪ್ಪಣಿಯನ್ನೂ ನೀಡಿರುವರು. ಶ್ಲೋಕಗಳ ವಿವರಣೆ ವಿಸ್ತೃತವಾಗಿ ಸಂದರ್ಭೋಚಿತವಾಗಿ ಬಂದಿದೆ. .... ಸುಲಭವಾಗಿ ಅರ್ಥವಾಗದ ಶ್ಲೋಕಗಳಲ್ಲಿ ಅಡಗಿರುವ ಸತ್ಯಾಂಶ ಹಾಗೂ ಸಮಸ್ಯಾತ್ಮಕ ಸಲಹೆಗಳನ್ನೂ ಸಮರ್ಪಕವಾಗಿ ಪ್ರಕಟಪಡಿಸಿರುವುದರಿಂದ, ಈ ಪ್ರಕಟಣೆಯು ಶ್ರೀ ರಮಣ ಮಹರ್ಷಿಗಳ ಜೀವನ ಮತ್ತು ಬೋಧನೆಗಳ ಮೇಲೆ ಉಪಲಬ್ಧವಿರುವ ಸಾಹಿತ್ಯ ಸಂಪತ್ತಿಗೆ ಅತ್ಯಂತ ಸ್ವಾಗತಾರ್ಹ ಸೇರ್ಪಡೆಯಾಗಿದೆ.

- K.V. Sharma,
Adyar Libray Bulletin, 1996

8. Sri Shankara's Hymn to Sri Dakshnamurthi with Sureshwara's Manasollas with explanatory notes.

"ಶ್ರೀ ಸೋಂದೆಯವರು ವಾರ್ತಿಕ ಮತ್ತು ಶ್ಲೋಕಗಳನ್ನು ಆಧುನಿಕ

ಓದುಗರಿಗೂ ಸ್ಪಷ್ಟವಾಗಿ ಅರ್ಥವಾಗುವ ಹಾಗೆ, ಸಾಕಷ್ಟು ವಿವರಣೆಯಿಂದ ಕೂಡಿದ ಟಿಪ್ಪಣಿಗಳೊಂದಿಗೆ ಆಂಗ್ಲಭಾಷೆಯಲ್ಲಿ ಅನುವಾದಿಸಿದ್ದಾರೆ. ವೇದೋಪನಿಷತ್ತುಗಳ ಜ್ಞಾನವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದ್ದಾರೆ. ಪ್ರತ್ಯಕ್ಕೆ ಪೂರಕವಾಗಿ ಬಹುತೇಕ ಎಲ್ಲ ಉಪನಿಷತ್ತುಗಳಿಂದಲೂ ಪ್ರಕೃತ ವಿಷಯಕ್ಕೆ ಸಂಬಂಧಪಟ್ಟ ಉದ್ಧರಣಗಳು ಬಂದಿವೆ. ....

..........ಶ್ರೀ ಸುರೇಶ್ವರಾಚಾರ್ಯರ ವ್ಯಾಖ್ಯೆ ಹಾಗೂ ಲೇಖಕರ ಹೆಚ್ಚಿನ ಸ್ಪಷ್ಟೀಕರಣವು ತತ್ತ್ವಶೋಧನೆಗೆ ಆರೋಗ್ಯಕರ ಒಲವನ್ನೂ ಪ್ರಚಲಿತ ಧಾರ್ಮಿಕ ನಂಬಿಕೆಗಳ ಪ್ರತಿಯೊಂದು ಮುಖಕ್ಕೆ ವೈಚಾರಿಕ ಸಂಪರ್ಕವನ್ನೂ ಒದಗಿಸುತ್ತದೆ. ....

- Dr. D. Sri Ram Rao,
'Tapovan Prasad' Chinmayananda Ashram.
March 1995,

"ನಾಗೇಶ ಸೋಂದೆಯವರು ವಾರ್ತಿಕ ಮತ್ತು ಶ್ಲೋಕಗಳನ್ನು ಅತ್ಯುತ್ಕೃಷ್ಟ ವಿಧಾನದಲ್ಲಿ ಅನುವಾದಿಸಿರುವ ಬಗ್ಗೆ ಅಭಿನಂದನಾರ್ಹರಾಗಿದ್ದಾರೆ. ಸ್ತುತಿಗಳಿಗೆ ನೀಡಿದ ವಿವರಣಾತ್ಮಕ ಟಿಪ್ಪಣಿಗಳು ಸಮೃದ್ಧ ಹಾಗೂ ಅಗಾಧ ವಿಷಯಗಳನ್ನು ಒಳಗೊಂಡಿವೆ. ಅದ್ವೈತ ವೇದಾಂತದ ಕುರಿತು ಶಂಕೆ-ಆತಂಕವನ್ನು ಬೆಳೆಸಿಕೊಂಡಿರುವವರೆಲ್ಲರೂ ಮಿತವಾದ ಬೆಲೆಯುಳ್ಳ ಈ ಕೃತಿಯನ್ನು ಒಮ್ಮೆ ಓದಲೇಬೇಕು.

- Dr. Satish K. Kapoor
'Prabuddha Bharat' – Nov. 1994

ಇತರ ಗ್ರಂಥಗಳು

1. Philosophy of Bhagavan Sri Ramana Maharshi
2. Conservation and preservation of wealth –
   - A Study in 'Sri Sukta'

ಇದೇ ವಿಷಯದ ಮೇಲಿರುವ ಕೆಲವು ಗ್ರಂಥಗಳು.

ಶಣೈ ಗೋಂಯ್‌ಬಾಬ.

ತೃತೀಯ ಅಖಿಲ ಭಾರತ ಕೊಂಕಣೀ ಪರಿಷತ್ತಿನಲ್ಲಿ ಮಾಡಿದ ಉದ್ಘಾಟನ ಭಾಷಣ.

ಗೋಂಯ್‌ಕಾರಾಲೀ ಗೋಂಯಭಾಯ್‌ಲಿ ವಸಣೂಕ (ಕೊಂಕಣೀ).

ಕೊಂಕಣೀ ಭಾಷೇಚೇ ಜೈತ (ಕೊಂಕಣೀ).

ಕಾಂಹೀ ಮರಾಠೀ ಲೇಖ.

ಎಸ್. ಎಸ್. ತಾಳಮಕ್ಕಿ.

Saraswat Families.

ಆರ್. ಬಿ. ಗುಂಜೀಕರ.

ಸರಸ್ವತೀ ಮಂಡಲ.

ಮಠಸ್ಥ ಗಣೇಶ ರಾಮಚಂದ್ರ ಶರ್ಮಾ.

ಸಾರಸ್ವತ ಭೂಷಣ.

ಸಾರಸ್ವತ ರತ್ನಮಾಲಾ.

ವಿ. ಎನ್. ಕುಡ್ವಾ.

Dakshinatya Saraswats.

ಚಂದ್ರಕಾಂತ ಕೇಣಿ.

ಇತಿಹಾಸ.

ಪುರುಷೋತ್ತಮ ಮಲ್ಯ.

Emigrants of Saraswat Families to Kerala.

ನಾಗೇಶ ಡಿ. ಸೋಂದೆ.

ಕೊಂಕಣೀ ಭಾಷೇಚೋ ಇತಿಹಾಸ (ಕೊಂಕಣೀ).

ಸಾರಸ್ವತಾಲೇಂ ಭವಿತವ್ಯ. (ಕೊಂಕಣೀ).

Books written by Nagesh D. Sonde in English.

1. Sri Madhva's Commentary on Isha & Kena Upanishad.
2. Sri Madhva's Commentary on Katha Upanishad.
3. Sri Madhva's Commentary on Mandukya Upanishad.
4. Sri Madhva's Commentary and Summation on Bhagavad Gita.
5. Narada's Aphorisms on Bhakti.
6. A Study of Three Vedic Suktas.
7. Commentary on Sri Ramana Maharshi's Upadesha Saram.
8. Commentary on Sri Ramana Maharshi's Sat Darshanam.
9. Philosophy of Bhagavan Ramana Maharshi.
10. Sri Shankara's Hymn on Sri Dakshinamurty Stotra with Manasollasa.
11. Conversation and Preservation of wealth - Commentary of Sri Sukta.
12. Life and Teachings of Sri Manik Prabhu.
13. Sri Madhva's Commentary on Mundak Upanishad.
14. Asmi - A Study on Goutam Buddha and Ramana Maharshi.
15. Ganapati - Atharvasheersha - with brief Commentary.
16. Sri Shankara's Sadhana Panchakam.
17. Dakshinatya Saraswats - Tale of an Enterprising Community.
18. Forty Hymns of Rigveda
19. Bhaja Govindam.
20. Socrates and Ramana Maharshi - A critique.
21. Sanatsujatiya.
22. The God that is worshipped here.
23. Karma A Reflection.
24. The life to be lived.
25. The Stray Leaves - A Collection of 20 Essays.
26. Sri Dattatreya and the Sampradaya.
27. Madhva's Commentary on Brihadaranyaka Chhandogya, Taittiriya Upanishad.
28. Krishna Study based on Mahabharat.

ನಾಗೇಶ ಡಿ. ಸೋಂದೆ ರಚಿತ ಕೊಂಕಣೀ ಗ್ರಂಥಗಳು

1. ವಿಷ್ಣು ಆನೀ ವೈಷ್ಣವ ಸಂಪ್ರದಾಯ.
2. ರಾಧಾ ಮಾಧವ ಪ್ರಣಯ ಪ್ರಣಾಲೀ.
3. ಶ್ರೀ ಮಧ್ವಾಚಾರ್ಯ ಜೀವನ ಆನೀ ವಿಚಾರ.
4. ಶ್ರೀ ಗಣಪತಿ ಅಥರ್ವಶೀರ್ಷ ವಿವೇಚನ.
5. ಶ್ರೀ ಸೂಕ್ತ ವಿವೇಚನ.
6. ಉಪನಿಷದಾಚೇಂ ಅಂತರಂಗ.
7. ಕಥಾಸಂಗಮ.
8. ಕೊಂಕಣೀ ಭಾಷೇಚೋ ಇತಿಹಾಸ.
9. ಶ್ರೀ ಪುರಂದರದಾಸ ಚರಿತ್ರ.
10. ಸಾರಸ್ವತಾಲೆಂ ಭವಿತವ್ಯ.
11. ಶ್ರೀ ವಿಷ್ಣುಸಹಸ್ರನಾಮ – ಭಾಷಾಂತರ ಆನೀ ವಿವೇಚನ.
12. ಶ್ರೀ ವಿಷ್ಣುಸಹಸ್ರನಾಮ – ನಿತ್ಯಪಾಠಾಖಾತೀರ ಭಾಷಾಂತರ.
13. ವೈರಾಗ್ಯ ಶತಕಮ್.
14. ಭಗವದ್ಗೀತಾ – ಸಂಸ್ಮರಣ.
15. ರಾಮಕಥಾ – ವಾಲ್ಮೀಕಿ ರಾಮಾಯಣ ಆಧಾರಿತ.

16 ಈಶ ಉಪನಿಷತ್ – ಅನುವಾದ ಆನೀ ವಿವೇಚನ.



ನಾಗೇಶ ದತ್ತಾತ್ರೇಯ ಸೋಂದೆ

ಕರ್ನಾಟಕದ ಉತ್ತರಕನ್ನಡ ಜಿಲ್ಲೆಯ ಶಿರಸಿಯ ಹೆಸರಾಂತ ಸೋಂದೆ ಕುಟುಂಬಕ್ಕೆ ಸೇರಿದ ಶ್ರೀಯುತರು ಬಾಲ್ಯಕಾಲದ ಶಾಲಾದಿನಗಳಿಂದಲೂ ಕೊಂಕಣೀ ಭಾಷಾಭಿವೃದ್ಧಿಯ ವಿಷಯದಲ್ಲಿ ಆಸಕ್ತರಾಗಿದ್ದರು. ಅವರು ಮುಂಬಯಿಯಲ್ಲಿ ಸಮಾವೇಶಗೊಂಡ ಅಖಿಲ ಭಾರತ ಕೊಂಕಣೀ ಸಾಹಿತ್ಯ ಪರಿಷತ್ತಿನ ಚತುರ್ಥ ಅಧಿವೇಶನದ ಸಹ-ಕಾರ್ಯದರ್ಶಿಯಾಗಿದ್ದರು. ಮುಂಬಯಿಯ ಕೊಂಕಣೀ ಭಾಷಾಮಂಡಳ ಮತ್ತು ಕೊಂಕಣೀ ಭಾಷಾ ಸಮಿತಿಯ ಅಧ್ಯಕ್ಷರಿದ್ದರು. ಬೆಂಗಳೂರಿನಲ್ಲಿ 1984ರಲ್ಲಿ ಜರುಗಿದ ಅಖಿಲ ಭಾರತ ಸಾಹಿತ್ಯ ಪರಿಷತ್ತಿನ ಹದಿನೈದನೆಯ ಅಧಿವೇಶನದ ಅಧ್ಯಕ್ಷರಾಗಿದ್ದರು. ಅವರು ಕೊಂಕಣಿಯಲ್ಲಿ ಹದಿನಾರು ಗ್ರಂಥಗಳನ್ನು ರಚಿಸಿದ್ದಾರೆ. ಅವರ 'ಸಂತ ಪುರಂದರದಾಸ' ಕೃತಿಗೆ ಟಿ. ಎಂ. ಎ. ಪೈ ಫೌಂಡೇಶನ್ ಮಣಿಪಾಲ ಇದು ಪ್ರಶಸ್ತಿಯನ್ನು ನೀಡಿದೆ. ಅವರು ನಾಲ್ಕು ವರ್ಷ 'ಕೌಂಡಿಣ್ಯ' ಕೊಂಕಣೀ ತ್ರೈಮಾಸಿಕ ಸಂಚಿಕೆಯನ್ನು ಪ್ರಕಟಿಸಿ ಕೊಂಕಣಿಯಲ್ಲಿ ನಾಟಕ ಮತ್ತು ಸಂಗೀತ ಪ್ರದರ್ಶನಗಳನ್ನು ಏರ್ಪಡಿಸಿದ್ದರು.

1985ರಿಂದೀಚೆಗೆ ಆಂಗ್ಲ ಭಾಷೆಯಲ್ಲಿ ಸುಮಾರು ಮೂವತ್ತು ಪುಸ್ತಕಗಳನ್ನು ಬರೆದಿದ್ದಾರೆ. ಶಂಕರಾಚಾರ್ಯರು, ಮಧ್ವಾಚಾರ್ಯರು, ಗೌತಮ ಬುದ್ಧ ಹಾಗೂ ರಮಣ ಮಹರ್ಷಿಗಳ ಬೋಧನೆಗಳನ್ನು ಕುರಿತು ಅವರು ರಚಿಸಿದ ಕೃತಿಗಳಿಗೆ ವಿಮರ್ಶಕರಿಂದ ಉತ್ತಮ ಪ್ರತಿಕ್ರಿಯೆ ಬಂದಿದೆ. ಪ್ರಸ್ತುತ 'ದಕ್ಷಿಣದ ಸಾರಸ್ವತರು' ಒಂದು ವಿಚಾರ ಪ್ರಚೋದಕ ಕೃತಿ. ವಾಚಕರು ಗಂಭೀರವಾಗಿ ಚಿಂತನ-ಆತ್ಮಾವಲೋಕನ ಮಾಡಬೇಕೆಂಬ ಸತ್‌ಸಂಕಲ್ಪದಿಂದ ಪ್ರಕಟಿಸಲಾಗಿದೆ.